ಮಂಗಳೂರು ಶುಕ್ರವಾರ, 22 ಮೇ 2026 ಸಂಪುಟ 48, ಸಂಚಿಕೆ 64 ಪುಟಗಳು 12+6 hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

52 ಅಪರಾಧ ಕೇಸ್ ಹಿಂಪಡೆಗೆ ನಿರ್ಧಾರ

◆ ಪುಟ ೨

ಪಿಓಕೆಯಲ್ಲಿ ಪುಲ್ವಾಮಾ ದಾಳಿಯ ರೂವಾರಿ ಹತ

◆ ಪುಟ ೨

ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಶುಕ್ರವಾರ, 22 ಮೇ 2026
ಸಂಪುಟ 48, ಸಂಚಿಕೆ 64 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



2034ರವರೆಗೂ ಬಿಜೆಪಿ ಪ್ರಬಲ ಶಕ್ತಿ | ೦೭
ಎಬೋಲಾ: ಮಾರ್ಗಸೂಚಿ ಬಿಡುಗಡೆ | ೦೭
ಬಂಗಾಳ ಮದರಸಾಗಳಲ್ಲಿ ವಂದೇ ಮಾತರಂ ಕಡ್ಡಾಯ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ ಉಪರಿ ಸಪ್ತಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ನೀರಿನಲ್ಲಿ ಎಣ್ಣೆ, ವಿವೇಕಿಯಲ್ಲಿ ತಿಳಿವು ಇವು ಸ್ವಶಕ್ತಿಯಿಂದ ವಿಸ್ತಾರಗೊಳ್ಳುತ್ತವೆ.
▲ ಲಘು ಚಾಣಕ್ಯ ಶತಕ

ಹಿಂದುಫೋಬಿಯಾ ವಿರುದ್ಧದ ತೀರ್ಪು!

ಲೇಖನ
◆ ರತನ್ ಶಾರದಾ

◆ ಪುಟ ೬

ಕಿರುಸುದ್ದಿ

ಪಶ್ಚಿಮ ಏಷ್ಯಾ ಬಿಕ್ಕಟ್ಟು ಹಿನ್ನೆಲೆ: ಸಿಸಿಎಸ್ ಸಭೆ ನಡೆಸಿದ ಪ್ರಧಾನಿ

◆ **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟು ತೀವ್ರವಾಗಿಯೇ ಜಗತ್ತನ್ನು ತಟ್ಟಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಈ ಬಿಕ್ಕಟ್ಟಿನ ದುಷ್ಪರಿಣಾಮಗಳಿಂದ ದೇಶವನ್ನು ಪಾರುಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಮತ್ತು ಪರಿಸ್ಥಿತಿಯ ಅವಲೋಕನಕ್ಕಾಗಿ ಗುರುವಾರ ಭದ್ರತೆಯ ಮೇಲಿನ ಸಚಿವ ಸಂಪುಟ ಸಭೆ ನಡೆಸಿ ಚರ್ಚಿಸಿದರು. ಹಾಗೆಯೇ ಆಡಳಿತಾತ್ಮಕವಾಗಿ ಕೈಗೊಳ್ಳಬೇಕಾದ ಮುಂದಿನ ಪೀಳಿಗೆಯ ಸುಧಾರಣೆಗಳ ಕುರಿತಂತೆಯೂ ಅವರು ನಿರ್ದೇಶನ ನೀಡಿದರು.

ತಮ್ಮ ಪಂಚದೇಶಗಳ ಪ್ರವಾಸ ದೇಶವನ್ನು ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉದ್ಭವಿಸಿರುವ ಸಂಕಷ್ಟಗಳ ನಿವಾರಣೆಯನ್ನೇ ಪ್ರಧಾನ ಉದ್ದೇಶವಾಗಿಟ್ಟುಕೊಂಡು ನಡೆಸಿದ್ದ ಪ್ರಧಾನಿ ಮೋದಿಯವರು, ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಣ ಸಂಘರ್ಷ ಇಡಿ ಜಗತ್ತನ್ನು ಹೇಗೆ ತಟ್ಟಿದೆ ಎಂಬುದನ್ನು ವಿವರಿಸಿದರು.ಇಂತಹ ಸನ್ನಿವೇಶದಲ್ಲಿ ಈ ಬಿಕ್ಕಟ್ಟಿನ ದುಷ್ಪರಿಣಾಮಗಳಿಂದ ನಮ್ಮ ದೇಶದ ನಾಗರಿಕರ ಹಿತರಕ್ಷಿಸಲು



ಸರ್ವ ಯತ್ನಗಳನ್ನೂ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಈಗ ಉಂಟಾಗಿರುವ ಜಾಗತಿಕ ಬಿಕ್ಕಟ್ಟಿನಿಂದ ನಮ್ಮ ದೇಶದ ಜನತೆಗೆ ಆಗಲಿರುವ ಸಂಕಷ್ಟಗಳನ್ನು ಅತ್ಯಂತ ಕನಿಷ್ಠಗೊಳಿಸಲು ಸರಕಾರದ ಎಲ್ಲ ಅಂಗಗಳೂ ಒಟ್ಟಾಗಿ ಕಾರ್ಯನಿರ್ವಹಿಸಬೇಕಿದೆ. ಹಾಗೆಯೇ ಅಗತ್ಯ ವಸ್ತುಗಳ ಬೆಲೆಯನ್ನು ಕಾಳಸಂತೆಕೋರರು ಏರಿಸುವ ಮತ್ತು ಅಕ್ರಮ ದಾಸ್ತಾನು ವಿರುದ್ಧ ರಾಜ್ಯ ಸರಕಾರಗಳೊಂದಿಗೂ ಸೂಕ್ತ ರೀತಿಯ ಸಮನ್ವಯ ಕಾಯ್ದುಕೊಳ್ಳಬೇಕು.ಈ ವಿಷಯದಲ್ಲಿ ಇಡಿ ಸರಕಾರದ ಕಾರ್ಯನಿರ್ವಹಣೆಯಲ್ಲಿ ಸಮರ್ಪಣಾಭಾವದಿಂದ ಕಾರ್ಯವೆಸಗಲು ಸಚಿವರ ತಂಡ ಮತ್ತು ಕಾರ್ಯದರ್ಶಿಗಳ ತಂಡ ರಚಿಸುವಂತೆ ಅವರು ನಿರ್ದೇಶನವಿತ್ತರು. ಸಂಬಂಧಪಟ್ಟ ಎಲ್ಲರೊಂದಿಗೂ ಸಂಪರ್ಕ ಹೊಂದಿರುವಂತೆ ಅವರು ಸೂಚಿಸಿದರು.

ಕೇಂದ್ರ ಸಂಪುಟ ಕಾರ್ಯದರ್ಶಿ ಡಾ.ಟಿ.ವಿ.ಸೋಮನಾಥನ್ ಅವರು ಜಾಗತಿಕ ಬಿಕ್ಕಟ್ಟಿನ ಸನ್ನಿವೇಶ ಮತ್ತು ಈ ವರೆಗೆ ಇದನ್ನು ನಿಭಾಯಿಸಲು ಸಂಬಂಧಿಸಿದ ಸಚಿವಾಲಯಗಳು ಮತ್ತು ಇಲಾಖೆಗಳು ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರ ನೀಡಿದರು. ಕೃಷಿ, ರಸಗೊಬ್ಬರ, ಆಹಾರ ಭದ್ರತೆ, ಪೆಟ್ರೋಲಿಯಂ, ವಿದ್ಯುತ್, ಸಣ್ಣ, ಅತಿಸಣ್ಣ, ಮಧ್ಯಮ ಕೈಗಾರಿಕೆಗಳ ರಕ್ಷಣೆ, ರಫ್ತುದಾರರ ಹಿತ, ಶಿಪ್ಪಿಂಗ್, ವ್ಯಾಪಾರ ,ಹಣಕಾಸು, ಪೂರೈಕೆ ಸರಪಣಿ ಮತ್ತು ಸಂಬಂಧಪಟ್ಟ ಎಲ್ಲ ಬಾಧಿತ ವಲಯಗಳಿಗೆ ಸಂಬಂಧಿಸಿ ಸಮಗ್ರ ಚರ್ಚೆ ನಡೆಯಿತು.ದೇಶದ ಸಾಮಾನ್ಯ ಜನತೆಯ ಹಿತರಕ್ಷಣೆಗೆ ಅಗತ್ಯವಿರುವ ಆಹಾರ, ಇಂಧನ ಮತ್ತು ತೈಲ ಭದ್ರತೆ ಕಾಯ್ದುಕೊಳ್ಳಲು ಬೇಕಾದ ತುರ್ತು, ಮಧ್ಯಮ ಮತ್ತು ದೀರ್ಘಕಾಲೀನ ಕ್ರಮಗಳನ್ನು ಕೈಗೊಳ್ಳುವ ಬಗೆಗೂ ಸಭೆಯಲ್ಲಿ ಚರ್ಚಿಸಲಾಯಿತು.

ಅಪರಿಚಿತ ಬಂದೂಕುಧಾರಿಗಳಿಂದ ಹಮ್ಜಾ ಕೊಲೆ

ಪಿಒಕೆಯಲ್ಲಿ ಪುಲ್ವಾಮಾ ದಾಳಿಯ ರೂವಾರಿ ಹತ

◆ **ಹೊಸದಿಲ್ಲಿ:** ಪುಲ್ವಾಮಾ ದಾಳಿಯ ರೂವಾರಿಗಳಲ್ಲಿ ಒಬ್ಬನಾದ ಹಮ್ಜಾ ಬುರ್ಹಾನ್ ಅಲಿಯಾಸ್ ಡಾಕ್ಟರ್ (23) ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಮುಜಫರಾಬಾದ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿನ ದಾಳಿಗೆ ಹತನಾಗಿದ್ದಾನೆ.

ಹಮ್ಜಾ ಮೇಲೆ ಹಲವು ಸುತ್ತಿನ ಗುಂಡಿನ ಸುರಿಮಳೆ ನಡೆದಿದ್ದು, ಗಂಭೀರ ಗಾಯದ ಪರಿಣಾಮ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ. ಪಿಒಕೆಯ ಮುಜಫರಾಬಾದ್ ಪ್ರದೇಶದಲ್ಲಿ ಘಟನೆ ನಡೆದಿರುವುದಾಗಿ ತಿಳಿದುಬಂದಿದೆ.



ಉಗ್ರರ ಮಧ್ಯೆ ಡಾಕ್ಟರ್ ಹೆಸರಿನಿಂದ ಚಿರಪರಿಚಿತನಾಗಿದ್ದ ಹಮ್ಜಾನನ್ನು 2022ರಲ್ಲಿ ಕೇಂದ್ರ ಗೃಹ ಇಲಾಖೆ ಭಯೋತ್ಪಾದಕ ಎಂದು ಘೋಷಿಸಿತ್ತು. ಅಧಿಕೃತ ಅಧಿಸೂಚನೆಯಲ್ಲಿ, ಅರ್ಜುಮಂಡ್ ಗುಲ್ಜಾರ್ ದಾರ್ ಅಲಿಯಾಸ್ ಹಮ್ಜಾ ಬುರ್ಹಾನ್ ಅಲಿಯಾಸ್ ಡಾಕ್ಟರ್ ಪುಲ್ವಾಮಾ ಜಿಲ್ಲೆಯ ರತ್ನಿಪೊರಾದ ಖರ್ಬತ್‌ಪೊರಾ ನಿವಾಸಿಯಾಗಿದ್ದ. ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ (ಯುಎಪಿಎ) ಕಾಯ್ದೆ ಅನ್ವಯ, ನಿಷೇಧಿತ ಉಗ್ರ ಸಂಘಟನೆ ಅಲ್-ಬದರ್‌ನ ಸಹಚರ ಸದಸ್ಯನಾಗಿದ್ದಾನೆ ಎಂದು ಉಲ್ಲೇಖಿಸಲಾಗಿತ್ತು.

ಅಲ್-ಬದರ್ ಕಮಾಂಡರ್: ಉನ್ನತ ಶಿಕ್ಷಣ ಪಡೆಯುವ ನೆಪದಲ್ಲಿ 2017ರಲ್ಲಿ ಪಾಕಿಸ್ತಾನಕ್ಕೆ ತೆರಳಿದ್ದ. ಅಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆ ಅಲ್-ಬದರ್ ಸೇರಿಕೊಂಡು ಶೀಘ್ರ ಆ ಸಂಘಟನೆಯಲ್ಲಿ ಕಮಾಂಡರ್ ಹುದ್ದೆಗೆ ಬಡ್ತಿ ಪಡೆದಿದ್ದ. ಆ ಬಳಿಕ ಕಾಶ್ಮೀರಕ್ಕೆ ಮರಳಿದ ಬುರ್ಹಾನ್, ಸ್ಥಳೀಯ ಯುವಕರಲ್ಲಿ ಇಸ್ಲಾಂ ಮೂಲಭೂತವಾದವನ್ನು ಪ್ರಚೋದಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದ.

ಪಿಒಕೆ ಅಷ್ಟೇ ಅಲ್ಲದೆ, ಪುಲ್ವಾಮಾದಿಂದ ಶೋಪಿಯಾನ್ ವರೆಗೂ ತನ್ನ ಉಗ್ರ ಸಂಪರ್ಕಜಾಲ ವಿಸ್ತರಿಸಿಕೊಂಡಿದ್ದ. ಕಣಿವೆಯಲ್ಲಿ ಈತನ ಸಂಪರ್ಕಕ್ಕೆ ಬಂದ ಯುವಕರೆಲ್ಲಾ ಉಗ್ರ ಸಂಘಟನೆಗಳನ್ನು ಸೇರಿಕೊಂಡಿದ್ದಾರೆ.



- ಪಾಕ್ ಆಕ್ರಮಿತ ಕಾಶ್ಮೀರದ ಮುಜಫರಾಬಾದ್‌ನಲ್ಲಿ ಘಟನೆ
- ನಿಷೇಧಿತ ಅಲ್-ಬದರ್ ಕಮಾಂಡರ್ ಹಮ್ಜಾ ಬುರ್ಹಾನ್ ಹತ್ಯೆ
- ಪಾಕ್‌ನಲ್ಲಿ ಸೀಕ್ರೆಟ್ ಏಜೆಂಟ್‌ಗಳನ್ನು ನೇಮಿಸಿದರೂ ನಿಲ್ಲದ ಧುರಂಧರ್ ಸದ್ದು

ಹೆಚ್ಚಾಗಿವೆ ಭಾರತ ವಿರೋಧಿಗಳ ಹತ್ಯೆ

ಇತ್ತೀಚೆಗೆ ಪಾಕಿಸ್ತಾನದಲ್ಲಿ ಭಾರತ ವಿರೋಧಿಗಳ ಹತ್ಯೆ ಹೆಚ್ಚಾಗುತ್ತಿವೆ. ಲಷ್ಕರ್-ಎ -ತೈಬಾ(ಎಲ್‌ಇಟಿ), ಜೈಶ್ -ಎ- ಮೊಹಮ್ಮದ್(ಜೆಇಟಿ) ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಇತ್ಯಾದಿ ಉಗ್ರ



ಸಂಘಟನೆಗಳಿಗೆ ಸೇರಿದ ಅಗ್ರ ಕಮಾಂಡರ್‌ಗಳು ಮತ್ತು ಉಗ್ರರನ್ನೇ ಗುರಿಯಾಗಿಸಿ ರಹಸ್ಯ ಹತ್ಯೆಗಳು ನಡೆಯುತ್ತಿವೆ. ಅಪರಿಚಿತ ಬಂದೂಕುಧಾರಿಗಳು ಹತ್ಯೆ ನಡೆಸಿದ್ದಾರೆ ಎಂಬುದು ಬಿಟ್ಟರೆ ಇಂತಹ ಹತ್ಯೆಗಳ ಕುರಿತು ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಕಳೆದ ತಿಂಗಳು, ಸಿಂದೂರ ಪ್ರತಿದಾಳಿಗೆ ವರ್ಷ ತುಂಬಿದ ಸಂದರ್ಭ ಲಾಹೋರ್‌ನಲ್ಲಿ ಎಲ್‌ಇಟಿ ಸ್ಥಾಪಕ ಸದಸ್ಯ ಆಮಿರ್ ಹಮ್ಜಾ ಮೇಲೆ ಅಪರಿಚಿತ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದರು.

➡ಪುಟ ೪

ಮುಂದುವರಿದ ಭಾರತ ವಿರೋಧಿ ಉಗ್ರರ ಕೊಲೆ

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅನಾಮಧೇಯ ದಾಳಿಕೋರರು ಎಂಬ ಹಣೆಪಟ್ಟಿಯಲ್ಲಿ ಭಾರತ ವಿರೋಧಿ ಉಗ್ರ ಸಂಘಟನೆಗಳ ಪ್ರಮುಖರನ್ನು ಹತ್ಯೆ ಮಾಡುತ್ತಿರುವ ಪರಂಪರೆ 2022ರಿಂದಲೂ ಮುಂದುವರಿದಿದೆ. ಇಂದು (ಮೇ 21, 2026) ಪುಲ್ವಾಮಾ ದಾಳಿ ಪ್ರಮುಖ ಸಂಚುಕೋರ ಹಮ್ಜಾ ಬುರ್ಹಾನ್ ಮುಜಾಫರಾಬಾದ್‌ನಲ್ಲಿ ಹತ್ಯೆಗೀಡಾದ ಸುದ್ದಿ ಬಂದಿದ್ದು, ಇತ್ತೀಚಿನ ಪ್ರಮುಖ ಪ್ರಕರಣಗಳ ಪಟ್ಟಿ ಪುಟ 4ರಲ್ಲಿದೆ.

➡ಪುಟ ೪

ಅಪರಿಚಿತ ಬಂದೂಕುಧಾರಿಗೊಂದು ಸಲಾಂ! ◆ಪುಟ ೬
ಪುಲ್ವಾಮದಲ್ಲಿ ಏನಾಗಿತ್ತು? ◆ಪುಟ ೪

ಸಿಎಂ ಅಧ್ಯಕ್ಷತೆಯ ಸಂಪುಟ ಸಭೆ ಒಪ್ಪಿಗೆ

52 ಅಪರಾಧ ಕೇಸ್ ಹಿಂಪಡೆಗೆ ನಿರ್ಧಾರ

◆ **ಬೆಂಗಳೂರು:** ಕಲಬುರಗಿ ಜಿಲ್ಲೆ ಆಳಂದದ ಲಾಡ್ಲೆ ಮಶಾಕ ದರ್ಗಾದ ಶಿವಲಿಂಗ ಅಶುದ್ಧಿ ಪ್ರಕರಣಕ್ಕೆ ಸಂಬಂಧಿಸಿ ಪಟ್ಟಣದಲ್ಲಿ ಕೋಮುಗಲಭೆ ಸೃಷ್ಟಿಸಲು ಮಾರಕಾಸ್ತ್ರಗಳು ಸಹಿತ ಕಲ್ಲು ದೊಣ್ಣೆಗಳನ್ನು ಸಂಗ್ರಹಿಸಿಟ್ಟ ಮುಸ್ಲಿಂ ಅಪ್ರಾಪ್ತ ವಯಸ್ಕರ ಮೇಲಿನ ಪ್ರಕರಣಗಳು ಸೇರಿದಂತೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಅಭಿಯೋಜನೆ ಹಿಂಪಡೆಯುವ 52 ಪ್ರಕರಣಗಳ ಪೈಕಿ 8 ಪ್ರಕರಣಗಳು ಇದಕ್ಕೆ ಸಂಬಂಧಿಸಿದ್ದಾಗಿವೆ.

ಇದಲ್ಲದೇ ಕನ್ನಡ ನಾಡು ಮತ್ತು ನೀರಿಗಾಗಿನ ಹೋರಾಟ, ರೈತ ಹೋರಾಟಗಳಿಗೆ ಸಂಬಂಧಿಸಿ ಪ್ರಕರಣಗಳನ್ನು ಕೈಬಿಡಲಾಗಿದೆ. ಮೇಕೆದಾಟು ಯೋಜನೆಗೆ ತಮಿಳರ ವಿರೋಧವನ್ನು ಖಂಡಿಸಿ ಹಾಗೂ ಕಾವೇರಿ ನದಿ ನೀರು ತಮಿಳುನಾಡಿಗೆ ಹರಿಸದಂತೆ ಆಗ್ರಹಿಸಿ ನಡೆಸಿದ ಹೋರಾಟಗಳ ಹಲವು ಪ್ರಕರಣಗಳನ್ನು ಕೈಬಿಡುವುದಕ್ಕೆ ಸಂಪುಟ ತೀರ್ಮಾನಿಸಿದೆ. ಬೆಳಗಾವಿ ಅಧಿವೇಶನದ ವೇಳೆ ನಡೆದ ರೈತ ಹೋರಾಟಗಳ ಸಹಿತ ಉತ್ತರ ಕರ್ನಾಟಕ ಜಿಲ್ಲೆಯ ಕೆಲವು ಹೋರಾಟಗಳಲ್ಲಿ ಭಾಗವಹಿಸಿ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯುವುದಕ್ಕೆ ಸಂಪುಟ ಸಮ್ಮತಿಸಿದೆ.

ಶಿಕ್ಷಣ ಕಿಟ್ ಖರೀದಿಗೆ ಅಸ್ತು

◆ **ಬೆಂಗಳೂರು:** ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಶಾಲಾಪೂರ್ವ ಶಿಕ್ಷಣ ಕಿಟ್‌ಗಳನ್ನು ಪ್ರತಿ ಕೇಂದ್ರಕ್ಕೆ 3000 ರೂ. ಘಟಕ ವೆಚ್ಚದಲ್ಲಿ 69,922 ಅಂಗನವಾಡಿಗಳಿಗೆ ಒಟ್ಟು 20.98 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಸಚಿವ ಸಂಪುಟ ಸಭೆ ಸಮ್ಮತಿಸಿದೆ.

➡ಪುಟ ೪



ಎಸ್‌ಐಆರ್: ನಾಲ್ಕು ದಿನದಲ್ಲಿ ತೀರ್ಮಾನ

ಕರ್ನಾಟಕ ರಾಜ್ಯದಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಸಂಬಂಧಿಸಿ ಯಾವೊಬ್ಬ ಪ್ರಜೆಯ ಮತದಾನದ ಹಕ್ಕು ಉದ್ದೇಶಪೂರ್ವಕವಾಗಿ, ಅನವಶ್ಯಕವಾಗಿ ಕಸಿದುಕೊಳ್ಳುವ, ದಮನ ಮಾಡುವ ಯಾವುದೇ ಪ್ರಕ್ರಿಯೆ ನಡೆದರೂ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದಕ್ಕೆ ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ರಾಜ್ಯದಲ್ಲಿ ಪ್ರಾರಂಭವಾಗಲಿರುವ ಎಸ್‌ಐಆರ್ ಕುರಿತಂತೆ ಗಂಭೀರವಾಗಿ ಚರ್ಚಿಸಲಾಗಿದೆ. ರಾಷ್ಟ್ರದಲ್ಲಿ ಹಲವಾರು ರಾಜ್ಯಗಳಲ್ಲಿ ಅವಘಡಗಳು ಜರುಗಿವೆ. ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಮತದಾನದ ಹಕ್ಕು ಹೋಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಆಗಿರುವ ಹಲವು ಅತ್ಯಂತ ಗಂಭೀರ ಆಕ್ಷೇಪಗಳು, ತಮಿಳುನಾಡಿನಲ್ಲಿನ ಹಲವು ಆಕ್ಷೇಪಗಳು ಇವೆಲ್ಲವುಗಳ ಹಿನ್ನೆಲೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ.

➡ಪುಟ ೪

ಪ್ರಧಾನಿ ಮೋದಿ ಪಂಚರಾಷ್ಟ್ರ ಪ್ರವಾಸ ಸಂಪನ್ನ

ವಿದೇಶಿ ನಾಯಕರಿಗೆ ದೇಸಿ ಉಡುಗೊರೆ

◆ **ಹೊಸದಿಲ್ಲಿ:** ಪಂಚ ರಾಷ್ಟ್ರಗಳ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ದೇಶಗಳ ನಾಯಕರಿಗೆ ಭಾರತದ ಪರಂಪರೆ, ಕಲೆ ಮತ್ತು ಕೃಷಿ ವೈಭವವನ್ನು ಪ್ರತಿಬಿಂಬಿಸುವ ಹಲವು ವಿಶಿಷ್ಟ ಉಡುಗೊರೆಗಳನ್ನು ನೀಡಿದ್ದಾರೆ.

ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಅಸ್ಸಾಂನ ಪ್ರಸಿದ್ಧ ಮುಗಾ ರೇಷ್ಮೆ ಶಾಲು ಹಾಗೂ ಶಿರುಯಿ ಲಿಲಿ ಪ್ರೇರಿತ ಸಿಲ್ಕ್ ಶಾಲು ನೀಡಲಾಗಿದೆ. ನೆದರ್‌ಲ್ಯಾಂಡ್ಸ್ ಪ್ರಧಾನಿ ರಾಬ್ ಜೆಟ್ಟನ್ ಅವರಿಗೆ ಮಧುಬನಿ ಚಿತ್ರ, ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಅವರಿಗೆ ಲಡಾಖಿನ ಶುದ್ಧ ಉಣ್ಣೆಯ ಶಾಲು ಉಡುಗೊರೆಯಾಗಿ ನೀಡಲಾಗಿದೆ.ಮೆಲೋನಿ ಅವರಿಗೆ ನೀಡಲಾದ ಮೆಲೋಡಿ ಟಾಫಿ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದ್ದು, ಅವರು ಅದನ್ನು 'ತುಂಬಾ ರುಚಿಕರ ಟಾಫಿ' ಎಂದು ಹೇಳಿರುವುದು ವಿಶೇಷ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯದ್ ಅಲ್ ನಹಯಾನ್ ಅವರಿಗೆ ಕೇಸರ್ ಮಾವು, ಮೇಘಾಲಯ ಅನಾನಸ್ ಮತ್ತು ಗುಜರಾತಿನ ರೋಗನ್ ಪೇಂಟಿಂಗ್ ನೀಡಲಾಗಿದೆ. ನೆದರ್‌ಲ್ಯಾಂಡ್ಸ್ ಅರಸ ವಿಲೆಂ-ಅಲೆಕ್ಸಾಂಡರ್ ಅವರಿಗೆ ಜೈಪುರ ಬ್ಲ್ಯೂ ಪೊಟ್ಟರಿ, ರಾಣಿ ಮ್ಯಾಕ್ಸಿಮಾ ಅವರಿಗೆ ಮೀಣಾಕಾರಿ-ಕುಂದನ್ ಆಭರಣ ನೀಡಲಾಗಿದೆ.

➡ಪುಟ ೪



ಗಮನಸೆಳೆದ ಗಿಫ್ಟ್

- ಮೆಲೋನಿ: ಮುಗಾ ಸಿಲ್ಕ್ ಶಾಲು, ಮೆಲೋಡಿ ಟಾಫಿ
- ಯುಎಇ ಅಧ್ಯಕ್ಷ: ಕೇಸರ್ ಮಾವು,ರೋಗನ್ ಪೇಂಟಿಂಗ್
- ಸ್ವೀಡನ್ ಪ್ರಧಾನಿ: ಲಡಾಖ್ ಉಣ್ಣೆ ಶಾಲು
- ನೆದರ್‌ಲ್ಯಾಂಡ್ಸ್ ಪ್ರಧಾನಿ: ಮಧುಬನಿ ಚಿತ್ರ
- ನಾರ್ವೆ ಅರಸ ಕುಟುಂಬ: ತಾರಕಾಸಿ ನೌಕಾ ಮಾದರಿ, ಪಟ್ಟಚಿತ್ರ
- ಐಸ್‌ಲ್ಯಾಂಡ್ ಪ್ರಧಾನಿ: ಐಸ್ ಅಕ್ಸ್ ಪ್ರತಿರೂಪ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ | ಸಿಎಂ ಸಿದ್ದರಾಮಯ್ಯ ಒತ್ತಾಯ

ಪ್ರಧಾನ್, ಪ್ರಧಾನಿ ಹೊಣೆ ಹೊರಲಿ

◆ **ಬೆಂಗಳೂರು:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯ ಜವಾಬ್ದಾರಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಹೊರಬೇಕು ಎಂದು ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಗುರುವಾರ ಫ್ರೀಡಂ ಪಾರ್ಕ್‌ನಲ್ಲಿ ಯುವ ಕಾಂಗ್ರೆಸ್ ಆಯೋಜಿಸಿದ್ದ ನೀಟ್ ಪರೀಕ್ಷಾ ಅಕ್ರಮಗಳ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಸಚಿವ ಧರ್ಮೇಂದ್ರ ಪ್ರಧಾನ್ ಅವರಾಗಲಿ ಅಥವಾ ಪ್ರಧಾನಿ ಮೋದಿ ಅವರಾಗಲಿ ಪಶ್ನೆ ಪತ್ರಿಕೆಯ ಸೋರಿಕೆ ಜವಾಬ್ದಾರಿ ಹೊತ್ತುಕೊಂಡಿಲ್ಲ. ಧರ್ಮೇಂದ್ರ ಪ್ರಧಾನ್ ಅವರು ನೀಟ್ ಪರೀಕ್ಷೆಗೆ ಮತ್ತೊಂದು ದಿನಾಂಕ ನಿಗದಿ ಮಾಡಿ ಕೈ ತೊಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು. ಧರ್ಮೇಂದ್ರ ಪ್ರಧಾನ್ ಅವರು ಕೇವಲ ನೀಟ್ ಪರೀಕ್ಷೆಯನ್ನು ಮುಂದೂಡುವ ಜತೆಗೆ ಪ್ರಕರಣದ ಹೊಣೆಹೊತ್ತು ರಾಜೀನಾಮೆ ನೀಡಬೇಕು. ಕೇಂದ್ರ ಶಿಕ್ಷಣ ಸಚಿವರು ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡುವವರೆಗೂ ಇಲ್ಲಿನ ಹೋರಾಟವನ್ನು ಮುಂದುವರಿಸಬೇಕು ಎಂದರು.

➡ಪುಟ ೪



ಫ್ರೀಡಂ ಪಾರ್ಕ್‌ನಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ

ಕೇರಳ ವಿಧಾನಸಭೆಯಲ್ಲಿ ಕನ್ನಡದ ಕಂಪು

ತಿರುವನಂತಪುರ: ಮಲಯಾಳಂ ಅಧಿಕೃತ ಭಾಷೆಯಾದ ಕೇರಳ ವಿಧಾನಸಭೆಯಲ್ಲಿ ಗುರುವಾರ ಕನ್ನಡದ ಸೊಗಡು ಮೊಳಗಿತು. ಮಂಜೇಶ್ವರ



ಕ್ಷೇತ್ರದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಶಾಸಕ ಎ.ಕೆ.ಎಂ. ಅಶ್ರಫ್ ಅವರು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದರು. ಗಡಿನಾಡಿನ ಭಾಷಾ ಸೌಹಾರ್ದಕ್ಕೆ ಈ ಘಟನೆ ವಿಶೇಷ ಸಾಕ್ಷಿಯಾಯಿತು.

ಅಶ್ರಫ್ ಅವರ ಪ್ರಮಾಣ ವಚನ ಮುಗಿದ ತಕ್ಷಣ ಸದನದಲ್ಲಿ ಸದಸ್ಯರು ಮೇಜು ತಟ್ಟಿ ಅಭಿನಂದನೆ ಸಲ್ಲಿಸಿದರು. ಮುಖ್ಯಮಂತ್ರಿ ವಿ.ಡಿ. ಸತೀಶನ್ ಸೇರಿದಂತೆ ಹಲವು ಸದಸ್ಯರು ಅಶ್ರಫ್ ಅವರ ಕನ್ನಡಾಭಿಮಾನವನ್ನು ಶ್ಲಾಘಿಸಿದರು.

➡ಪುಟ ೪

ಕನ್ನಡದಲ್ಲೇ ಪ್ರಮಾಣ ಸ್ವೀಕರಿಸಿದ ಮಂಜೇಶ್ವರ ಕ್ಷೇತ್ರದ ಶಾಸಕ ಎ.ಕೆ.ಎಂ.ಅಶ್ರಫ್

ರಾಜ್ಯದ ವೈವಿಧ್ಯತೆ, ಸಂಸ್ಕೃತಿ ಪ್ರತಿಬಿಂಬ

ಕೇರಳದ 16ನೇ ವಿಧಾನಸಭಾ ಸದಸ್ಯರ ಗುರುವಾರದ ಪ್ರಮಾಣವಚನ ಸ್ವೀಕಾರ ಸಮಾರಂಭವು, ಸಾಂವಿಧಾನಿಕ ಕಾರ್ಯಕ್ರಮಕ್ಕಿಂತಲೂ ರಾಜ್ಯದ ವೈವಿಧ್ಯತೆ, ಸರಳತೆ ಮತ್ತು ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಕರ್ಷಕ ಸಮಾರಂಭವಾಗಿ ಕಂಗೊಳಿಸಿತ್ತು. ಹೊಸ ಶಾಸಕರಲ್ಲಿ ಕೆಲವರು ಬೈಸಿಕಲ್ ಏರಿ ವಿಧಾನಸಭೆ ತಲುಪಿದ್ದು ಗಮನ ಸೆಳೆಯಿತು.

➡ಪುಟ ೪

ಆನೆಗಳ ಕಾಳಗಕ್ಕೆ ಮಹಿಳೆ ಬಲಿ ಹಿನ್ನೆಲೆ ಕ್ರಮ

ಸಕ್ರೆಬೈಲು ಆನೆ ಬಿಡಾರಕ್ಕೆ ಜನರ ಪ್ರವೇಶ ನಿಷೇಧ

◆ **ಶಿವಮೊಗ್ಗ:** ತುಂಗಾ ಹಿನ್ನೀರಿನಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣ ಸಕ್ರೆಬೈಲು ಆನೆ ಬಿಡಾರಕ್ಕೆ ಸಾರ್ವಜನಿಕರ ಪ್ರವೇಶವನ್ನು ಮೇ 21ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ನಿಷೇಧಿಸಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಮೇ 18ರಂದು ದುಬಾರೆ ಸಾಕಾನೆ ಶಿಬಿರದಲ್ಲಿ ಕಂಜನ್ ಹಾಗೂ ಮಾರ್ತಾಂಡ(ಮಖ್ನಾ) ಎಂಬ ಸಾಕಾನೆಗಳನ್ನು ಸ್ನಾನ ಮಾಡಿಸುತ್ತಿದ್ದ ಸಂದರ್ಭದಲ್ಲಿ, ಈ ಎರಡು ಆನೆಗಳ ನಡುವೆ ಕಾಳಗ(ಜಗಳ) ನಡೆದಿದೆ. ಈ ವೇಳೆ ನದಿಯ ಬಳಿ ನಿಂತು ಆನೆಗಳನ್ನು ವೀಕ್ಷಿಸುತ್ತಿದ್ದ ಮಹಿಳಾ ಪ್ರವಾಸಿಯೊಬ್ಬರು ಆನೆ ಅಡಿ ಸಿಲುಕಿ ಮೃತಪಟ್ಟಿದ್ದರು. ಈ ದುರಂತದ ಹಿನ್ನೆಲೆಯಲ್ಲಿ, ಇಲಾಖಾ ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಹೊಸದಾಗಿ ಪ್ರಮಾಣಿತ ಕಾರ್ಯ ವಿಧಾನವನ್ನು (ಎಸ್‌ಒಪಿ) ರೂಪಿಸುವ ಅಗತ್ಯವಿದೆ. ಬೆಂಗಳೂರಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಮುಖ್ಯ ವನ್ಯಜೀವಿ ಪರಿಪಾಲಕರ ನಿರ್ದೇಶನದ ಮೇರೆಗೆ, ಈ ಹೊಸ ಸುರಕ್ಷತಾ ನಿಯಮಾವಳಿಗಳು ಸಿದ್ಧವಾಗುವವರೆಗೆ ಮುಂಜಾಗ್ರತಾ ಕ್ರಮವಾಗಿ ಸಕ್ರೆಬೈಲು ಆನೆ ಬಿಡಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.



ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಆದೇಶ

ಕಾಂಗ್ರೆಸಿಗರಿಗೆ ಪೇಚು ತಂದ ಕೇರಳ ಸಿಎಂ ಪೂರ್ಣ ನಾಮ!

◆ **ಹೊಸದಿಲ್ಲಿ:** ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಪ್ರಮಾಣವಚನದ ವೇಳೆ ತಮ್ಮ ಪೂರ್ಣ ಹೆಸರನ್ನು ಹೇಳಿರುವುದೀಗ ಅವರ ಸ್ವಪಕ್ಷ ಕಾಂಗ್ರೆಸಿಗರಲ್ಲಿ ಅಸಮಾಧಾನ ಉಂಟು ಮಾಡಿದ ವಿದ್ಯಮಾನವೊಂದು ಈಗ ಚರ್ಚೆಗೆ ಕಾರಣವಾಗಿದೆ. ಅವರ ಆಡಳಿತ ವಿಷಯ ರಾಜಕೀಯ ವಿವಾದವೆಬ್ಬಿಸದೆ ಅವರ ಹೆಸರು ಈ ವಿವಾದಕ್ಕೆ ಕಾರಣವಾಗಿರುವುದೀಗ ಕುತೂಹಲ ಮೂಡಿಸಿದೆ.

ಅವರು ಈ ವರೆಗೆ ವಿ.ಡಿ.ಸತೀಶನ್ ಎಂದೇ ಜನಪ್ರಿಯರು. ಆದರೆ ಪ್ರಮಾಣವಚನದ ವೇಳೆ ಸಹಜವಾಗಿಯೇ ಅವರು ತಮ್ಮ ಪೂರ್ಣ ಮತ್ತು ಕಾನೂನುಬದ್ಧ ಹೆಸರಾದ ವಡಶ್ಶೇರಿ ದಾಮೋದರ ಮೆನನ್ ಸತೀಶನ್ ಎಂಬುದಾಗಿ ಹೇಳಿದ್ದೇ ಈಗ ಅವರ ಸ್ವಪಕ್ಷೀಯರ ಅಸಮಾ ಧಾನಕ್ಕೆ ಕಾರಣವಾಗಿರುವ ವಿಲಕ್ಷಣ ವಿದ್ಯಮಾನವಿದು. ಅವರು ಮುಖ್ಯಮಂತ್ರಿ ಯಾಗಿ ಮತ್ತು ಅನಂತರ ಗುರುವಾರ ವಿಧಾನಸಭೆಯಲ್ಲಿ ಒಬ್ಬ ಶಾಸಕರ ನೆಲೆಯಲ್ಲಿ ಪ್ರಮಾಣವಚನ ಸ್ವೀಕರಿಸಿದಾಗಲೂ ಈ ರೀತಿ ಪೂರ್ಣವಾಗಿ ತಮ್ಮ ಹೆಸರನ್ನು ಹೇಳಿ



ಪ್ರಮಾಣ ಸ್ವೀಕರಿಸಿದ್ದಾರೆ.

ಯಾಕೆ ವಿವಾದವಾಯಿತು?: ವಿ.ಡಿ.ಸತೀಶನ್ ಅವರು ಕೇರಳದ ಮೇಲ್ವರ್ಗ ನಾಯರ್ ಸಮುದಾಯಕ್ಕೆ ಸೇರಿದವರು ಎಂಬ ಅಂಶವೀಗ ಬಹಿರಂಗಗೊಂಡಿದ್ದೇ ವಿವಾದದ ಮೂಲ. ಈ ರೀತಿ ಅವರ ಪೂರ್ಣ ಹೆಸರಿನ ಉಲ್ಲೇಖದಿಂದಾಗಿ ಕಾಂಗ್ರೆಸಿನ ಸೆಕ್ಯುಲರ್ ಮತ್ತು ಇನ್‌ಕ್ಲೂಸಿವ್ ಇಮೇಜ್‌ಗೆ ಧಕ್ಕೆ ಉಂಟಾದಂತಾಗಿದೆ ಎಂಬುದು ತಕರಾರಿಗೆ ಕಾರಣವಾಗಿರುವ ಅಂಶ.

➡ಪುಟ ೪

ಬೋಳೂರಿನ ಅಮೃತಾ ವಿದ್ಯಾಲಯದ ಆವರಣದಲ್ಲಿದೆ ಬ್ರಹ್ಮಸ್ಥಾನಂ ಕ್ಷೇತ್ರ

ಶಿವ-ಶಕ್ತಿ ಐಕ್ಯರೂಪದ ವಿಶಿಷ್ಟ ದೇವಸ್ಥಾನ





• ಮಂಗಳೂರು: ಒಂದೇ ಶಿಲೆಯಲ್ಲಿ ನಾಲ್ಕು ದೇವರ ವಿಗ್ರಹಗಳಿರುವ ಮತ್ತು ನಾಲ್ಕು ದಿಕ್ಕುಗಳಿಗೆ ಅಭಿಮುಖವಾಗಿ ನಾಲ್ಕು ದ್ವಾರಗಳ ಮೂಲಕ ದರ್ಶನ ನೀಡುವ ನಾಲ್ಕು ದೇವರುಗಳಿರುವ ಅಪರೂಪದ ದೇವಾಲಯ ಬೋಳೂರಿನ ಶ್ರೀ ಬ್ರಹ್ಮಸ್ಥಾನಂ ಕ್ಷೇತ್ರ. ಅನೇಕತೆಯಲ್ಲಿ ಏಕತೆಯನ್ನು ಸಾರುವ, ದೇವನೊಬ್ಬ ನಾಮ ಹಲವು ಎಂಬ ಸಂದೇಶ ಸಾರುವ ಶಿವ, ಪಾರ್ವತೀದೇವಿ, ಗಣಪತಿ ಮತ್ತು ಸುಬ್ರಹ್ಮಣ್ಯ (ರಾಹು/ನಾಗ) ದೇವರುಗಳು ಒಂದೇ ಶಿಲೆಯಲ್ಲಿ ಕೆತ್ತಲ್ಪಟ್ಟ



ದಿವ್ಯಮೂರ್ತಿಗಳಾಗಿವೆ.

ಸಾಮಾನ್ಯವಾಗಿ ದೇವಾಲಯಗಳಲ್ಲಿ ನಾಲ್ಕು ದ್ವಾರಗಳು ನಾಲ್ಕು ದಿಕ್ಕುಗಳಿಗೆ ತೆರೆದಿರುವ ರಚನೆ ಕಾಣಸಿಗುವುದು ಅಪರೂಪ. ಬ್ರಹ್ಮಸ್ಥಾನಂ ಎಂಬುದು ಅಮ್ಮನವರ ಪರಿಕಲ್ಪನೆಯಿಂದ ಮೂಡಿ ಬಂದಿದ್ದು ಶಿವ ಮತ್ತು ಶಕ್ತಿ (ಪಾರ್ವತಿ) ಎರಡರ ಸಂಗಮಕ್ಷೇತ್ರ ಎಂಬ ವಿಶೇಷತೆಯನ್ನು ಹೊಂದಿದೆ.

2008 ರ ಫೆಬ್ರವರಿ 18 ರ ಶುಭ ಮುಹೂರ್ತದಲ್ಲಿ ಅಮ್ಮನವರೇ ಸ್ವತಃ ಪ್ರಾಣ ಪ್ರತಿಷ್ಠೆಗೈದು ಈ ದೇವಾಲಯವನ್ನು ಲೋಕಾರ್ಪಣೆ ಮಾಡಿರುವುದು ವಿಶೇಷ. ದೇಶಾದ್ಯಂತ ಒಟ್ಟು 21 ಬ್ರಹ್ಮಸ್ಥಾನಂ ದೇವಸ್ಥಾನಗಳಿದ್ದು, 22 ನೆಯದು ಮಾರಿಷಸ್ ನಲ್ಲಿದೆ.

ಜನ್ಮಜಾತ ದೋಷ ನಿವಾರಣಾ ಕ್ಷೇತ್ರವಾಗಿ ಪ್ರಸಿದ್ಧಿ

ಅಮ್ಮನವರು ವಿಶ್ವದಾದ್ಯಂತ ಸಂಚರಿಸುತ್ತ ಹಗಲಿರುಳೆನ್ನದೆ ಬಳಿ ಬರುವ ಭಕ್ತರನ್ನು ಜಾತಿ ಮತ ಧರ್ಮ ವರ್ಣಭೇದವಿಲ್ಲದೆ ಅಪ್ಪಿಕೊಂಡು ಅವರ ಸಂಕಷ್ಟಗಳನ್ನು ಆಲಿಸಿ ಸಂಕಷ್ಟ ನಿವಾರಣೆಗಾಗಿ ಸಂಕಲ್ಪಮಾಡಿ ಅನುಗ್ರಹಿಸುವ ಮೂಲಕ ಅವರ ಜೀವನದಲ್ಲಿ ಸಕಾರಾತ್ಮಕ ಪರಿಣಾಮಗಳೊಂದಿಗೆ ಸಂತೃಪ್ತಿ ಮೂಡಿಸುತ್ತಲಿದ್ದಾರೆ. ಈ ಕಾರಣದಿಂದಲೇ ಕೋಟ್ಯಾಂತರ ಭಕ್ತರ ಆರಾಧ್ಯಮಾತೆಯಾಗಿ ಅಮ್ಮ ಪೂಜಿಸಲ್ಪಡುತ್ತಿದ್ದಾರೆ.

ಭಕ್ತರ ಸಂಕಷ್ಟಗಳನ್ನು ಆಲಿಸುವ ಸಂದರ್ಭದಲ್ಲಿ ಅಮ್ಮನವರಿಗೆ ಭಕ್ತರು ಅನುಭವಿಸುವ ಕಷ್ಟಗಳ ಕಾರಣಗಳು ಗೋಚರವಾಗಿ ಜಾತಕದಲ್ಲಿ ವ್ಯಕ್ತವಾಗುವ ಗ್ರಹಗಳ ಸ್ಥಾನ ಹಾಗೂ ಸ್ಥಾನಾಂತರದ ಸಂದರ್ಭದಲ್ಲಿ ಮೂಡಿಬರುವ ವ್ಯತ್ಯಾಸಗಳಿಂದ ಜೀವನದ ಮೇಲೆ ಪರಿಣಾಮ ಬೀರುತ್ತಿರುವುದನ್ನು ಗಮನಿಸುತ್ತಾರೆ.

ಪ್ರತಿತಿಂಗಳ ಕೃತ್ತಿಕಾ ನಕ್ಷತ್ರ ಪೂಜೆ

ಅಮ್ಮನ ಜನ್ಮ ನಕ್ಷತ್ರ ಕೃತ್ತಿಕಾದಂದು ವಿಶೇಷ ದೇವೀ ಪೂಜೆಯನ್ನು (ಭಗವತಿಸೇವೆ) ಸಂಜೆ 6.30 ಕ್ಕೆ ಕುಟುಂಬದ ಕಲ್ಯಾಣಕ್ಕಾಗಿ ಮಾಡಲಾಗುತ್ತದೆ. ಬೆಳಗ್ಗೆ 5.30 ರಿಂದ ಮಧ್ಯಾಹ್ನ 11.30 ಸಂಜೆ 50 ರಿಂದ 8ರ ತನಕ ಕ್ಷೇತ್ರ ತೆರೆದಿರುತ್ತದೆ. ಬ್ರಹ್ಮಸ್ಥಾನಂ ಮಹೋತ್ಸವದ ದಿನಗಳಲ್ಲಿ ದಿನವಿಡೀ ತೆರೆದಿರುತ್ತದೆ ಹಾಗೂ ವಿವಿಧ ಪೂಜೆ, ಹೋಮಗಳು ಸೂರ್ಯಾಸ್ತದ ತನಕವೂ ಮುಂದುವರಿಯುತ್ತವೆ.

ಇವುಗಳ ಪರಿಹಾರಾರ್ಥವಾಗಿಯೇ ಬ್ರಹ್ಮಸ್ಥಾನಂ ಕ್ಷೇತ್ರಗಳು ಪ್ರತಿಷ್ಠಾಪನೆಗೊಂಡಿರುತ್ತವೆ. ದೇಶದಲ್ಲಿರುವ ಬ್ರಹ್ಮಸ್ಥಾನಂ ಕ್ಷೇತ್ರಗಳಲ್ಲಿ ಮಂಗಳೂರಿನ ಕ್ಷೇತ್ರವು 19ನೆಯದ್ದಾಗಿದೆ.

ಇಲ್ಲಿ ಅಮ್ಮನ ಆಶ್ರಮದ ಬ್ರಹ್ಮಚಾರಿಗಳು ಅಮ್ಮನವರ ನಿರ್ದೇಶನಾನುಸಾರ ತಾಂತ್ರಿಕ ವಿಧಿ-ವಿಧಾನಗಳಂತೆ ದೋಷನಿವಾರಣಾ ಪೂಜೆಗಳನ್ನು ನೆರವೇರಿಸುತ್ತಾರೆ.

ಸಾಮೂಹಿಕ ಪೂಜೆಗಳು

ರಾಹುದೋಷ ನಿವಾರಣಾ ಪೂಜೆ. ಶನಿದೋಷ ನಿವಾರಣಾ ಪೂಜೆಗಳು ಅಮ್ಮನವರ ಭೇಟಿಯ ಸಂದರ್ಭದಲ್ಲಿ ನಡೆಯುತ್ತವೆ.

ಮೇ 28ರಂದು ಬೆಳಗ್ಗೆ 7.30 ಕ್ಕೆ ಯಜ್ಞ ಶಾಲೆಯಲ್ಲಿ ಬೃಹತ್ ಸಾಮೂಹಿಕ ರಾಹುದೋಷ ನಿವಾರಣಾ ಪೂಜೆ ಹಾಗೂ

29 ರಂದು ಬೆಳಗ್ಗೆ 7.30 ಕ್ಕೆ ಸಾಮೂಹಿಕ ಶನಿದೋಷ ನಿವಾರಣಾ ಪೂಜೆಗಳು ಆಶ್ರಮದ ಸ್ವಾಮೀಜಿಗಳು ಮತ್ತು ಬ್ರಹ್ಮಚಾರಿಗಳ ಮೂಲಕ ತಾಂತ್ರಿಕ ವಿಧಿ ವಿಧಾನಗಳಂತೆ ನೆರವೇರಲಿದೆ.

ಉಜಿರೆ ಎಸ್‌ಡಿಎಂ ಕಾಲೇಜಿನ ಹರೀಶ್ ಶೆಟ್ಟಿಗೆ ಸಬ್ ಲೆಫ್ಟಿನೆಂಟ್ ರ‍್ಯಾಂಕ್

• ಉಜಿರೆ : ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಹರೀಶ್ ಶೆಟ್ಟಿ ಇತ್ತೀಚೆಗೆ ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ಕಾಂಪ್ಟಿಯ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ ನಡೆದ ಪ್ರತಿಷ್ಠಿತ ಪ್ರೀ-ಕಮಿಷನ್ ಕೋರ್ಸ್ ಯಶಸ್ವಿಯಾಗಿ ಪೂರ್ಣಗೊಳಿಸಿ ರಾಷ್ಟ್ರೀಯ ಕೆಡೆಟ್ ಕೋರ್ ನೌಕಾ ವಿಭಾಗದಲ್ಲಿ ಸಬ್ ಲೆಫ್ಟಿನೆಂಟ್ ರ‍್ಯಾಂಕ್ ಪಡೆಯುವು ದರ ಮೂಲಕ ಎನ್.ಸಿ.ಸಿ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ.

> **ಹರೀಶ್ ಶೆಟ್ಟಿಯವರು ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿ. ಹನ್ನೊಂದು ವರ್ಷಗಳಿಂದ ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಳೆದ ಮೂರು ವರ್ಷಗಳಿಂದ ಎನ್‌ಸಿಸಿ ನೌಕಾ ವಿಭಾಗದಲ್ಲಿ ಕೇರ್ ಟೇಕರ್ ಆಗಿ ನೇಮಕಗೊಂಡಿದ್ದರು. ಇದೀಗ ಕಠಿಣ ಪರಿಶ್ರಮ, ಶಿಸ್ತು ಮತ್ತು ದೃಢತೆಯಿಂದ ಕೋರ್ಸ್ ತರಬೇತಿ ಯಶಸ್ವಿಯಾಗಿ ಪೂರ್ಣಗೊಳಿಸಿ, ಸಬ್ ಲೆಫ್ಟಿನೆಂಟ್ ರ‍್ಯಾಂಕ್ ಪಡೆಯುವುದರ ಮೂಲಕ ಕಾಲೇಜಿನ ಎನ್‌ಸಿಸಿ ನೌಕಾ ವಿಭಾಗದ ಅಸೋಸಿಯೇಟ್ ಎನ್‌ಸಿಸಿ ಆಫೀಸರ್ ಆಗಿ ನೇಮಕಗೊಂಡಿರುವುದು ಪ್ರಶಂಸನೀಯ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.**
>
> ■ ಪ್ರೊ. ವಿಶ್ವನಾಥ ಪಿ. ಪ್ರಾಂಶುಪಾಲರು, ಎಸ್.ಡಿ.ಎಂ ಕಾಲೇಜು ಉಜಿರೆ

ಅವರು ಜನವರಿ 5 ರಿಂದ ಏಪ್ರಿಲ್ 4ರ ವರೆಗೆ ನಡೆದ ತರಬೇತಿಯಲ್ಲಿ, ಎನ್‌ಸಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ವಿನ್ಯಾಸಗೊಳಿಸಲಾದ ನಾಯಕತ್ವ, ಶಿಸ್ತು, ಸಂಘಟನಾ ಚಾತುರ್ಯ ಮತ್ತು ಡ್ರಿಲ್ ಮುಂತಾದ ವಿಷಯಗಳ ಕುರಿತು ತರಬೇತಿ ಪಡೆದುಕೊಂಡಿದ್ದಾರೆ. ಅವರಿಗೆ ಎನ್.ಸಿ.ಸಿ.ಯ ಮಹಾನಿರ್ದೇಶಕರು ಸಬ್ ಲೆಫ್ಟಿನೆಂಟ್ ಪದವಿಯನ್ನು ನೀಡಿ ಗೌರವಿಸಿದ್ದಾರೆ.



ಮೂಲತಃ ಉಡುಪಿಯ ಕುಂದಾಪುರ ತಾಲೂಕಿನ ಮುದೂರಿನವರಾಗಿದ್ದು, ಧಾರವಾಡದ ಡಾ. ಡಿ. ಜಿ. ಶೆಟ್ಟಿ ವಿದ್ಯಾ ಸಂಸ್ಥೆಯಲ್ಲಿ ಪದವಿ ಮುಗಿಸಿ, ಸ್ನಾತಕೋತ್ತರ ಪದವಿಯನ್ನು ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಪೂರೈಸಿದ್ದಾರೆ. ಕಳೆದ ಹನ್ನೊಂದು ವರ್ಷಗಳಿಂದ ಉಜಿರೆಯ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅವರ ವಿಶೇಷ ಸಾಧನೆಗೆ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸೇರಿದಂತೆ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್., ಐಟಿ ಮತ್ತು ಹಾಸ್ಟೆಲ್ ಆಡಳಿತ ವಿಭಾಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರನ್ ವರ್ಮ, ಕಾಲೇಜಿನ ಪ್ರಾಂಶುಪಾಲ ಪ್ರೊ ವಿಶ್ವನಾಥ್ ಪಿ, ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಹಿಂದೂ ಜನಜಾಗೃತಿ ಸಮಿತಿಯಿಂದ ಜಿಲ್ಲಾಧಿಕಾರಿಗೆ ಮನವಿ

ಏಕರೂಪ ಸಮವಸ್ತ್ರ ನೀತಿ ಪಾಲನೆ, ಬಕ್ರಿದ್ ಹಬ್ಬ ಸಂದರ್ಭದಲ್ಲಿ ಅಕ್ರಮ ಗೋಹತ್ಯೆ ತಡೆಗೆ ಆಗ್ರಹ

• ಮಂಗಳೂರು: ರಾಜ್ಯದ ಶೈಕ್ಷಣಿಕ ವಾತಾವರಣದಲ್ಲಿ ಸಮಾನತೆ ಕಾಪಾಡುವುದು ಹಾಗೂ ಮುಂಬರುವ ಹಬ್ಬದ ದಿನಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹಿಂದೂ ಜನಜಾಗೃತಿ ಸಮಿತಿಯು ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರದ ಶಿಕ್ಷಣ ಸಚಿವರಿಗೆ ಹಾಗೂ ಗೃಹ ಸಚಿವರಿಗೆ ಪ್ರತ್ಯೇಕ ಮನವಿ ಪತ್ರಗಳನ್ನು ಸಲ್ಲಿಸಿ ತಕ್ಷಣದ ಕ್ರಮಕ್ಕೆ ಆಗ್ರಹಿಸಿದೆ.



ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿ, ಕೇಸರಿ ಶಾಲು ಧರಿಸುವುದನ್ನು ನಿರ್ಬಂಧಿಸಿರುವ ಸರ್ಕಾರದ ಇತ್ತೀಚಿನ ನಿರ್ಧಾರವು ಸಮಾನತೆ, ಧರ್ಮನಿರಪೇಕ್ಷತೆ ಹಾಗೂ ಏಕರೂಪದ ಸಮವಸ್ತ್ರ ನೀತಿಗೆ ವಿರುದ್ಧವಾಗಿದೆ ಎಂದು ಸಮಿತಿಯು ಶಿಕ್ಷಣ ಸಚಿವರಿಗೆ ಸಲ್ಲಿಸಿದ ಮನವಿಯಲ್ಲಿ ಕಳವಳ ವ್ಯಕ್ತಪಡಿಸಿದೆ. ಇದರಿಂದಾಗಿ ಶೈಕ್ಷಣಿಕ ಸಂಸ್ಥೆಗಳು ಧಾರ್ಮಿಕ ಸಂಘರ್ಷಗಳ ವೇದಿಕೆಯಾಗುವ ಅಪಾಯವಿದೆ ಎಂದು ಸಮಿತಿ ಎಚ್ಚರಿಸಿದೆ. ಕಳೆದ 2022 ರ ಹಿಜಾಬ್ ವಿವಾದದ ಸಂದರ್ಭದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಹಿಜಾಬ್ ಇಸ್ಲಾಂ ಧರ್ಮದ ಅತ್ಯಗತ್ಯ ಆಚರಣೆಯಲ್ಲ ಎಂದು ಸ್ಪಷ್ಟಪಡಿಸಿ, ನಿಗದಿತ ಸಮವಸ್ತ್ರ ಪಾಲನೆಗೆ ಮಹತ್ವದ ತೀರ್ಪು ನೀಡಿತ್ತು. ಪ್ರಸ್ತುತ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವಾಗ ಸರ್ಕಾರದ ಈ ನಿರ್ಧಾರ ನ್ಯಾಯಾಂಗ ಪ್ರಕ್ರಿಯೆಗೆ ವಿರುದ್ಧವಾಗಿದ್ದು, ಹಿಜಾಬ್‌ಗೆ ಅವಕಾಶ ನೀಡುವ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂದು ಸಮಿತಿ ಒತ್ತಾಯಿಸಿದೆ. ಇದರೊಂದಿಗೆ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪದ ಸಮವಸ್ತ್ರ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಶಿಕ್ಷಣ ಇಲಾಖೆಗೆ ಆಗ್ರಹಿಸಲಾಗಿದೆ.

ಗೋಹತ್ಯೆ ತಡೆಯಿರಿ

ಮೇ 28ರಂದು ನಡೆಯಲಿರುವ ಬಕ್ರಿದ್ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾನೂನು ಬಾಹಿರ ಗೋಹತ್ಯೆ ಹಾಗೂ ಅಕ್ರಮ ಗೋಸಾಗಾಟವನ್ನು ಸಂಪೂರ್ಣವಾಗಿ ತಡೆಯಲು ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ ಸಮಿತಿಯು ಗೃಹ ಸಚಿವರಿಗೆ ಮನವಿ ಮಾಡಿದೆ. ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯಿದೆ ಜಾರಿಯಲ್ಲಿದ್ದರೂ ಕಾನೂನು ಉಲ್ಲಂಘಿಸಿ ಗೋಹತ್ಯೆ ನಡೆಯುತ್ತಿರುವುದು ಹಿಂದೂ ಸಮಾಜದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತಿದೆ. ಆದ್ದರಿಂದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಪ್ರಮುಖ ಪ್ರವೇಶ ದ್ವಾರಗಳಲ್ಲಿ 24 ಗಂಟೆಗಳ ವಿಶೇಷ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಕಟ್ಟುನಿಟ್ಟಿನ ವಾಹನ ತಪಾಸಣೆ ನಡೆಸಬೇಕು, ಅಕ್ರಮ ಪಶು ಸಾಗಾಟ ಹಾಗೂ ಗೋಹತ್ಯೆಯಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಪ್ರಕರಣ ದಾಖಲಿಸಬೇಕು ಎಂದು ಗೃಹ ಇಲಾಖೆಯನ್ನು ಒತ್ತಾಯಿಸಲಾಗಿದೆ.

ಮನವಿ ನೀಡಿದ ನಿಯೋಗದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ಜಿಲ್ಲಾ ಸಮನ್ವಯಕ ವಿಜಯ ಕುಮಾರ್, ಪ್ರಣವ್ ಮಲ್ಯ, ಶ್ರೀರಾಮ ಸೇನೆಯ ರಾಜ್ಯ ಅಧ್ಯಕ್ಷ ಗಂಗಾಧರ ಕುಲಕರ್ಣಿ, ರಾಜ್ಯ ಕಾರ್ಯದರ್ಶಿ ಆನಂದ ಅಡ್ಯಾರ್, ಜಿಲ್ಲಾ ಅಧ್ಯಕ್ಷ ಹರೀಶ್ ಮಣ್ಣಗುಡ್ಡೆ, ಶಾರದೋತ್ಸವ ಸಮಿತಿ ಅಧ್ಯಕ್ಷ ಕೃಷ್ಣ ಶೆಟ್ಟಿ, ಹಿಂದೂರಾಷ್ಟ್ರ ಸಮನ್ವಯ ಸಮಿತಿಯ ದಿನಕರ್ ಬಜಾಲ್, ಸುರೇಂದ್ರ ಜಪ್ಪಿನಮೊಗರು, ಪ್ರಮುಖರಾದ ಗೀತಾ ಶೆಟ್ಟಿ, ಜಯಚಂದ್ರ ರೈ, ಸುಮತಿ, ಜಗದೀಶ ಮೂರ್ತಿ, ವಕೀಲರಾದ ಈಶ್ವರ ಕೊಟ್ಟಾರಿ, ತೀರ್ಥೇಶ್, ಜ್ಯೋತಿ ಗೌಡ, ಧರ್ಮಪ್ರೇಮಿಗಳಾದ ಜಯಪ್ರಕಾಶ್ ಬಜಾಲ್, ಪ್ರಕಾಶ್ ಬಜಾಲ್, ಸೌಮ್ಯ, ಶ್ರೀಪತಿ ಕದ್ರಿ, ಅಶೋಕ ಆಚಾರ್ಯ ಬಿರ್ಕನಕಟ್ಟೆ, ಚಂದ್ರಕಾಂತ್ ಕಾಮತ್, ರೋಹಿತ್ ಕೋಟ್ಯಾನ್, ಉಪೇಂದ್ರ, ನಿತೇಶ್ ರಾವ್, ಗಿರೀಶ್ ಕರುಗಲ್ಪಾಡಿ, ರಾಜೇಶ ಆಚಾರ್ಯ ಉಪಸ್ಥಿತರಿದ್ದರು.

ಕೋಟ್ಯಂತರ ಮಹಿಳೆಯರ ಬಾಳಿಗೆ ಆಸರೆಯಾದ ಸರ್ಕಾರದ ಉಚಿತ ಬಸ್ ಪಯಣ

ಪ್ರಯಾಣದ ಸ್ವಾತಂತ್ರ್ಯ ತಂದ ಶಕ್ತಿ ಯೋಜನೆ



ಅಂಕಿ-ಅಂಶ

₹18,943 ಕೋಟಿ
ಈವರೆಗೆ 'ಶಕ್ತಿ'ಗೆ ವ್ಯಯಿಸಲಾದ ಮೊತ್ತ

726 ಕೋಟಿಗೂ ಅಧಿಕ
ವಿತರಿಸಲಾದ ಒಟ್ಟು ಉಚಿತ ಟಿಕೆಟ್‌ಗಳು

ಗ್ಯಾರಂಟಿ ವಾರ್ತೆ

ಬೆಂಗಳೂರು: 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆ ಮೊದಲನೆಯದಾಗಿದೆ. ರಾಜ್ಯದಾದ್ಯಂತ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವ ಈ ಯೋಜನೆಗೆ 2023ರ ಜೂನ್ 11ರಂದು ಅಧಿಕೃತವಾಗಿ ಚಾಲನೆ ನೀಡಲಾಗಿತ್ತು. ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಈ ಮಹತ್ವಾಕಾಂಕ್ಷಿ ಯೋಜನೆಯು ರಾಜ್ಯದಲ್ಲಿ ಕೋಟ್ಯಂತರ ಮಹಿಳೆಯರಿಗೆ ಪ್ರಯಾಣದ ಸ್ವಾತಂತ್ರ್ಯ ಕಲ್ಪಿಸಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ.

ದಿನನಿತ್ಯ ದುಡಿಮೆಗೆ ಹೋಗುವ ಗಾರ್ಮೆಂಟ್ಸ್ ಕಾರ್ಮಿಕರು, ಪೌರಕಾರ್ಮಿಕರು ಹಾಗೂ ಕೆಳ-ಮಧ್ಯಮ ವರ್ಗದ ಮಹಿಳೆಯರಿಗೆ ಪ್ರತಿ ತಿಂಗಳು ಸುಮಾರು 1,500 ರಿಂದ 2,000 ರೂಪಾಯಿಗಳವರೆಗೆ ಉಳಿತಾಯವಾಗುತ್ತಿದೆ. ಈ ಹಣವನ್ನು ಅವರು ಮಕ್ಕಳ ಶಿಕ್ಷಣ, ದಿನಸಿ ಖರ್ಚಿಗೆ, ಔಷಧಿ ಖರೀದಿ ಸೇರಿದಂತೆ ಇನ್ನಿತರ ಸಣ್ಣಪುಟ್ಟ ಉಳಿತಾಯ ಖಾತೆಗಳಲ್ಲೂ ತೊಡಗಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಯಾವುದೇ ಆರ್ಥಿಕ ಹೊರೆಯಿಲ್ಲದೆ ಕಾಲೇಜು ಮತ್ತು ಉನ್ನತ ಶಿಕ್ಷಣಕ್ಕಾಗಿ ನಗರ ಪ್ರದೇಶಗಳಿಗೆ ಪ್ರಯಾಣಿಸಲು ಶಕ್ತಿ ನೆರವಾಗಿದೆ. ಯೋಜನೆಯ ಜಾರಿಯ ನಂತರ ರಾಜ್ಯದ ಪ್ರಮುಖ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಮಹಿಳಾ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು, ಧಾರ್ಮಿಕ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗಿದೆ.

726 ಕೋಟಿಗೂ ಅಧಿಕ ಪ್ರಯಾಣ

ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಯೋಜನೆ ಜಾರಿಯಾದಾಗಿನಿಂದ ಈವರೆಗೆ 726 ಕೋಟಿಗೂ ಅಧಿಕ ಬಾರಿ ಮಹಿಳಾ ಪ್ರಯಾಣಿಕರು 'ಶಕ್ತಿ' ಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ 18,943 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಟಿಕೆಟ್‌ಗಳನ್ನು ವಿತರಿಸಿದ್ದು, ಸಾರಿಗೆ ಸಂಸ್ಥೆಗಳಿಗೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುತ್ತಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಒತ್ತಡವನ್ನು ನಿಭಾಯಿಸಲು ಸಾವಿರಾರು ಹೊಸ ಬಸ್‌ಗಳನ್ನು ಸಾರಿಗೆ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಲಾಗಿದೆ. ಯೋಜನೆಯನ್ನು ಇನ್ನಷ್ಟು ಸುಗಮಗೊಳಿಸಲು ಮತ್ತು ದುರುಪಯೋಗ ತಡೆಯಲು ಸರ್ಕಾರವು ಮಹಿಳೆಯರಿಗೆ 'ಶಕ್ತಿ ಸ್ಮಾರ್ಟ್ ಕಾರ್ಡ್' (Smart Card) ವಿತರಿಸುವ ಪ್ರಕ್ರಿಯೆಯನ್ನು ಕೂಡ ಶೀಘ್ರದಲ್ಲೇ ಜಾರಿಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ಇತರೆ ರಾಜ್ಯಗಳಿಗೆ ಮಾದರಿ

ಕರ್ನಾಟಕದ ಈ 'ಶಕ್ತಿ' ಯೋಜನೆ ಕೇವಲ ಉಚಿತ ಬಸ್ ಪ್ರಯಾಣಕ್ಕೆ ಸೀಮಿತವಾಗಿರದೆ, ಮಹಿಳೆಯರ ಪ್ರಯಾಣವನ್ನು ಹೆಚ್ಚಿಸುವ ಮೂಲಕ ಅವರಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ನೋಡಿ ದೇಶದ ಇತರೆ ರಾಜ್ಯಗಳು ಕೂಡ ಇಂತಹದೇ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿರುವುದು ಇದರ ಯಶಸ್ಸಿಗೆ ಸಾಕ್ಷಿಯಾಗಿದೆ. ಈಗಾಗಲೇ ತೆಲಂಗಾಣದಲ್ಲಿ 'ಮಹಾಲಕ್ಷ್ಮೀ', ಆಂಧ್ರಪ್ರದೇಶದಲ್ಲಿ 'ಸ್ತ್ರೀ ಶಕ್ತಿ' ಹಾಗೂ ಕೇರಳದಲ್ಲೂ ಕೂಡ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೂಡ ಈ ಯೋಜನೆಯನ್ನು ಘೋಷಿಸಿ, ಅನುಷ್ಠಾನಕ್ಕೂ ಮುಂದಾಗಿದೆ.



3 ವರ್ಷಗಳ ಸಾಧನೆ, 'ಗ್ಯಾರಂಟಿ ಹಬ್ಬ' ಘೋಷಣೆ

ಜನಪರ ಆಡಳಿತದ ಯಶಸ್ವಿ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ರಾಜ್ಯ ಸರ್ಕಾರವು 3 ವರ್ಷಗಳ ಸಾಧನಾ ಸಮಾವೇಶವನ್ನು ಮೇ 19ರಂದು ತುಮಕೂರಿನಲ್ಲಿ ಯಶಸ್ವಿಯಾಗಿ ನಡೆಸಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಿದ್ದರು. ಅದರಂತೆ ರಾಜ್ಯ ಸರ್ಕಾರವು 'ಗ್ಯಾರಂಟಿ ಹಬ್ಬ' ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ತಿಂಗಳು ಪೂರ್ತಿ ವಿವಿಧ ಅಭಿಯಾನಗಳು ನಡೆಯಲಿವೆ.





> ನಮ್ಮ ಹಳ್ಳೀಲಿ ದಿನವೂ ಕೆಲಸ ಸಿಗುತ್ತಿರಲಿಲ್ಲ, ಒಮ್ಮೆ ಕೆಲಸವಿದ್ದರೆ ಮತ್ತೊಮ್ಮೆ ಇರುತ್ತಿರಲಿಲ್ಲ. ಅಂತಹದ್ರಲ್ಲಿ ಆಸ್ಪತ್ರೆಗೆ ಹೋಗಬೇಕೆಂದರೆ ಬಸ್ ಚಾರ್ಜ್‌ಗೇ ಪರದಾಡಬೇಕಿತ್ತು. ಈಗ ಶಕ್ತಿ ಯೋಜನೆಯಿಂದಾಗಿ ಫ್ರೀ ಬಸ್ ಬಂದಿದ್ದರಿಂದ ಆಸ್ಪತ್ರೆಗೆ ಹೋಗಿ ಬರಲು ಅನುಕೂಲವಾಗಿದೆ. ಅಷ್ಟೇ ಅಲ್ಲ, ಮನಸ್ಸಿನ ಬೇಸರ ಕಳೆಯಲು ಧರ್ಮಸ್ಥಳಕ್ಕೂ ಹೋಗಿ ಬಂದೆ. ಬಸ್ ಚಾರ್ಜ್‌ನಿಂದ ಉಳಿತಾಯವಾಗುತ್ತಿರುವ ಹಣದಲ್ಲೇ ಅನಾರೋಗ್ಯ ಬಿದ್ದಾಗ ಗುಳಿಗೆಗಳನ್ನು ಕೊಂಡುಕೊಳ್ಳುತ್ತಿದ್ದೇನೆ.
>
> ◦ **ಹನುಮವ್ವ, ಹಾವೇರಿ**



> ಮನೆಯ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ತವರು ಮನೆಗೆ ಹೋಗಬೇಕೆಂದರೂ ಬಸ್ ಚಾರ್ಜ್‌ಗೆ ದುಡ್ಡಿಲ್ಲದೆ, ಕಾಲಿನಲ್ಲಿ ಗುಳ್ಳೆಗಳು ಏಳುವಂತೆ ಮೈಲುಗಟ್ಟಲೆ ನಡೆದುಕೊಂಡು ಹೋಗುತ್ತಿದ್ದೆವು. ಬಡತನ ನಮ್ಮ ಕಾಲಿಗೆ ಬೇಡಿ ಹಾಕಿತ್ತು. ಆದರೆ ಇಂದು ಫ್ರೀ ಬಸ್ ಇರುವುದರಿಂದ ಮೈಸೂರಿನಲ್ಲಿರುವ ನನ್ನ ಮಗಳನ್ನು, ಮನಸ್ಸಿಗೆ ಬೇಸರವಾದಾಗ ದೇವರನ್ನು ನೋಡಿ ಬರುವ ಶಕ್ತಿ ನನಗೆ ಸಿಕ್ಕಿದೆ.
>
> ◦ **ಲಕ್ಷ್ಮಮ್ಮ, ಕೊಪ್ಪಳ**



> ಬಂಡವಾಳದ ಕೊರತೆಯಿಂದಾಗಿ ಕಸೂತಿ ಉದ್ಯಮವನ್ನು ನಡೆಸಲಾಗದೆ ಕಂಗಾಲಾಗಿದ್ದೆ. ಕಸೂತಿ ಕೆಲಸಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ತರಲು ಪೇಟೆಗೆ ಹೋಗಿ ಬರಲು ಬಸ್ ಟಿಕೆಟ್ ದುಡ್ಡೇ ದೊಡ್ಡ ಹೊರೆಯಾಗಿತ್ತು. ಆದರೆ, ಸರ್ಕಾರದ 'ಶಕ್ತಿ' ಯೋಜನೆಯ ಉಚಿತ ಬಸ್ ಸೌಲಭ್ಯ ಸಿಕ್ಕ ಮೇಲೆ ನಂಗೆ ಬಸ್ ಓಡಾಟದ ಖರ್ಚಿನ ಚಿಂತೆ ದೂರವಾಗಿದೆ.
>
> ◦ **ಜಮಲಾ ಬಾಯಿ, ಯಾದಗಿರಿ**

ಮಹಿಳಾ ಸಬಲೀಕರಣವೇ ಸಮೃದ್ಧ ಕರ್ನಾಟಕದ ಬುನಾದಿ



'ಶಕ್ತಿ' ಯೋಜನೆಯು ಕೇವಲ ಉಚಿತ ಸಾರಿಗೆ ಸೌಲಭ್ಯವಲ್ಲ; ಇದು ರಾಜ್ಯದ ಪ್ರತಿಯೊಬ್ಬ ಮಹಿಳೆಯ ಗೌರವ, ಸಮಾನತೆ ಮತ್ತು ಪ್ರಗತಿಗಾಗಿ ನಮ್ಮ ಸರ್ಕಾರ ಹೊಂದಿರುವ ಅಚಲ ಬದ್ಧತೆಯ ಸಂಕೇತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಉಚಿತ ಪ್ರಯಾಣಗಳು ಮಹಿಳೆಯರಿಗೆ ಯಾವುದೇ ಆರ್ಥಿಕ ಅಡೆತಡೆಗಳಿಲ್ಲದೆ ಶಿಕ್ಷಣ, ಉದ್ಯೋಗ ಹಾಗೂ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ನೆರವಾಗಿವೆ. ಸಬಲ ಮಹಿಳೆಯೇ ಬಲಿಷ್ಠ ಕುಟುಂಬದ ಆಧಾರಸ್ತಂಭ, ಆ ಬಲಿಷ್ಠ ಕುಟುಂಬಗಳೇ ಸಮೃದ್ಧ ಕರ್ನಾಟಕದ ಬುನಾದಿ. ಸರ್ವರನ್ನೂ ಒಳಗೊಳ್ಳುವ ಇಂತಹ ಪ್ರಗತಿಪರ ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಕಟಿಬದ್ಧವಾಗಿದೆ.

• ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಸ್ವತಂತ್ರ ಪ್ರಯಾಣ: ಮಹಿಳಾ ಸಬಲೀಕರಣದ ಹೊಸ ಆಯಾಮ



ಮುಕ್ತ ಪ್ರಯಾಣವು ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ ಅವರಿಗೆ ಉದ್ಯೋಗ, ಶಿಕ್ಷಣ ಹಾಗೂ ಮಾರುಕಟ್ಟೆಯ ಅವಕಾಶಗಳು ಕೈಗೆಟುಕುತ್ತವೆ. ಶಕ್ತಿ ಯೋಜನೆಯು ಕುಟುಂಬಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿದ್ದಲ್ಲದೆ, ಕರ್ನಾಟಕದ ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ದ್ವಿಗುಣಗೊಳಿಸಿದೆ. ನಮ್ಮ ಆಡಳಿತದ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಈ ಸುಸಂದರ್ಭದಲ್ಲಿ, ಹೆಚ್ಚು ಸಮಾನತೆಯ ಮತ್ತು ಸಬಲ ಕರ್ನಾಟಕದ ನಿರ್ಮಾಣಕ್ಕೆ ನಾವು ಮತ್ತೊಮ್ಮೆ ಸಂಕಲ್ಪ ತೊಡುತ್ತೇವೆ.

• ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪ್ರಗತಿಯ ಪಥದಲ್ಲಿ ಸಾರ್ವಜನಿಕ ಸಾರಿಗೆ



ಶಕ್ತಿ ಯೋಜನೆಯು ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮಹಿಳಾ ಪ್ರಗತಿಯ ಶಕ್ತಿಶಾಲಿ ವಾಹನವನ್ನಾಗಿ ಪರಿವರ್ತಿಸಿದೆ. ನಮ್ಮ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ವಿತರಿಸಲಾಗುವ ಪ್ರತಿಯೊಂದು ಉಚಿತ ಟಿಕೆಟ್ ಸಹ ರಾಜ್ಯದ ಮಹಿಳೆಯರ ಹಕ್ಕು, ಆರ್ಥಿಕ ಉಳಿತಾಯ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಗ್ರಾಮೀಣ ಭಾಗದಿಂದ ಹಿಡಿದು ಮಹಾನಗರಗಳವರೆಗೆ ಮಹಿಳೆಯರು ಇಂದು ಎಂದಿಗಿಂತಲೂ ಹೆಚ್ಚು ಧೈರ್ಯದಿಂದ ಮತ್ತು ಸ್ವತಂತ್ರವಾಗಿ ಪ್ರಯಾಣಿಸುತ್ತಿದ್ದಾರೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಈ ಐತಿಹಾಸಿಕ ಯೋಜನೆಯ ಲಾಭ ನಿರಂತರವಾಗಿ ಸಿಗುವಂತೆ ಮಾಡಲು ನಮ್ಮ ಇಲಾಖೆ ಬದ್ಧವಾಗಿದೆ.

• ರಾಮಲಿಂಗಾರೆಡ್ಡಿ, ಸಾರಿಗೆ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಾರ್ತೆ

ಶಿಕ್ಷಣ ಕಿಟ್ ಖರೀದಿಗೆ ಅಸ್ತು

ಪುಟ 1➡ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿವರ್ತನೆ (ಕೆಎಸ್‌ಎಚ್‌ಇಟಿ) ಯೋಜನೆಯಡಿ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಾಲದ ಮಾತುಕತೆ ಸಿದ್ಧತೆಯ ಮಾನದಂಡಗಳ ಪ್ರಕಾರ 53 ಸರ್ಕಾರಿ ಪದವಿ ಕಾಲೇಜುಗಳು, 14 ಸರ್ಕಾರಿ ಪಾಲಿಟೆಕ್ನಿಕ್‌ಗಳು, 5 ಉತ್ಕೃಷ್ಟತಾ ಕೇಂದ್ರಗಳು ಹಾಗೂ ಯೋಜನಾ ನಿರ್ವಹಣಾ (ಪಿಎಂಯು) ಘಟಕಕ್ಕೆ ಒಟ್ಟು 802 ಕೋಟಿ ರೂ.ಗಳ ಮೊತ್ತದ ವಸ್ತುಗಳ ಮುಂಗಡ ಖರೀದಿಗೆ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿ ಜಿಲ್ಲೆಗೆ 15 ವಿದ್ಯಾರ್ಥಿಗಳಂತೆ 500 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 15 ಕೋಟಿ ರೂ.ಗಳ ವೆಚ್ಚದಲ್ಲಿ 2 ವರ್ಷಗಳ ವಸತಿ ಸಹಿತ ಪಿಯುಸಿ (ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ) ಶಿಕ್ಷಣದೊಂದಿಗೆ ನೀಟ್/ ಜೆಇಇ / ಸೀಟಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಒಪ್ಪಿಗೆ ಕೊಟ್ಟಿದೆ ಎಂದರು.

ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ! ರಾಜ್ಯದ 32 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ(ಜಿಟಿಟಿಸಿ)ಗಳಲ್ಲಿ ಹೊಸ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು 90 ಕೋಟಿ ರೂ.ಗಳ ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡವನ್ನು 100 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ಕೊಟ್ಟಿದೆ ಎಂದು ವಿವರಿಸಿದರು.

ಪ್ರಮುಖ ನಿರ್ಣಯಗಳು

- ವೈದ್ಯಕೀಯ ಬೋಧನಾ ಕಾಲೇಜು ಆಸ್ಪತ್ರೆಗಳಲ್ಲಿನ ಅಂದಾಜು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕ್ಲೈಮ್ ಪ್ರಕ್ರಿಯೆಯನ್ನು 17.85 ಕೋಟಿ ರೂ.ಗಳ ಮೊತ್ತದಲ್ಲಿ ಸುವ್ಯವಸ್ಥಿತಗೊಳಿಸಲು ಒಪ್ಪಿಗೆ
- ಕರ್ನಾಟಕ ಮಹಾನಗರ ಪಾಲಿಕೆಗಳು (ಮಹಾನಗರ ಪಾಲಿಕೆಗಳಲ್ಲಿ ಯುಜಿಡಿ ಸಹಾಯಕರ ನೇಮಕಾತಿ) (ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ) (ವಿಶೇಷ) ನಿಯಮಗಳು, 2026ಕ್ಕೆ ಅನುಮೋದನೆ
- ಉ.ಕನ್ನಡ ಜಿಲ್ಲೆ 2ಜೋಯಿಡಾ ತಾಲೂಕು ಪ್ರಜಾಸೌಧ ಕಟ್ಟಡ ನಿರ್ಮಾಣ ಕಾಮಗಾರಿಗಳ 10.61 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ
- ಕಲಬುರಗಿ ಜಿಲ್ಲೆ ಅಫಜಲ್‌ಪುರ ತಾಲೂಕು ತಹಶೀಲ್ದಾರರಾಗಿದ್ದ ಶಶಿಕಲಾ ಜಿ. ಪಾದಗಟ್ಟಿ ವಿರುದ್ಧ ಟ್ರ್ಯಾಪ್ ಪ್ರಕರಣದಲ್ಲಿನ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವ ದಂಡನೆ ವಿಧಿಸಲು ಒಪ್ಪಿಗೆ

ಎಸ್‌ಐಆರ್: ನಾಲ್ಕು ದಿನದಲ್ಲಿ ತೀರ್ಮಾನ

ಪುಟ 1 ➡ ನಾಗರಿಕನಿಗೆ ಮತದಾನದ ಹಕ್ಕನ್ನು ಉಳಿಸಿಕೊಡಲು ಎಲ್ಲ ರೀತಿಯ ಪ್ರಯತ್ನ ಮಾಡಬೇಕೆಂದು ಚಿಂತನೆ ಮಾಡಲಾಗಿದೆ. ಇದಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಬಹುದೇ ಎಂಬುದನ್ನು ಚರ್ಚೆ ನಡೆಸಲಾಗಿದೆ. 10-12 ವಿಷಯಗಳ ಕುರಿತು ಚರ್ಚಿಸಿದ್ದೇವೆ. ಚರ್ಚೆ ಅಪೂರ್ಣವಾಗಿದೆ. ಇನ್ನೆರಡು ದಿನ ಈ ಕುರಿತು ಚರ್ಚೆ ಮಾಡುತ್ತೇವೆ. ಅಂತಿಮ ನಿರ್ಣಯವನ್ನು ಮೂರ್ನಾಲ್ಕು ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಕೃ. ರುಕ್ಮಿಣಿ ಅಕ್ಕ ಇನ್ನಿಲ್ಲ



ಬೆಂಗಳೂರು: ರಾಷ್ಟ್ರ ಸೇವಿಕಾ ಸಮಿತಿಯ ಪೂರ್ವ ಅಖಿಲ ಭಾರತ ಸಹ ಕಾರ್ಯವಾಹಿಕಾ ಆಗಿದ್ದಂತಹ ಕೃ. ರುಕ್ಮಿಣಿ ಅಕ್ಕ (98) ಗುರುವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಕೆಲವು ದಿನಗಳಿಂದ ವಯೋಸಹಜ ಅನಾ ರೋಗ್ಯದಿಂದ ಬಳಲುತ್ತಿದ್ದ ಅವರು, ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿ ದ್ದರು. ಕೃ. ರುಕ್ಮಿಣಿ ಅಕ್ಕ ಅವರು ರಾಷ್ಟ್ರ ಸೇವಿಕಾ ಸಮಿತಿ ಪ್ರಮುಖರಾಗಿದ್ದು, ಸಂಘಟನೆಯ ಅಖಿಲ ಭಾರತ ಕಾರ್ಯಕಾರಿಣಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಈ ಹಿಂದೆ ಸಹಕಾರ್ಯವಾಹಿಕಾ ಮತ್ತು ಅಖಿಲ ಭಾರತ ಪ್ರಚಾರಿಕಾ ಪ್ರಮುಖರಾಗಿ ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಶುಕ್ರವಾರ ಬೆಳಗ್ಗೆ 7.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸ್ವಗೃಹದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ. ನಂತರ ಹರಿಶ್ಚಂದ್ರಘಾಟ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ರುಕ್ಮಿಣಿ ಅಕ್ಕನವರು ಬೆಂಗಳೂರಿನ ಎಂಎಲ್‌ಎ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಸುಕೃಪಾ ಟ್ರಸ್ಟ್ ಸಂಸ್ಥಾಪಕ ವಿಶ್ವಸ್ತರಾಗಿ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸಮಾಜ ಸೇವೆಯನ್ನು ಗುರುತಿಸಿ, ವಿಶ್ವ ಸಂವಾದ ಕೇಂದ್ರ ವತಿಯಿಂದ ಇವರ ಕುರಿತಾದ ಚೈತನ್ಯಮಯಿ ಎಂಬ ಪುಸ್ತಕವನ್ನು ಮಿಥಿಕ್ ಸೊಸೈಟಿಯಲ್ಲಿ ಬಿಡುಗಡೆ ಮಾಡಲಾಗಿತ್ತು. ಮಹಿಳೆಯರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ, ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಕೃ. ರುಕ್ಮಿಣಿ ಅಕ್ಕನವರ ಕೊಡುಗೆ ಅಪಾರವಾಗಿದೆ.

ತರಬೇತಿಗೆ ನೋಡಲ್ ಏಜೆನ್ಸಿ ನೇಮಕ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಬೋಧಕೇತರ ಸಿಬ್ಬಂದಿಯ ತರಬೇತಿ ಮತ್ತು ಶೈಕ್ಷಣಿಕ ಸಂಶೋಧನಾ ಕಾರ್ಯಗಳ ಹೊಣೆಯನ್ನು ನಿರ್ವಹಿಸಲು ನೋಡಲ್ ಸಂಸ್ಥೆಯನ್ನಾಗಿ ರಾಜ್ಯ ಮಟ್ಟದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ನಿಯೋಜಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ತರಬೇತಿ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ ಸಿಬ್ಬಂದಿ ಕೊರತೆ ಇರುವುದರಿಂದ ಗುಣಮಟ್ಟವನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಆದೇಶದಲ್ಲಿ ತಿಳಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಅಭಿವೃದ್ಧಿಗೆ ಗುಜರಾತ್ ಅಲ್ಲ, ಕರ್ನಾಟಕವೇ ಮಾದರಿ – ಸಿದ್ದರಾಮಯ್ಯ
- ಎರಡೂ ಮಾದರಿಗಳೇ ಹೌದು. ಒಂದು ಒಳ್ಳೆಯ ಮಾದರಿ, ಇನ್ನೊಂದು ಕೆಟ್ಟ ಮಾದರಿ!

ದಿನ ಭವಿಷ್ಯ

ಮೇಷ ಕುಟುಂಬದ ಹಿತಕ್ಕೆ ಹೆಚ್ಚು ಕಾಳಜಿ ವಹಿಸಿ. ಉದ್ಯಮಿಗಳು ಇಂದು ರಿಸ್ಕ್ ತೆಗೆದುಕೊಳ್ಳದಿರಿ. ದಿನದಂತ್ಯಕ್ಕೆ ತುಸು ನಿರಾಳ ಬೆಳವಣಿಗೆ.

ವೃಷಭ ನಿಮ್ಮ ಗುಣಾತ್ಮಕ ನಡವಳಿಕೆ ಯಶಸ್ಸಿಗೆ ಕಾರಣವಾಗಲಿದೆ. ಎಲ್ಲರಿಂದ ದೂರವಾಗಿ ಇರುವುದನ್ನು ಬಿಡಿ. ಎಲ್ಲರ ಜತೆ ಸೇರಿ.

ಮಿಥುನ ವ್ಯಕ್ತಿಯೊಬ್ಬರ ಜತೆ ವಿಶ್ವಾಸಭರಿತ ಬಾಂಧವ್ಯ ಬೆಳೆಯಬಹುದು. ಆದಾಯದಲ್ಲಿ ಹೆಚ್ಚಳ. ಮನೆಯ ಸಮಸ್ಯೆ ಪರಿಹಾರದಿಂದ ನೆಮ್ಮದಿ.

ಕಟಕ ನಿಮ್ಮ ಶ್ರಮದಿಂದ ಉದ್ಯೋಗದಲ್ಲಿ ಯಶ. ಆರ್ಥಿಕ ಉನ್ನತಿ. ಪ್ರೀತಿಯ ವಿಷಯದಲ್ಲಿ ಎಚ್ಚರದ ಹೆಜ್ಜೆ ಇಡಿ. ಆವಸ್ವರ ಎಡವದಂತೆ ನೋಡಿಕೊಳ್ಳಿ.

ಸಿಂಹ ಚಿಪ್ಪಿನಿಂದ ಹೊರಬನ್ನಿ. ಎಲ್ಲರ ಜತೆ ಮುಕ್ತವಾಗಿ ಬೆರೆಯಿರಿ. ಎಲ್ಲರನ್ನು ಸಂಶಯದಿಂದ ನೋಡಬೇಡಿ. ವಿಶ್ವಾಸ ಮುಖ್ಯ ತಿಳಿಯಿರಿ.

ಕನ್ಯಾ ವೃತ್ತಿ ಒತ್ತಡದಿಂದ ಇಂದು ಮುಕ್ತಿ. ಆಪ್ತರ ಜತೆ ಬೆರೆಯುವ ಅವಕಾಶ. ನಿಮ್ಮನ್ನು ಶ್ಲಾಘಿಸುವ ನಿರ್ವಹಣೆ ತೋರುವಿರಿ. ಖಾಸಗಿ ಚಿಂತೆ ಪರಿಹಾರ.

ತುಲಾ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಬೀಳಲಿದೆ. ಮಾನಸಿಕ ಒತ್ತಡದಿಂದ ನೆಮ್ಮದಿ ಹಾಳು. ಕೌಟುಂಬಿಕ ಬಿಕ್ಕಟ್ಟು ಶಮನಕ್ಕೆ ಯತ್ನಿಸಿ.

ವೃಶ್ಚಿಕ ವೃತ್ತಿಯಲ್ಲಿ ಅಚ್ಚರಿಯ ಬೆಳವಣಿಗೆ. ಅನ್ಯರ ಜತೆಗಿನ ವೈರವನ್ನು ದೀರ್ಘ ಎಳೆಯಬೇಡಿ. ಕೌಟುಂಬಿಕ ನೆಮ್ಮದಿ ಹಾಳಾಗುವ ಪ್ರಸಂಗ.

ಧನು ಭಾವುಕತೆ ನಿಮ್ಮ ವಿವೇಕ ಮರೆಸಬಹುದು. ಸಹೋದರರಿಂದ ಸಮಸ್ಯೆ ಸೃಷ್ಟಿ. ಆಪ್ತ ಸಂಬಂಧ ಕೆಡಲಿದೆ. ಸಂಘರ್ಷ ಉಲ್ಬಣಿಸಬೇಡಿ.

ಮಕರ ಒತ್ತಡದ ಬದುಕಿಂದ ವಿರಾಮ ಪಡೆಯಿರಿ. ಆ ಮೂಲಕ ಮಾನಸಿಕ ನೆಮ್ಮದಿ ಪಡಕೊಳ್ಳಿ. ಪ್ರೇಮದ ಆಹವಾಲು ಮಂಡನೆ ಫಲ ನೀಡದು.

ಕುಂಭ ವೃತ್ತಿ ಕ್ಷೇತ್ರದಲ್ಲಿ ನಯವಂಚಕರ ಬಗ್ಗೆ ಎಚ್ಚರದಿಂದಿರಿ. ಕುಟುಂಬದಲ್ಲಿ ಸಮಸ್ಯೆ ಉಂಟಾದೀತು. ಪ್ರೀತಿಯ ವ್ಯವಹಾರದಲ್ಲಿ ಬಿಕ್ಕಟ್ಟು.

ಮೀನ ಆದಾಯ ಗಳಿಕೆಯ ಹೊಸ ದಾರಿ ತೋರಲಿದೆ. ನಿಮ್ಮ ವ್ಯಕ್ತಿತ್ವ ಇತರರ ಮೆಚ್ಚುಗೆ ಗಳಿಸುವುದು. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 0,3,7,2

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ವಿಶ್ವಾಸ

ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ಸಿನ ಸ್ಥಿತಿ ಹದಗೆಟ್ಟಿದೆ. ಹಲವಾರು ಕಾಂಗ್ರೆಸ್ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ನಾಳೆ ವಿಧಾನಸಭೆ ಚುನಾವಣೆ ನಡೆದರೂ ಜನರು ಕಾಂಗ್ರೆಸ್ಸನ್ನು ಸೋಲಿಸಿ ಬಿಜೆಪಿ ಸರ್ಕಾರ ಮಾಡಲು ಅವಕಾಶ ಮಾಡಿಕೊಡಲಿದ್ದಾರೆ ಎಂದು ಬಿಜೆಪಿ ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರ್ವಾಲ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಿಫಲ, ಭ್ರಷ್ಟಾಚಾರಿಗಳ ಸರ್ಕಾರ ಇದೆ. ತುಷ್ಟೀಕರಣ ಆಧರಿತ ಸರ್ಕಾರ ಇದಾಗಿದೆ. ಅದು ಕರ್ನಾಟಕದ ಜನರಿಗೆ ಮೋಸ ಮಾಡಿದೆ. ಗ್ಯಾರಂಟಿಗಳನ್ನೂ ಸರಿಯಾಗಿ ನೀಡಿಲ್ಲ ಎಂದು ಟೀಕಿಸಿದರು. ಹೊರಗಡೆಯಿಂದ ಹೆಚ್ಚು ಸಾಲ ಪಡೆದುದರಿಂದ ರಾಜ್ಯವು ಆರ್ಥಿಕ ಸಂಕಷ್ಟದಲ್ಲಿದೆ. ಆರೇಳು ತಿಂಗಳುಗಳಿಂದ ಇಲ್ಲಿ ಸರ್ಕಾರವೇ ಇಲ್ಲವಾಗಿದೆ. ಇವರು ಪರಸ್ಪರ ಜಗಳ ಮಾಡಿಕೊಳ್ಳುತ್ತಿದ್ದಾರೆ ಎಂದು ಆಕ್ಷೇಪಿಸಿದರು. ನಮ್ಮ ಪಕ್ಷದ ರಾಷ್ಟ್ರೀಯ ಸಹ-ಸಂಘಟನಾ ಕಾರ್ಯದರ್ಶಿಯವರು ಇಲ್ಲಿಗೆ ಬಂದಿದ್ದಾರೆ. 2028ರಲ್ಲಿ ವಿಧಾನ ಸಭಾ ಚುನಾವಣೆ ಇದೆ ಅದಕ್ಕಾಗಿ ಈಗಿನಿಂದಲೇ ತಯಾರಿ ನಡೆಸಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪೂರ್ಣಾವಧಿ ರಾಜ್ಯಾಧ್ಯಕ್ಷ: ನಮ್ಮ ಪೂರ್ಣಾವಧಿ ರಾಜ್ಯಾಧ್ಯಕ್ಷರಿದ್ದು, ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಧ್ಯಕ್ಷರಾಗಿ ಮುಂದುವರೆಯುವರೇ ಇಲ್ಲವೇ ಎಂಬುದು ಇಲ್ಲಿನ ಸಭೆಯಲ್ಲಿ ನಿರ್ಧಾರ ಆಗುವುದಿಲ್ಲ. ಇಲ್ಲಿ ಅಧ್ಯಕ್ಷರ ಮೌಲ್ಯಮಾಪನ ನಡೆಯುತ್ತದೆ ಎಂಬ ಭ್ರಮೆ ಇದ್ದರೆ ಅದು ಸರಿಯಲ್ಲ. ನಮ್ಮಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುತ್ತಿರುತ್ತದೆ. ಯಾವ ಬಿಜೆಪಿ ನಾಯಕ ಏನು ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು ಇಲ್ಲಿ ಬರುವ ಅವಶ್ಯಕತೆ ಇಲ್ಲ. ನಾನು ಅಧ್ಯಕ್ಷರ ಕಾರ್ಯಕರ್ತನಲ್ಲ; ನಾನು ಬಿಜೆಪಿ ಕಾರ್ಯಕರ್ತ. ನಾನೇ ಎಲ್ಲವನ್ನೂ ಹೇಳಬಲ್ಲೆ ಎಂದು ಪ್ರಶ್ನೆಗೆ ಉತ್ತರಿಸಿದರು. ಅಧ್ಯಕ್ಷತೆ ಎಂಬುದು ಒಂದು ಉದ್ಯೋಗವಲ್ಲ ಹೀಗೇ ಘೋಷಿಸಬೇಕು ಅಥವಾ ಇಂತಿಷ್ಟು ವೇತನ ನೀಡಬೇಕು ಎನ್ನಲು ಆಗುವುದಿಲ್ಲ. ಈಗ ಶಕ್ತಿಶಾಲಿ ಅಧ್ಯಕ್ಷರಿದ್ದಾರೆ. ಇದೇ ಅಧ್ಯಕ್ಷರ ನೇತೃತ್ವದಲ್ಲೇ ನಾವು ಲೋಕಸಭಾ ಚುನಾವಣೆ ಎದುರಿಸಿದ್ದೇವೆ. ಯಾರು ಅಧ್ಯಕ್ಷರಿರುತ್ತಾರೋ ಅವರ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.



ಬಿಜೆಪಿ ಮುಖಂಡರಿಂದ ವಿಶೇಷ ಸಂಘಟನಾ ಸಭೆ

ಭಾರತೀಯ ಜನತಾ ಪಕ್ಷದ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಗುರುವಾರ ವಿಶೇಷ ಸಂಘಟನಾ ಸಭೆ ನಡೆಯಿತು. ಬಿಜೆಪಿ ರಾಷ್ಟ್ರೀಯ ಸಹ-ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರ್ವಾಲ್, ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ಸಂಸದ ಬೈಜಯಂತ್ ಜಯ್ ಪಾಂಡಾ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಪಕ್ಷದ ಪ್ರಮುಖರು ಇದ್ದರು.

ಕಾಂಗ್ರೆಸಿಗರಿಗೆ ಪೇಚು ತಂದ ಕೇರಳ ಸಿಎಂ ಪೂರ್ಣ ನಾಮ!

ಪುಟ 1➡ ಅವರು ಹಿಂದು ಮತದಾರ ವರ್ಗವೊಂದನ್ನು ತಲುಪುವ ಯತ್ನ ನಡೆಸಿದ್ದಾರೆ ಎಂದೂ ಈ ಸೆಕ್ಯುಲರ್‌ವಾದಿಗಳು ಟೀಕಿಸಿದ್ದರು. ಕಾಂಗ್ರೆಸ್ ನಾಯಕ ಜಿಂಟೋ ಜಾನ್ ಅವರು ಸಾಮಾಜಿಕ ಮಾಧ್ಯಮದಲ್ಲಿ, ಕಾಂಗ್ರೆಸ್ ಪಕ್ಷ ಹೆಚ್ಚು ವಿಶಾಲವಾದಿ ಎಂಬುದನ್ನು ಅನುಸರಿಸುವ ನಿಟ್ಟಿನಲ್ಲಿ ಜಾತಿ ಉಪನಾಮ ಬಳಸುವುದಿಲ್ಲ. ನಾನು 'ತೆಕ್ಕುಮ್ ಕಟ್ಟಿಲ್ ಜಾನ್ ರೋಮನ್ ಕ್ಯಾಥೋಲಿಕ್ ಜಿಂಟೋ' ಎಂಬ ಬದಲಿಗೆ 'ಜಿಂಟೋ ಜಾನ್' ಎಂದಷ್ಟೇ ಬಳಸುತ್ತಿದ್ದೇನೆ ಎಂದು ಬರೆದುಕೊಂಡು ಸತೀಶನ್ ಅವರಿಗೆ ಟಾಂಗ್ ನೀಡಿದ್ದರು. ಇನ್ನೊಬ್ಬ ಕಾಂಗ್ರೆಸ್ ನಾಯಕ ವಿ.ಆರ್.ಅನೂಪ್ ಅವರು ಕೂಡ ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ತಕರಾರೆತ್ತಿ, ಸತೀಶನ್ ಅವರು ಅಂಬೇಡ್ಕರ್ ಬಗ್ಗೆ ಓದಲು ಹೆಚ್ಚು ಸಮಯ ನೀಡಬೇಕು ಎಂದಿದ್ದರು. ಒಬ್ಬ ಗಂಭೀರ ಓದುಗ ಎಂಬ ಸಾರ್ವಜನಿಕ ವರ್ಚಸ್ಸನ್ನು ಹೊಂದಿದ್ದ ಸತೀಶನ್‌ಗೆ ಇಂತಹ ಕುಟುಕು ಸಲಹೆ ನೀಡಿದ್ದರು.

ಆದರೆ ಇದರಲ್ಲೇನು ತಪ್ಪಿದೆ? ನಾನು ನನ್ನ ಹೆತ್ತವರ ಹೆಸರನ್ನು ಉದ್ದೇಶಪೂರ್ವಕವಾಗಿ ಬಳಸಿದ್ದೆ. ನಾನು ನನ್ನ ತಂದೆಯ ಹೆಸರನ್ನು ಹೇಳಿದರೆ ಏನು ತಪ್ಪಿದೆ ಎಂದು ಸತೀಶನ್ ಪ್ರಶ್ನಿಸಿದ್ದಾರೆ. ಇದರಲ್ಲಿ ಜಾತಿ, ರಾಜಕೀಯ ಸಂದೇಶ ಇದೆ ಎಂಬ ವಿಶ್ಲೇಷಣೆಗಳನ್ನು ಅವರು ತಳ್ಳಿಹಾಕಿದ್ದಾರೆ. ನಾನು ನನ್ನ ತಾಯಿಯ ಹೆಸರನ್ನೂ ಹೇಳಲಾಗಲಿಲ್ಲ ಎಂಬ ವಿಷಾದವಿದೆ. ಅವರಿಬ್ಬರೂ ನನ್ನ ವಿದ್ಯಾಭ್ಯಾಸ ಅವಧಿಯಲ್ಲೇ ತೀರಿಕೊಂಡಿದ್ದರು. ಇದು ನಾನು ನನ್ನ ದಿವಂಗತ ಹೆತ್ತವರಿಗೆ ಸಲ್ಲಿಸಿದ ಗೌರವ. ಅವರನ್ನು ನಾನು ಸ್ಮರಿಸಬಾರದೇ? ಎಂದು ಅವರು ಪ್ರಶ್ನಿಸಿದರು.

ಹಿನ್ನೆಲೆ ಏನು?: ಇತ್ತೀಚೆಗೆ ಬಿಜೆಪಿ ಪಶ್ಚಿಮಬಂಗಾಳ ಮತ್ತು ಅಸ್ಸಾಮಿನಲ್ಲಿ ಮುಂಚಿತವಾಗಿಯೇ ಘೋಷಿಸಿದ್ದ ಮುಖ್ಯಮಂತ್ರಿ ಅಭ್ಯರ್ಥಿಗಳ ಜಾತಿಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪರ ಸಾಮಾಜಿಕ ಮಾಧ್ಯಮಗಳಲ್ಲಿ ಬಿಜೆಪಿ ಮೇಲ್ವರ್ಗದವರನ್ನೇ ಸಿಎಂ ಆಗಿಸಿದೆ ಎಂದು ಬಿಂಬಿಸುವ ಯತ್ನ ನಡೆದಿತ್ತು. ಆದರೆ ನೆಟ್ಟಿಗರು ಇಂತಹ ಯತ್ನಕ್ಕೆ ತಿರುಗೇಟು ನೀಡಿದ್ದು, ಬಿಜೆಪಿ ಉತ್ತರದ ಹಲವು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದು, ಅಲ್ಲಿನ ಮುಖ್ಯಮಂತ್ರಿಗಳು ದಲಿತ, ಹಿಂದುಳಿದ, ಬುಡಕಟ್ಟು ವರ್ಗದವರನ್ನೇ ಮುಖ್ಯಮಂತ್ರಿಯಾಗಿಸಿದೆ. ಪ.ಬಂ. ಮತ್ತು ಅಸ್ಸಾಮಿನಲ್ಲಿ ಮುಂಚಿತವಾಗಿಯೇ ಸಿಎಂ ಅಭ್ಯರ್ಥಿಗಳನ್ನು ಗುರುತಿಸಲಾಗಿತ್ತು. ಈ ರೀತಿ ಸೆಕ್ಯುಲರ್ ಹೆಸರಿನಲ್ಲಿ ಜಾತಿ ದ್ವೇಷ ಹರಡುವುದೇಕೆ ಎಂದು ಪ್ರಶ್ನಿಸಿದ್ದರು. ಆದರೆ, ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ದಲಿತರು, ಬುಡಗಟ್ಟು ಜನರು ಯಾಕೆ ಮುಖ್ಯ ಮಂತ್ರಿಗಳಾಗಲು ಸಾಧ್ಯವಾಗುತ್ತಿಲ್ಲ? ಅದಲ್ಲದೆ ಕೇರಳದಲ್ಲಿ ಸೆಕ್ಯುಲರ್ ಕಾಂಗ್ರೆಸ್ ಮತೀಯವಾದಿ ಮುಸ್ಲಿಂಲೀಗ್ ಮತ್ತು ಮತೀಯ ಮೂಲಭೂತವಾದಿ ಜಮಾತೆ ಇಸ್ಲಾಮಿ ಜೊತೆ ನಂಟು ಹೊಂದಿರುವ ಬಗ್ಗೆ ಬಿಜೆಪಿ, ಸಿಪಿಎಂಗಳು ಎತ್ತಿತೋರಿ ಟೀಕಿಸಿದ್ದವು.

ಹೆಚ್ಚಾಗಿವೆ ಭಾರತ ವಿರೋಧಿಗಳ ಹತ್ಯೆ

ಪುಟ 1 ➡ ಮಾರ್ಚ್‌ನಲ್ಲಿ ಜೆಇಎಂ ಮುಖ್ಯಸ್ಥ ಮಸೂದ್ ಅಜರ್‌ನ ಹಿರಿಯ ಸಹೋದರ ಮುಹಮ್ಮದ್ ತಾಹಿರ್ ಅನ್ವರ್ ಪಾಕ್‌ನಲ್ಲಿ ರಹಸ್ಯ ರೀತಿಯಲ್ಲಿ ಸಾವಿಗೀಡಾಗಿದ್ದ. ಒಂದು ವರ್ಷ ಹಿಂದೆ, ಎಲ್‌ಇಟಿ ಉಗ್ರ ಅಬು ಖತಲ್ ಪಾಕಿಸ್ತಾನದ ಝೀಲಂ ಸಿಂಧ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡೇಟಿಗೆ ಬಲಿಯಾಗಿದ್ದ. 26/11 ಮುಂಬೈ ದಾಳಿಯ ರೂವಾರಿ ಹಫೀಜ್ ಸಯೀದ್‌ನ ಆಪ್ತನಾಗಿದ್ದ. ಜಮ್ಮು ಕಾಶ್ಮೀರದ ಶಿವ ಖೋರಿ ಗುಹೆಗೆ ತೆರಳಿದ್ದ 9 ಹಿಂದು ಯಾತ್ರಾರ್ಥಿಗಳ ಸಾವಿಗೆ ಕಾರಣವಾಗಿದ್ದ 2024ರ ರಿಯಾಸಿ ದಾಳಿಯಲ್ಲಿ ಈತನ ಪಾತ್ರವಿತ್ತು. 2023ರಲ್ಲೂ ಇದೇ ರೀತಿ 7 ಉಗ್ರರ ಹತ್ಯೆ ನಡೆದಿತ್ತು. 2024ರಲ್ಲಿ ಬಾಂಗ್ಲಾದೇಶದ ಭಾರತ ವಿರೋಧಿ ಯುವ ನಾಯಕ ಶರೀಫ್ ಒಸ್ಮಾನ್ ಹಾದಿ(32) ಢಾಕಾದಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿನ ದಾಳಿಗೆ ಬಲಿಯಾಗಿದ್ದ.

- **ಮೇ 21, 2026- ಹಮ್ಜಾ ಬುರ್ಹಾನ್ (ಅರ್ಜುಮಂದ್ ಗುಲ್ಜಾರ್ ದಾರ್, ಅಲಿಯಾಸ್ ಡಾಕ್ಟರ್):** ಮುಜಾಫರಾಬಾದ್, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಗುಂಡಿಕ್ಕಿ ಹತ್ಯೆ. 2019ರ ಪುಲ್ವಾಮಾ ದಾಳಿಯ ಪ್ರಮುಖ ಸಂಚುಕೋರ.
- **ಏಪ್ರಿಲ್ 29, 2026- ಮೌಲಾನಾ ಸಲ್ಮಾನ್ ಅಜರ್:** ಜೈಶ್-ಎ-ಮೊಹಮ್ಮದ್‌ನ ಉನ್ನತ ಕಮಾಂಡರ್; ಬಹಾವಲ್ಪುರದಲ್ಲಿ ಅನಾಮಧೇಯ ಚಾಲಕನೊಬ್ಬನ ವಾಹನದ ಡಿಕ್ಕಿಯಿಂದ ಹತ್ಯೆ.
- **ಏಪ್ರಿಲ್ 27, 2026- ಶೇಖ್ ಯೂಸುಫ್ ಆಫ್ರಿದಿ:** ಲಷ್ಕರ್-ಎ-ತೈಬಾ (ಎಲ್‌ಇಟಿ) ಕಮಾಂಡರ್; ಖೈಬರ್ ಪಖ್ತೂನ್‌ಖ್ವಾದಲ್ಲಿ ಗುಂಡಿಕ್ಕಿ ಹತ್ಯೆ.
- **ಏಪ್ರಿಲ್ 16, 2026- ಅಮೀರ್ ಹಮ್ಜಾ:** ಲಷ್ಕರ್-ಎ-ತೈಬಾದ ಸಹ-ಸಂಸ್ಥಾಪಕ; ಲಾಹೋರ್‌ನ ಸುದ್ದಿ ವಾಹಿನಿಯ ಕಚೇರಿ ಬಳಿ ಗುಂಡಿನ ದಾಳಿ, ಗಂಭೀರ ಗಾಯ. ಬದುಕುಳಿದಿರುವ ವರದಿ.
- **ಮಾರ್ಚ್ 31, 2026- ಮೊಹಮ್ಮದ್ ತಾಹಿರ್ ಅನ್ವರ್:** ಜೈಶ್ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ; ಸಂಶಯಾಸ್ಪದ ಪರಿಸ್ಥಿತಿಯಲ್ಲಿ ಪಾಕ್‌ನಲ್ಲಿ ಮೃತ.
- **ಮಾರ್ಚ್ 21, 2026- ಬಿಲಾಲ್ ಆರಿಫ್ ಸಲಫಿ:** ಲಷ್ಕರ್‌ನ ಹಿರಿಯ ಕಮಾಂಡರ್, ನೇಮಕಾತಿ ಮತ್ತು ಸೈದ್ಧಾಂತಿಕ ತರಬೇತಿ ವಿಭಾಗದ ಮುಖ್ಯಸ್ಥ; ಮುರಿದ್ಕೆಯ ಮರ್ಕಜ್ ತೈಬಾದಲ್ಲಿ ಈದ್-ಉಲ್-ಫಿತರ್ ನಮಾಜ್ ನಂತರ ಚಾಕು ಇರಿತ ಮತ್ತು ಗುಂಡಿನ ದಾಳಿಯಿಂದ ಹತ್ಯೆ.
- **ಫೆಬ್ರವರಿ 16, 2026- ಮೊಹಮ್ಮದ್ ಕಾಸಿಮ್ ಗುಜ್ಜರ್:** ಎಲ್‌ಇಟಿ ಉಗ್ರ; ಪೆಶಾವರದಲ್ಲಿ ಗುಂಡಿಕ್ಕಿ ಹತ್ಯೆ.
- **ಜನವರಿ 28, 2026- ಲೆಫ್ಟಿನೆಂಟ್ ಕರ್ನಲ್ ಇಮ್ರಾನ್ ದಯಾಲ್:** ಪಾಕ್ ಸೇನೆಯ ಅಧಿಕಾರಿ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹ್ಯಾಂಡ್ಲರ್; ಡೇರಾ ಇಸ್ಮಾಯಿಲ್ ಖಾನ್‌ನಲ್ಲಿ ಅನಾಮಧೇಯ ದಾಳಿಕೋರರಿಂದ ಹತ್ಯೆ.
- **ಜನವರಿ 18, 2026- ಅಬ್ದುಲ್ ಗಫರ್:** ಲಷ್ಕರ್-ಎ-ತೈಬಾ ಕಮಾಂಡರ್; ನಿಗೂಢ ಪರಿಸ್ಥಿತಿಯಲ್ಲಿ ಹತ್ಯೆ.
- **ಜನವರಿ 1, 2026- ಅಸದುಲ್ಲಾ ವಲೀದ್:** ಪಿಎಎಫ್‌ಎಫ್/ಎಲ್‌ಇಟಿ ಪ್ರಚಾರ ವಿಡಿಯೋಗಳ ಸಂಪಾದಕ; ಪಂಜಾಬ್‌ನ ಕೋಟ್ ರಾಧಾ ಕಿಶನ್‌ನಲ್ಲಿ ರಸ್ತೆ ಅಪಘಾತದಲ್ಲಿ ಮೃತ.

ಪುಲ್ವಾಮದಲ್ಲಿ ಏನಾಗಿತ್ತು?

2019ರ ಫೆ.14ರಂದು ಜಮ್ಮು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆಥ್‌ಪೊರಾ ಪ್ರದೇಶದಲ್ಲಿ ಸಿಆರ್‌ಪಿಎಫ್ ಬೆಂಗಾವಲು ಪಡೆಯ ಸೇನಾ ವಾಹನಗಳಿಗೆ ಜೈಶ್- ಎ-ಮೊಹಮ್ಮದ್ ಉಗ್ರ ಆದಿಲ್ ಅಹ್ಮದ್ ದಾರ್ ಸ್ಫೋಟಕಗಳನ್ನು ತುಂಬಿದ್ದ ವಾಹನವನ್ನು ಡಿಕ್ಕಿ ಹೊಡೆಸಿದ್ದ. ಈ ಸ್ಫೋಟದಲ್ಲಿ ಸಿಆರ್‌ಪಿಎಫ್‌ನ 40 ಸಿಬ್ಬಂದಿ ಹುತಾತ್ಮರಾಗಿದ್ದರು. ಪುಲ್ವಾಮಾ ದಾಳಿ ಭಾರತದ ಸಶಸ್ತ್ರಪಡೆಗಳ ಮೇಲೆ ಜೆಇಎಂ ನಡೆಸಿದ ಅತ್ಯಂತ ಭೀಕರ ದಾಳಿಗಳಲ್ಲೊಂದು.

ಡಿಸಿಇಟಿ, ಎಂ.ಟೆಕ್ ಪ್ರವೇಶ ಪರೀಕ್ಷೆಗೆ ಸಿದ್ಧತೆ

ಬೆಂಗಳೂರು: ಇಂಜಿನಿಯರಿಂಗ್ ಕೋರ್ಸ್‌ನ ಮೂರನೇ ಸೆಮಿಸ್ಟರ್ ಅಥವಾ ಎರಡನೇ ವರ್ಷಕ್ಕೆ ಪ್ರವೇಶ ಕಲ್ಪಿಸುವ ಡಿಸಿಇಟಿ ಹಾಗೂ ಎಂ.ಟೆಕ್/ಎಂಇ ಪ್ರವೇಶ ಪರೀಕ್ಷೆಗಳು ಮೇ 23ರಂದು ನಡೆಯಲಿದ್ದು ಸಕಲ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಈ ಎರಡೂ ಪರೀಕ್ಷೆಗಳು ಅಂದು ಬೆಂಗಳೂರು, ಬಳ್ಳಾರಿ, ಬಾಗಲಕೋಟೆ, ದಾವಣಗೆರೆ, ಧಾರವಾಡ, ಕಲಬುರಗಿ, ಮೈಸೂರು ಮತ್ತು ತುಮಕೂರು ಕೇಂದ್ರಗಳಲ್ಲಿ ನಡೆಯಲಿವೆ ಎಂದು ವಿವರಿಸಿದ್ದಾರೆ. ಡಿಸಿಇಟಿ ಪರೀಕ್ಷೆಯನ್ನು 51 ಕೇಂದ್ರಗಳಲ್ಲಿ ಒಟ್ಟು 21,095 ಹಾಗೂ ಎಂ.ಟೆಕ್ ಪರೀಕ್ಷೆಯನ್ನು 26 ಕೇಂದ್ರಗಳಲ್ಲಿ ಒಟ್ಟು 12,116 ಅಭ್ಯರ್ಥಿಗಳು ಬರೆಯುತ್ತಿದ್ದಾರೆ. ಈ ಎರಡೂ ಕೋರ್ಸ್‌ಗಳಿಂದ ಒಟ್ಟು 34,211 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.. ಅಲ್ಲದೇ ಹೊರನಾಡು, ಗಡಿನಾಡು ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆ ಕೂಡ ಬೆಂಗಳೂರಿನಲ್ಲಿ ಅದೇ ದಿನ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕೃಷಿ ಮಾರಾಟ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ಬೆಂಗಳೂರು ಜಲಮಂಡಲಿಯಲ್ಲಿ ಖಾಲಿ ಇರುವ ವಿವಿಧ ರೀತಿಯ ಒಟ್ಟು 37 ಇಂಜಿನಿಯರ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಜೂ. 4 ಕೊನೆ ದಿನ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಯ ಒಳ ಮೀಸಲಾತಿ ನಿಗದಿ ನಂತರ ಪರೀಕ್ಷೆ ನಡೆಸದೇ ಇರುವ ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿದು, ಮರು ಅಧಿಸೂಚನೆ ಹೊರಡಿಸಲು ಸರ್ಕಾರ ಸೂಚಿಸಿತ್ತು. ಆ ಪ್ರಕಾರ ಸಂಬಂಧಪಟ್ಟ ಇಲಾಖೆಗಳಿಂದ ಒಳ ಮೀಸಲಾತಿ ಅಳವಡಿಸಿಕೊಂಡು ಮರು ಅಧಿಸೂಚನೆ ಹೊರಡಿಸಿದ ನಂತರ ಅರ್ಜಿ ಕರೆದಿದೆ.

ಯುವತಿಯರಿಗೆ ಕಿರುಕುಳ: 3 ಯುವಕರ ಸೆರೆ

ಬೆಳ್ತಂಗಡಿ: ಪ್ರವಾಸಕ್ಕೆಂದು ಬಂದಿದ್ದ ಮೂವರು ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮೂವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಕೇರಳ ಕಾಸರಗೋಡು ಮೂಲದ ಅಬ್ದುಲ್ ಖಾದರ್ ಅಲ್ತಫ್ (36), ಫೈಜಲ್ ಆದಿಲ್ (27) ಹಾಗೂ ಉಸ್ಮಾನ್ ಸಾಲೀಂ (18) ಎಂದು ಗುರುತಿಸಲಾಗಿದೆ. ಮಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಮೂವರು ಯುವತಿಯರು ಹಾಗೂ ಇದೇ ಮೂವರು ಯುವಕರೊಂದಿಗೆ ಮೇ 20ರಂದು ಬೆಳ್ತಂಗಡಿ ತಾಲೂಕಿನ ದಿಡುಪೆ ಜಲಪಾತಕ್ಕೆ ತೆರಳಿದ್ದರು.

ಈ ವೇಳೆ ಮೂವರು ಯುವಕರು ತಮ್ಮೊಂದಿಗಿದ್ದ ಯುವತಿಯರೊಂದಿಗೆ ಅನುಚಿತವಾಗಿ ವರ್ತಿಸಿ, ಲೈಂಗಿಕ ಕಿರುಕುಳ ನೀಡಿದ್ದಾರೆ. ಯುವತಿಯರು ಆಗ ಪ್ರತಿರೋಧಿಸಿ ಬೊಬ್ಬೆ ಹಾಕಿದಾಗ ಸ್ಥಳದಲ್ಲಿದ್ದ ಸಾರ್ವಜನಿಕರು ಮೂವರು ಯುವಕರನ್ನು ಹಿಡಿದು ಬೆಳ್ತಂಗಡಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ.

ಸಂತ್ರಸ್ತ ಯುವತಿಯರು ನೀಡಿದ ದೂರಿನ ಮೇರೆಗೆ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಯುವಕರು ಬಳಸಿದ ಸ್ವಿಫ್ಟ್ ಕಾರನ್ನು ವಶಕ್ಕೆ ಪಡೆದು ಯುವಕರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ಇಂದಿನಿಂದ ಧರ್ಮ ವಿಜಯ ಯಾತ್ರೆ

ಶೃಂಗೇರಿ: ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ನೇಪಾಳ ದೇಶಕ್ಕೆ ಮೇ 22 ರಿಂದ 27 ರವರೆಗೆ ಧರ್ಮ ವಿಜಯ ಯಾತ್ರೆ ಕೈಗೊಳ್ಳಲಿದ್ದಾರೆ. ಶ್ರೀಮಠದಿಂದ ಮಂಗಳೂರಿಗೆ ತೆರಳಿ ಅಲ್ಲಿಂದ ವಿಶೇಷ ವಿಮಾನದಲ್ಲಿ ಕಠ್ಮಂಡಿಗೆ ತೆರಳಿ ನೇಪಾಳದ ವಿವಿದೆಡೆ ಸಂಚಾರ ನಡೆಸಿ, ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈಗಾಗಲೇ 200ಕ್ಕೂ ಹೆಚ್ಚು ಪುರೋಹಿತರ ತಂಡ ನೇಪಾಳ ತಲುಪಿದೆ. ಕಠ್ಮಂಡುವಿನ ಪಶುಪತಿನಾಥ, ಮುಕ್ತಿನಾಥ ಮಂದಿರ ಮುಂತಾದ ಕಡೆಗೆ ಶ್ರೀಗಳು ತೆರಳಲಿದ್ದಾರೆ. ಜಗದ್ಗುರುಗಳೊಂದಿಗೆ ಶ್ರೀಮಠದ ಆಡಳಿತಾಧಿಕಾರಿ ಪಿ.ಎ.ಮುರುಳಿ ಸಹಿತ ಪುರೋಹಿತರ ತಂಡ ತೆರಳಲಿದೆ.

ವಿದೇಶಿ ನಾಯಕರಿಗೆ ದೇಸಿ ಉಡುಗೊರೆ

ಪುಟ 1 ➡ ನಾರ್ವೆ ಪ್ರಧಾನಿ ಜೋನಾಸ್ ಗಾರ್ ಸ್ಟೋರ್ ಅವರಿಗೆ ಸಿಕ್ಕಿಂನ ಒಣಹೂವಿನ ಕಲಾಕೃತಿಗಳು, ಅರಸ ಹರಾಲ್ಡ್ 5 ಅವರಿಗೆ ತಾರಕಾಸಿ ನೌಕಾ ಮಾದರಿ, ರಾಣಿ ಸೋನ್ಯಾ ಅವರಿಗೆ ತಾಳೆ ಎಲೆ ಪಟ್ಟಚಿತ್ರ ನೀಡಲಾಗಿದೆ. ಐಸ್‌ಲ್ಯಾಂಡ್ ಪ್ರಧಾನಿ ಅವರಿಗೆ ಟೆನ್ನಿಂಗ್ ನಾರ್ಗೇ ಬಳಸಿದ ಐಸ್ ಆಕ್ಸ್ ಪ್ರತಿರೂಪ, ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡರಿಕ್ಸನ್ ಅವರಿಗೆ ಬಿದ್ರಿ ಕಲಾಕೃತಿ, ಫಿನ್‌ಲ್ಯಾಂಡ್ ಪ್ರಧಾನಿ ಅವರಿಗೆ ಪಿಚ್ವಾಯಿ ಚಿತ್ರ ನೀಡಲಾಗಿದೆ. ಈ ಪ್ರವಾಸದಲ್ಲಿ ಮೋದಿ ಯುಎಇ, ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿ ದೇಶಗಳಿಗೆ ಭೇಟಿ ನೀಡಿ, ಭಾರತೀಯ ಪರಂಪರೆಯ ವೈಶಿಷ್ಟ್ಯತೆಯನ್ನು ವಿಶ್ವ ನಾಯಕರಿಗೆ ಪರಿಚಯಿಸಿದರು.

ಪ್ರಧಾನ್, ಪ್ರಧಾನಿ ಹೊಣೆ ಹೊರಲಿ

ಪುಟ 1➡ ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಬಯಸುವವರಿಗೆ ಸಿಇಟಿ ಪಾರದರ್ಶಕವಾಗಿ ನಡೆಯುತ್ತಿತ್ತು. ನರೇಂದ್ರ ಮೋದಿಯವರು 2014ರಲ್ಲಿ ಪ್ರಧಾನಿಯಾದ ನಂತರ ಹಿಂದೆ ಇದ್ದ ಪದ್ಧತಿಯನ್ನು ಬದಲಾಯಿಸಿ 2016ರಲ್ಲಿ ನೀಟ್ ಜಾರಿಗೆ ತಂದರು.

10 ವರ್ಷಗಳಲ್ಲಿ ಐದು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದರು. ಸತತ ಪರಿಶ್ರಮಪಟ್ಟಿದ್ದ ಕೆಲವು ವಿದ್ಯಾರ್ಥಿಗಳು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಪ್ರಕರಣದಿಂದ ಹತಾಶರಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಆತ್ಮಹತ್ಯೆಗೆ ಕಾರಣರಾದ ಪ್ರಕರಣದ ರೂವಾರಿಗಳನ್ನು ಕೊಲೆಗಾರರೆಂದು ಪರಿಗಣಿಸಿ ಶಿಕ್ಷೆ ನೀಡಬೇಕು. ಪ್ರಧಾನಿ ಮೋದಿಯವರು ತಮ್ಮ ವಿದೇಶಿ ಪ್ರವಾಸವನ್ನು ಮೊಟಕುಗೊಳಿಸಿ, ನೀಟ್ ಬರೆದ ಯುವಜನರ ಬೇಷರತ್ ಕ್ಷಮೆಯಾಚಿಸಬೇಕು ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾರ್ಯದರ್ಶಿ ಅಭಿಷೇಕ್ ದತ್ತಾ, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ ಬಾನು, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಸಚಿವರು, ಶಾಸಕರು ಇದ್ದರು.

ರಾಜ್ಯಗಳಿಗೆ ಪರೀಕ್ಷೆ ಜವಾಬ್ದಾರಿ ವಹಿಸಿ: ವೈದ್ಯಕೀಯ ಕಾಲೇಜುಗಳಿಗೆ ಪರೀಕ್ಷೆ ನಡೆಸುವ ಸಿಇಟಿ ವ್ಯವಸ್ಥೆಯನ್ನು ರಾಜ್ಯಗಳಿಗೇ ಅವಕಾಶ ನೀಡಬೇಕು. ಇನ್ನು ಮುಂದೆ ಕೇಂದ್ರ ಸರ್ಕಾರ ನೀಟ್ ಪರೀಕ್ಷೆಗಳನ್ನು ನಡೆಸದೇ, ಈ ಜವಾಬ್ದಾರಿಯನ್ನು ಆಯಾ ರಾಜ್ಯಗಳಿಗೆ ಪರೀಕ್ಷೆ ನಡೆಸುವ ಅಧಿಕಾರವನ್ನು ಕೊಡಬೇಕೆಂದು ಒತ್ತಾಯಿಸುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ಶೇ.69 ಯುವಜನತೆ ನಿರುದ್ಯೋಗಿಗಳು



ದೇಶದ ಜನರಿಗೆ ಚಿನ್ನ ಖರೀದಿಸಬೇಡಿ, ಪೆಟ್ರೋಲ್, ಡೀಸೆಲ್ ಮಿತವ್ಯಯ ಮಾಡಿ, ವಿದೇಶ ಪ್ರವಾಸ ಮಾಡಬೇಡಿ ಎಂದು ಕರೆ ನೀಡಿ, ತಾವು ಮಾತ್ರ 5 ದೇಶಗಳ ವಿದೇಶಿ ಪ್ರವಾಸದಲ್ಲಿದ್ದಾರೆ. ದೇಶದಲ್ಲಿ 20ರಿಂದ 29 ವಯೋಮಾನದ ಯುವಕ ಯುವತಿಯರಲ್ಲಿ ಶೇ.67ರಷ್ಟು ಯುವಜನತೆ ನಿರುದ್ಯೋಗಿಗಳಾಗಿದ್ದಾರೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಒದಗಿಸುವ ಮೂಲಕ ಕಳೆದ 12 ವರ್ಷಗಳ ಪ್ರಧಾನಿ ಮೋದಿಯವರ ಆಡಳಿತದಲ್ಲಿ 24 ಕೋಟಿ ಉದ್ಯೋಗಗಳು ಸೃಷ್ಟಿಯಾಗಬೇಕಿತ್ತು. ಆದರೆ, ಈವರೆಗೆ 2 ಕೋಟಿಯಷ್ಟೂ ಉದ್ಯೋಗಗಳನ್ನು ಕೊಡಲಾಗಲಿಲ್ಲ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಕೇರಳ ವಿಧಾನಸಭೆಯಲ್ಲಿ ಕನ್ನಡದ ಕಂಪು



ಪುಟ 1➡ ಇದಕ್ಕೂ ಮುನ್ನ ವಿಧಾನಸಭೆಯ ಅಧಿವೇಶನದಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದ ಅಶ್ರಫ್, ಎಕೆಎಂ ಅಶ್ರಫ್ ಎಂಬವನಾದ ನಾನು ವಿಧಾನಸಭೆಯ ಸದಸ್ಯನಾಗಿ ಚುನಾಯಿತನಾಗಿ ಕಾನೂನು ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದು, ನಾನು ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾ ಪೂರ್ವಕವಾಗಿ ನಿರ್ವಹಿಸುತ್ತೇನೆಂದು ಸೃಷ್ಟಿಕರ್ತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ ಎಂದು ಕನ್ನಡದಲ್ಲೇ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಾಸರಗೋಡು ಜಿಲ್ಲೆಯ ಗಡಿಭಾಗದಲ್ಲಿರುವ ಮಂಜೇಶ್ವರ ಕ್ಷೇತ್ರದಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಿದೆ. ತುಳು ಹಾಗೂ ಮಲಯಾಳಂ ಜತೆಗೆ ಕನ್ನಡವೂ ಇಲ್ಲಿ ಸಾಮಾನ್ಯ ಬಳಕೆಯ ಭಾಷೆಯಾಗಿದೆ. ಈ ಹಿನ್ನೆಲೆ ಅಶ್ರಫ್ ಅವರ ಕನ್ನಡ ಪ್ರಮಾಣ ವಚನ ಗಡಿನಾಡಿನ ಜನರಲ್ಲಿ ವಿಶೇಷ ಸಂತಸ ಮೂಡಿಸಿದೆ.

ಮಾತೃಭಾಷೆ ಮಲಯಾಳಂ ಆಗಿದ್ದರೂ ಅಶ್ರಫ್ ಅವರಿಗೆ ಕನ್ನಡದ ಮೇಲೆ ಅಪಾರ ಪ್ರೀತಿ ಇದೆ. ಅವರು ಕಣ್ಣೂರು ವಿಶ್ವವಿದ್ಯಾಲಯದಲ್ಲಿ ಕನ್ನಡದಲ್ಲೇ ಪದವಿ ಪಡೆದಿದ್ದಾರೆ. ಚುನಾವಣಾ ಪ್ರಚಾರದ ಸಂದರ್ಭದಲ್ಲೂ ಕನ್ನಡದಲ್ಲೇ ಭಾಷಣ ಮಾಡಿ ಮತದಾರರ ಮನಸೆಳೆದಿದ್ದರು. ಮಂಜೇಶ್ವರ ಕ್ಷೇತ್ರದಲ್ಲಿ ಕನ್ನಡ ಶಾಲೆಗಳ ಉಳಿವಿಗಾಗಿ ಹಲವು ಹೋರಾಟಗಳು ನಡೆದಿವೆ. ಗಡಿಭಾಗದ ಜನರ ಭಾಷಾ ಹಕ್ಕುಗಳ ಪ್ರಶ್ನೆ ಸದಾ ಚರ್ಚೆಯಲ್ಲಿರುವ ಈ ಪ್ರದೇಶದಲ್ಲಿ, ಕನ್ನಡದಲ್ಲಿನ ಪ್ರಮಾಣ ವಚನ ಮತ್ತೊಮ್ಮೆ ಭಾಷಾ ಸೌಹಾರ್ದ ಮತ್ತು ಗಡಿನಾಡಿನ ಸಾಂಸ್ಕೃತಿಕ ಬಾಂಧವ್ಯವನ್ನು ಪ್ರತಿಬಿಂಬಿಸಿದೆ.

ರಾಜ್ಯದ ವೈವಿಧ್ಯತೆ, ಸಂಸ್ಕೃತಿ ಪ್ರತಿಬಿಂಬ

ಪುಟ 1 ➡ ಶಾಸಕರು ವಿಭಿನ್ನ ಭಾಷೆಗಳಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಕೆಲವರು ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದರೆ ಮತ್ತು ಕೆಲ ಶಾಸಕರು ವಿಧ್ಯುಕ್ತವಾಗಿ ಪ್ರಮಾಣವಚನ ಸ್ವೀಕರಿಸುವ ಮುಖೇನ ಕಲಾಪಗಳಿಗೆ ವೈಯ್ಯಕ್ತಿಕ ಅಥವಾ ಆತ್ಮೀಯ ಸ್ಪರ್ಶ ನೀಡಿದರು. ವಿಧಾನಸಭಾ ಚುನಾವಣಾ ಪ್ರಚಾರ ಸಂದರ್ಭ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿದ್ದ ವಿವಿಧ ರಾಜಕೀಯ ಪಕ್ಷಗಳ ನಾಯಕರು, ಪ್ರಮಾಣವಚನ ಕಾರ್ಯಕ್ರಮ ಮುಗಿಯುತ್ತಲೇ ರಾಜಕೀಯ ದ್ವೇಷ ಮರೆತು ಪರಸ್ಪರ ನಗೆ ವಿನಿಮಯ ಮಾಡಿಕೊಂಡರು ಮತ್ತು ಪರಸ್ಪರ ಕೈಕುಲುಕಿಕೊಂಡು ಸೌಹಾರ್ದತೆ ಮೆರೆದ ಅಪೂರ್ವ ಕ್ಷಣಗಳಿಗೂ ಸದನ ಸಾಕ್ಷಿಯಾಯಿತು.

ನೀಟ್ ಫಲಿತಾಂಶಕ್ಕೂ ಮುನ್ನ ಸಿಇಟಿ ಕೌನ್ಸೆಲಿಂಗ್: ಸುಧಾಕರ್

ಬೆಂಗಳೂರು: ನೀಟ್ ಪರೀಕ್ಷೆ ಫಲಿತಾಂಶಕ್ಕೆ ನಾವು ಕಾಯದೇ ಸಿಇಟಿ ಫಲಿತಾಂಶ ಬಂದ ಬಳಿಕ ನಾವು ಇಂಜಿನಿಯರಿಂಗ್ ಸೇರಿದಂತೆ, ಉಳಿದ ಕೋರ್ಸ್‌ಗಳಿಗೆ ಕೌನ್ಸೆಲಿಂಗ್ ಮಾಡುತ್ತೇವೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ವತಿಯಿಂದ ಗುರುವಾರ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಚೆಲ್ಲಾಟ ಆಡಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಮೋದಿ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದರು.

ಪ್ರತಿಬಾರಿ ಇಂಜಿನಿಯರಿಂಗ್, ಮೆಡಿಕಲ್ ಸೀಟಿಗೆ ಒಟ್ಟಾಗಿ ಕೌನ್ಸೆಲಿಂಗ್ ಮಾಡುತ್ತಿದ್ದೆವು. ಈಗ ನೀಟ್ ಪರೀಕ್ಷೆ ಫಲಿತಾಂಶಕ್ಕೆ ನಾವು ಕಾಯೋದಿಲ್ಲ. ಸಿಇಟಿ ಫಲಿತಾಂಶ ಆಧರಿಸಿ ಇಂಜಿನಿಯರಿಂಗ್ ಸೀಟುಗಳಿಗೆ ಮೊದಲೇ ಕೌನ್ಸೆಲಿಂಗ್ ಮಾಡುತ್ತೇವೆ. ರಾಜ್ಯ ಸರ್ಕಾರಗಳಿಗೆ ಮೆಡಿಕಲ್ ಸೀಟುಗಳಿಗೆ ಪರೀಕ್ಷೆ ಮಾಡಲು ಅವಕಾಶ ನೀಡಬೇಕು ಅಂತಾ ಸಚಿವ ಎಂ.ಸಿ. ಸುಧಾಕರ್ ಆಗ್ರಹಿಸಿದ್ರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಮಾತನಾಡಿ, ಮೋದಿ ಸರ್ಕಾರದಲ್ಲಿ ಶಿಕ್ಷಣ ಮಾಫಿಯಾ ನಡೆಯುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ ಪೇಪರ್ ಲೀಕ್‌ಗೆ ಹೆಸರುವಾಸಿಯಾಗಿತ್ತು. ನೂರಾರು ಪರೀಕ್ಷೆ ಪೇಪರ್‌ಗಳು ಬಿಜೆಪಿ ನಾಯಕರ ಮೂಗಿನ ಅಡಿಯಲ್ಲೇ ಲೀಕ್ ಆಗಿವೆ ಅಂದು ಆರೋಪಿಸಿದರು.

> 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಚೆಲ್ಲಾಟ ಆಡಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಮೋದಿ ಕ್ಷಮಾಪಣೆ ಕೇಳಬೇಕು.
>
> ■ **ಡಾ. ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

ಪ್ರತಿಜ್ಞಾ ವಚನ



ಭಯೋತ್ಪಾದನಾ ವಿರೋಧಿ ದಿನಾಚರಣೆ ಅಂಗವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಭಯೋತ್ಪಾದನಾ ವಿರೋಧಿ ದಿನದ ಪ್ರತಿಜ್ಞಾವಚನ ಬೋಧಿಸಿದರು. ಸಚಿವ ಡಾ.ಜಿ.ಪರಮೇಶ್ವರ, ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸೇರಿ ಇನ್ನಿತರರಿದ್ದರು.

ಎಚ್‌ಡಿಕೆ ಹೇಳಿಕೆ ಸತ್ಯಕ್ಕೆ ದೂರ

ಬೆಂಗಳೂರು: ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಕುರಿತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆಗಳು ವಾಸ್ತವಾಂಶಗಳಿಗೆ ದೂರವಾಗಿದ್ದು, ಜನರಲ್ಲಿ ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನವಾಗಿದೆ ಎಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (NCRB) ಅಂಕಿ ಅಂಶಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಎಫ್‌ಐಆರ್ ಹಾಗೂ ಪ್ರಕರಣಗಳ ಆಧಾರದ ಮೇಲೆ ಸಂಗ್ರಹವಾಗುತ್ತವೆ. ಹಲವು ವರ್ಷಗಳಿಂದ ಇದೇ ಮಾನದಂಡದ ಆಧಾರದ ಮೇಲೆ ಎನ್‌ಸಿಆರ್‌ಬಿ ವರದಿಗಳು ಪ್ರಕಟವಾಗುತ್ತಿವೆ. ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿರುವ ಕೇಂದ್ರ ಸಚಿವರಿಗೆ ಈ ವಾಸ್ತವಾಂಶಗಳ ಅರಿವು ಇರ ಬೇಕಾಗಿತ್ತು. ಆದರೂ ರಾಜಕೀಯ ಲಾಭಕ್ಕಾಗಿ ಜನರನ್ನು ತಪ್ಪು ದಾರಿಗೆಳೆಯುವ ರೀತಿಯಲ್ಲಿ ಹೇಳಿಕೆ ನೀಡಿರುವುದು ವಿಷಾದನೀಯ ಎಂದು ಅವರು ಟೀಕಿಸಿದರು. ರೈತರ ಆತ್ಮಹತ್ಯೆಯಂತಹ ಸೂಕ್ಷ್ಮ ಹಾಗೂ ದುಃಖಕರ ವಿಚಾರಗಳಲ್ಲಿ ರಾಜಕೀಯ ಮಾಡುವುದಕ್ಕಿಂತ ಸಂಕಷ್ಟದಲ್ಲಿರುವ ರೈತ ಕುಟುಂಬಗಳ ಜತೆ ನಿಲ್ಲುವುದು ಜನಪ್ರತಿನಿಧಿಗಳ ನೈತಿಕ ಜವಾಬ್ದಾರಿಯಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.

ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಗಣನೀಯ ಇಳಿಕೆ

ಸರ್ಕಾರದ ಅಂಕಿ ಅಂಶಗಳ ಪ್ರಕಾರ 2023ರಲ್ಲಿ 1,090 ರೈತ ಆತ್ಮಹತ್ಯೆ ಪ್ರಕರಣಗಳು, 2024ರಲ್ಲಿ 1,032 ಪ್ರಕರಣಗಳು ಹಗೂ 2025ರಲ್ಲಿ 644 ಪ್ರಕರಣಗಳು ದಾಖಲಾಗಿವೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಬೆಳೆ ಪರಿಹಾರ, ಬೆಳೆ ವಿಮೆ, ಸಾಲ ಸೌಲಭ್ಯಗಳು ಹಾಗೂ ರೈತ ಕಲ್ಯಾಣ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾದ ಪರಿಣಾಮ ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ ಎಂದು ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ಕಿರುಸುದ್ದಿ

ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಲ್ಲ: ಸಚಿವ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ. ಒಂದೊಂದು ವಿಶ್ಲೇಷಣೆ ಮಾಡುತ್ತಾರೆ. ಅದಕ್ಕೆಲ್ಲ ನಾನು ಪ್ರತಿಕ್ರಿಯೆ ಮಾಡುವುದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದಾರೆ. ಗುರುವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರನ್ನು ಬದಲಾಯಿಸುವ ಹಾಗೂ ಮುಂದುವರಿಸುವ ಪ್ರಸ್ತಾವನೆ ಬಗ್ಗೆ ನಾವು ಚರ್ಚೆ ಮಾಡಿ ಏನಾಗುತ್ತೆ, ಎಲ್ಲವೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು. ನಮಗೆ ಗೊತ್ತಿರುವ ಹಾಗೆ ಯಾವುದನ್ನೂ ನಿಗದಿ ಮಾಡಿ ಮುಖ್ಯಮಂತ್ರಿಯನ್ನಾಗಿ ಮಾಡಿರುವುದಿಲ್ಲ. ಪಕ್ಷದಲ್ಲಿ ಹೈಕಮಾಂಡ್ ಇದೆ. ಹೈಕಮಾಂಡ್‌ಗೆ ಯಾವ ಸಂದರ್ಭದಲ್ಲಿ ಏನು ಮಾಡಬೇಕು ಅಂತ ಗೊತ್ತಿದೆ. ಮಾಧ್ಯಮದ ಮೂಲಕ ನಾನೇನೋ ಆಗುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು.



ಗೊಂದಲವನ್ನು ಯಾಕೆ ಹೈಕಮಾಂಡ್ ಬಗೆಹರಿಸುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಗೊಂದಲದ ಪ್ರಶ್ನೆಯೇ ಇಲ್ಲ ಅಂದರೆ ಅದಕ್ಕೆ ಸ್ಪಷ್ಟನೆ ಯಾಕೆ ಕೊಡುತ್ತಾರೆ. ಬದಲಾವಣೆಯ ಪ್ರಶ್ನೆಯನ್ನು ಯಾರು ಎತ್ತಿದ್ದಾರೆ, ಯಾರು ಕೇಳುತ್ತಿದ್ದಾರೆ. ಡಿಸಿಎಂ ಸ್ಪಷ್ಟನೆ ಮಾಡಿದ್ದಾರೆ. ಈಗ ಪ್ರಶ್ನೆ ಯಾರಿಂದ ಬಂದಿದೆ ಎಂಬುದೇ ಪ್ರಶ್ನೆ ಎಂದರು. ರಾಜಣ್ಣ ಅವರು ನಮ್ಮ ಜಿಲ್ಲೆಯ ವರು. ಆತ ನನ್ನ ಸ್ನೇಹಿತ. ನಾವೆಲ್ಲ ಜೊತೆಯಲ್ಲೇ ಓದಿದ್ದೇವೆ. ಸ್ವಾಭಾವಿಕವಾಗಿ ಅಭಿಮಾನ ಇದ್ದೇ ಇರುತ್ತದೆ. ತುಮಕೂರಿಗೆ ಒಂದು ಅವಕಾಶ ಇದ್ರೆ ಕೊಡಿ ಅಂತ ಕೇಳಿದ್ದಾರೆ. ಅವರು ಹೇಳಿಕೆಯಲ್ಲಿ ನನಗೇನು ತಪ್ಪು ಕಾಣಿಸಿಲ್ಲ ಎಂದರು.

ರಿಯಲ್ ಎಸ್ಟೇಟ್ ದಂಧೆ ವಿಸ್ತರಣೆ ಯತ್ನ: ಅಶೋಕ

ಬೆಂಗಳೂರು: ರಾಜಧಾನಿಯ ಅಕ್ಕಪಕ್ಕದ ಜಿಲ್ಲೆಗಳಿಗೆ ಬೆಂಗಳೂರು ಹೆಸರು ಅಂಟಿಸಿ ರಿಯಲ್ ಎಸ್ಟೇಟ್ ದಂಧೆ ವಿಸ್ತರಿಸುವುದರಲ್ಲಿ ತೋರಿಸುತ್ತಿರುವ ಆಸಕ್ತಿಯ ಅರ್ಧದಷ್ಟಾದರೂ ಬೆಂಗಳೂರಿನ ಸುರಕ್ಷತೆ, ಕಾನೂನು ಸುವ್ಯವಸ್ಥೆ ಕುರಿತಾಗಿ ಈ ಕಾಂಗ್ರೆಸ್ ಸರ್ಕಾರ ಕ್ಕಿದ್ದಿದ್ದರೆ ಇಂದು ಸಿಲಿಕಾನ್ ಸಿಟಿ ಕ್ರೈಂ ಸಿಟಿ ಆಗುತ್ತಿರಲಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅವರು ಈ ಕುರಿತು ಸುದೀರ್ಘ ಪೋಸ್ಟ್ ಮಾಡಿದ್ದಾರೆ.



ಬೆಂಗಳೂರಿನ ಅಕ್ಕಪಕ್ಕದ ಜಿಲ್ಲೆಗಳಿಗೆ ಬೆಂಗ ಳೂರು ಹೆಸರು ತಳುಕು ಹಾಕಿ, ಜಮೀನಿನ ಬೆಲೆ ಏರಿಸಿ ರಿಯಲ್ ಎಸ್ಟೇಟ್ ಲಾಬಿಯ ಜೇಬು ತುಂಬಿಸುವುದನ್ನೇ ಏಕೈಕ ಅಜೆಂಡಾ ಮಾಡಿ ಕೊಂಡಿರುವ ಕಾಂಗ್ರೆಸ್ ಸರ್ಕಾರ ಬೆಂಗಳೂರಿನ ಅಭಿವೃದ್ಧಿ, ಕಾನೂನು ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಇದರ ಪರಿಣಾಮವಾಗಿ ನಮ್ಮ ಹೆಮ್ಮೆಯ ಸಿಲಿಕಾನ್ ಸಿಟಿ, ಕ್ರೈಮ್ ಸಿಟಿಯಾಗಿ ಮಾರ್ಪಟ್ಟಿದೆ. ಆವಿಷ್ಕಾರದ ರಾಜಧಾನಿ, ಅಪರಾಧಗಳ ರಾಜಧಾನಿಯಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದ್ದಾರೆ. 2024ರಲ್ಲಿ ಬೆಂಗಳೂರಿನಲ್ಲಿ 176 ಕೊಲೆ ಪ್ರಕರಣಗಳು ದಾಖಲಾಗಿವೆ. ಮಹಾ ನಗರಗಳ ಅಪರಾಧ ಪಟ್ಟಿಯಲ್ಲಿ ಬೆಂಗಳೂರು ಟಾಪ್ ನಗರಗಳಲ್ಲಿ ಒಂದಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಸಂಬಂಧಿಸಿ 4,748 ಪ್ರಕರಣಗಳು ದಾಖಲಾಗಿವೆ. ಅದರಲ್ಲೂ 16 ಗ್ಯಾಂಗ್ ರೇಪ್ ಪ್ರಕರಣಗಳು ಸೇರಿವೆ. ಒಂದೇ ವರ್ಷದಲ್ಲಿ 17,561 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಜನರ ಬೆವರಿನ ಹಣವನ್ನು ಸೈಬರ್ ಕಳ್ಳರು ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿದರು.

ಕೇಂದ್ರ ಸರ್ಕಾರದ ಅನುಮತಿ ಬಳಿಕ ಭೂಮಿಪೂಜೆ: ಡಿಸಿಎಂ

ಮೇಕೆದಾಟು ಡಿಪಿಆರ್ ಶೀಘ್ರ

ಚಾಮರಾಜನಗರ: ಮೇಕೆದಾಟು ಯೋಜನೆಗೆ ಡಿಪಿಆರ್ ಸಿದ್ಧಪಡಿಸಲಾಗಿದ್ದು, ಶೀಘ್ರವೇ ಕೇಂದ್ರಕ್ಕೆ ಡಿಪಿಆರ್ ಸಲ್ಲಿಕೆ ಮಾಡಲಿದ್ದು, ಕೇಂದ್ರ ಸರ್ಕಾರ ಅನುಮತಿ ಬಂದ ಬಳಿಕ ಯೋಜನೆಯ ಭೂಮಿ ಪೂಜೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ವಿಚಾರದಲ್ಲಿ ತಮಿಳುನಾಡಿಗೆ 177 ಟಿಎಂಸಿ ನೀರನ್ನು ಬಿಡಲೇಬೇಕು ಎಂದು ಸ್ಪಷ್ಟ ಆದೇಶ ನೀಡಲಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು ಎಂದು ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇನೆ. ಮೇಕೆದಾಟು ಯೋಜನೆಗೆ ಆಕ್ಷೇಪ ಸಲ್ಲಿಸಲು ತ.ನಾಡಿಗೆ ಯಾವುದೇ ರೀತಿಯ ಹಕ್ಕಿಲ್ಲ, ಇದರ ಬಗ್ಗೆ ಕೇಂದ್ರ ಜಲ ಆಯೋಗ ತೀರ್ಮಾನ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ ಎಂದರು.

ಅಧಿಕಾರದಲ್ಲಿರುದಕ್ಕಿಂತ ಅಧಿಕಾರದಲ್ಲಿದ್ದಾಗ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯ. ನಮ್ಮ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಂಡಿದೆ. ಕೊಟ್ಟ ಮಾತಿನಂತೆ ನಡೆದಿದ್ದೇವೆ. ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡಿದ್ದೇವೆ. ಪ್ರತಿಯೊಬ್ಬ ಫಲಾನುಭವಿಗಳ ಆಸ್ತಿ ದಾಖಲೆಗಳಲ್ಲಿ ಅವರ ಫೋಟೋ, ಆಸ್ತಿಯ ಫೋಟೋ ಹಾಕಿ ಮನೆ ಮನೆಗೆ ಖಾತೆ ಒದಗಿಸಿಕೊಡುತ್ತಿದ್ದೇವೆ. ಬೇರೆಯವರು ಮಾಡಲಾಗದ ಕೆಲಸವನ್ನು ನಾವು ಮಾಡಿ ಜನರ ಋಣ ತೀರಿಸುತ್ತಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಇನ್ನು ಹೆಚ್ಚಿನ ಕೆಲಸ ಮಾಡುತ್ತಿದ್ದೇವೆ. ಕಳೆದ ಎರಡು ವರ್ಷ ಉತ್ತಮ ಮಳೆಯಾಗಿತ್ತು. ಈ ವರ್ಷ ಮಳೆ ಕೊರತೆಯಾಗಿದೆ. ರೈತರನ್ನು ಹೇಗೆ ಕಾಪಾಡಬೇಕು, ಕುಡಿಯುವ ನೀರಿನ ಸಮಸ್ಯೆ ಹೇಗೆ ಬಗೆಹರಿಸಬೇಕು ಎಂದು ಚರ್ಚೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ: ಚಾಮರಾಜನಗರ ಐತಿಹಾಸಿಕವಾದಂತಹ ಜಿಲ್ಲೆ. ಧಾರ್ಮಿಕ, ಪ್ರಾಕೃತಿಕ ಸಂಪತ್ತು ಹೊಂದಿರುವ ಕಾವೇರಿ ನದಿ ತೀರದಲ್ಲಿರುವ ಪುಣ್ಯಭೂಮಿ. ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ಭಗವಂತ ಇದ್ದಾನೆ. ಮಲೆ ಮಾದೇಶ್ವರ, ಮಧ್ಯರಂಗ, ಸಿದ್ದಪ್ಪಾಜಿ, ಗೋಪಾಲಸ್ವಾಮಿ ಪುಣ್ಯಕ್ಷೇತ್ರಗಳಿಗೆ ಬಂದು ಜನ ನೆಮ್ಮದಿ ಕಂಡುಕೊಳ್ಳುತ್ತಾರೆ. ಬೆಳಗ್ಗೆಯಿಂದ ಸೂರ್ಯಮುಳುಗುವ ವೇಳೆಗೆ ಶ್ರೀರಂಗಪಟ್ಟಣ (ಆದಿರಂಗ), ಮಧ್ಯರಂಗ ಹಾಗೂ ಅಂತ್ಯರಂಗ ದೇವಾಲಯಗಳಿಗೆ ಭೇಟಿ ನೀಡುವ ಪದ್ಧತಿ ನಡೆದುಕೊಂಡು ಬಂದಿದೆ ಎಂದು ತಿಳಿಸಿದರು.



ಜಿಬಿಎ ಚುನಾವಣೆಗೆ ಸಿದ್ಧತೆ

ಜಿಬಿಎ ಚುನಾವಣೆ ಬಗ್ಗೆ ಕೇಳಿದಾಗ ಜಿಬಿಎ ಚುನಾವಣೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದ ಮೇಲಿದೆ. ಚುನಾವಣೆ ನಡೆಸಲು ಸರ್ಕಾರ ಸಂಪೂರ್ಣವಾಗಿ ಸಹಕಾರ ನೀಡಲು ಸಿದ್ಧವಾಗಿದೆ. ಸಮಯದ ಪ್ರಕಾರ ಚುನಾವಣೆ ನಡೆಯಲಿದೆ. ನಾವೆಲ್ಲ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು. ನೀವು ಯಾವಾಗ ಸಿಎಂ ಆಗುತ್ತೀರಿ ಎಂದು ಕೇಳಿದಾಗ ಅದನ್ನು ಕಾಲ ತೀರ್ಮಾನ ಮಾಡುತ್ತದೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಹಾಗೂ ಖಾಸಗಿಯವರು ಸೇರಿ ಈ ದೇವಾಲಯದ ಜೀರ್ಣೋದ್ಧಾರದ ಕೆಲಸ ಮಾಡುತ್ತಿದ್ದೇವೆ. ಇಂದು ಸಚಿವ ಸಂಪುಟ ಸಭೆ ಇದ್ದರೂ ನಾನು ಸೇರಿದಂತೆ ಅನೇಕ ಸಚಿವರು ಈ ಕಾರ್ಯಕ್ರಮಕ್ಕೆ ಬಂದಿದ್ದೇವೆ. ಭಕ್ತ ಹಾಗೂ ಭಗವಂತನ ನಡುವೆ ವ್ಯವಹಾರ ನಡೆಯುವ ಸ್ಥಳ ದೇವಾಲಯ. ಈ ಪುಣ್ಯಕ್ಷೇತ್ರ ಯಾತ್ರಿಕರಿಗೆ ಪ್ರಸಿದ್ಧವಾಗಿದೆ. ಇದು ಪ್ರಕೃತಿಯ ಕೊಡುಗೆ. ನಮ್ಮ ಸರ್ಕಾರ ಕೂಡ ಎಲ್ಲೆಡೆ ಅನೇಕ ಅಭಿವೃದ್ಧಿ ಕೆಲಸ ಮಾಡಿಕೊಂಡು ಬಂದಿದೆ. ಇಲ್ಲಿ ಸಚಿವ ಸಂಪುಟ ಸಭೆ ಮಾಡಿ ಈ ಭಾಗದ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳಲಾಗಿದೆ. ಕೈಗಾರಿಕಾ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದೇವೆ. ಆಕ್ಸಿ ಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸರ್ಕಾರಿ ಕೆಲಸ ನೀಡಿ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಇದು ಇತಿಹಾಸ ಪುಟಕ್ಕೆ ಹೋಗುವ ಕೆಲಸವನ್ನು ನಮ್ಮ ಸಚಿವರಾದ ವೆಂಕಟೇಶ್ ಅವರು ಮಾಡಿದ್ದಾರೆ ಎಂದು ತಿಳಿಸಿದರು.

ರಾಹುಲ್ ಕ್ಷಮೆಯಾಚನೆಗೆ ವಿಜಯೇಂದ್ರ ಒತ್ತಾಯ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಹೇಳಿಕೆ ನೀಡಿರುವ ರಾಹುಲ್ ಗಾಂಧಿ ದೇಶದ ಜನರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು ಈ ರೀತಿ ಬಾಲಿಶವಾಗಿ ಹೇಳಿಕೆ ನೀಡಬಾರದು. ಪ್ರಧಾನಿ, ಕೇಂದ್ರ ಗೃಹ ಸಚಿವರ ಬಗ್ಗೆ ಅವಮಾನಕರ ವಾಗಿ ಮಾತನಾಡಬಾರದು ಎಂದರು. ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಇದನ್ನು ರಾಹುಲ್ ಅವರಿಗೆ ಸಹಿಸಲು ಆಗುತ್ತಿಲ್ಲ.



ಹಿಂದುಳಿದ ಸಮಾಜಕ್ಕೆ ಸೇರಿದ ಮೋದಿ ಅವರು ಪ್ರಧಾನಿಯಾಗಿ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾರೆ. ದೇಶವನ್ನು ನಾಲ್ಕನೇ ಆರ್ಥಿಕ ಶಕ್ತಿಯಾಗಿ ಮಾಡಿದ್ದಾರೆ. ದೇಶದ ಅಭಿವೃದ್ಧಿ ಸಹಿಸದೆ ರಾಹುಲ್ ಅವರು ಈ ರೀತಿ ಮಾತನಾಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು.

ಕಾಶ್ಮೀರದಲ್ಲಿ 370ನೇ ವಿಧಿಯನ್ನು ಕಿತ್ತು ಹಾಕುವ ಧೈರ್ಯ ಕಾಂಗ್ರೆಸ್‌ಗೆ ಇರ ಲಿಲ್ಲ. ಅದನ್ನು ಕಿತ್ತು ಹಾಕಿದ್ದು ಅಮಿತ್ ಶಾ ಅವರು. ಇದಕ್ಕೆ ರಾಹುಲ್ ಗಾಂಧಿ ಅವರು ಅಮಿತ್ ಶಾ ಅವರನ್ನು ದೇಶ ದ್ರೋಹಿ ಎಂದು ಕರೆಯುತ್ತಾರೆಯೇ? ದೇಶದಲ್ಲಿ ನಕ್ಸಲರನ್ನು ಬುಡಸಮೇತ ನಾಶ ಮಾಡುವಲ್ಲಿ ಅಮಿತ್ ಶಾ ಅವರು ಕೆಲಸ ಮಾಡಿದ್ದಾರೆ. ಮೋದಿ ಅವರು ಭ್ರಷ್ಟಾಚಾರರಹಿತ ಆಡಳಿತ ನೀಡಿದ್ದಾರೆ. ಅದನ್ನು ರಾಹುಲ್‌ಗೆ ಸಹಿಸಲು ಆಗುತ್ತಿಲ್ಲ ಎಂದರು.

ನಿತಿನ್ ನವೀನ್ ರಾಜ್ಯಕ್ಕೆ ಭೇಟಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರು ಇದೇ ಮೇ 23ಕ್ಕೆ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ಬಳಿಕ ರಾಜ್ಯಕ್ಕೆ ಅವರ ಮೊದಲ ಭೇಟಿ ಇದಾಗಿದೆ. ಮೇ 24 ರಂದು ಬೆಂಗಳೂರು ಉತ್ತರ ಜಿಲ್ಲೆ ಪ್ರಶಿಕ್ಷಣ ವರ್ಗದಲ್ಲಿ ಭಾಗವಹಿಸಲಿದ್ದಾರೆ.

ಕಾಡುಗೊಲ್ಲ ಸಂಘದ ಅಧ್ಯಕ್ಷ ರಾಜಣ್ಣ ಬಿಜೆಪಿಗೆ

ಬೆಂಗಳೂರು: ಕಾಡುಗೊಲ್ಲರ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ ಅವರು ತಮ್ಮ ಬೆಂಬಲಿಗರೊಂದಿಗೆ ಗುರುವಾರ ಬಿಜೆಪಿ ಕಚೇರಿಯಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರ್ಪಡೆಯಾದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಬಿಜೆಪಿ ತತ್ವ - ಸಿದ್ಧಾಂತಗಳನ್ನು ಒಪ್ಪಿಕೊಂಡು, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವಾಸ ಇರಿಸಿ ರಾಜಣ್ಣ ಅವರು ಬಿಜೆಪಿ ಸೇರಿದ್ದಾರೆ. ರಾಜ್ಯದಲ್ಲಿ ಬಿಜೆಪಿಗೆ ಬಲ ತುಂಬುವ ಅಪೇಕ್ಷೆ ಹೊಂದಿ, ಯಾವುದೇ ನಿರೀಕ್ಷೆಗಳಿಲ್ಲದೇ ಸೇರಿದ್ದಾರೆ ಎಂದರು. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎನ್ನುವ ಧ್ಯೇಯವಾಕ್ಯ ಬಿಜೆಪಿಯದ್ದು. ಪಕ್ಷದ ವ್ಯವಸ್ಥೆಯಲ್ಲಿ ರಾಜಣ್ಣ ಮತ್ತು ಅವರ ಬೆಂಬಲಿಗರಿಗೆ ಗೌರವ ನೀಡಿ, ತಮ್ಮ ಶಕ್ತಿಯನ್ನು ಬಲಪಡಿಸಿ ಪಕ್ಷ ಸಂಘಟಿಸಲಾಗುವುದು ಎಂದು ತಿಳಿಸಿದರು.

ಪಿಯುಸಿ ಫಲಿತಾಂಶ ಶೇ.7.06 ಏರಿಕೆ

ಬೆಂಗಳೂರು: 2026ರ ದ್ವಿತೀಯ ಪಿಯುಸಿ ಪರೀಕ್ಷೆ-2ರ ಫಲಿತಾಂಶ ಪ್ರಕಟವಾಗಿದ್ದು, ಶೇ.45.65ರಷ್ಟು ಫಲಿತಾಂಶ ದಾಖಲಾಗಿದೆ. ಪರೀಕ್ಷೆ 1 ಮತ್ತು 2ರ ಒಟ್ಟು ಕ್ರೋಢೀಕೃತ ಫಲಿತಾಂಶ ಶೇ.92.25ರಷ್ಟು ದಾಖಲಾಗಿದೆ. ಕಳೆದ ವರ್ಷ 85.19ಕ್ಕೆ ಹೋಲಿಸಿದರೆ, ಈ ಬಾರಿ ಶೇ.7.06ರಷ್ಟು ಏರಿಕೆಯಾಗಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ 2 ಪರೀಕ್ಷೆಗಳ ವಿಧಾನ ದೇಶದಲ್ಲೇ ಮೊದಲ ಪ್ರಯೋಗವಾಗಿದ್ದು, ವಿದ್ಯಾರ್ಥಿಗಳಿಗೆ ತಮ್ಮ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ವಿಶೇಷ ಅವಕಾಶ ಒದಗಿಸಿದೆ. ಪರೀಕ್ಷೆ-1 ಮತ್ತು ಪರೀಕ್ಷೆ-2ರಲ್ಲಿ ಪಡೆದ ಅಂಕಗಳಲ್ಲಿ ಗರಿಷ್ಠ ಅಂಕವನ್ನು ಪರಿಗಣಿಸುವ ವ್ಯವಸ್ಥೆಯಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ ಎಂದು ಇಲಾಖೆ ತಿಳಿಸಿದೆ.

ಕಲಾ, ವಾಣಿಜ್ಯ, ವಿಜ್ಞಾನ - ಮೂರೂ ವಿಭಾಗಗಳಲ್ಲಿ ದಾಖಲೆ: ಈ ಬಾರಿ ಮೂರೂ ವಿಭಾಗಗಳಲ್ಲಿಯೂ ಉತ್ತಮ ಫಲಿತಾಂಶ ದಾಖಲಾಗಿದ್ದು, ಕಲಾ ವಿಭಾಗದಲ್ಲಿ ಅತಿದೊಡ್ಡ ಏರಿಕೆ ಕಂಡುಬಂದಿದೆ. ಕಳೆದ ವರ್ಷದ ಶೇ.69.47ರಷ್ಟು ಫಲಿತಾಂಶ ಈ ಬಾರಿ ಶೇ.83.31ಕ್ಕೆ ಏರಿಕೆಯಾಗಿದೆ. ವಾಣಿಜ್ಯ ವಿಭಾಗದಲ್ಲಿ ಫಲಿತಾಂಶ ಶೇ.87.83 ರಿಂದ 92.84ಕ್ಕೆ ಏರಿಕೆಯಾದರೆ, ವಿಜ್ಞಾನ ವಿಭಾಗದಲ್ಲಿ ಕಳೆದ ವರ್ಷದ ಶೇ.91.88 ಫಲಿತಾಂಶ ಈ ಬಾರಿ 96.01ಕ್ಕೆ ತಲುಪಿದೆ.

ಗ್ರಾಮೀಣ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ: ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಈ ಬಾರಿ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಉತ್ತಮ ಸಾಧನೆ ಮಾಡಿರುವುದು ವಿಶೇಷವಾಗಿದೆ. ಗ್ರಾಮೀಣ ಭಾಗದ ಫಲಿತಾಂಶ ಶೇ.92.77 ದಾಖಲಾಗಿದ್ದು, ನಗರ ಪ್ರದೇಶದ ಫಲಿತಾಂಶ ಶೇ.92.01 ರಷ್ಟಾಗಿದೆ. ಕಳೆದ ವರ್ಷ ಗ್ರಾಮೀಣ ಭಾಗದ ಫಲಿತಾಂಶ ಶೇ.84.94ರಷ್ಟು ಇದ್ದರೆ, ಈ ಬಾರಿ ಗಣನೀಯ ಏರಿಕೆ ಕಂಡುಬಂದಿದೆ. ಇನ್ನೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶದಲ್ಲೂ ಈ ಬಾರಿ ದೊಡ್ಡ ಮಟ್ಟದ ಸುಧಾರಣೆ ಕಂಡುಬಂದಿದೆ.



> ಯಾವೊಬ್ಬ ಮಗುವೂ ಹಿಂದೆ ಉಳಿಯಬಾರದು ಎಂಬ ಸರ್ಕಾರದ ಆಶಯಕ್ಕೆ ಈ ಫಲಿತಾಂಶ ಸ್ಪಷ್ಟ ಸಾಕ್ಷಿಯಾಗಿದೆ. ಮುಂದಿನ ದಿನಗಳಲ್ಲಿ ತಂತ್ರಜ್ಞಾನ ಆಧಾರಿತ ಹಾಜರಾತಿ ವ್ಯವಸ್ಥೆ, ಎಐ ಆಧಾರಿತ ಕಲಿಕೆ, ಡಿಜಿಟಲ್ ಶಿಕ್ಷಣ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದು.
>
> ■ **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ರಾಜ್ಯಾದ್ಯಂತ ಪೂರ್ವ ಮುಂಗಾರು ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಅಬ್ಬರ ಜೋರಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಕೆಲವು ಜಿಲ್ಲೆಗಳಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಮೇ 22 ರಿಂದ 24 ವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಗಾರು ಪೂರ್ವ ಮಾರುಗಳ ತೀವ್ರತೆ ಹೆಚ್ಚಾಗಿರುವುದರಿಂದ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು , ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಅಲರ್ಟ್ ಘೋಷಣೆ: ಬೆಂಗಳೂರಿನಲ್ಲಿ ಮೇ 22 ರಿಂದ 24 ವರೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮೇ 22 ರಂದು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಮತ್ತು 17 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್, ಮೇ 23ರಂದು ಬೀದರ್ ಹಾಗೂ ಕಲಬುರಗಿ ಎರಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಬೆಂಗಳೂರು ಸೇರಿದಂತೆ ದಕ್ಷಿಣ ಹಾಗೂ ಉತ್ತರ ಒಳನಾಡಿನ 19 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬಂಗಾಳಕೊಲ್ಲಿ, ಅರಬ್ಬೀ ಸಮುದ್ರದ ವಿವಿಧ ಭಾಗಗಳಲ್ಲಿ ಬಿರುಗಾಳಿ ಹಿನ್ನೆಲೆಯಲ್ಲಿ ಕಡಲಿಗೆ ಇಳಿಯದಂತೆ ಕರಾವಳಿ ಮೀನುಗಾರರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ.



ಬೆಂಗಳೂರಿನಲ್ಲಿ ಆಲಿಕಲ್ಲು ಮಳೆ ಆರ್ಭಟ: ಬೆಂಗಳೂರಿನ ಹಲವೆಡೆ ಗುರುವಾರ ಸಂಜೆ ಆಲಿಕಲ್ಲು ಸಹಿತ ಭಾರೀ ಮಳೆ ಸುರಿದಿದೆ. ಮೆಜೆಸ್ಟಿಕ್, ಮಲ್ಲೇಶ್ವರ, ಮೈಸೂರು ರಸ್ತೆ, ವಿಜಯನಗರ, ಶಾಂತಿನಗರ, ಲಾಲ್‌ಬಾಗ್, ಕೆ.ಆರ್.ಮಾರ್ಕೆಟ್, ಜಯನಗರ, ರಾಜಾಜಿನಗರ, ವಸಂತನಗರ, ವಿಧಾನಸೌಧ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದಿದೆ.

ರಸ್ತೆಗಳು ಜಲಾವೃತವಾಗಿ ಸಂಚಾರಕ್ಕೆ ಅಡ್ಡಿಯಾಗಿದ್ದು, ಟ್ರಾಫಿಕ್ ಜಾಮ್ ಕೂಡ ಉಂಟಾಗಿತ್ತು, ಇನ್ನು ಬೃಹತ್ ಮರ ಉರುಳಿಬಿದ್ದು ಅವಾಂತರಗಳು ಸಂಭವಿಸಿತು. ಭಾರೀ ಗಾಳಿ ಮಳೆಯಿಂದಾಗಿ ನಗರದ ಹಲವೆಡೆ ಬೃಹತ್ ಮರಗಳು ಧರೆಗುರುಳಿ ಅವಾಂತರಗಳು ಸಂಭವಿಸಿವೆ. ವೆಸ್ಟ್ ಆಫ್ ಕಾರ್ಡ್ ರಸ್ತೆಯ ಸಿಟಿ ಆಸ್ಪತ್ರೆ ಬಳಿ ಮರ ಬಿದ್ದು ಎರಡು ಕಾರುಗಳು ಜಖಂಗೊಂಡಿವೆ. ಇಂದಿರಾನಗರ 16ನೇ ಕ್ರಾಸ್‌ನಲ್ಲಿ ಮರ ನೇರವಾಗಿ ಕಾರಿನ ಮೇಲೆ ಬಿದ್ದ ಪರಿಣಾಮ ವಾಹನ ಜಖಂಗೊಂಡಿದೆ.

ನಕಲಿ ಫಲಾನುಭವಿಗಳ ಪತ್ತೆಗೆ ಪ್ರತ್ಯೇಕ ಆ್ಯಪ್ | ಕಂದಾಯ ಇಲಾಖೆಯಿಂದ ಕ್ರಮ

ಸಂದೇಹಾಸ್ಪದ ಪಿಂಚಣಿದಾರರ ಪತ್ತೆಗೆ ವೇಗ

▸ ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳ ಮೂಲಕ ಸರ್ಕಾರದ ವತಿಯಿಂದ ನೀಡುತ್ತಿರುವ ಪಿಂಚಣಿಯಲ್ಲಿ ಸಂದೇಹಾಸ್ಪದ ಫಲಾನುಭವಿಗಳ ಪತ್ತೆ ಕಾರ್ಯವನ್ನು ಕಂದಾಯ ಇಲಾಖೆ ಕೈಗೊಂಡಿದೆ.

ಪಿಂಚಣಿ ಪಡೆಯಲು ಅರ್ಹರಾಗಿರುವ ವ್ಯಕ್ತಿಗಳನ್ನು ಗುರುತಿಸುವ ಕಾರ್ಯ ಮಾರ್ಚ್ ತಿಂಗಳಿನಿಂದ ರಾಜ್ಯಾದ್ಯಂತ ನಡೆಯುತ್ತಿದ್ದು, ಬೇರೆ ಊರಿನಲ್ಲಿ ವಾಸವಿರುವ ಫಲಾನುಭವಿಗಳ ಪತ್ತೆ ಮತ್ತು ನಕಲಿ ಅಥವಾ ಮೃತಪಟ್ಟ ಪಿಂಚಣಿದಾರರನ್ನು ಪಟ್ಟಿಯಿಂದ ತೆಗೆಯುವ ಕಾರ್ಯವನ್ನು ಗ್ರಾಮ ಲೆಕ್ಕಾಧಿಕಾರಿ ಮತ್ತು ತಾಲೂಕು ಕಚೇರಿಯ ಅಧಿಕಾರಿಗಳಿಗೆ ವಹಿಸಲಾಗಿದೆ.

ಕಳೆದ ವರ್ಷ ಜುಲೈ ತಿಂಗಳಲ್ಲಿ ಪರಿಶೀಲನೆ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಸಾಮಾಜಿಕ ಭದ್ರತಾ ಪಿಂಚಣಿಯ 11.8 ಲಕ್ಷಕ್ಕೂ ಹೆಚ್ಚು ನಕಲಿ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಇದೀಗ ಕಂದಾಯ ಇಲಾಖೆ ಸಂದೇಯಾಸ್ಪದ ಫಲಾನುಭವಿಗಳ ಪರಿಶೀಲನೆ ನಡೆಸುತ್ತಿದೆ. ಪಿಂಚಣಿ ಪಡೆಯುತ್ತಿರುವ ಸಂಶಾಯತ್ಮಕ ಪ್ರಕರಣಗಳ ಭೌತಿಕ ಪರಿಶೀಲನೆ ಮತ್ತು ಪ್ರಗತಿ ಕುರಿತಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮೇ 12 ರಂದು ವಿಡಿಯೋ ಸಂವಾದದ ಮೂಲಕ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಆಯುಕ್ತಾಲಯದ ಎಲ್ಲಾ ಅಧಿಕಾರಿ, ಸಿಬ್ಬಂದಿಯ ಸಭೆ ನಡೆಸಿದ್ದು, ಪರಿಶೀಲನೆ ಕಾರ್ಯವನ್ನು ಶೀಘ್ರದಲ್ಲೇ ಮುಗಿಸುವಂತೆ ಸೂಚನೆ ನೀಡಿದ್ದಾರೆ.

ಆ್ಯಪ್ ಮೂಲಕ ಸಮೀಕ್ಷೆ

ಮೊಬೈಲ್ ಆ್ಯಪ್ ಮೂಲಕ ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ಪರಿಶೀಲನೆ ನಡೆಸಲಾಗುತ್ತಿದ್ದು, ಪ್ರತಿಯೊಂದು ಗ್ರಾಮ ಲೆಕ್ಕಾಧಿಕಾರಿಗೆ ಪ್ರತ್ಯೇಕ ಆ್ಯಪ್ ಲಾಗಿನ್ ನೀಡಲಾಗಿದ್ದು, ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ದಾಖಲಿಸಿಕೊಂಡು ಅಂತಿಮ ಪಟ್ಟಿ ತಯಾರಿ ತಹಶೀಲ್ದಾರ್‌ಗೆ ಕಳಿಸಿಕೊಡಲಾಗುತ್ತದೆ. ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು ಬೇರೆ ಊರಲ್ಲಿ ವಾಸವಾಗಿದ್ದಲ್ಲಿ ಅವರನ್ನು ಆ ಗ್ರಾಮದ ಲಾಗಿನ್‌ಗೆ ವರ್ಗಾಹಿಸಲಾಗುತ್ತದೆ.

> ಗ್ರಾಮ ಲೆಕ್ಕಾಧಿಕಾರಿಗಳು ಮೊಬೈಲ್ ಆ್ಯಪ್ ಮೂಲಕ ಮ್ಯಾಪಿಂಗ್ ಕೈಗೊಂಡಿದ್ದು, ಜನಗಣತಿಗೆ ಸಿಬ್ಬಂದಿಯನ್ನು ನೇಮಿಸಿದ್ದರಿಂದ ಪಿಂಚಣಿದಾರರ ಪರಿಶೀಲನೆ ಕಾರ್ಯ ಸ್ವಲ್ಪ ನಿಧಾನವಾಗಿದೆ. ಜನಗಣತಿ ಕಾರ್ಯ ಮುಗಿದ ನಂತರ ಮತ್ತೆ ವೇಗವಾಗಲಿದೆ. ಶೀಘ್ರದಲ್ಲೇ ಮುಗಿಯಲಿದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಪಿಂಚಣಿ ಮಾತ್ರ ಬಾಕಿ ಇದೆ. ಪಿಂಚಣಿ ಬಾಕಿಗೆ ಪರಿಶೀಲನೆ ಕಾರ್ಯ ಕಾರಣವಲ್ಲ.
>
> ■ **ಹೊನ್ನಾಂಬ,** ಆಯುಕ್ತರು ಕಂದಾಯ ಇಲಾಖೆ

81.88 ಲಕ್ಷ ಫಲಾನುಭವಿಗಳು: ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಸೇರಿದಂತೆ ಕಂದಾಯ ಇಲಾಖೆಯಡಿಯ 12 ಬಗೆಯ ಪಿಂಚಣಿಗಳನ್ನು ನೀಡಲಾಗುತ್ತಿದೆ. ಈ ಪಿಂಚಣಿ ಯೋಜನೆಯಗಳಡಿ 81.88 ಲಕ್ಷ ಫಲಾನುಭವಿಗಳಿದ್ದು, ತಿಂಗಳಿಗೆ 894 ಕೋಟಿ ರೂ. ನೀಡಬೇಕಿದೆ. ಪ್ರತಿ ವರ್ಷ ಬಜೆಟ್‌ನಲ್ಲಿ 10,736 ಕೋಟಿ ರೂ. ಮೀಸಲಿಡಲಾಗುತ್ತದೆ.

ಪಿಯು ವಿದ್ಯಾರ್ಥಿಗಳಿಗೆ ಡಿಜಿಟಲ್ ವರ್ಗಾವಣೆ

ಬೆಂಗಳೂರು: ರಾಜ್ಯದ ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿಗೆ ಡಿಜಿಲಾಕರ್ ಮೂಲಕ ಡಿಜಿಟಲ್ ಅಂಕಪಟ್ಟಿ ನೀಡಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇದೀಗ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಡಿಜಿಟಲ್ ವರ್ಗಾವಣೆ ಪ್ರಮಾಣ ಪತ್ರ (ಡಿಜಿಟಲ್ ಟಿಸಿ) ನೀಡಲು ಮುಂದಾಗಿದೆ.

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ

ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದ್ದು, ಪ್ರಾಯೋಗಿಕವಾಗಿ ಈ ಸಾಲಿನಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾದ ಹೊಸ ವಿದ್ಯಾರ್ಥಿಗಳಿಗೆ ಡಿಜಿಟಲ್ ಟಿಸಿ ಸೌಲಭ್ಯ ಕಲ್ಪಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಅನುಮತಿ ನೀಡಿದೆ.

ಹೊಸ ವ್ಯವಸ್ಥೆಯ ಪ್ರಕಾರ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ (ಕೆಎಸ್‌ಇಎಬಿ) ವತಿಯಿಂದ ದ್ವಿತೀಯ ಪಿಯುಸಿಯ ಎರಡನೇ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬಳಿಕ, ಮಂಡಳಿಯ ದತ್ತಾಂಶವನ್ನು ಆಧರಿಸಿ ಡಿಜಿಟಲ್ ಟಿಸಿಯನ್ನು ಸ್ವಯಂಚಾಲಿತವಾಗಿ ಸೃಜಿಸಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಡಿಜಿಲಾಕರ್ ಖಾತೆಗೆ ಲಾಗಿನ್ ಆಗಿ ಟಿಸಿಯನ್ನು ನೇರವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಡಿಜಿಟಲ್ ಟಿಸಿ ವ್ಯವಸ್ಥೆಯನ್ನು ಸರಳ ಮತ್ತು ಪರಿಣಾಮಕಾರಿಯಾಗಿಸಲು ಹಳೆಯ ಟಿಸಿ ನಮೂನೆಯಲ್ಲಿ ಇದ್ದ ಅನಗತ್ಯ ಮಾಹಿತಿಗಳನ್ನು ಕೈಬಿಡಲಾಗಿದೆ. ಶುಲ್ಕ ಬಾಕಿ, ವಿದ್ಯಾರ್ಥಿವೇತನ, ಹಾಜರಾತಿ ಲೆಕ್ಕಾಚಾರ ಸೇರಿದಂತೆ ಹಲವು ಕಾಲಂಗಳನ್ನು ತೆಗೆದುಹಾಕಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳ ನಿಖರ ಜೋಡಣೆಗೆ ಸ್ಯಾಟ್ಸ್ ಸಂಖ್ಯೆಯೊಂದಿಗೆ ಪರೀಕ್ಷಾ ನೋಂದಣಿ ಸಂಖ್ಯೆ ಹಾಗೂ ಅಪಾರ್ ಐಡಿಯನ್ನು ಕೂಡ ಸೇರಿಸಲಾಗುತ್ತದೆ. ಇದೇ ವೇಳೆ, ಪ್ರಾಂಶುಪಾಲರು ನಿಗದಿತ ಅವಧಿ ಯೊಳಗೆ ಯಾವುದೇ ನಕಾರಾತ್ಮಕ ಅಭಿಪ್ರಾಯ ದಾಖಲಿಸದಿದ್ದರೆ, ತಂತ್ರಾಂಶವು ವಿದ್ಯಾರ್ಥಿಯ ನಡತೆಯನ್ನು ಸ್ವಯಂಚಾಲಿತವಾಗಿ ಉತ್ತಮ ಎಂದು ನಮೂದಿಸುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಡಿಜಿಟಲ್ ಟಿಸಿಯಲ್ಲಿ ಸುರಕ್ಷಿತ ಕ್ಯೂಆರ್ ಕೋಡ್ ಅಳವಡಿಸಲಾಗುತ್ತಿದ್ದು, ಇದರ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಆಧಾರ್ ಕೇಂದ್ರಗಳು ದಾಖಲೆಯ ನೈಜತೆಯನ್ನು ತಕ್ಷಣ ಪರಿಶೀಲಿಸಬಹುದು. ಇದರಿಂದ ನಕಲಿ ಟಿಸಿ ಬಳಕೆ ತಡೆಯಲು ಸಹಕಾರಿಯಾಗಲಿದೆ ಎಂದು ಇಲಾಖೆ ತಿಳಿಸಿದೆ. ಫಲಿತಾಂಶ ಪ್ರಕಟವಾದ ತಕ್ಷಣವೇ ಡಿಜಿಲಾಕರ್‌ನಲ್ಲಿ ಟಿಸಿ ಲಭ್ಯವಾಗುವುದರಿಂದ ವಿದ್ಯಾರ್ಥಿಗಳು ಪ್ರಾಂಶುಪಾಲರ ಭೌತಿಕ ಸಹಿಗಾಗಿ ಕಾಲೇಜುಗಳಿಗೆ ಅಲೆಯಬೇಕಾಗುವುದಿಲ್ಲ. ಉನ್ನತ ಶಿಕ್ಷಣ ಪ್ರವೇಶಾತಿಗೆ ಈ ಡಿಜಿಟಲ್ ಟಿಸಿ ಸಂಪೂರ್ಣ ಮಾನ್ಯತೆ ಹೊಂದಿರಲಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಪ್ರಥಮ ಹಂತದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾದ ಹೊಸ ವಿದ್ಯಾರ್ಥಿಗಳಿಗೆ ಮಾತ್ರ ಈ ಸೌಲಭ್ಯ ಲಭ್ಯವಾಗಲಿದೆ. ಖಾಸಗಿ ವಿದ್ಯಾರ್ಥಿಗಳು, ರಿಪೀಟರ್ಸ್ ಹಾಗೂ ಮಧ್ಯದಲ್ಲಿ ವರ್ಗಾವಣೆ ಪತ್ರ ಬಯಸುವ ವಿದ್ಯಾರ್ಥಿಗಳು ಈ ಹಿಂದಿನಂತೆ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ ಕಾಲೇಜು ಮಟ್ಟದಲ್ಲೇ ಟಿಸಿ ಪಡೆಯಬೇಕಾಗಿದೆ.

ಸಂಪಾದಕೀಯ

ಪಾಕ್ ಉಗ್ರರಿಗೆ ತಕ್ಕ ಪಾಠ

ಭಾರತದ ವಿರುದ್ಧ ದಶಕಗಳ ಕಾಲ ಭಯೋತ್ಪಾದನೆಯನ್ನು ಆಯುಧವನ್ನಾಗಿ ಬಳಸಿಕೊಂಡ ಪಾಕಿಸ್ತಾನದಲ್ಲೇ ಈಗ ಅನಾಮಧೇಯರಿಂದ ಉಗ್ರರ ಹತ್ಯೆಗಳ ಸರಣಿ ನಡೆಯುತ್ತಿರುವುದು ಗಮನಾರ್ಹ ಬೆಳವಣಿಗೆ. ಪುಲ್ವಾಮಾ ದಾಳಿಯ ಸಂಚುಕೋರರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟ ಹಮ್ಜಾ ಬುರಹಾನ್ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಪರಿಚಿತ ಗನ್‌ಮನ್‌ಗಳ ಗುಂಡಿಗೆ ಬಲಿಯಾದ ಘಟನೆ ಅತ್ಯಂತ ಪ್ರಮುಖ ಬೆಳವಣಿಗೆಯಾಗಿದೆ. ಭಾರತದ ವಿರುದ್ಧ ದಾಳಿ ರೂಪಿಸಿದ್ದ ಅನೇಕ ಉಗ್ರರು ಕಳೆದ ಕೆಲವು ವರ್ಷಗಳಿಂದ ಇದೇ ರೀತಿಯಲ್ಲಿ ಹತ್ಯೆಯಾಗುತ್ತಿದ್ದಾರೆ.



ಇದು ಕೇವಲ ಅಪರಾಧ ಪ್ರಕರಣಗಳ ಸರಣಿಯಲ್ಲ. ಭಯೋತ್ಪಾದನೆಯನ್ನು 'ತಂತ್ರಾತ್ಮಕ ಆಸ್ತಿ' ಎಂದು ಬೆಳೆಸಿದ ಪಾಕಿಸ್ತಾನಕ್ಕೆ ಅದರದ್ದೇ ಪರಿಣಾಮ ಈಗ ಎದುರಾಗುತ್ತಿದೆ. ವಿಶೇಷವೆಂದರೆ, 2022ರಿಂದಲೂ ನಡೆಯುತ್ತಿರುವ ಈ ಅನಾಮಧೇಯರಿಂದ ಗುಂಡೇಟಿಗೆ ಬಲಿಯಾಗುತ್ತಿರುವ ಪ್ರಕರಣಗಳು ಪಾಕ್‌ಗೆ ತಕ್ಕ ಪಾಠ ಕಲಿಸುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ಸಂತ್ರಸ್ತನೆಂದು ಕರೆದುಕೊಳ್ಳುತ್ತಾ, ತನ್ನಲ್ಲಿ ಉಗ್ರರೇ ಇಲ್ಲ ಎಂದು ಹೇಳಿಕೊಂಡು ಬರುತ್ತಿರುವ ಪಾಕಿಸ್ತಾನದ ನಾಯಕರಿಗೆ ಈ ಬೆಳವಣಿಗೆಗಳು ಹೆದರಿಕೆ ಹುಟ್ಟಿಸಿವೆ ಎಂದರೆ ತಪ್ಪಾಗಲಾರದು. ಹಾಗೆಯೇ, ಉಗ್ರರನ್ನು ಸಾಕುವ ನೀತಿ ಕೊನೆಗೆ ದೇಶದ ಒಳಭದ್ರತೆಯನ್ನೇ ನಾಶ ಮಾಡುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಆದರೆ ಇದರಿಂದ ಭಯೋತ್ಪಾದನೆ ಸಂಪೂರ್ಣ ಅಂತ್ಯವಾಯಿತು ಎಂದು ಭಾವಿಸುವುದು ತಪ್ಪು. ಪಾಕಿಸ್ತಾನದ ನೆಲದಲ್ಲಿ ಉಗ್ರ ಸಂಘಟನೆಗಳಿಗೆ ಇರುವ ಮೂಲಸೌಕರ್ಯ ಇನ್ನೂ ಜೀವಂತವಾಗಿದೆ. ಹೆಸರುಗಳು ಬದಲಾಗಬಹುದು, ಮುಖಗಳು ಬದಲಾಗಬಹುದು, ಆದರೆ ಭಾರತದ ವಿರುದ್ಧದ ದ್ವೇಷ ರಾಜಕೀಯ ಇನ್ನೂ ಅಲ್ಲಿ ಉಳಿದಿದೆ. ಆದ್ದರಿಂದ ಭಾರತ ತನ್ನ ಭದ್ರತಾ ಎಚ್ಚರಿಕೆಯನ್ನು ಯಾವತ್ತೂ ಸಡಿಲಿಸಬಾರದು.

ಪಾಕಿಸ್ತಾನವು ಜಗತ್ತಿನ ಮುಂದೆ ಸದಾ 'ಭಯೋತ್ಪಾದನೆಯ ಬಲಿಪಶು' ಎಂಬ ಮುಖವಾಡ ಧರಿಸಲು ಯತ್ನಿಸಿದೆ. ಆದರೆ ವಾಸ್ತವದಲ್ಲಿ ಅನೇಕ ಜಾಗತಿಕ ಉಗ್ರ ಸಂಘಟನೆಗಳಿಗೆ ಆಶ್ರಯ, ತರಬೇತಿ ಮತ್ತು ರಕ್ಷಣೆ ನೀಡಿದ ದಾಖಲೆಗಳು ಅದರ ವಿರುದ್ಧವೇ ನಿಂತಿವೆ. ಒಸಾಮಾ ಬಿನ್ ಲಾಡೆನ್‌ನಿಂದ ಹಿಡಿದು ಭಾರತದ ವಿರುದ್ಧ ಕಾರ್ಯಾಚರಣೆ ನಡೆಸಿದ ಹಲವಾರು ಉಗ್ರರ ತನಕ ಪಾಕಿಸ್ತಾನದ ನೆಲವೇ ಸುರಕ್ಷಿತ ತಾಣವಾಗಿತ್ತು ಎಂಬುದು ಜಗತ್ತಿಗೆ ತಿಳಿದ ಸಂಗತಿ.

ಇದೀಗ ಉಗ್ರರ ಹತ್ಯೆಗಳ ಸರಣಿ ಪಾಕಿಸ್ತಾನದ ಸೇನೆ ಹಾಗೂ ಐಎಸ್‌ಐ ಮೇಲೆಯೂ ಪ್ರಶ್ನೆ ಎಬ್ಬಿಸುತ್ತಿದೆ. ಒಂದು ಕಡೆ ದೇಶದ ಭದ್ರತಾ ವ್ಯವಸ್ಥೆ ದುರ್ಬಲವಾಗಿದೆಯೇ ಎಂಬ ಅನುಮಾನ ಮೂಡಿದರೆ, ಇನ್ನೊಂದು ಕಡೆ ಆಂತರಿಕ ಗುಂಪು ಸಂಘರ್ಷಗಳೇ ಇದಕ್ಕೆ ಕಾರಣವೇ ಎಂಬ ಚರ್ಚೆಯೂ ನಡೆಯುತ್ತಿದೆ. ಯಾವುದೇ ಕಾರಣವಾಗಿರಲಿ, ಪಾಕಿಸ್ತಾನವು ತನ್ನದೇ ನಿರ್ಮಿಸಿದ ಬಲೆಯೊಳಗೆ ಸಿಲುಕಿಕೊಂಡಿದೆ ಎನ್ನುವುದು ಸ್ಪಷ್ಟ.

ಹಿಂದುಫೋಬಿಯಾ ವಿರುದ್ಧದ ತೀರ್ಪು!

▸ ರತನ್ ಶಾರದಾ

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ವಿಶ್ಲೇಷಣೆ ಮಾಡಿದ ಬಹುತೇಕ ಮಂದಿ ಬಂಗಾಳವು ತನ್ನ ಐತಿಹಾಸಿಕ ಹಿಂದುತ್ವದ ಮೂಲಕ್ಕೆ ಮತ್ತು ರಾಷ್ಟ್ರೀಯತೆಯ ಮೂಲಕ್ಕೆ ಮರಳಿದ್ದನ್ನು ಉಲ್ಲೇಖಿಸಿದ್ದಾರೆ. ಹಿಂದು ಮತಗಳು ಧ್ರುವೀಕರಣಗೊಂಡಿರುವುದನ್ನೂ ಬಣ್ಣಿಸಿದ್ದಾರೆ. ನಿಜಕ್ಕೂ ಇದೊಂದು ಐತಿಹಾಸಿಕ ಕ್ಷಣ. ಆದರೆ ನಾವು ಇದನ್ನು ಇನ್ನಷ್ಟು ಸ್ಥೂಲವಾಗಿ ಗಮನಿಸಿದರೆ ಇದೊಂದು ಅಪರೂಪದ ವಿದ್ಯಮಾನವಲ್ಲ, ಇದರ ಹಿಂದೆ ಇನ್ನೂ ದೊಡ್ಡ ಸಂದೇಶವಿರುವುದು ತಿಳಿದುಬರುತ್ತದೆ.

ಇತ್ತೀಚೆಗೆ 4 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ಚುನಾವಣಾ ಫಲಿತಾಂಶವು ಒಂದು ವಿಷಯದಲ್ಲಿ ಅತ್ಯಂತ ಸ್ಪಷ್ಟ ಸಂದೇಶ ರವಾನಿಸಿದೆ. ಅದೇಂದರೆ ನೀವು ಹಿಂದು ವಿರೋಧಿ ನಿಲುವನ್ನು ತಳೆದರೆ ನೀವು ಗೆಲ್ಲುವುದು ಅಸಾಧ್ಯ ಎಂಬುದು! ಇತ್ತೀಚಿನ ದಿನಗಳಲ್ಲಿ ಹಲವಾರು ತಥಾಕಥಿತ ಜಾತ್ಯತೀತ ಪಕ್ಷಗಳು ಹಿಂದು ನಿಂದನೆಯಲ್ಲಿ ಪೈಪೋಟಿಯನ್ನೇ ನಡೆಸಿದಂತಿದ್ದವು. ಹಿಂದಿನಿಂದಲೂ ಹಿಂದುಗಳನ್ನು ನಿಂದಿಸುವ ಪ್ರಯತ್ನಗಳು ನಡೆಯುತ್ತಿದ್ದವಾದರೂ ಇತ್ತೀಚಿನ ಕೆಲವು ತಿಂಗಳುಗಳಲ್ಲಂತೂ ಅದು ಮಿತಿಮೀರಿತ್ತು. ಆದರೀಗ, ಶೇ. 78ರಷ್ಟು ಹಿಂದುಗಳಿರುವ ದೇಶದಲ್ಲಿ ಹಿಂದುಗಳನ್ನು ಜಾತಿ ಆಧಾರದಲ್ಲಿ ವಿಭಜಿಸುವ, ಅವರನ್ನು ಅವಮಾನಿಸುವ ಕಾರ್ಯವು ಒಂದು ಮಿತಿಗಿಂತ ಹೆಚ್ಚು ಹೋಗಬಾರದು ಎಂಬ ಸಂದೇಶವನ್ನು ಜನರು ನೀಡಿದ್ದಾರೆ. ಜಾತ್ಯತೀತ ಪಕ್ಷಗಳು ಹಿಂದುಗಳನ್ನು ಒಡೆದು ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನಕ್ಕೆ ತಡೆ ಹಾಕಿದ್ದಾರೆ. ಹಿಂದುಗಳು ಕೆಲವಾರು ವಿಷಯಗಳಲ್ಲಿ ವಿಭಜಿತರಾಗಿದ್ದರೂ ತಮ್ಮ 'ಹಿಂದು ಅಸ್ಮಿತೆಗೇ' ಅಪಾಯ ಒದಗುತ್ತಿದೆ ಎಂದು ಕಂಡುಬಂದಾಗ ಅದನ್ನು ತೀವ್ರವಾಗಿ ಪ್ರತಿರೋಧಿಸುತ್ತಾರೆ. ಹಾಗಾಗಿಯೇ ಹಿಂದು ವಿರೋಧಿ ಶಕ್ತಿಗಳಿಗೆ ಅವರು ನಿಚ್ಚಳ ಸೋಲು ಉಣಿಸಿದ್ದಾರೆ. ಉತ್ತರ– ದಕ್ಷಿಣ, ಪೂರ್ವ–ಪಶ್ಚಿಮ ವಿಭಜನೆಗಳೆಲ್ಲವೂ ಒಂದು ಮಿಥ್ಯೆ, ನಿಜಾರ್ಥದಲ್ಲಿ ತಾವೆಲ್ಲರೂ ಒಂದೇ ಎಂಬ ಸಂದೇಶ ಹಿಂದುಗಳಿಂದ ಘೋಷಿಸಲ್ಪಟ್ಟಿದೆ.

ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಜನರು ಹಿಂದುಫೋಬಿಯಾದ ವಿರುದ್ಧ ಸ್ಪಷ್ಟ ಜನಾದೇಶ ನೀಡಿದ್ದಾರೆ. ಹಿಂದುಗಳು ಬಹಳ ಕಾಲದಿಂದಲೇ ಅಲ್ಪಸಂಖ್ಯಾತರನ್ನು ಓಲೈಸುವ ರಾಜಕಾರಣವನ್ನು ಕಂಡು ರೋಸಿದ್ದರಾದರೂ ಆ ಕುರಿತಂತೆ ತೀವ್ರವಾಗಿ ಪ್ರತಿಭಟಿಸುವ ಕಾರ್ಯಕ್ಕೆ ಹೋಗಿರಲಿಲ್ಲ. ಆ ಕುರಿತಂತೆ ಹಿಂದುಗಳಿಗೆ ಅಸಮಾಧಾನವಿತ್ತು ನಿಜ. ತಾವು ಬಹುಸಂಖ್ಯಾತರಾದ ಕಾರಣಕ್ಕೆ ತಮಗೆ ಸೌಲಭ್ಯಗಳು ಸಿಗುತ್ತಿಲ್ಲವೆಂಬ ನೋವಿತ್ತು. ಸಮಾನ ನ್ಯಾಯದಿಂದ ತಾವು ವಂಚಿತರಾಗುತ್ತಿದ್ದೇವೆ ಎಂಬ ಖೇದವಿತ್ತು. ದೇವಸ್ಥಾನವನ್ನು ಸರಕಾರವು ನಿಯಂತ್ರಿಸುವ ವಿಷಯದಲ್ಲಾಗಲಿ ಅಥವಾ ಶಿಕ್ಷಣ ಹಕ್ಕಿನ ವಿಷಯದಲ್ಲಾಗಲಿ ಹಿಂದುಗಳು ಮತ್ತು ಅಲ್ಪಸಂಖ್ಯಾತರ ಮಧ್ಯೆ ಭೇದ ಮಾಡಲಾಗುತ್ತಿತ್ತು. ಶಿಕ್ಷಣದಲ್ಲಿ ಹಿಂದು ಧರ್ಮವನ್ನು ಬೋಧಿಸುವುದಕ್ಕೆ ನಿಷೇಧ ಹೇರಿರುವುದು ಮನಸ್ಸಿಗೆ ಘಾಸಿ ತಂದಿತ್ತು. ಆದರೆ ಸಹಿಷ್ಣುತೆ ಹಿಂದುಗಳ ಸಹಜ ಮನೋಭಾವ. ಹಾಗಾಗಿ ಅವನ್ನೆಲ್ಲ ಸೈರಿಸಿಕೊಂಡು ಬಂದಿದ್ದರು. ಆದರೆ ಯಾವುದಕ್ಕೂ ಒಂದು ಮಿತಿ ಇದೆ ಎಂಬುದು ಹಿಂದುಗಳ ಅರಿವಿನಲ್ಲಿತ್ತು. ಅಂತಹ ಮಿತಿ ದಾಟದಂತೆ ಕೆಂಪು ರೇಖೆಯನ್ನು ಹಿಂದು ಸಮಾಜ ಎಳೆದಿತ್ತು. ಆ ರೇಖೆಯನ್ನೂ ದಾಟಿ ಹಿಂದುಗಳನ್ನೇ ನಿಂದಿಸುವಂತಹ ಅತಿರೇಕಕ್ಕೆಳಸಿದ ಪಕ್ಷಗಳಿಗೆ ಈಗ ಹಿಂದುಗಳು ಪಾಠ ಕಲಿಸಿದ್ದಾರೆ.

ಇತ್ತೀಚಿನ ಚುನಾವಣೆಯಲ್ಲಿ ಕೇರಳ ಮಾತ್ರ ಎಡಪಂಥದಿಂದ ಜಾತ್ಯತೀತ ಪಕ್ಷದೆಡೆಗೆ ಹೊರಳುವ ಸಂಕೇತ ತೋರಿದೆ. ಇಲ್ಲಿಯೂ ಬಿಜೆಪಿಯು 3 ಸ್ಥಾನ ಗೆಲ್ಲುವ ಮೂಲಕ ಹಾಗೂ 6 ಸ್ಥಾನಗಳಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ತನ್ನ ಪ್ರಾಬಲ್ಯ ವೃದ್ಧಿಯನ್ನು ತೋರ್ಪಡಿಸಿದೆ. ಲೋಕಸಭೆಗೆ ಪ್ರವೇಶ, ಪಂಚಾಯತ್ ಮತ್ತು ನಗರಸಭೆಗಳಲ್ಲಿ ಆಡಳಿತ ಹಾಗೂ ಈಗ ಅಸೆಂಬ್ಲಿಗೆ ಪ್ರವೇಶ ಇವುಗಳಿಂದ ಬಿಜೆಪಿ ಮುಂದಿನ ದಿನಗಳಲ್ಲಿ ಕೇರಳ ರಾಜಕೀಯದಲ್ಲಿ ಪ್ರಮುಖ ವಹಿಸಲಿರುವುದರ ಸಂಕೇತ ತೋರಿದೆ. ನೀವು ಸೂಕ್ಷ್ಮವಾಗಿ ಗಮನಿಸಿದರೆ ಕೇರಳದಲ್ಲಿ ಈ ಬಾರಿ ಯಾವುದೇ ರಾಜಕೀಯ ಪಕ್ಷವು ಹಿಂದುಗಳ ಮೇಲೆ ದಾಳಿ ನಡೆಸುವಂತಹ ಧೈರ್ಯ ತೋರಿಲ್ಲ ಎಂಬುದನ್ನು ಕಾಣಬಹುದು. ಕಮ್ಯುನಿಸ್ಟರು ಕೂಡಾ ಶಬರಿಮಲೆ ಪ್ರಕರಣದಲ್ಲಿ ತಮ್ಮ ನಿಲುವನ್ನು ಬದಲಿಸಬೇಕಾಯಿತು. ಯುಡಿಎಫ್ ಕೂಡಾ ಕೋಮುವಾದಿ ಹೇಳಿಕೆಗಳಿಂದ ದೂರ ಉಳಿಯಿತು. ಕೇರಳದ ಹಿಂದುಗಳು ಮತ್ತು ಬಹುಮಂದಿ ಕ್ರೈಸ್ತರು ಸಣ್ಣ ಪುಟ್ಟ ಜಾತಿ ರಾಜಕಾರಣ ಮತ್ತು ಅಲ್ಪಸಂಖ್ಯಾತ ರಾಜಕಾರಣದಿಂದ ಮೇಲೆದ್ದು ಪ್ರಬುದ್ಧತೆ ಪ್ರದರ್ಶಿಸಿದ್ದಾರೆ. ಕೇರಳದ ಭವಿಷ್ಯವು ಉಜ್ವಲವಾಗಿ ಕಂಡು ಬರುತ್ತಿದೆ.

ಕೆಲವು ಅತಿರೇಕದ ಹಿಂದುತ್ವವಾದಿಗಳು, ಜಾತಿವಾದಿ ರಾಜಕಾರಣಿಗಳು, ಹಿಂದು ವಿರೋಧಿಗಳು ಸಮಾಜವನ್ನು ಒಡೆಯಲು ಪ್ರಯತ್ನ ನಡೆಸುತ್ತಿದ್ದಾರಾದರೂ ಹಿಂದುಗಳು ಅದೆಲ್ಲವನ್ನು ಮೀರಿ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಸರಕಾರದ ನೀತಿಗಳನ್ನು ರಚನಾತ್ಮಕವಾಗಿ ಟೀಕಿಸುವುದು ಸರಿ. ಆದರೆ ಅದನ್ನು ನಿಂದನೆಯ ಮಟ್ಟಕ್ಕೆ ಕೊಂಡೊಯ್ಯುವುದು, ದ್ವೇಷ ಸೃಷ್ಟಿಸುವುದು ಸರಿಯಲ್ಲ. ಆ ಮೂಲಕ ಹಿಂದುಗಳ ಮಧ್ಯೆಯೇ ವಿಭಜನೆ ಸೃಷ್ಟಿಸುವುದು ಹಿಂದು ಹಿತವನ್ನು ಕಾಯಲಾರದು. ಅತಿರೇಕದ ಭಾವೋದ್ರೇಕ ಸೃಷ್ಟಿಸುವುದು ಅಭಿಮಾನಿಗಳನ್ನು ಹುಟ್ಟಿಸಬಹುದಾದರೂ ಅದು ಒಂದು ಮಿತಿಗಿಂತ ಮುಂದೆ ಹಿಂದು ಹಿತ ಕಾಯಲಾರದು. ಸಕ್ರಿಯ ಕ್ರಿಯಾಶೀಲತೆ ಬೇಕು ನಿಜ, ಆದರೆ ಹಿಂದುಗಳ ಭಾವನೆಯನ್ನು ಸದಾ ಕಾಲ ಕೆರಳಿಸುವುದೂ ಸಲ್ಲದು. ನಮ್ಮ ಕಾಲು ನೆಲದ ಮೇಲೆಯೇ ಇರುವುದು ಅಗತ್ಯ. ಸೋಷಿಯಲ್ ಮೀಡಿಯಾಗಳಲ್ಲಿ ದೊರಕುವ 'ಮೆಚ್ಚಿಕೆ'ಗಳು ಅಥವಾ ಟ್ರೋಲ್‌ಗಳು ನೆಲಮಟ್ಟದಲ್ಲಿ ಮಾಡುವ ಕಠಿಣ ಪರಿಶ್ರಮದ ಸಮಾನಕ್ಕೆ ಬರಲಾರವು. ಬಿಜೆಪಿ ಈ ಸತ್ಯವನ್ನು ಅರಿತಿರುವುದರಿಂದಲೇ ಮೂರು ಅವಧಿಗಳಿಗೂ ಅಧಿಕಾರದಲ್ಲಿ ಉಳಿದಿರುವುದು.

ನೀವು ಜನರ ಆಶೋತ್ತರಗಳನ್ನು ಈಡೇರಿಸಲು ವಿಫಲರಾದಾಗ ಜನರು ನಿಮ್ಮನ್ನು ಒದ್ದು ಓಡಿಸುತ್ತಾರೆ. ಕಮ್ಯುನಿಸ್ಟರಿಗೆ , ಈಗ ತೃಣಮೂಲ ಕಾಂಗ್ರೆಸಿಗೆ ಇದರ ಅನುಭವವಾಗಿದೆ. ಹಿಮಾಚಲದಲ್ಲಿ ಬಿಜೆಪಿಯೂ ಈ ಪಾಠ ಕಲಿತಿದೆ. ಜನರಿಗೆ ತಮ್ಮ ವೋಟ್‌ನ ಪ್ರಾಮುಖ್ಯತೆ ಈಗ ಅರಿವಾಗಿದೆ.

ಸಹನೆ ಮತ್ತು ಧೈರ್ಯ

ಈ ಚುನಾವಣೆಯು ಭಾರತದ ಎಲ್ಲಾ ರಾಜಕೀಯ ಪಕ್ಷಗಳಿಗೆ ಕಲಿಸಿರುವ ಅತ್ಯಂತ ಮುಖ್ಯವಾದ ಪಾಠವೇನೆಂದರೆ, ದುಡ್ಡಿಗಾಗಿ ಕೆಲಸ ಮಾಡುವ ಕಾರ್ಯಕರ್ತರು ನಿಸ್ವಾರ್ಥ ಕಾರ್ಯಕರ್ತರ ಸಮಾನಕ್ಕೆ ಎಂದಿಗೂ ಬರಲಾರರು ಎಂಬುದು. ಬಿಜೆಪಿ ಈ ಕಹಿ ಪಾಠವನ್ನು ಮೊದಲಿಗೆ 2004ರಲ್ಲಿ ಹಾಗೂ ಬಳಿಕ 2024ರಲ್ಲಿ ಕಂಡುಕೊಂಡಿತು.ಕಮ್ಯುನಿಸ್ಟರು ಮತ್ತು ಶಿವಸೇನೆ ಕೂಡಾ ಈ ಕಹಿಸತ್ಯ ಅರಿತುಕೊಂಡಿವೆ. ಕೇವಲ ದುಡ್ಡಿಗಾಗಿ ದುಡಿಯುವ ಕಾರ್ಯಕರ್ತರು ಪಕ್ಷವನ್ನು, ಸಂಘಟನೆಯನ್ನು ಭ್ರಷ್ಟಗೊಳಿಸುತ್ತಾರಷ್ಟೆ. ಈಗ ಟಿಎಂಸಿ ಕೂಡಾ ಅದೇ ಸಮಸ್ಯೆ ಎದುರಿಸಿತು.

ಕೇವಲ ನಿಸ್ವಾರ್ಥ ಕಾರ್ಯಕರ್ತರು ಮಾತ್ರ ಜನರಿಗೆ ತಿಳುವಳಿಕೆ ನೀಡಬಲ್ಲ ತಾಳ್ಮೆಯನ್ನು ಹೊಂದಿದ್ದಾರೆ. ಅದು ಅತ್ಯಂತ ಕಠಿಣ ಕೆಲಸವಾದರೂ ನಿಷ್ಠೆಯಿಂದ ಮಾಡುತ್ತಾರೆ. ಕೆಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಇದನ್ನು ಸಾಧಿಸಬಹುದೆಂದು ಭಾವಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳು ನೆರವೀಯುತ್ತವೆ ಎಂಬುದು ನಿಜ. ಆದರೆ ಸಮಾಜದಲ್ಲಿ ನೇರ ಸಂಪರ್ಕದಿಂದ ಬೆಳೆದ ಆತ್ಮೀಯತೆಗೆ ಅದು ಸಾಟಿಯಾಗಲಾರದು. ಭಾರತವು ಇನ್ನೂ ಸಂಪೂರ್ಣ ಛಿದ್ರ ಸಮಾಜವಲ್ಲ. ಸಂಬಂಧ ಬೆಳೆಸುವುದೆಂದರೆ ವಿಶ್ವಾಸ ಬೆಳೆಸುವುದೆಂದರ್ಥ. ಆರೆಸ್ಸೆಸ್ ಮತ್ತು ಬಿಜೆಪಿಯ ಕಾರ್ಯಕರ್ತರು ಬಹಳಷ್ಟು ವರ್ಷಗಳಿಂದ ಮಾಡಿಕೊಂಡು ಬಂದುದು ಇದನ್ನೇ. ತಮಿಳ್ನಾಡಿನಲ್ಲಿ ಅವರ ಪ್ರಯತ್ನ ಫಲ ನೀಡದಿರಬಹುದು. ಆದರೆ ಮಾಡುವ ವಿಧಾನ ಇದುವೇ ಸರಿ ಎಂಬುದು ಅವರಿಗೆ ತಿಳಿದಿದೆ. ಜನರಿಗೆ ಕಮ್ಯುನಿಸ್ಟರ ಬಗ್ಗೆ, ಕಾಂಗ್ರೆಸ್, ದ್ರಾವಿಡ ಪಕ್ಷಗಳು ಮತ್ತು ಟಿಎಂಸಿಯ ಕೆಟ್ಟ ಮುಖಗಳ ಬಗ್ಗೆ ತಿಳಿ ಹೇಳಲು ಹಾಗೂ ಅವರಿಂದ ಒದಗಿದ ಕಿರುಕುಳವನ್ನು ತಾಳಿ ಉಳಿಯಲು ಈ ಕಾರ್ಯಕರ್ತರು ತೋರಿದ ಧೈರ್ಯವನ್ನು ನೆನಪಿಸಿಕೊಳ್ಳಬೇಕು. ಹಲವಾರು ಬಿಜೆಪಿ ಬೆಂಬಲಿಗರು 'ಸಂಘವು ಇಷ್ಟು ತಾಳ್ಮೆಯಿಂದ ವರ್ತಿಸುವುದೇಕೆ?' ಎಂದು ನನ್ನಲ್ಲಿ ಆಗಾಗ ಕೇಳುವುದಿದೆ. ಆದರೆ ನಮ್ಮದು ಪ್ರಜಾಪ್ರಭುತ್ವ ದೇಶ. ಸಂಘವು ಇದನ್ನು 'ಲೋಕ್ ಸಂಗ್ರಹ್' ಎಂದು ಕರೆಯುತ್ತದೆ. ಜನರನ್ನು ಸಂಪರ್ಕಿಸಿ ಅವರನ್ನು ತನ್ನೊಂದಿಗೆ ಇರಿಸಿಕೊಳ್ಳುವುದು ಈ ಕಾರ್ಯದ ಅರ್ಥ.

ರಾಜಕೀಯವು ದೀರ್ಘಾವಧಿಯಲ್ಲಿ ಯಶಸ್ಸು ಕಾಣುತ್ತದೆ. ಕೇವಲ ಚುನಾವಣೆ ಗೆಲ್ಲುವುದು, ಐದು ವರ್ಷ ಅಧಿಕಾರ ನಡೆಸುವುದೇ ಗುರಿಯಲ್ಲ. ದೇಶವನ್ನು ಉನ್ನತಿಗೆ ಕೊಂಡೊಯ್ಯಬಲ್ಲ ಅತೀ ದೊಡ್ಡ ಹಾಗೂ ದೀರ್ಘಾವಧಿ ಗುರಿ ಇಟ್ಟುಕೊಳ್ಳಬೇಕು. 2014ರ ನಂತರದ ಭಾರತ ಹಾಗೂ ಅದರ ಹಿಂದಿನ ಭಾರತದ ನಡುವಿನ ಪ್ರಮುಖ ವ್ಯತ್ಯಾಸ ಕಾಣುವುದು ಇಲ್ಲಿಯೇ. ಹಿಂದಿನ ರಾಜಕೀಯ ಮುಖಂಡರೆಲ್ಲ ಮುಂದಿನ ಐದು ವರ್ಷಗಳ ಆಡಳಿತದ ಬಗ್ಗೆಯಷ್ಟೇ ಯೋಚಿಸುತ್ತಿದ್ದರು. ಆದರೆ ಮೋದಿಯವರು ಮುಂದಿನ ತಲೆಮಾರಿನ ಬಗ್ಗೆ ಯೋಚಿಸುತ್ತಿದ್ದಾರೆ. ಸ್ವಾತಂತ್ರ್ಯದ ಅಮೃತಕಾಲ ಎಂಬುದು ಕೇವಲ ಒಂದು ಮಾರ್ಕೆಟಿಂಗ್ ಗಿಮಿಕ್ ಅಲ್ಲ. ಅದು ದೇಶವನ್ನು ಪ್ರಗತಿಗೆ ಕೊಂಡೊಯ್ಯುವ ಕಾಲ.

ಭಾರತವು ಸ್ವಾತಂತ್ರ್ಯದ 25 ವರ್ಷ ಪೂರೈಸಿದಾಗ ನಾನೊಬ್ಬ ಹದಿಹರೆಯದ ಹುಮ್ಮಸ್ಸು ತುಂಬಿದ ವ್ಯಕ್ತಿಯಾಗಿದ್ದೆ. ಇಂದಿರಾಗಾಂಧಿ ಆಗ ಅಧಿಕಾರದ ತುತ್ತತುದಿಯಲ್ಲಿದ್ದರೂ ಸಾಮಾನ್ಯ ಭಾರತೀಯನಿಗೆ ಪ್ರೇರಣೆ ನೀಡಬಲ್ಲ, ಹುರುಪು ತುಂಬಬಲ್ಲ ಯಾವುದೇ ಯೋಜನೆಯನ್ನು ಹಾಕಿಕೊಳ್ಳಲಿಲ್ಲ. ಆದರೀಗ ಮೋದಿಯವರು ತಮ್ಮ ದೂರದೃಷ್ಟಿಯ ಕಾರ್ಯಕ್ರಮಗಳ ಮೂಲಕ ಭಾರತಕ್ಕೆ ಭವ್ಯ ಭವಿಷ್ಯದ ರೂಪುರೇಷೆ ಹಾಕಿಕೊಟ್ಟಿದ್ದಾರೆ. ಇವೆಲ್ಲ ಸಾಧ್ಯವಾಗಲು ಕಾರಣವೇನೆಂದರೆ, ಹಿಂದುಗಳು ಈಗ ಡಾ. ಹೆಡಗೇವಾರ್ 100 ವರ್ಷಗಳ ಹಿಂದೆ ಪ್ರತಿಪಾದಿಸಿದ 'ನಾಗರಿಕ ಹೊಣೆಗಾರಿಕೆ'ಯನ್ನು ನಿಭಾಯಿಸಲು ಕಲಿತುಕೊಂಡಿರುವುದೇ ಆಗಿದೆ.

ಅಪರಿಚಿತ ಬಂದೂಕುಧಾರಿಗೊಂದು ಸಲಾಂ!

▸ ಪೃಥ್ವಿರಾಜ್ ಕುಲಕರ್ಣಿ



ಎಲ್ಲಾ ಕೇಸುಗಳಲ್ಲಿ ಒಂದು ಸಾಮಾನ್ಯ ಸೆಟ್ ಅಪ್. ಬೈಕುಗಳಲ್ಲಿ ಬರುವ ಇಬ್ಬರು ಅಪರಿಚಿತ ಬಂದೂಕುಧಾರಿಗಳು ವ್ಯಕ್ತಿಯೊಬ್ಬನ ಮುಂದೆ ನಿಲ್ಲುತ್ತಿದ್ದಂತೆ ಜೇಬಿನಿಂದ ಬಂದೂಕು ತೆಗೆದು ಹಣೆಗಿಡುತ್ತಾರೆ. ಬೀದಿಯಲ್ಲಿ ಗತಿಯಿಲ್ಲದಂತೆ ಹೆಣವಾಗುವವನು ಸಾಮಾನ್ಯ ಮನುಷ್ಯನಾಗಿರಲ್ಲ, ಆತ ಭಯೋತ್ಪಾದಕ. ಹೊಡೆದವರು ಯಾರೋ ಅಲ್ಲಿಯವರೇ! ಯಾವುದೋ ಹೆಸರಿನಲ್ಲಿ ಪರಿಚಿತರು. ಮೇಲ್ನೋಟಕ್ಕೆ ಅದೇ ದೇಶದಲ್ಲಿರುವ ಜನಸಾಮಾನ್ಯರಂತೇ ಕಾಣಿಸಿಕೊಳ್ಳುತ್ತಾರೆ. ಹೊಡೆಯುತ್ತಿದ್ದಂತೆ ನನ್ನ ಕೆಲಸ ಮುಗಿದೇ ಬಿಡ್ತು ಅನ್ನುವಂತೆ ಪಾರಾಗಿಬಿಡುತ್ತಾರೆ. ಸುತ್ತಮುತ್ತಲಿನ ಜನ ಮರಳಿ ದಾಳಿ ಮಾಡುವಷ್ಟರಲ್ಲಿ ಎಲ್ಲಿರುತ್ತಾರೋ? ಯಾವ ದೇಶಕ್ಕೆ ಹೋಗುತ್ತಾರೋ?. ಇದು ದ್ವೇಷಕ್ಕಾಗಿ ನಡೆದ ಹತ್ಯೆ ಅಲ್ಲ. ಅಥವಾ ರೆಹಮಾನ್ ಡಕಾಯತ್, ಅರ್ಷದ್ ಪಪ್ಪು ನಡುವೆ ನಡೆಯುತ್ತಿದ್ದ ದಂಗೆಯೂ ಅಲ್ಲ. ಹೆಣವಾಗಿ ಬಿದ್ದವನು ಇವರಿಬ್ಬರಿಗಿಂತ ಮೋಸ್ಟ್ ವಾಂಟೆಡ್! ಹೊಡೆದವನು ಗೂಂಡಾ ಅಲ್ಲ. ಜಾತಿ, ಧರ್ಮ, ಸಾಮಾನ್ಯ ಜೀವನ ತ್ಯಜಿಸಿ ಯಾರಿಂದಲೂ ಸಾಧ್ಯವಾಗದ ಕೆಲಸ ಮಾಡುವವ. ಅವನಿಗೆ ಶ್ರೇಯ ಸಿಗಲ್ಲ. ಅವನ ಹೆಸರಲ್ಲಿ ಸಿನಿಮಾಗಳಾಗಲಿ, ಕಾರ್ಯಕ್ರಮಗಳಾಗಲಿ ಆಗಲ್ಲ. ಆತ ಮಾಡುವುದು ದೇಶ ಹಿತದ ಕೆಲಸವಾಗಿದ್ದರೂ, ಆತನ ನೈಜ ಹೆಸರು ಯಾರಿಗೂ ಗೊತ್ತಾಗುವುದೇ ಇಲ್ಲ. ಆತ ಪಡೆಯುವುದು ಕೇವಲ ಅನ್‌ನೌನ್ ಗನ್‌ಮ್ಯಾನ್ ಎಂಬ ಹೆಡ್‌ಲೈನ್. ಆತನ ಹರಸಾಹಸ ಥ್ರಿಲ್ಲಿಂಗ್ ಸಿನಿಮಾ ಇದ್ದಂತೆ! ಆದರೆ ಸಿನಿಮಾ ಮಾಡಿದಷ್ಟು ಸರಳ ಕೆಲಸವೇ ಅಲ್ಲ.

ಹೊಸ ಭಾರತದ ಪರಿಕಲ್ಪನೆಯಲ್ಲಿ ಹಿಂದುಸ್ಥಾನದ ವಿರುದ್ಧ ಸಂಚು ರೂಪಿಸುವವರೆಲ್ಲಾ ತಮ್ಮ ಮನೆಯ ಮುಂದೆ ಬೀದಿ ಹೆಣವಾಗಿ ಬೀಳುತ್ತಿದ್ದಾರೆ. ಇದಕ್ಕೆ ನೂರಾರು ಸಾಕ್ಷಿಗಳಿವೆ. ದಶಕಗಳ ಕಾಲದಿಂದ ಭಾರತದ ವಿರುದ್ಧ ಭಯೋತ್ಪಾದಕ ಸಂಚು ರೂಪಿಸುವುದು, ದಾಳಿ ಮಾಡಿಸುವುದು, ಭಾರತ ವಿರುದ್ಧ ಷಡ್ಯಂತ್ರಗಳನ್ನು ರಚಿಸುವ ಪಾಕ್ ಭಯೋತ್ಪಾದಕನಿಗೆ ಈಗ ಸೇನೆಯ ಭಯಕ್ಕಿಂತಲೂ ಅಪರಿಚಿತ ಬಂದೂಕುಧಾರಿಯದ್ದೇ ಭಯ ಜಾಸ್ತಿ. ಯಾವ ದೇಶದವನೋ? ಎಲ್ಲಿಂದ ಬಂದನೋ? ಇಲ್ಲೆ ನನ್ನ ಜತೆಗೇ ಇರುತ್ತಿದ್ದ, ಆದರೆ ಒಂದು ದಿನ ನನ್ನ ಹಣೆಗೇ ಬಂದೂಕು ಇಟ್ಟುಬಿಟ್ಟ ಎಂಬ ಗೋಳಾಟ. ಈ ನಡುವೆ ದೊಡ್ಡ ಕಾಕತಾಳೀಯವೆಂದರೆ, ಸತ್ತ ಭಯೋತ್ಪಾದಕ ಭಾರತ ವಿರೋಧಿ, ಭಾರತದ ಶತ್ರು. ಅಂಥವರ ಪಟ್ಟಿ ಗಮನಿಸಿದರೆ, ಹತ್ತಾರು ಹೆಸರು ಸಿಗುತ್ತವೆ.

ಅಪರಿಚಿತ ಬಂದೂಕುಧಾರಿಯ ಆರ್ಭಟ ಶುರುವಾಗಿದ್ದೇ 2022ರಲ್ಲಿ. ಪಾಕಿಸ್ತಾನದ ದೊಡ್ಡ ನಗರವೊಂದರಲ್ಲಿ ಕಾರ್ಖಾನೆ ನಡೆಸುತ್ತಿದ್ದ ಜಹೀದ್ ಅಖುನ್ ಎಂಬ ವ್ಯಕ್ತಿ ಅಪರಿಚಿತ ಬಂದೂಕುಧಾರಿ ಹೊಡೆತಕ್ಕೆ ಕರಾಚಿ ನಡು ಬೀದಿಯಲ್ಲೇ ಸತ್ತು ಬಿದ್ದ. ಆತ ಯಾರು ಎಂಬ ತನಿಖೆ ನಡೆಸಿದಾಗ, ಆತನ ಅಸಲು ಹೆಸರು ಜಹೂರ್ ಮಿಸ್ತ್ರಿ! 1999ರಲ್ಲಿ 814 ವಿಮಾನ ಹೈಜ್ಯಾಕ್ ಮಾಡಿದ ಭಯೋತ್ಪಾದಕ ಎಂಬ ಮಾಹಿತಿ ಬಹಿರಂಗವಾಯಿತು. ಮಸೂದ್ ಅಝರ್ ಬಿಡುಗಡೆಗೆ ಬೇಡಿಕೆ ಇಟ್ಟ ಮಹಾ ರಾಕ್ಷಸ. ಪ್ರಯಾಣಿಕ ರೂಪಿನ್ ಕತ್ಯಾಲ್ ಹತ್ಯೆಗೈದವನೆಂಬ ಆತಂಕಕಾರಿ ವಿಷಯವೂ ಗೊತ್ತಾಯಿತು. ಅದೇ ಮಿಸ್ತ್ರಿ ಬೀದಿಯಲ್ಲಿ ಬೀದಿ ಹೆಣವಾಗಿ ಸತ್ತು ಬಿದ್ದ. ಅಂದಿನಿಂದ ಅಪರಿಚಿತ ಬಂದೂಕುಧಾರಿ ಹೆಸರು ವಿಶ್ವದಲ್ಲಿ ಖ್ಯಾತಿ ಪಡೆಯಿತು.

ಕೆಲವು ದಿನಗಳ ನಂತರ ಪಾಕಿಸ್ತಾನದಲ್ಲಿ ಮುಫ್ತಿ ಶಾಹ್ ಮಿರ್ ಎಂಬ ಭಾರತ ವಿರೋಧಿ ಭಯೋತ್ಪಾದಕ ಕೂಡ ಅಪರಿಚಿತ ಬಂದೂಕುಧಾರಿ ಹೊಡೆತಕ್ಕೆ ಬಲಿಯಾದ. ಭಾರತದ ಹಿಟ್‌ಲಿಸ್ಟ್‌ನಲ್ಲಿದ್ದ ಪ್ರಮುಖ ಭಯೋತ್ಪಾದಕ, ಮುಂಬೈ ದಾಳಿಯ ಸಂಚುಕೋರ ಅಬು ಕತಾಲ್/ ಕತಾಲ್ ಶಿಂಧಿ ಕೂಡ ಬಲಿಯಾದ. ಪಠಾಣ್‌ಕೋಟ್ ದಾಳಿಯ ಶಯೀದ್ ಲತೀಫ್, ಮಿಯಾ ಮುಜಾಯಿದ್ದೀನ್ ಕಮಾಂಡರ್ ಖವಾಜಾ ಶಾಹೀದ್, ಜಮ್ಮು–ಕಾಶ್ಮೀರದ ಯುವಕರನ್ನು ಭಾರತ ವಿರುದ್ಧ ಪ್ರಚೋದಿಸುತ್ತಿದ್ದ ಅಕ್ರಮ್ ಖಾನ್ ಕೂಡ ಅನ್‌ನೌನ್ ಗನ್‌ಮ್ಯಾನ್ ಅಬ್ಬರಕ್ಕೆ ಬಲಿಯಾಗಿದ್ದಾರೆ. ಇದರಲ್ಲಿ ಕೆಲವುಗಳನ್ನು ಧುರಂಧರ್ ಸಿನಿಮಾದಲ್ಲಿ ತೋರಿಸಲಾಗಿದೆ. ಆದರೆ, ವಿಚಿತ್ರ ವಿಚಾರವೆಂದರೆ ಇತ್ತೀಚಿನ ದಿನಗಳಲ್ಲೂ ಬಂದೂಕುಧಾರಿಯ ಕೆಲಸ ಹೆಚ್ಚಾಗುತ್ತಿದೆ.

ಲಷ್ಕರ್‌ನ ಕಮಾಂಡರ್ ಅಬ್ದುಲ್ ಗಫಾರ್ ಎಂಬ ಭಯೋತ್ಪಾದಕ ಸಂಘಟನೆಗಳ ದೊಡ್ಡ ನಾಯಕರುಗಳ ಜತೆಗೆ ಕಾಣಿಸಿಕೊಳ್ಳುತ್ತಿದ್ದ. ಭಾರತ ವಿರುದ್ಧ ಮಾತನಾಡುವುದು, ಭಯೋತ್ಪಾದಕ ದಾಳಿಗೆ ಪ್ರಚೋದನೆ



ನೀಡುವುದು ಈತನ ಕೆಲಸವಾಗಿತ್ತು. ಜನವರಿಯಲ್ಲಿ ಈತ ಅಪರಿಚಿತ ಬಂದೂಕುಧಾರಿಯ ಹೊಡೆತಕ್ಕೆ ಈತನೂ ಬಲಿಯಾದ. ಪಹಲ್ಗಾಮ್ ದಾಳಿಯ ಸಂಚುಕೋರರಲ್ಲಿ ಒಬ್ಬನಾದ ಇಮ್ರಾನ್ ದಯಾಲ್, ಲಷ್ಕರ್ ಸಂಘಟನೆಯೊಂದಿಗೆ ಕಾಣಿಸಿಕೊಳ್ಳುತ್ತಿದ್ದ. ಇಮ್ರಾನ್ ಪಾಕಿಸ್ತಾನಿ ಸೇನೆಯಲ್ಲೂ ಲೆಫ್ಟಿನೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ. ದಾಳಿಗೆ ಸೇನೆಯಿಂದ ಬೇಕಾದ ಸಹಾಯ ಪಡೆದುಕೊಳ್ಳುತ್ತಿದ್ದ ಎಂಬ ಆರೋಪಗಳಿದ್ದವು. ಈತನಿಗೂ ಕೂಡ ಬಂದೂಕುಧಾರಿಗಳೇ ಪಾಕಿಸ್ತಾನದ ದೇರಾದಲ್ಲಿ ಹೊಡೆದಿದ್ದಾರೆ.

ಪಾಕಿಸ್ತಾನದ ಬಲೋಚಿಸ್ತಾನದ ಬೀದಿಯಲ್ಲಿ ಹೆಣವಾಗಿ ಬಿದ್ದ ಈತ ಜಮೈತ್ ಉಕೇಮಾ–ಎ ಇಸ್ಲಾಂ ಸದಸ್ಯ. ಭಾರತ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಮತ್ತೊಬ್ಬನ ಹೆಸರು ಮುಫ್ತಿ ಶಾಹ್ ಮಿರ್ ಅಜೀಜ್. ಡ್ರಗ್ ಮಾಫಿಯಾದಲ್ಲಿ ಹೆಸರು ಪಡೆದ ಈತ ಭಾರತದ ಕಮಾಂಡರ್ ಕುಲ್‌ಬುಶನ್ ಜಾದವ್ ಅವರನ್ನು ಅಪಹರಿಸಲು ಐಎಸ್‌ಐಗೆ ಸಹಾಯ ಮಾಡಿದ್ದ. ಮಾರ್ಚ್ 7ರಂದು ಅಪರಿಚಿತ ಬಂದೂಕುಧಾರಿಯಿಂದಲೇ ಹತನಾಗಿದ್ದಾನೆ.

ಭಾರತದ ವಿರುದ್ಧ ಸಂಚು ರೂಪಿಸುವವರಿಗೆ ನಾಯಿ ಪಾಡು. ಈ ಕೃತ್ಯಗಳನ್ನು ಯಾರು ಮಾಡುತ್ತಿದ್ದಾರೆ ಎಂಬುದಕ್ಕೆ ಪುರಾವೆಗಳಿಲ್ಲ. ಧುರಂಧರ್ ಸಿನಿಮಾ ನೋಡಿದವರೆಲ್ಲಾ ನಮ್ಮವರೇ ಯಾರೋ ಹೊಡೆದಿದ್ದಾರೆ ಎಂಬ ವಿಚಾರ ನಂಬುತ್ತಿದ್ದಾರೆ. ಆದರೆ ಪಾಕಿಸ್ತಾನ, ಕೆನಡಾ ಅಂಥ ರಾಷ್ಟ್ರಗಳ ಆರೋಪ ಹೊರತು ಇದಕ್ಕೆ ಯಾವ ಸಾಕ್ಷಿಯೂ ಇಲ್ಲ. ಭಾರತ ಮಾಡುತ್ತಿದೆ ಎಂಬ ಆರೋಪ ಮಾಡುವ ಪಾಕಿಸ್ತಾನ ಅಂತಹ ಭಯೋತ್ಪಾದನೆಗೆ ಪ್ರಚೋದಿಸುವ ರಾಷ್ಟ್ರಗಳು ನಮ್ಮಲ್ಲೊಬ್ಬ ಇದ್ದ, ಅವನು ಸತ್ತ ಎಂಬ ಮಾತುಗಳೂ ಹೇಳಲಾಗಲ್ಲ. ಏಕೆಂದರೆ ಭಯೋತ್ಪಾದಕರು ನಮ್ಮಲ್ಲಿ ಜೀವಂತವಿಲ್ಲ ಎಂಬ ಮಾತುಗಳನ್ನು ಹೇಳುವ ಪಾಕ್ ಭಯೋತ್ಪಾದಕ ಸತ್ತ ಎಂಬ ವಿಚಾರ ಹೇಗೆ ಹೇಳಿಕೊಳ್ಳುತ್ತದೆ?

ಆದರೆ ಯಾರೇ ಮಾಡಿರಲಿ, ಯಾವುದೇ ದೇಶದವರು ಮಾಡಿರಲಿ, ಅದು ವಿಶ್ವದ ಹಿತಕ್ಕಾಗಿ ಮಾಡಿರುವ ಮಹಾ ಕಾರ್ಯ. ಸಾಮಾನ್ಯ ಜನರ ಜೀವ ನುಂಗಲು ಯತ್ನಿಸುವವರಿಗೆ ಹೊಡೆಯುವುದು ದ್ವೇಷಕ್ಕಾಗಿ ಅಲ್ಲ, ಪ್ರತಿಕಾರ ಮತ್ತು ಶಾಂತಿ ಸ್ಥಾಪನೆಗಾಗಿ. ಹೊಡೆದವರು ಯಾವುದೇ ದೇಶದವರಲಾಗಿರಲಿ, ಅವರು ದೇವರಿಗಿಂತ ಕಮ್ಮಿಯಿಲ್ಲ. ಇಲ್ಲಿ ಹೊಡೆದ ಧೈರ್ಯಕ್ಕಿಂತಲೂ ಬಂದೂಕುಧಾರಿಗಳ ತ್ಯಾಗಗಳನ್ನು ಮೆಚ್ಚಬೇಕು.

ಎಐ ಕಾಲದಲ್ಲಿ ನಾವಿದ್ದೇವೆ. ಒಂದು ಪ್ರದೇಶದಲ್ಲಿ ಎಷ್ಟು ಜನರು ಇರುತ್ತಾರೆ, ಯಾವ ದೇಶದವರು ಇರುತ್ತಾರೆ. ಹೇಗೆ ಕಾಣಿಸುತ್ತಾರೆ, ಅವರ ಫಿಂಗರ್ ಪ್ರಿಂಟ್ ಎಲ್ಲವೂ ಸೆಕೆಂಡುಗಳಲ್ಲಿ ಗೊತ್ತಾಗುತ್ತದೆ. ಇಂಥಾ ಸಮಯದಲ್ಲಿ ಬೇರೆ ದೇಶದ ವ್ಯಕ್ತಿ ಬಂದಿರುತ್ತಾನೆ. ಅವರು ಹೆಸರು, ಗುರುತು, ಪರಿಚಯಗಳನ್ನು ಮುಚ್ಚಿಟ್ಟುಕೊಂಡಿರುತ್ತಾರೆಂದರೆ ಅದೇ ಸಾಹಸ. ಮೂಲಗಳನ್ನು ಹುಡುಕುತ್ತಾ ಹೋಗಬೇಕು. ಗೊತ್ತಿಲ್ಲದವರನ್ನು ಬೇಡವಾದರೂ ಪರಿಚಯ ಮಾಡಿಕೊಳ್ಳಬೇಕು. ಸ್ಪೈ ಲೋಕದಲ್ಲಿ ಸಾಮಾನ್ಯರಿಂದ ಇರಲು ಸಾಧ್ಯವೇ ಇಲ್ಲ. ಎಷ್ಟೋ ಬೇಡವಾದ ಕೆಲಸ ಮಾಡಬೇಕಾಗುತ್ತದೆ. ಒಬ್ಬ ಸ್ಪೈ ಜೀವನ ಸಿನಿಮಾದಲ್ಲಿ ತೋರಿಸಿದಂತೆ ಸರಳವಾಗಿರಲ್ಲ. ತನಗೆ ಬೇಕಾದದ್ದನ್ನೆಲ್ಲಾ ಬದಿಗಿಟ್ಟು ರಾಷ್ಟ್ರ ಹಿತಕ್ಕಾಗಿ ಕೆಲಸ ಮಾಡಬೇಕಾಗುತ್ತದೆ. ತನ್ನ ಇಷ್ಟದ ವಿರುದ್ಧ ಇರಬೇಕು. ಬೇಡವಾದ ಪ್ರದೇಶದಲ್ಲಿರಬೇಕು, ಬೇಡವಾದವರ ಜತೆಗೆ ಬದುಕಬೇಕು. ಹೆಸರು, ಜಾತಿ, ಧರ್ಮ ಎಲ್ಲವನ್ನೂ ಬದಲಾಯಿಸಿಕೊಳ್ಳಬೇಕು. ಪಾಕಿಸ್ತಾನದಂತಹ ಭಯೋತ್ಪಾದನಾ ರಾಷ್ಟ್ರಗಳಲ್ಲಿ ಭಯೋತ್ಪಾದಕರಿಗೆ ಅಲ್ಲಿನ ಸರ್ಕಾರ ಮತ್ತು ಸೇನೆ ಬೆಂಬಲಿಸುತ್ತವೆ. ಹೀಗಿರುವಾಗ ಅಂಥವರ ಸನಿಹಕ್ಕೆ ಹೋಗಿ, ಸಮಯ ನೋಡಿಕೊಂಡು ಹೊಡೆಯಬೇಕೆಂದರೆ ಅದು ದೊಡ್ಡ ಸಾಧನೆಯೇ ಸರಿ.

ಇವೆಲ್ಲದಕ್ಕೂ ಮಿಗಿಲಾಗಿ ಜೀವವೇ ಪಣಕ್ಕಿಡಬೇಕು. ಒಂದು ದೇಶದ ವಿರುದ್ಧ ಅದೇ ದೇಶದಲ್ಲಿ ಯುದ್ಧ ಮಾಡುವುದೆಂದರೆ ಜೀವನ ಪಣಕ್ಕಿಟ್ಟಂತೆ. ಗೂಡಾಚಾರಿಕೆಗೆ ಹೋಗುವವರಿಗೆ ಮರಳಿ ಬರುತ್ತೇನೆ ಎಂಬ ಆಸೆ ಇರಬಾರದು ಎಂಬ ಮಾತುಗಳಿವೆ. ಕೊಟ್ಟ ಕೆಲಸ ಮುಗಿಸಿ ಮಾಹಿತಿಗಳನ್ನು ತೆಗೆದುಕೊಂಡು ಮರಳಿ ದೇಶಕ್ಕೆ ಬರುವುದೆಂದರೆ ಅದು ಪವಾಡ. ಇಷ್ಟೆಲ್ಲಾ ಮಾಡುವ ಒಬ್ಬ ಗೂಡಾಚಾರನಿಗೆ ಶ್ರೇಯ ಸಿಕ್ಕಿತೆ? ಹೆಗ್ಗಳಿಕೆ ಸಿಕ್ಕಿತೆ? ಅಥವಾ ಯಾರು ಹೊಡೆದರೆಂಬ ಮಾಹಿತಿ ಜನರಿಗೆ ತಲುಪಿತೇ? ಇಲ್ಲ! ಸ್ಪೈಗಳು ಮಾಡುವ ಸಾಧನೆಗೆ ಸಿಗುವುದು, ಅಪರಿಚಿತ ಬಂದೂಕುಧಾರಿ ಎಂಬ ಹೆಡ್‌ಲೈನ್ ಮಾತ್ರ. ಅವರ ಹೆಸರಲ್ಲಿ ಸರ್ಕಲ್ಲುಗಳಾಗಲ್ಲ. ಅವರಿಗೆ ದೊಡ್ಡ ದೊಡ್ಡ ಹೆಸರು, ಪೋಸ್ಟ್ ಅಥವಾ ಫೇಮ್ ಕೂಡ ಸಿಗಲ್ಲ. ಹೋಗಲಿ, ನಾನೇ ಸಾಧನೆ ಮಾಡಿದ್ದು ಎಂದು ಹೇಳಿಕೊಳ್ಳಲೂ ಆಗದ ಪರಿಸ್ಥಿತಿ. ಜೀವ ಪಣಕ್ಕಿಟ್ಟು ದೇಶದ ರಕ್ಷಣೆಗಾಗಿ ಹೋಗುವ ಗೂಡಾಚಾರನಿಗೆ ಮನಸಲ್ಲಿರುವುದು ಒಂದೇ. ದೇಶಕ್ಕಾಗಿ ಏನಾದರೂ ಮಾಡಬೇಕೆಂಬ ಆಸೆ. ಅವರ ಬಲಿದಾನಕ್ಕೆ, ಧೈರ್ಯಕ್ಕೆ, ತ್ಯಾಗಕ್ಕೆ ಮತ್ತು ದೇಶಭಕ್ತಿಗೊಂದು ಸಲಾಂ!

ಸಿದ್ಧಿ ಪಡೆಯದ ವಿದ್ಯೆ ವ್ಯರ್ಥ

ಅಗುಣಸ್ಯ ಹತಂ ರೂಪಂ ಅಶೀಲಸ್ಯ ಹತಂ ಕುಲಮ್।
ಅಸಿದ್ಧೇಽಸ್ತು ಹತಾ ವಿದ್ಯಾ ಅಭೋಗಸ್ಯ ಹತಂ ಧನಮ್ ॥ – ಸುಭಾಷಿತಾವಳಿ

ಸದ್ಗುಣಗಳ ಕೊರತೆಯು ರೂಪವನ್ನು ಕೆಡಿಸುತ್ತದೆ. ಸೌಶೀಲ್ಯವು ಇಲ್ಲದಲ್ಲಿ ಕುಲವು ಕೀಳಾಗಿ ಎಣಿಸಲ್ಪಡುತ್ತದೆ; ಸಿದ್ಧಿಯನ್ನು ಹೊಂದದ ವಿದ್ಯೆ ವ್ಯರ್ಥ – ಎಂಬುದು ಶ್ಲೋಕಾರ್ಥ.

ವ್ಯಕ್ತಿಯ ಜೀವನ ಚೆನ್ನಾಗಿರಬೇಕು ಎಂಬುದು ಎಲ್ಲರ ಸಹಜವಾದ ಆಶಯ. ಚೆನ್ನಾಗಿರುವುದು ಎಂದರೇನು? ಎಂಬ ಪ್ರಶ್ನೆಗೆ ಈ ರೀತಿ ಹೇಳಬಹುದು. ನಡೆ, ನುಡಿ ಚೆನ್ನಾಗಿರಬೇಕು. ಪ್ರಾಮಾಣಿಕನೂ, ಪರಿಶ್ರಮಿಯೂ ಆಗಿರಬೇಕು ಇತ್ಯಾದಿ. ಒಟ್ಟಿನಲ್ಲಿ ಲೋಕ ಮೆಚ್ಚುವ ರೀತಿಯಲ್ಲಿ ವ್ಯವಹಾರವಿರಬೇಕು.



ಇವುಗಳೋ ಭೂಷಣಕ್ಕೆ ಭೂಷಣ. ಉಳಿದವುಗಳು ಎಷ್ಟೇ ಇದ್ದರೂ ಈ ಎಲ್ಲ ಸಭ್ಯತೆಗಳ ಅಂಶಗಳು ಇಲ್ಲವಾದರೆ ಚೆನ್ನಾದ ಬದುಕು ಅಸಾಧ್ಯ.

ಎಷ್ಟೇ ಚೆನ್ನಾಗಿರಲಿ, ಆಕರ್ಷಕ ರೂಪರಾಶಿಯಿರಲಿ, ಸದ್ಗುಣವಿಲ್ಲದಿದ್ದರೆ ಪ್ರಯೋಜನಕ್ಕೆ ಬಾರದು. 'ಗುಣಾಃ ಪೂಜಾಸ್ಥಾನಮ್' ಎಂದರೆ ಸಜ್ಜನ ಸಮಾಜದಲ್ಲಿ ಗುಣಕ್ಕೆ ಪೂಜ್ಯತೆಯೇ ವಿನಾ ರೂಪಕ್ಕಲ್ಲ. ಸದ್ಗುಣಗಳು ಇಲ್ಲದಿದ್ದರೆ ರೂಪವಂತನಲ್ಲ; ರೂಪಸಿಯೂ ಅಲ್ಲ. ಸದ್ಗುಣ, ಸನ್ನಡತೆಗಳು ವಿಶೇಷ ರೂಪವನ್ನು ತಂದುಕೊಡುತ್ತವೆ. ಸೌಂದರ್ಯವನ್ನು ಮೆರೆಸುತ್ತವೆ. ಗುಣವಿಲ್ಲದಿದ್ದರೆ ರೂಪ ಕೆಡುತ್ತದೆ. ನೋಡುವುದಕ್ಕೆ ಚೆನ್ನಾಗಿರಬಹುದು. ಆದರೆ ಜನರು ಬಯಸುವುದಿಲ್ಲ; ಸಮೀಪಿಸುವುದಿಲ್ಲ. ಯಾವಾಗಲೂ ರೂಪಕ್ಕೆ ಸದ್ಗುಣಗಳು ಪೋಷಕವಾಗಿ ನಿಲ್ಲುತ್ತವೆ. ಅಂತಹ ಜೀವನಕ್ಕೆ ಬಂಗಾರದ ಕಮಲ ಪರಿಮಳಿಸಿದಂತಾಗುತ್ತದೆ.

'ಶೀಲಂ ಸರ್ವತ್ರ ಭೂಷಣಮ್' ಎಂಬ ಸೂಕ್ತಿಯೇ ಶೀಲದ ಮಹತ್ವವನ್ನು ಹೇಳುತ್ತದೆ. ಶೀಲವನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ. ಶೀಲಾದಿಗಳಿಲ್ಲದ ವ್ಯಕ್ತಿಯನ್ನೂ, ಕುಟುಂಬವನ್ನೂ ಜನರು ತಿರಸ್ಕಾರದಿಂದ ನೋಡುತ್ತಾರೆ. ಕೀಳಾಗಿ ಕಾಣುತ್ತಾರೆ. ಸೌಶೀಲ್ಯವೆಂಬುದು ಸರ್ವದಾ, ಸರ್ವರಿಗೂ ಭೂಷಣಪ್ರಾಯವಾದದ್ದು, ಶೀಲವಿಲ್ಲದಿದ್ದ ಕುಟುಂಬವನ್ನಾಗಲೀ ವ್ಯಕ್ತಿಯನ್ನಾಗಲಿ, ಜನರನ್ನಾಗಲಿ ಸಮಾಜವೆಂದೂ ಮನ್ನಿಸಲಾರದು.

ವಿದ್ಯೆ ಅಪೂರ್ವ ಸಂಪತ್ತು. ವಿಶಿಷ್ಟವಾದ ಭೂಷಣ, ಎಲ್ಲರೂ ಹೊಂದಲೇಬೇಕಾದ ನಿತ್ಯೋಪಯೋಗಿ ಆಭರಣ. ಮನುಷ್ಯನಾಗಿ ಹುಟ್ಟಿದ ಮೇಲೆ ವಿದ್ಯೆಯನ್ನು ಕಲಿಯಲೇಬೇಕು. ಕೇವಲ ಕಲಿಕೆಯಿಂದ ಪ್ರಯೋಜನವಿಲ್ಲ. ಸಿದ್ಧಿಯನ್ನು ಪಡೆದಿರಬೇಕು. ತುಂಬಾ ಓದಿಕೊಂಡಿದ್ದಾನೆ, ಸಾಕಷ್ಟು ಡಿಗ್ರಿಗಳನ್ನು ಸಂಪಾದಿಸಿದ್ದಾನೆ ಎಂಬುದು ಸತ್ಯವಾದರೂ ಕಾಲಕ್ಕೆ ಒದಗಿ ಬರದಿದ್ದರೆ ಅದು ವಿದ್ಯೆಯಲ್ಲ. ನಾವು ಕಲಿತ ವಿದ್ಯೆ ನಮ್ಮ ಜೀವನ ಪಯಣದಲ್ಲಿ ಕೈ ಹಿಡಿದು ನಡೆಸುವಂತಿರಬೇಕು. ನನ್ನಲ್ಲಿರುವ ವಿದ್ಯೆಯಿಂದ ಎಲ್ಲಿಯೂ ಬದುಕಬಲ್ಲೆ; ಚೆನ್ನಾಗಿ ಬದುಕಬಲ್ಲೆ ಎಂಬ ಆತ್ಮವಿಶ್ವಾಸ ಬೆಳೆಸಬೇಕು.

ಕಲಿತ ವಿದ್ಯೆ ಹಾಗೂ ಗಳಿಸಿದ ಹಣಗಳೆರಡೂ ನಿತ್ಯ ಬದುಕಿನಲ್ಲಿ ಬಳಕೆಯಾಗಬೇಕು. ಜೀವನ ನಿರ್ವಹಣೆಗೆ ವಿಶ್ವಾಸಪೂರ್ಣ ಭದ್ರ ಬುನಾದಿಯನ್ನು ಹಾಕಿಕೊಡಬೇಕು. ಗಳಿಸಿದ ಸಂಪತ್ತನ್ನು ಭೋಗಿಸಬೇಕು. ಬಳಸಿಕೊಳ್ಳಬೇಕು. ಗಳಿಸಿದ ಸಂಪತ್ತಿನಿಂದ ಸುಖವನ್ನನುಭವಿಸಬೇಕು. ಗಳಿಕೆಯ ಸಾರ್ಥಕತೆ ಇರುವುದು ಇಲ್ಲಿಯೇ.

ಪತ್ರ ಮಿತ್ರ

ಇಮ್ರಾನ್ ಪದಚ್ಯುತಿಯಲ್ಲಿ ಅಮೆರಿಕದ ಪಾತ್ರ

ಪಾಕಿಸ್ತಾನದ ಮಾಜಿ ಮುಖ್ಯಮಂತ್ರಿ ಇಮ್ರಾನ್ ಖಾನ್‌ರವರು ತಮ್ಮ ಪದಚ್ಯುತಿಯಲ್ಲಿ ಅಮೆರಿಕದ ಕೈವಾಡವಿದೆಯೆಂದು ಆರೋಪಿಸುತ್ತಾ ಬಂದಿದ್ದರು. ಅವರ ಆರೋಪವನ್ನು ಬಹುತೇಕರು ಅಂದು ನಂಬಿರಲಿಲ್ಲ. ಆದರೆ ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಮತ್ತು ಅಮೆರಿಕದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಮಜೀದ್ ಖಾನ್ ನಡುವೆ ಇಮ್ರಾನ್ ಪದಚ್ಯುತಿಯ ಕೆಲವೇ ದಿನಗಳ ಮೊದಲು ನಡೆದಿದ್ದ ಮಾತುಕತೆಯ ದಾಖಲೆಗಳು ಈಗ ಬಹಿರಂಗಗೊಳ್ಳುವುದರೊಂದಿಗೆ ಇಮ್ರಾನ್ ಖಾನ್ ಪದಚ್ಯುತಿಯಲ್ಲಿ ನಿಜಕ್ಕೂ ಅಮೆರಿಕದ ಕೈವಾಡ ಇರುವುದು ಶ್ರುತಪಟ್ಟಿದೆ. ಇಮ್ರಾನ್ ಖಾನ್ ಸರಕಾರವನ್ನು ವಜಾಗೊಳಿಸಬೇಕು ಎಂಬುದಾಗಿ ಅಮೆರಿಕವು ಅಂದು ಪಾಕಿಸ್ತಾನಿ ಸೇನೆಯ ಮೇಲೆ ಒತ್ತಡ ಹೇರಿತ್ತೆಂಬುದು ಈ ದಾಖಲೆಯಿಂದ ಸ್ಪಷ್ಟವಾಗಿದೆ.

ಇಮ್ರಾನ್ ಖಾನ್ ರಶ್ಯಾಕ್ಕೆ ಭೇಟಿ ನೀಡಿದ್ದು, ಉಕ್ರೇನ್ ಸಮರದಲ್ಲಿ ತಟಸ್ಥ ನೀತಿ ಅನುಸರಿಸಿದ್ದು ಅಮೆರಿಕಕ್ಕೆ ಅಸಮಾಧಾನ ಹುಟ್ಟಿಸಿತ್ತು. ಅದಕ್ಕಾಗಿಯೇ ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಇಮ್ರಾನ್‌ರನ್ನು ಕೆಳಗಿಳಿಸಿ, ಸೇನೆಯೇ ಅಧಿಕಾರ ಸೂತ್ರ ಹಿಡಿಯುವಂತೆ ಅಮೆರಿಕ ತಂತ್ರ ಹೆಣೆದಿತ್ತು. ಪ್ರಜಾತಂತ್ರದ ರಕ್ಷಕನೆಂದು ಹೇಳಿಕೊಳ್ಳುವ ಅಮೆರಿಕದ ದ್ವಂದ್ವ ನಿಲುವು ಇದರಿಂದ ಜಗಜ್ಜಾಹೀರಾಗಿದೆ.

ಅಮೆರಿಕವು ಪ್ರಜಾತಾಂತ್ರಿಕ ಸರಕಾರವನ್ನು ಉರುಳಿಸಿರುವುದು ಇದೇ ಮೊದಲಲ್ಲ. ಬಾಂಗ್ಲಾ ಸರಕಾರದ ಪತನದಲ್ಲೂ ಅಮೆರಿಕದ ಕೈವಾಡವಿತ್ತು. ಭಾರತದಲ್ಲಿ ಕೂಡಾ ಆಡಳಿತ ಬದಲಾವಣೆಗೆ ಅಮೆರಿಕ ಯತ್ನಿಸಿತ್ತು. ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿರುವ ಮೋದಿ ಸರಕಾರವು ಅಮೆರಿಕದ ಪಾಲಿಗೆ ಆರಂಭದಿಂದಲೂ ಅಪಥ್ಯವೇ ಆಗಿದೆ. ಹಾಗಾಗಿ ಮೋದಿ ಸರಕಾರವನ್ನು ಉರುಳಿಸಲು ಕೂಡಾ ಅಮೆರಿಕದಿಂದ ಪ್ರಯತ್ನಗಳು ನಡೆದಿವೆ. ಆದರೆ ಮೋದಿ ಸರಕಾರ ಇಂತಹ ತಂತ್ರ ಸಫಲವಾಗಲು ಬಿಡಲಿಲ್ಲ ಅಷ್ಟೆ. ಇನ್ನು ಮುಂದಕ್ಕೂ ಇಂತಹ ಪ್ರಯತ್ನ ನಡೆಯಲಾರದು ಎನ್ನುವಂತಿಲ್ಲ. ಆದ್ದರಿಂದ ಭಾರತದ ಜನತೆ ಕೂಡಾ ಈ ನಿಟ್ಟಿನಲ್ಲಿ ಎಚ್ಚರದಿಂದಿರಬೇಕಾಗಿದೆ.

–ಚಿದಾನಂದ ರಾವ್, ಕುಂದಾಪುರ

ಧೀರಃ ತತ್ರ ನ ಮುಹ್ಯತಿ

'ವಿಕಾರ ಹೇತೌಸತಿ ವಿಕ್ರಿಯಂತೇ ಯೇಷಾಂನ ಚೇತಾಂಸಿ ತ ಏವ ಧೀರಾಃ' (ಚಿತ್ತಚಾಂಚಲ್ಯಕ್ಕೆ ಕಾರಣಗಳಿದ್ದರೂ ಯಾರ ಮನಸ್ಸು ವಿಚಲಿತವಾಗುವುದಿಲ್ಲವೋ ಅವರು ಧೀರರೇ ಸರಿ.) ಕಾಳಿದಾಸನ ಈ ಮಾತು ಮೋದಿಯವರಿಗೆ ಸೊಗಸಾಗಿ ಅನ್ವಯಿಸುತ್ತದೆ. ಇತ್ತೀಚೆಗಿನ ವಿದ್ಯಮಾನಗಳನ್ನು ಪರಿಗಣಿಸಿದರೆ ಅವರು ದೇಶವನ್ನು ನಿಭಾಯಿಸಿದ ರೀತಿ ಅಚ್ಚರಿಯನ್ನುಂಟು ಮಾಡುತ್ತದೆ. ಸ್ವಾರ್ಥಿಗಳಾದ ಪ್ರತಿಪಕ್ಷಗಳು, ದುರ್ಬುದ್ಧಿ ಜೀವಿಗಳು, ಪೀತಪತ್ರಕರ್ತರು ದಿನನಿತ್ಯವೆಂಬಂತೆ ಒಂದಲ್ಲ ಒಂದು ಕಾರಣಕ್ಕೆ ಮೋದಿಯವರನ್ನು ನಿಂದಿಸುತ್ತಲೇ ಇದ್ದಾರೆ. ಕಾಂಗ್ರೆಸ್ಸಿನ ಬಹುಮಂದಿ ಇಂಗು ತಿಂದವರಂತೆ ವರ್ತಿಸುತ್ತಿರುವುದು ಹೊಸತೇನಲ್ಲ. ಇದೀಗ ನಾರ್ವೆಯ ಅಪ್ರಬುದ್ಧ ಪತ್ರಕರ್ತೆಯ ಬಾಲ ಹಿಡಿದು ನೇತಾಡಲು ಹೊರಟ ಇವರ ಪರಿಸ್ಥಿತಿ ನೀಚ ಮನಸ್ಸಿನ ಪ್ರತೀಕವೇ ಸರಿ.

ಮೋದಿಯಂತಹ ಸ್ಥಿತಪ್ರಜ್ಞ, ಈ ದೇಶದ ಪ್ರಧಾನಿಯಾಗಿರುವುದು ನಮ್ಮೆಲ್ಲರ ಸೌಭಾಗ್ಯ.. ಶಿಕ್ಷಣ ಕ್ಷೇತ್ರವನ್ನು ಗೊಂದಲದಲ್ಲಿ ಮುಳುಗಿಸಿದ ಶಿಕ್ಷಣ ಸಚಿವರು, ಆಡಳಿತವನ್ನು ಹದಗೆಡಿಸಿದ ಮಂತ್ರಿಮಾಗಧರು ಮತದಾರ ಪ್ರಭುಗಳನ್ನು ದಿಕ್ಕು ತಪ್ಪಿಸುವಲ್ಲಿ ಯಶಸ್ವಿಗಳಾಗಿದ್ದಾರೆ. ವಿಶ್ವಯುದ್ಧದ ಪರಿಣಾಮವಾಗಿ ನಮ್ಮ ದೇಶದ ವಿವಿಧ ಕ್ಷೇತ್ರಗಳಿಗೆ ಹಾನಿಯಾಗಿದೆ. ದೇಶದ ಹಿತಚಿಂತನೆಯ ದೃಷ್ಟಿಯನ್ನಿಟ್ಟುಕೊಂಡು ಮೋದಿಯವರು ನಮಗೆ ಉಪದೇಶಿಸಿದ ಮಾತು ಸ್ವಾಗತಾರ್ಹ. 'ಧೀರಃ ತತ್ರನ ಮುಹ್ಯತಿ' ಎಂಬುದಕ್ಕೆ ಮೋದಿಯವರೇ ಸಾಕ್ಷಿ.

–ಎಂ. ಸುಬ್ರಹಮಣ್ಯ ಭಟ್, ಮುಡಿಪು

ಜನಸಂಖ್ಯೆ ಹೆಚ್ಚಳಕ್ಕೆ ಪ್ರೋತ್ಸಾಹ

ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರಪ್ರದೇಶ ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿರುವುದು ಅಚ್ಚರಿಕರ. ರಾಜ್ಯದಲ್ಲಿ ಮೂರನೇ ಮಗುವಿಗೆ ರೂ. 30,000 ಹಾಗೂ ನಾಲ್ಕನೇ ಮಗುವಿಗೆ 40,000 ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಘೋಷಿಸಿರುವುದು ವಿಪರ್ಯಾಸವಾಗಿದೆ.

ಸರ್ಕಾರ ಕೊಡುವ ಮೂವತ್ತು ಹಾಗೂ ನಲವತ್ತು ಸಾವಿರದ ಆಸೆಗೆ ಮಕ್ಕಳನ್ನು ಹೇರುವವರು ಬಡವರೇ ಹೊರತು ಶ್ರೀಮಂತರಲ್ಲ. ಸರ್ಕಾರ ನೀಡಿದ ದುಡ್ಡು ಖಾಲಿಯಾದ ಮೇಲೆ ಈ ಮಕ್ಕಳ ಲಾಲನೆ ಪಾಲನೆ ಹಾಗೂ ಪೋಷಣೆ ಮಾಡುವವರು ಯಾರು? ಅವರನ್ನು ಸಾಕಲಿಕ್ಕೆ ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಹಣ ಬೇಡವಾ? ಮೊದಲೇ ಬಡತನದ ಬೇಗೆಯಿಂದ ಬಳಲುತ್ತಿರುವ ಕುಟುಂಬಕ್ಕೆ ಹಾಗೂ ಮಕ್ಕಳ ಭವಿಷ್ಯಕ್ಕೆ ಆಸರೆಯಾಗುವವರು ಯಾರು? ಮಕ್ಕಳನ್ನು ಹೆತ್ತು ಜನಸಂಖ್ಯೆ ಹೆಚ್ಚು ಮಾಡಿದರಷ್ಟೇ ಸಾಲದು. ಹೀಗಿರುವ ಒಂದೆರಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಒಳ್ಳೆಯ ಸಂಸ್ಕಾರವನ್ನು ಕಲಿಸಿ, ದೇಶಪ್ರೇಮ ಬೆಳೆಸಿದರೆ ಅದೇ ನಾವು ನಮ್ಮ ದೇಶಕ್ಕೆ ಮಾಡುವ ನಿಜವಾದ ದೇಶಸೇವೆ ಅಲ್ಲವೇ? ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರ ಮಾತನ್ನು ಆಂಧ್ರದ ಜನತೆ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಅಷ್ಟೇ ಸಾಕು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಪರಿಹಾರ ಕೊಡಿ

ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ ಪರೀಕ್ಷೆಯೇ ರದ್ದಾಗಿರುವುದು ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಘಾತ ಉಂಟು ಮಾಡಿದೆ. ಇದೀಗ ನೀಟ್ ಪರೀಕ್ಷೆಯನ್ನು ಮತ್ತೆ ಜೂನ್ 21ಕ್ಕೆ ನಡೆಸಲಾಗುತ್ತಿದೆ. ಮತ್ತೊಮ್ಮೆ ಅದೇ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಪುನಃ ಹಣ ಖರ್ಚು ಮಾಡಬೇಕಾಗಿ ಬಂದಿದೆ. ಆದ್ದರಿಂದ, ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೂ ಪರೀಕ್ಷಾ ಕೇಂದ್ರಕ್ಕೆ ಹೋಗಿ ಬರಲು ಕನಿಷ್ಠ ರೂ. 500 ರಂತೆ ನಗದು ನೀಡಿದರೆ ಅಲ್ಪ ಮಟ್ಟಿಗಾದರೂ ನೆರವಿಗೆ ಬರಬಹುದು.

–ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

ಪಾಕಿಸ್ತಾನಕ್ಕೆ ವಿಶ್ವಸಂಸ್ಥೆಯಲ್ಲಿ ಭಾರತ ಛೀಮಾರಿ

ತನ್ನದೇ ನಾಗರಿಕರ ಮೇಲೆ ಪಾಕ್ ದಾಳಿ

ವಿಶ್ವಸಂಸ್ಥೆ : ಪಾಕ್ ಮಿಲಿಟರಿ ಪಡೆಗಳ ಗಡಿಯಾಚಿನ ಹಿಂಸಾಚಾರಗಳಿಗೆ ಅಫಘಾನಿಸ್ತಾನದ ಸಹಸ್ರಾರು ಅಮಾಯಕ ನಾಗರಿಕರು ಬಲಿಯಾಗುತ್ತಿರುವುದು ಮತ್ತು ಗಾಯಗೊಳ್ಳುತ್ತಿರುವ ಅನ್ಯಾಯವನ್ನು ವಿಶ್ವಸಂಸ್ಥೆಯಲ್ಲಿ ನೇರಾನೇರ ಉಲ್ಲೇಖಿಸಿರುವ ಭಾರತ, ತನ್ನದೇ ಜನರ ಮೇಲೆ ಬಾಂಬ್ ದಾಳಿ ನಡೆಸಿ, ವ್ಯವಸ್ಥಿತವಾಗಿ ನರಮೇಧ ನಡೆಸುವ ರಾಷ್ಟ್ರವೊಂದು ಈ ತೆರ ಹೀನಾಯವಾಗಿ ಆಕ್ರಮಣ ನಡೆಸುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ ಎಂದು ಪಾಕ್‌ಗೆ ಛೀಮಾರಿ ಹಾಕಿದೆ.



ಮೇ ತಿಂಗಳಲ್ಲಿ ಚೀನಾ ಭದ್ರತಾ ಮಂಡಳಿ ಅಧ್ಯಕ್ಷತೆ ವಹಿಸುವ ವಿಚಾರವಾಗಿ ಚರ್ಚೆ ಸಂದರ್ಭ, ವಿಶ್ವಸಂಸ್ಥೆಗೆ ಪಾಕ್ ರಾಯಭಾರಿ ಆಸಿಮ್ ಇಫ್ತಿಕಾರ್ ಅಹಮದ್ ಜಮ್ಮು ಕಾಶ್ಮೀರ ವಿಚಾರವೆತ್ತಿದ್ದರು. ತಕ್ಷಣ ಪಾಕಿಸ್ತಾನವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡ ,ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿ-ರಾಯಭಾರಿ ಹರೀಶ್ ಪರ್ವತನೇಣಿ, ಸುದೀರ್ಘಕಾಲದಿಂದ ನರಮೇಧ ಕೃತ್ಯಗಳ ಪಾತಕಿ ದಾಖಲೆ ಹೊಂದಿರುವುದು ಪಾಕಿಸ್ತಾನ ಎಂದು ವಸ್ತುನಿಷ್ಠ ವಿಚಾರವನ್ನು ಬಹಿರಂಗಪಡಿಸಿದರು.

ಅಮಾನುಷ ನರಮೇಧಗಳಿಗೆ ಕುಖ್ಯಾತ ಮತ್ತು ಇಂತಹ ಹೀನಾಯ ಕೃತ್ಯಗಳ ಸುದೀರ್ಘ ದಾಖಲೆ ಹೊಂದಿರುವ ಪಾಕಿಸ್ಥಾನ , ಭಾರತಕ್ಕೆ ತೀರಾ ಆಂತರಿಕವಾಗಿರುವ ವಿಚಾರಗಳಲ್ಲಿ ತಲೆಹಾಕುವುದು ತೀರಾ ವಿಪರ್ಯಾಸ ಎಂದು ಹರೀಶ್ ಟೀಕಿಸಿದರು. ಸಶಸ್ತ್ರ ಸಂಘರ್ಷದಲ್ಲಿ ನಾಗರಿಕರ ರಕ್ಷಣೆ ಕುರಿತ ಭದ್ರತಾ ಮಂಡಳಿಯ ವಾರ್ಷಿಕ ಮುಕ್ತ ಚರ್ಚೆಯಲ್ಲಿ ಹರೀಶ್ ಪಾಲ್ಗೊಂಡು ಪಾಕಿಸ್ತಾನಕ್ಕೆ ಈ ರೀತಿ ಛೀಮಾರಿ ಹಾಕಿದರು.

ಮೂರು ತಿಂಗಳಲ್ಲಿ 750ನಾಗರಿಕರು ಬಲಿ

ಪಾಕ್ ಮಿಲಿಟರಿ ಪಡೆಗಳ ಗಡಿಯಾಚೆಯ ಸಶಸ್ತ್ರ ಹಿಂಸಾಚಾರಗಳು ಮತ್ತು ಬಹುತೇಕ ವೈಮಾನಿಕ ದಾಳಿಯಿಂದ 2026ರ ಮೊದಲ ಮೂರು ತಿಂಗಳಲ್ಲಿ ಅಫಘಾನಿಸ್ಥಾನದಲ್ಲಿ 750ನಾಗರಿಕರು ಅನ್ಯಾಯವಾಗಿ ಸಾವಿಗೀಡಾಗಿದ್ದಾರೆಂಬ, ಅಫಘಾನಿಸ್ಥಾನದಲ್ಲಿನ ವಿಶ್ವಸಂಸ್ಥೆಯ ನೆರವು ಸಂಸ್ಥೆಯ ಅಂದಾಜುಗಳನ್ನು ಹರೀಶ್ ಇದೇ ಸಂದರ್ಭ ಉಲ್ಲೇಖಿಸಿದರು. ಅಫಘಾನಿಸ್ಥಾನದಲ್ಲಿ ಸಂಭವಿಸಿರುವ ನಾಗರಿಕರ ಸಾವುನೋವುಗಳ 95ರಲ್ಲಿ 94 ಪ್ರಕರಣಗಳು ಪಾಕ್ ಭದ್ರತಾ ಪಡೆಗಳ ದಾಳಿಯಿಂದ ಸಂಭವಿಸಿವೆ ಎಂದು ವಿಶ್ವಸಂಸ್ಥೆಯ ನೆರವು ಮಿಷನ್ ತಿಳಿಸಿತ್ತು. ಮಾರ್ಚ್‌ನಲ್ಲಿ ಪವಿತ್ರ ರಂಜಾನ್ ತಿಂಗಳಲ್ಲಿ ಕಾಬೂಲ್‌ನ ಒಮಿಡ್ ಎಡಿಕ್ಷನ್ ಟ್ರೀಟ್ ಮೆಂಟ್ ಆಸ್ಪತ್ರೆ ಮೇಲೆ ಪಾಕ್ ನಡೆಸಿದ ಭೀಕರ ವಾಯುದಾಳಿಯನ್ನು ಜಗತ್ತು ಮರೆತಿಲ್ಲ. ಪಾಕ್ ಮಿಲಿಟರಿ ಆಸ್ಪತ್ರೆ ಮೇಲೆ ನಡೆಸಿದ ಅತ್ಯಂತ ಹೇಡಿತನದ ಮತ್ತು ಆಘಾತಕಾರಿ ದಾಳಿಯಿಂದ 269 ನಾಗರಿಕರು ಮೃತಪಟ್ಟಿದ್ದು, 122 ಮಂದಿ ಗಾಯಗೊಂಡಿದ್ದರು. ಆ ಆಸ್ಪತ್ರೆ ಯಾವುದೇ ಕಾರಣಕ್ಕೂ ಮಿಲಿಟರಿ ಟಾರ್ಗೆಟ್ ಎಂದು ಸಮರ್ಥಿಸುವಂತಿಲ್ಲ ಎಂದು ಹರೀಶ್ ಪಾಕಿಸ್ಥಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಕತ್ತಲಲ್ಲಿ ಅಮಾಯಕ ನಾಗರಿಕರ ಮೇಲೆ ದಾಳಿ ನಡೆಸುತ್ತಿರುವ ಪಾಕಿಸ್ಥಾನ ಮಗದೊಂದೆಡೆ ಅಂತಾರಾಷ್ಟ್ರೀಯ ಕಾನೂನಿನ ಉನ್ನತ ಸಿದ್ಧಾಂತಗಳನ್ನು ಉಲ್ಲೇಖಿಸುವುದು ತೀರಾ ಬೂಟಾಟಿಕೆ ಎಂದು ಹರೀಶ್ ಟೀಕಿಸಿದ್ದಾರೆ.

ಕೇರಳಕ್ಕೆ ಸಿಕ್ಕ ಭಾರತದ ಮೊದಲ ಎಐ ಸಚಿವ!



ಸುದ್ದಿ ಸಮಗ್ರ

- ಶೀಘ್ರದಲ್ಲಿ ತಮಿಳುನಾಡಿನಲ್ಲೂ ಎಐ ಸಚಿವಾಲಯ?
- ಎಐ ಸಚಿವರ ಮುಂದಿರುವ ಸವಾಲುಗಳೇನು?

ಭಾರತದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಆಡಳಿತ ಮತ್ತು ಸಾರ್ವಜನಿಕ ಸೇವೆಗಳನ್ನು ವೇಗವಾಗಿ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ, ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರವೊಂದು ಎಐ ಕ್ಷೇತ್ರಕ್ಕೆ ಸಚಿವ ಸ್ಥಾನ ಸೃಷ್ಟಿಸುವ ಮೂಲಕ ಗಮನಸೆಳೆದಿದೆ. ಮುಸ್ಲಿಂ ಲೀಗ್(ಐಯುಎಂಎಲ್) ಹಿರಿಯ ನಾಯಕ ಪಿ.ಕೆ. ಕುನ್ಹಾಲಿಕುಟ್ಟಿ ಮೊದಲ ಎಐ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ತಮಿಳುನಾಡಿನಲ್ಲಿ ಕಾಂಗ್ರೆಸ್ ಬೆಂಬಲ ಪಡೆದುಕೊಂಡು ಸರ್ಕಾರ ರಚನೆ ಮಾಡಿರುವ ಟಿವಿಕೆ ವಿಜಯ್ ಸರ್ಕಾರವೂ ಇದೇ ನಡೆ ಪರಿಗಣಿಸಲಿದೆ ಎನ್ನುವ ವರದಿಗಳು ಹರಿದಾಡುತ್ತಿವೆ. ಈ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.



ಎಐ ಸಚಿವರ ಪಾತ್ರವೇನು?

ಎಐ ಸಚಿವರ ಪಾತ್ರ ಸಾಮಾನ್ಯ ಐಟಿ ಇಲಾಖೆಯಿಂದ ಸ್ವಲ್ಪ ಭಿನ್ನವಾಗಿರುತ್ತದೆ. ಎಐ ಸಚಿವಾಲಯವು ವಿವಿಧ ಸರ್ಕಾರಿ ಇಲಾಖೆಗಳಾದ್ಯಂತ ಎಐ ಹೇಗೆ ಬಳಸಬೇಕೆಂದು ನಿರ್ಧರಿಸುವುದರ ಜತೆಗೆ ಎಐ ತರಬಹುದಾದ ಬದಲಾವಣೆಗಳಿಗೆ ರಾಜ್ಯ ಸರ್ಕಾರವು ಹೇಗೆ ಸಿದ್ಧವಾಗಬೇಕು ಎಂಬ ಕುರಿತು ನೀತಿ, ನಿಯಮ ಮತ್ತು ಕಾರ್ಯತಂತ್ರಗಳನ್ನು ರೂಪಿಸುವ ಸಾಧ್ಯತೆಯಿದೆ.

ಪ್ರಮುಖ ಜವಾಬ್ದಾರಿಗಳು ಹೀಗಿರುವ ಸಾಧ್ಯತೆಯಿದೆ:

- **ಸರ್ಕಾರಿ ಸೇವೆಗಳಲ್ಲಿ ಎಐ ಬಳಕೆ:** ನಾಗರಿಕ ಸೇವೆಗಳು, ದಾಖಲೆ ನಿರ್ವಹಣೆ, ದೂರು ಪರಿಹಾರ ವ್ಯವಸ್ಥೆಗಳನ್ನು ಹೆಚ್ಚು ವೇಗ ಮತ್ತು ಪರಿಣಾಮಕಾರಿಯಾಗಿ ಮಾಡುವುದು.
- **ಎಐ ನೀತಿ ಮತ್ತು ನಿಯಂತ್ರಣ:** ಸರ್ಕಾರದ ಇಲಾಖೆಗಳು ಎಐ ಅನ್ನು ಹೇಗೆ ಬಳಸಬೇಕು ಎಂಬ ಮಾರ್ಗಸೂಚಿ ರೂಪಿಸುವುದು.
- **ಡೇಟಾ ಸುರಕ್ಷತೆ ಮತ್ತು ಗೌಪ್ಯತೆ:** ನಾಗರಿಕರ ಮಾಹಿತಿಯ ರಕ್ಷಣೆ ಹಾಗೂ ಹೊಣೆಗಾರಿಕೆಯಿಂದ ಎಐ ಬಳಕೆಗೆ ಮಾನದಂಡ ರೂಪಿಸುವುದು.
- **ಸ್ಟಾರ್ಟ್‌ಅಪ್ ಮತ್ತು ಕೈಗಾರಿಕಾ ಉತ್ತೇಜನ:** ಎಐ ಆಧಾರಿತ ಉದ್ಯಮಗಳು, ಸಂಶೋಧನೆ ಮತ್ತು ಹೂಡಿಕೆಗಳಿಗೆ ಬೆಂಬಲ.
- **ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ:** ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಗೆ ಎಐ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.
- **ಆರೋಗ್ಯ, ಕೃಷಿ, ನಗರ ಆಡಳಿತದಲ್ಲಿ ಎಐ:** ಸರ್ಕಾರಿ ಯೋಜನೆಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದು.

ತಮಿಳುನಾಡಿನಲ್ಲೂ ಎಐ ಸಚಿವಾಲಯ?

ಚುನಾವಣಾ ಪ್ರಚಾರದ ವೇಳೆ, ನಮ್ಮ ಪಕ್ಷಕ್ಕೆ ಬಹುಮತ ನೀಡಿ ಗೆಲ್ಲಿಸಿದರೆ ಎಐ ಸಚಿವಾಲಯ ಅಥವಾ ಆಡಳಿತ ಚೌಕಟ್ಟಿನೊಳಗೆ ಎಐ ತರುವುದಾಗಿ ಸಿ.ಜೋಸೆಫ್ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಹೇಳಿಕೊಂಡಿತ್ತು. ದೈನಂದಿನ ಜೀವನದಲ್ಲಿ ಎಐ ಬಳಕೆ ಹೆಚ್ಚಾಗುತ್ತಿದ್ದು, ಕೇರಳದಂತೆ ತಮಿಳುನಾಡು ಸರ್ಕಾರವೂ ಪ್ರತ್ಯೇಕ ಎಐ ಸಚಿವಾಲಯ ಸೃಷ್ಟಿಸುವ ಸಾಧ್ಯತೆಯಿದೆ.

ವಿಜಯ್ ಗೆಲುವಿನಲ್ಲಿ ಎಐ ಪ್ರಮುಖ ಪಾತ್ರ!

ಇದಲ್ಲದೆ, ವಿಜಯ್ ಟಿವಿಕೆ ಗೆಲುವಿನಲ್ಲಿ ಎಐ ತಂತ್ರಜ್ಞಾನ, ಸೈಬರ್ ವಾರಿಯರ್ಸ್, ರೂಟ್ ಸಂಸ್ಥೆ ಪ್ರಮುಖ ಪಾತ್ರ ವಹಿಸಿವೆ. ವಿಜಯ್ ಅವರ ಪಕ್ಷದ ಪ್ರಚಾರದಲ್ಲಿ ಎಐ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಮುಖ್ಯಮಂತ್ರಿ ವಿಜಯ್ ತಮ್ಮ ಸರ್ಕಾರದಲ್ಲಿ ಪ್ರತ್ಯೇಕ ಎಐ ಸಚಿವಾಲಯವನ್ನು ಸೃಷ್ಟಿಸುವ ಸಾಧ್ಯತೆಯಿದೆ. ವಿಜಯ್ ಬೆಂಬಲಿಗರ ಎಐ ಆಧಾರಿತ ಡಿಜಿಟಲ್ ಪ್ರಚಾರ ಪ್ರಮುಖ ಪಾತ್ರವನ್ನು ವಹಿಸಿದೆ. ಹಾಗೆಂದು ಎಐ ಮಾತ್ರವೇ ವಿಜಯ್ ಗೆಲ್ಲಿಸಿದ್ದು ಎನ್ನಲು ಸಾಧ್ಯವಿಲ್ಲ.

- ಎಐ ಆಧಾರಿತ ಫೋಟೋ, ವಿಡಿಯೋಗಳಿಂದ ಚುನಾವಣಾ ಪ್ರಚಾರ
- ದೊಡ್ಡ ಮಟ್ಟದಲ್ಲಿ ಟಿವಿಕೆ ಫ್ಯಾನ್ ಕ್ಲಬ್‌ಗಳ ಸಂಪರ್ಕಜಾಲ ಸೃಷ್ಟಿಸಿ, ತನ್ನ ಬೆಂಬಲಿಗರ ಮೂಲಕ ಎಐ ಆಧಾರಿತ ಡಿಜಿಟಲ್ ಪ್ರಚಾರ
- ಎಐ ಆಧಾರಿತ ಭಾವನಾತ್ಮಕ ಕಂಟೆಂಟ್ ಸೃಷ್ಟಿಸುವ ಮೂಲಕ ಜನಸಾಮಾನ್ಯರ ಮಧ್ಯೆ ವಿಜಯ್ ಪರವಾದ ಆಖ್ಯಾನ(ನರೇಟಿವ್) ನಿರ್ಮಾಣ



ಎಐ ಸಚಿವರ ನೇಮಿಸಿದ ಮೊದಲ ರಾಷ್ಟ್ರ ಯುಎಇ

ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) 2017ರಲ್ಲೇ ಎಐ ರಾಜ್ಯ ಸಚಿವರ ಹುದ್ದೆಯನ್ನು ರಚಿಸಿತ್ತು. ಇದರೊಂದಿಗೆ ಎಐ ಸಚಿವರನ್ನು ನೇಮಿಸಿದ ವಿಶ್ವದ ಮೊದಲ ರಾಷ್ಟ್ರವೆಂಬ ಗೌರವ ಪಡೆದಿತ್ತು. ಸರ್ಕಾರದ ಸೇವೆಗಳು ಮತ್ತು ಭವಿಷ್ಯದ ಆರ್ಥಿಕ ಬೆಳವಣಿಗೆಯಲ್ಲಿ ಎಐ ಪ್ರಮುಖ ಪಾತ್ರ ವಹಿಸಲಿದೆ ಎಂಬ ನಂಬಿಕೆಯಿಂದ ಯುಎಇ ಸರ್ಕಾರ ಎಐ ಸಚಿವಾಲಯ ರಚಿಸಿತ್ತು. ಪ್ರತ್ಯೇಕ ಸಚಿವಾಲಯ ಸೃಷ್ಟಿಸಿದ ನಂತರ ತನ್ನ ಆಡಳಿತ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಎಐ ಬಳಕೆಯನ್ನು ವೇಗವಾಗಿ ಹೆಚ್ಚಿಸಿತ್ತು. ತನ್ನ ಕಾರ್ಯಕ್ಷಮತೆ ಹೆಚ್ಚಿಸುವ, ಜಾಗತಿಕ ಎಐ ಕಂಪನಿಗಳನ್ನು ತನ್ನತ್ತ ಆಕರ್ಷಿಸುವ ಮತ್ತು ಎಐ ಮೂಲಸೌಕರ್ಯ ನಿರ್ಮಿಸುವ ಗುರಿಯೊಂದಿಗೆ ಎಐ ನೀತಿಯನ್ನು ಜಾರಿಗೆ ತಂದಿತ್ತು. 2027ರ ವೇಳೆಗೆ ವಿಶ್ವದ ಮೊದಲ ಸಂಪೂರ್ಣ ಎಐ ಆಧಾರಿತ ಸರ್ಕಾರವಾಗಿ ಹೊರಹೊಮ್ಮಲು ಯುಎಇ ಸಿದ್ಧತೆ ನಡೆಸುತ್ತಿದೆ.

ಸೌದಿಯಲ್ಲಿ ಎಐಗೆ ಉತ್ತೇಜನ

ಸೌದಿ ಅರೇಬಿಯಾ ತನ್ನದೇ ಸೌದಿ ಮಾಹಿತಿ ಮತ್ತು ಕೃತಕ ಬುದ್ಧಿಮತ್ತೆ (ಎಐ) ಪ್ರಾಧಿಕಾರ ಅಥವಾ ಎಸ್‌ಡಿಎಐಎ ರಚಿಸಿದೆ. ಇದು ಎಐ ಕಾರ್ಯತಂತ್ರಗಳನ್ನು ಮುನ್ನಡೆಸುವ ಪ್ರತ್ಯೇಕ ಇಲಾಖೆಯಾಗಿದೆ. ಇದೊಂದು ಎಐ ಸಚಿವಾಲಯದಂತೆ ಕರ್ತವ್ಯ ನಿರ್ವಹಿಸಲಿದ್ದು, ರಾಷ್ಟ್ರೀಯ ಎಐ ಯೋಜನೆ, ನಿಯಂತ್ರಣ ಮತ್ತು ಅಳವಡಿಕೆಯ ಜವಾಬ್ದಾರಿ ವಹಿಸಿಕೊಳ್ಳಲಿದೆ. 2030ರ ವೇಳೆಗೆ ತೈಲ ಅವಲಂಬನೆ ಕಡಿಮೆಗೊಳಿಸಿ, ತಂತ್ರಜ್ಞಾನ ಆಧಾರಿತ ಆರ್ಥಿಕತೆ ನಿರ್ಮಾಣದ ಗುರಿಯನ್ನು ಸೌದಿ ಅರೇಬಿಯಾ ಹೊಂದಿದೆ.

ಬಲವಾದ ಎಐ ನಿಯಮ, ಸುರಕ್ಷತೆಗೆ ಸಿಂಗಾಪುರ ಒತ್ತು

ಉಳಿದ ರಾಷ್ಟ್ರಗಳಂತೆ ಎಐ ಮೂಲಸೌಕರ್ಯ ಅಥವಾ ಎಐ ಹೂಡಿಕೆಗಳ ಮೇಲೆ ಹೆಚ್ಚಿನ ಗಮನಹರಿಸುವ ಬದಲು ಪ್ರಬಲವಾದ ಎಐ ನಿಯಮಗಳನ್ನು ಮತ್ತು ಜವಾಬ್ದಾರಿಯುತ ಎಐ ಬಳಕೆ ಹಾಗೂ ಸುರಕ್ಷತೆಗೆ ಸಿಂಗಾಪುರ ಸರ್ಕಾರ ಮೊದಲ ಆದ್ಯತೆಯನ್ನು ನೀಡಿದೆ.

ಎಲ್ಲಾ ರಾಜ್ಯಗಳಲ್ಲಿ ಎಐ ಸಚಿವಾಲಯ?

ಭವಿಷ್ಯದಲ್ಲಿ ಎಲ್ಲಾ ರಾಜ್ಯಗಳಲ್ಲೂ ಪ್ರತ್ಯೇಕ ಎಐ ಸಚಿವಾಲಯ ರಚಿಸುವ ಸಾಧ್ಯತೆಯಿದೆ. ಎಐ ಕೇವಲ ಒಂದು ತಂತ್ರಜ್ಞಾನವಾಗಿ ಉಳಿಯದೆ ಆರ್ಥಿಕ, ರಾಜಕೀಯ ಮತ್ತು ಆಡಳಿತ ಸಮಸ್ಯೆಯಾಗಿ ಬೆಳೆದುಕೊಂಡಿದೆ. ಹೀಗಾಗಿ ಎಐ ನಿಯಂತ್ರಿಸಲು ನಾಯಕತ್ವದ ಅಗತ್ಯವಿರಲಿದೆ.

ಉ.ಪ್ರದೇಶ ಸರ್ಕಾರಿ ಕಾಲೇಜು, ವಿವಿಗಳಲ್ಲಿ ಸಮವಸ್ತ್ರ ಕಡ್ಡಾಯ

ಲಖನೌ: ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೇನ್ ಪಟೇಲ್ ಅವರು ಗುರುವಾರ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ(ಯೂನಿಫಾರ್ಮ್) ಕಡ್ಡಾಯಗೊಳಿಸಲು ಆದೇಶಿಸಿದ್ದಾರೆ. ಕಾಲೇಜು ಕ್ಯಾಂಪಸ್‌ಗಳಲ್ಲಿ ಶಿಸ್ತು, ಏಕರೂಪತೆ ಹಾಗೂ ವಿದ್ಯಾರ್ಥಿ ಸುರಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ ಯಾವುದೇ ಅಧಿಕೃತ ಆದೇಶ ಇನ್ನೂ ಜಾರಿಯಾಗಿಲ್ಲ.

ರಾಜಭವನದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಈ ಸೂಚನೆ ನೀಡಲಾಗಿದ್ದು, ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳನ್ನೂ ಪರಿಶೀಲಿಸಲಾಗಿದೆ. ಇದರೊಂದಿಗೆ ವಿದ್ಯಾರ್ಥಿನಿಯರ ಸುರಕ್ಷತೆ, ವಸತಿ ನಿಲಯಗಳ ಪರಿಸ್ಥಿತಿ ಸುಧಾರಣೆ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ತ್ವರಿತ ಪರಿಹಾರಕ್ಕಾಗಿ ಸಮಿತಿಗಳ ರಚನೆಗೆ ಸೂಚಿಸಲಾಗಿದೆ. ಸಮವಸ್ತ್ರ ಕಡ್ಡಾಯ ಜಾರಿಯಾದರೆ ಉತ್ತರ ಪ್ರದೇಶದ ಸಾವಿರಾರು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜು ಮತ್ತು ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಮೇಲೆ ಅನ್ವಯಿಸಲಿದೆ.

ಉತ್ತರಪ್ರದೇಶದ ವಿತ್ತ ಸಚಿವ ಸುರೇಶ್ ಕುಮಾರ್ ಖನ್ನಾ ರಾಜ್ಯಪಾಲೆಯ ಈ ಕ್ರಮವನ್ನು ಸ್ವಾಗತಿಸಿದ್ದು, ರಾಜ್ಯಪಾಲರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ವಿಶ್ವವಿದ್ಯಾಲಯಗಳಲ್ಲಿ ಶಿಸ್ತು ಕ್ರಮವನ್ನು ಜಾರಿಗೊಳಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ವರದಿಗಳ ಪ್ರಕಾರ, ಪರಿಶೀಲನಾ ಸಭೆಯಲ್ಲಿ ರಾಜ್ಯಪಾಲೆ ಶಿಕ್ಷಕರಿಗೂ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದಾರೆ. ಶಿಕ್ಷಕ ವೃತ್ತಿಯ ಗೌರವ ಮತ್ತು ಘನತೆಗೆ ಧಕ್ಕೆ ಉಂಟುಮಾಡುವ ಯಾವುದೇ ಕೃತ್ಯಗಳಲ್ಲಿ ಶಿಕ್ಷಕರು ತೊಡಗಬಾರದು ಎಂಬ ಸೂಚನೆ ನೀಡಿದ್ದಾರೆ.

ಕಿರುಸುದ್ದಿ

ರುದ್ರಪ್ರಯಾಗ ಭೂಕುಸಿತ: ಯಾತ್ರಾರ್ಥಿಗಳ ಸ್ಥಳಾಂತರ

ಶಿಮ್ಲಾ: ಮುಂಕಟಿಯಾದಲ್ಲಿ ಹಠಾತ್ ಭೂಕುಸಿತ ಸಂಭವಿಸಿದೆ. ಉತ್ತರಾಖಂಡದ ರುದ್ರಪ್ರಯಾಗದ ಕೇದಾರನಾಥ ಮಾರ್ಗದಲ್ಲಿ ಸಿಲುಕಿಕೊಂಡಿದ್ದ 10,450 ಯಾತ್ರಾರ್ಥಿಗಳನ್ನು ಜಂಟಿ ರಕ್ಷಣಾ ತಂಡಗಳು ಸುರಕ್ಷಿತವಾಗಿ ಸ್ಥಳಾಂತರಿಸಿವೆ. ಅಧಿಕಾರಿಗಳ ಪ್ರಕಾರ, ಈ ಪ್ರದೇಶದಲ್ಲಿ ಭಾರೀ ಮಳೆಯಾದ ನಂತರ ಮಂಗಳವಾರ ತಡರಾತ್ರಿ ಸೋನ್‌ಪ್ರಯಾಗ್ ಮತ್ತು ಗೌರಿಕುಂಡ್ ನಡುವೆ ಭೂಕುಸಿತ ಸಂಭವಿಸಿದೆ. ಅವಶೇಷಗಳು ಮುಖ್ಯ ಹೆದ್ದಾರಿಯನ್ನು ನಿರ್ಬಂಧಿಸಿವೆ. ಭೂಕುಸಿತದಿಂದ ಹೆಚ್ಚಿನ ಸಂಖ್ಯೆಯ ಯಾತ್ರಾರ್ಥಿಗಳನ್ನು ಸಿಲುಕಿದ್ದಾರೆ.

ಫಾಲ್ಟಾ ಮರು ಚುನಾವಣೆ: ಶೇ.87.85ರಷ್ಟು ಮತದಾನ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾ ಕ್ಷೇತ್ರದಲ್ಲಿ ಗುರುವಾರ ನಡೆದ ಮತದಾನವು ಶೇ.87.85ರಷ್ಟು ಮತದಾನದೊಂದಿಗೆ ಮುಕ್ತಾಯಗೊಂಡಿತು. ಮತದಾನದ ವೇಳೆ ಇವಿಎಂ ಯಂತ್ರಗಳಲ್ಲಿ ಅಕ್ರಮ ಕಂಡುಬಂದ ಹಿನ್ನೆಲೆ 285 ಮತಗಟ್ಟೆಗಳಲ್ಲಿ ಮರುಮತದಾನ ನಡೆಸಲು ಭಾರತೀಯ ಚುನಾವಣಾ ಆಯೋಗ ಆದೇಶ ಮಾಡಿತ್ತು.ಈ ಮಧ್ಯೆ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಫಾಲ್ಟಾ ಚುನಾವಣಾ ಕಣದಿಂದ ಹಿಂದೆಸರಿದಿದ್ದರು.

ಬಿಟಿಎ: ಮುಂದಿನ ವಾರ ಭಾರತಕ್ಕೆ ಅಮೆರಿಕ ತಂಡ

ಹೊಸದಿಲ್ಲಿ: ವ್ಯಾಪಾರ ವ್ಯವಹಾರ ಸಂಬಂಧಿತ ಮಾತುಕತೆಗಳಿಗಾಗಿ ಅಮೆರಿಕದ ಪ್ರತಿನಿಧಿ ತಂಡವು ಮುಂದಿನ ತಿಂಗಳು ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಉದ್ದಿಮೆ ಸಚಿವ ಪೀಯುಷ್ ಗೋಯಲ್ ಗುರುವಾರ ತಿಳಿಸಿದ್ದಾರೆ. ಮಧ್ಯಂತರ ಒಪ್ಪಂದದ ವಿವರಗಳನ್ನು ಅಂತಿಮಗೊಳಿಸುವುದು ಮತ್ತು ವಿಸ್ತೃತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ (ಬಿಟಿಎ)ದಡಿ ಮಾತುಕತೆಗಳ ಪ್ರಗತಿಗಾಗಿ, ನೇರ ಸರಣಿ ಸಭೆಗಳ ನಡೆಸುವುದಕ್ಕಾಗಿ ಭಾರತೀಯ ಪ್ರತಿನಿಧಿಗಳ ತಂಡ ಕಳೆದ ಏಪ್ರಿಲ್‌ನಲ್ಲಿ ಅಮೆರಿಕಗೆ ಭೇಟಿ ಕೊಟ್ಟಿತ್ತು. ಅಮೆರಿಕದ ಮುಖ್ಯ ಸಂಧಾನಕಾರರ ಜತೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಕೂಡ ಭಾರತಕ್ಕೆ ಭೇಟಿ ಕೊಡುವರೇ ಎಂಬ ಪ್ರಶ್ನೆಗೆ, ಇಲ್ಲವೆಂದ ಸಚಿವರು, ಅಮೆರಿಕನ್ ಪ್ರತಿನಿಧಿಗಳು ಬರುವ ತಿಂಗಳು ಭಾರತಕ್ಕೆ ಬರುವ ಪ್ಲ್ಯಾನ್ ಇದೆ ಎಂದು ಹೇಳಿದರು. ವ್ಯಾಪಾರ, ರಕ್ಷಣೆ, ಇಂಧನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ವರ್ಧಿಸುವ ನಿಟ್ಟಿನಲ್ಲಿ, ರುಬಿಯೊ ಮೇ 23ರಿಂದ ನಾಲ್ಕು ದಿನಗಳ ಕಾಲ ಭಾರತಕ್ಕೆ ಭೇಟಿ ಕೊಡುವರು. ಭಾರತಕ್ಕೆ ಇದವರ ಪ್ರಥಮ ಭೇಟಿಯಾಗಿದೆ. ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಚೌಕಟ್ಟೊಂದನ್ನು ಅಂತಿಮಗೊಳಿಸುವ ಬಗ್ಗೆ ಭಾರತ-ಅಮೆರಿಕಗಳು ಫೆ.7ರಂದು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದವು. ಆದರೆ, ಪಾಲುದಾರ ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಕುದುರಿಸಲು ಟ್ರಂಪ್ ಆಡಳಿತಕ್ಕೆ ಪ್ರಧಾನ ಮಾಧ್ಯಮವಾಗಿದ್ದ ದುಬಾರಿ ಸುಂಕಗಳೆಲ್ಲವನ್ನು ಅಮೆರಿಕದ ಸುಪ್ರೀಂಕೋರ್ಟ್ ರದ್ದುಪಡಿಸಿತ್ತು.

ಟಿವಿಕೆ ಸಂಪುಟ ವಿಸ್ತರಣೆ: ಕೈ ನಾಯಕರಿಬ್ಬರಿಗೆ ಸ್ಥಾನ

ಚೆನ್ನೈ: ಮತ್ತೆ 23 ಶಾಸಕರನ್ನು ಸಚಿವರಾಗಿ ಸೇರ್ಪಡೆ ಮಾಡುವ ಮೂಲಕ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಗುರುವಾರ ತಮ್ಮ ಸಂಪುಟವನ್ನು ವಿಸ್ತರಿಸಿದ್ದಾರೆ. ಪುನಾರಚಿತ ಸಂಪುಟಕ್ಕೆ ಸೇರ್ಪಡೆಗೊಂಡ ಶಾಸಕರಲ್ಲಿ ಇಬ್ಬರು ಕಾಂಗ್ರೆಸಿಗರು ಸೇರಿದ್ದಾರೆ. ಲೋಕಭವನದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ನಿಯೋಜಿತ ಸಚಿವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಂಗ್ರೆಸ್‌ನಿಂದ ಕಿಳಿಯೂರ್‌ನಿಂದ ವಿಜೇತ ಎಸ್.ರಾಜೇಶ್‌ಕುಮಾರ್ ಮತ್ತು ಮೇಲೂರ್ ಕ್ಷೇತ್ರದಿಂದ ವಿಜೇತ ಪಿ.ವಿಶ್ವನಾಥನ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಟಿವಿಕೆ ನೇತೃತ್ವದ ಸರಕಾರಕ್ಕೆ ಕಾಂಗ್ರೆಸಿಗರ ಸೇರ್ಪಡೆ ತಮಿಳುನಾಡಿನ ರಾಜಕೀಯ ಇತಿಹಾಸದಲ್ಲೊಂದು ತಿರುವೆಂದು ಹೇಳಿರುವ ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೊಂಡನ್ಕರ್, ಕಾಂಗ್ರೆಸ್ ತಮಿಳುನಾಡಲ್ಲಿ ಅಧಿಕಾರಕ್ಕೇರಲು ಕಾರ್ಯಕರ್ತರು ಕಳೆದ 59ವರ್ಷಗಳಿಂದ ಸತತ ಹೆಣಗಾಟ ನಡೆಸಿದ್ದರು. ಅವರ ಪ್ರಯತ್ನ ಕೊನೆಗೂ ಫಲಿಸಿದೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಜೇಶ್‌ಕುಮಾರ್ ಲಿಖಿತ ಪ್ರತಿಜ್ಞಾವಿಧಿ ಓದುವ ಸಂದರ್ಭ , ಕಾಂಗ್ರೆಸ್ ನಾಯಕರಾದ ದಿ.ಕಾಮರಾಜ್, ದಿ.ರಾಜೀವ್‌ಗಾಂಧಿ ಮತ್ತು ರಾಹುಲ್ ಗಾಂಧಿಯನ್ನು ಹೊಗಳತೊಡಗಿದ್ದರು. ತಕ್ಷಣ ಮಧ್ಯಪ್ರವೇಶಿಸಿದ ರಾಜ್ಯಪಾಲ ಅರ್ಲೇಕರ್, ಇದು ತಮ್ಮ ಪ್ರತಿಜ್ಞಾವಿಧಿಯ ಭಾಗವಲ್ಲ, ತಮಗೆ ನೀಡಿರುವ ಲಿಖಿತ ಪ್ರತಿಜ್ಞಾವಿಧಿಯಲ್ಲೇನಿದೆಯೋ, ಅದನ್ನಷ್ಟೆ ಓದಿ ಎಂದು ವಾಸ್ತವವನ್ನು ಮನವರಿಕೆ ಮಾಡಿದ ಪ್ರಸಂಗವೂ ನಡೆಯಿತು. ಗುರುವಾರ ಪ್ರಮಾಣವಚನ ಸ್ವೀಕರಿಸಿದ 23ಶಾಸಕರಲ್ಲಿ ಮೂವರು ಮಹಿಳೆಯರು ಸೇರಿದ್ದಾರೆ.

ಆದಿವಾಸಿಗಳೇ ಭಾರತದ ಹೆಮ್ಮೆ: ಸತ್ಯೇಂದ್ರ ಸಿಂಗ್

ಹೊಸದಿಲ್ಲಿ: ಬ್ರಿಟಿಷರು ಆದಿವಾಸಿ ಸಮುದಾಯವನ್ನು ಅಪರಾಧಿಗಳು, ಹಿಂದುಳಿದವರು ಎಂದು ತಪ್ಪಾಗಿ ಬಿಂಬಿಸಿದ್ದರು. ವಾಸ್ತವದಲ್ಲಿ ಅವರು ಭಾರತದ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಕರು ಎಂದು ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮದ ಅಧ್ಯಕ್ಷ ಸತ್ಯೇಂದ್ರ ಸಿಂಗ್ ಹೇಳಿದ್ದಾರೆ. ದೇಶದ ನೈಜ ಇತಿಹಾಸದಲ್ಲಿ ಆದಿವಾಸಿಗಳ ಕೊಡುಗೆ ಅಪಾರವಾಗಿದ್ದು, ಅವರ ಬಗ್ಗೆ ರೂಪುಗೊಂಡಿರುವ ವಕ್ರ ನಿರೂಪಣೆಯನ್ನು ಸರಿಪಡಿಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾನುವಾರ ದೆಹಲಿಯ ಕೆಂಪುಕೋಟೆ ಮೈದಾನದಲ್ಲಿ ಜನಜಾತಿ ಸಾಂಸ್ಕೃತಿಕ ಸಮಾಗಮ ಆಯೋಜಿಸಲಾಗುತ್ತಿದ್ದು, ದೇಶದ ವಿವಿಧ ಭಾಗಗಳಿಂದ ಸುಮಾರು 500ಕ್ಕೂ ಹೆಚ್ಚು ಜನಜಾತಿ ಸಮುದಾಯಗಳು ಹಾಗೂ ಸುಮಾರು 1.5 ಲಕ್ಷ ಜನ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಿಂಗ್ ತಿಳಿಸಿದ್ದಾರೆ. ಈ ಸಮಾವೇಶವನ್ನು ಜನಜಾತಿ ಸುರಕ್ಷಾ ಮಂಚ್ ಆಯೋಜಿಸುತ್ತಿದ್ದು, ಇದು ವನವಾಸಿ ಕಲ್ಯಾಣ ಆಶ್ರಮದ ಅಂಗಸಂಸ್ಥೆಯಾಗಿದೆ. ಕಾರ್ಯಕ್ರಮದ ಮೂಲಕ ಜಗತ್ತಿಗೆ ಭಾರತದ ಆದಿವಾಸಿ ಸಮುದಾಯದ ನೈಜ ಚಿತ್ರಣ ತಲುಪಿಸುವ ಉದ್ದೇಶವಿದೆ ಎಂದು ಹೇಳಿದರು. ರಾಮಾಯಣ, ಮಹಾಭಾರತ ಕಾಲದಿಂದ ಹಿಡಿದು ಮೊಘಲ್ ಮತ್ತು ಬ್ರಿಟಿಷರ ಆಳ್ವಿಕೆವರೆಗೂ ಆದಿವಾಸಿ ಸಮುದಾಯಗಳು ತಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ರಕ್ಷಿಸಲು ಹೋರಾಡಿವೆ. ಆದರೆ ಯಾವತ್ತೂ ಪರಾಧೀನತೆಯನ್ನು ಒಪ್ಪಿಕೊಂಡಿಲ್ಲ. ಇದೇ ಅವರ ಸ್ವಾಭಿಮಾನ ಎಂದು ಸಿಂಗ್ ಹೇಳಿದರು. ಆದಿವಾಸಿಗಳ ಜೀವನಶೈಲಿ, ಜನಪದ ಕಲೆ, ಸಂಸ್ಕೃತಿ ಇವೆಲ್ಲವೂ ದೇಶದ ಹೆಮ್ಮೆಯ ವಿಷಯ ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳ ಮದರಸಾಗಳಲ್ಲಿ ವಂದೇ ಮಾತರಂ ಕಡ್ಡಾಯ

ಕೋಲ್ಕತ್ತಾ: ಶಾಲಾ ಕಾಲೇಜುಗಳ ಬಳಿಕ ಮದರಸಾ ಶಿಕ್ಷಣ ಸಂಸ್ಥೆಗಳಲ್ಲೂ ಬೆಳಗ್ಗಿನ ಅಸೆಂಬ್ಲಿ ವೇಳೆ ವಂದೇ ಮಾತರಂ ಹಾಡುವುದನ್ನು ಪಶ್ಚಿಮ ಬಂಗಾಳ ಸರ್ಕಾರ ಕಡ್ಡಾಯಗೊಳಿಸಿದೆ. ಅಲ್ಪಸಂಖ್ಯಾತ ವ್ಯವಹಾರ ಮತ್ತು ಮದರಸಾ ಶಿಕ್ಷಣ ಇಲಾಖೆಯ ಅನ್ವಯ ಎಲ್ಲಾ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಬೆಳಗ್ಗಿನ ಅಸೆಂಬ್ಲಿ ವೇಳೆ ರಾಷ್ಟ್ರೀಯ ಗೀತೆ ಹಾಡುವುದು ಕಡ್ಡಾಯಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಆದೇಶಿಸಿದ್ದಾರೆ. ವಾರದ ಹಿಂದೆಯಷ್ಟೇ ಸುವೇಂದು ನೇತೃತ್ವದ ಬಿಜೆಪಿ ಸರ್ಕಾರವು, ಪಶ್ಚಿಮ ಬಂಗಾಳದಾದ್ಯಂತ ಎಲ್ಲಾ ಶಾಲೆಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಿತ್ತು. ಮದರಸಾಗಳಿಗೆ ಜಾರಿಗೊಳಿಸಿದ ಆದೇಶದ ಪ್ರಕಾರ, ಎಲ್ಲಾ ಪ್ರತಿಷ್ಠಿತ, ಅನುದಾನಿತ ಮತ್ತು ಅನುದಾನ ರಹಿತ ಮದರಸಾಗಳಲ್ಲಿ ಬೆಳಗ್ಗೆ ತರಗತಿ ಆರಂಭಿಸುವ ಮೊದಲು ರಾಷ್ಟ್ರೀಯ ಗೀತೆ ಕಡ್ಡಾಯವಾಗಿ ಹಾಡಬೇಕು. ಶಾಲಾ ಅಸೆಂಬ್ಲಿ ಅಥವಾ ಬೆಳಗ್ಗಿನ ಪ್ರಾರ್ಥನೆಗೆ ಮುನ್ನ ರಾಜ್ಯ ಶಿಕ್ಷಣ ಇಲಾಖೆ ಅನ್ವಯದಲ್ಲಿ ಬರುವ ಎಲ್ಲಾ ಶಾಲೆಗಳಲ್ಲಿ ರಾಷ್ಟ್ರೀಯ ಗೀತೆ ಕಡ್ಡಾಯಗೊಳಿಸಿದ್ದೇವೆ ಎಂದು ಸುವೇಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

ಎಬೋಲಾ: ಮಾರ್ಗಸೂಚಿ ಹೊರಡಿಸಿದ ಕೇಂದ್ರ

ಹೊಸದಿಲ್ಲಿ: ಎಬೋಲಾ ವೈರಸ್ ತಡೆಗೆ ಭಾರತ ಸಜ್ಜಾಗಿದ್ದು, ಎಲ್ಲಾ ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ಆಫ್ರಿಕಾದ ಕೆಲವು ಭಾಗಗಳಲ್ಲಿ ಎಬೋಲಾ ಹರಡುವಿಕೆಯನ್ನು ವಿಶ್ವ ಆರೋಗ್ಯ ಸಂಸ್ಥೆ ಅಂತಾರಾಷ್ಟ್ರೀಯ ಕಾಳಜಿ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ (ಪಿಎಚ್ಇಐಸಿ) ಎಂದು ಘೋಷಿಸಿದ ಬೆನ್ನಲ್ಲೇ, ಭಾರತವು ವಿಮಾನ ನಿಲ್ದಾಣ ಮತ್ತು ಬಂದರು ಎಬೋಲಾ ಕಣ್ಗಾವಲು ಮತ್ತು ಸ್ಕ್ರೀನಿಂಗ್ ಕ್ರಮಗಳನ್ನು ಹೆಚ್ಚಿಸಿದೆ. ಆರೋಗ್ಯ ಅಧಿಕಾರಿಗಳು ಪ್ರಯಾಣಿಕರಿಗೆ ಹೊಸ ಸಲಹೆಯನ್ನು ನೀಡಿದ್ದಾರೆ.



ಕೇಂದ್ರ ಆರೋಗ್ಯ ಸಚಿವಾಲಯದಲ್ಲಿರುವ ಆರೋಗ್ಯ ಸೇವೆಗಳ ಮಹಾ ನಿರ್ದೇಶನಾಲಯವು (ಡಿಜಿಎಚ್‌ಎಸ್) ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಉಗಾಂಡಾ ಮತ್ತು ದಕ್ಷಿಣ ಸುಡಾನ್‌ನಿಂದ ಆಗಮಿಸುವ ಪ್ರಯಾಣಿಕರಲ್ಲಿ ಜ್ವರ, ವಾಂತಿ, ಅತಿಸಾರ, ತಲೆನೋವು, ಗಂಟಲು ನೋವು, ಸ್ನಾಯು ನೋವು ಅಥವಾ ರಕ್ತಸ್ರಾವದಂತಹ ರೋಗಲಕ್ಷಣಗಳನ್ನು ಕಂಡುಬಂದರೆ ತಕ್ಷಣ ವಿಮಾನ ನಿಲ್ದಾಣದ ಆರೋಗ್ಯ ಅಧಿಕಾರಿಗಳಿಗೆ ವರದಿ ಮಾಡುವಂತೆ ಕೇಳಿಕೊಂಡಿದೆ. ವಿಮಾನ ನಿಲ್ದಾಣ ಆರೋಗ್ಯ ಸಂಸ್ಥೆ (ಎಪಿಎಚ್‌ಒ) ಹೊರಡಿಸಿದ ಸಲಹೆ ಪ್ರಕಾರ , ಶಂಕಿತ ಅಥವಾ ದೃಢಪಡಿಸಿದ ಎಬೋಲಾ ರೋಗಿಯ ರಕ್ತ ಅಥವಾ ದೇಹದ ದ್ರವಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿರುವ ಪ್ರಯಾಣಿಕರಿಗೆ ವಲಸೆ ಅನುಮತಿ ನೀಡುವ ಮೊದಲು ವಿಮಾನ ನಿಲ್ದಾಣದ ಆರೋಗ್ಯ ಕೇಂದ್ರಕ್ಕೆ ವರದಿ ಮಾಡಲು ನಿರ್ದೇಶಿಸಲಾಗಿದೆ. ಆಗಮಿಸಿದ 21 ದಿನಗಳಲ್ಲಿ ರೋಗಲಕ್ಷಣಗಳನ್ನು ಹೆಚ್ಚಾದ ಪ್ರಯಾಣಿಕರಿಗೆ ತಕ್ಷಣದ ವೈದ್ಯಕೀಯ ಆರೈಕೆಯನ್ನು ಪಡೆಯಲು ಮತ್ತು ಅವರ ಪ್ರಯಾಣದ ಇತಿಹಾಸದ ಬಗ್ಗೆ ಆರೋಗ್ಯ ಅಧಿಕಾರಿಗಳಿಗೆ ತಿಳಿಸಲು ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಬೋಲಾ ವೈರಸ್ ಹೆಚ್ಚಳ: ಕಟ್ಟೆಚ್ಚರಕ್ಕೆ ಕ್ರಮ

ಆಫ್ರಿಕಾದಲ್ಲಿ ಎಬೋಲಾ ಹೆಚ್ಚಳ: ಶೃಂಗ ಮುಂದೂಡಿಕೆ

ಆಫ್ರಿಕಾದ ಕೆಲವು ಭಾಗಗಳಲ್ಲಿ ಹೆಚ್ಚುತ್ತಿರುವ ಎಬೋಲಾ ವೈರಸ್‌ನಿಂದಾಗಿ ದಿಲ್ಲಿಯಲ್ಲಿ ನಡೆಯಬೇಕಿದ್ದ ಆಫ್ರಿಕನ್ ಯೂನಿಯನ್ ಮತ್ತು ಭಾರತದ ಪ್ರಮುಖ ಶೃಂಗಸಭೆ ಮುಂದೂಡಲಾಗಿದೆ ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ. ಆಫ್ರಿಕಾದ ಹಲವಾರು ಭಾಗಗಳಲ್ಲಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ದಕ್ಷಿಣ ಕಿವು ಪ್ರಾಂತ್ಯದ ಇತ್ತೀಚಿನ ಮಾರಣಾಂತಿಕ ಎಬೋಲಾ ವೈರಸ್‌ನ ಪ್ರಕರಣಗಳು ವರದಿಯಾಗಿವೆ. ಭಾರತ ಮತ್ತು ಆಫ್ರಿಕನ್ ಒಕ್ಕೂಟವು ನಾಲ್ಕನೇ ಭಾರತ-ಆಫ್ರಿಕಾ ವೇದಿಕೆ ಶೃಂಗಸಭೆಯನ್ನು ನಡೆಸಲು ಸಿದ್ಧತೆ ನಡೆಸುತ್ತಿದ್ದು, ಉಭಯ ಕಡೆಯವರು, ಆಫ್ರಿಕಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಈ ನಿರ್ಧಾರಕ್ಕೆ ಬಂದಿದೆ. ಆಫ್ರಿಕಾ ಸಿಡಿಸಿ ಮತ್ತು ಸಂಬಂಧಿತ ರಾಷ್ಟ್ರೀಯ ಸಂಸ್ಥೆಗಳಿಗೆ ಬೆಂಬಲ ನೀಡುವ ಮೂಲಕ ಖಂಡದಾದ್ಯಂತ ಸಾರ್ವಜನಿಕ ಆರೋಗ್ಯ ಸನ್ನದ್ಧತೆ ಮತ್ತು ಪ್ರತಿಕ್ರಿಯೆ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ನಿರಂತರ ಸಹಕಾರದ ಮಹತ್ವವನ್ನು ಪುನರುಚ್ಚರಿಸಿದರು ಎಂದು ಭಾರತವು ಹೇಳಿಕೆಯಲ್ಲಿ ತಿಳಿಸಿದೆ.

2034ರವರೆಗೂ ಬಿಜೆಪಿ ಪ್ರಬಲ ಶಕ್ತಿ

ಆ್ಯಕ್ಸಿಸ್ ಮೈ ಇಂಡಿಯಾ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಭಿಪ್ರಾಯ

ಹೊಸದಿಲ್ಲಿ: ದೇಶದ ರಾಜಕೀಯ ವಲಯದಲ್ಲಿ ಬಿಜೆಪಿ ಪ್ರಾಬಲ್ಯ ಇನ್ನೂ ದೀರ್ಘಕಾಲ ಮುಂದುವರಿಯುವ ಸಾಧ್ಯತೆಯಿದ್ದು, ಕನಿಷ್ಠ 2034ರವರೆಗೂ ಬಿಜೆಪಿ ನೇತೃತ್ವದ ರಾಜಕೀಯ ಪ್ರಭಾವ ಕಡಿಮೆಯಾಗುವುದಿಲ್ಲ ಎಂದು ಖ್ಯಾತ ವಿಶ್ಲೇಷಣೆಕಾರ ಹಾಗೂ ಆ್ಯಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲ, ಇನ್ನೂ 20 ವರ್ಷ ಬಿಜೆಪಿ ಪ್ರಭಾವ ಹೀಗೆಯೇ ಮುಂದುವರಿಯಲಿದೆ ಎಂದೂ ಅವರು ಹೇಳಿದ್ದಾರೆ.

ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ ಅವರು, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟ (ಎನ್‌ಡಿಎ) ಹಾಗೂ ವಿರೋಧ ಪಕ್ಷಗಳ ಭವಿಷ್ಯವು ಆಡಳಿತದ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಳೆದ ಹಲವು ವರ್ಷಗಳಿಂದ ಚುನಾವಣಾ ಮಟ್ಟದಲ್ಲಿ ನಿರಂತರ ಮುನ್ನಡೆ ಕಾಯ್ದುಕೊಂಡಿರುವುದೇ ಬಿಜೆಪಿಯ ರಾಜಕೀಯ ಬಲದ ಪ್ರಮುಖ ಕಾರಣ ಎಂದು ಅವರು ವಿಶ್ಲೇಷಿಸಿದ್ದಾರೆ.

ಪ್ರದೀಪ್ ಗುಪ್ತಾ ಅವರ ಪ್ರಕಾರ, ಬಿಜೆಪಿ ಕೇವಲ ಚುನಾವಣಾ ಯಂತ್ರವಾಗಿಲ್ಲ. ಅದು ಬಲಿಷ್ಠ ಸಂಘಟನೆ, ಕೇಂದ್ರಿತ ನಾಯಕತ್ವ ಮತ್ತು ನೆಲಮಟ್ಟದ ಕಾರ್ಯಕರ್ತರ ಜಾಲದ ಆಧಾರದ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿದೆ. ವಿಶೇಷವಾಗಿ ಯುವಕರು, ಮಹಿಳೆಯರು ಹಾಗೂ ಮಧ್ಯಮ ವರ್ಗದ ಮತದಾರರ ನಡುವೆ ಪಕ್ಷದ ಸ್ವೀಕಾರಾರ್ಹತೆ ಹೆಚ್ಚುತ್ತಿರುವುದು ಬಿಜೆಪಿಗೆ ದೊಡ್ಡ ಬಲವಾಗಿದೆ ಎಂದು ಅವರು ಹೇಳಿದ್ದಾರೆ.

ಇದೇ ವೇಳೆ, ವಿರೋಧ ಪಕ್ಷಗಳು ಇನ್ನೂ ಸಮಗ್ರ ಪರ್ಯಾಯ ರಾಜಕೀಯ ವೀಕ್ಷಣೆಯನ್ನು ದೇಶದ ಮುಂದೆ ಇಡಲು ವಿಫಲವಾಗಿವೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಭಾವ ಇದ್ದರೂ, ರಾಷ್ಟ್ರ ಮಟ್ಟದಲ್ಲಿ ಬಿಜೆಪಿಗೆ ತಕ್ಕ ಸವಾಲು ನೀಡಬಲ್ಲ ಏಕೀಕೃತ ನಾಯಕತ್ವ ಕಾಣಿಸುತ್ತಿಲ್ಲ ಎಂದು ತಿಳಿಸಿದ್ದಾರೆ.

ಕಳೆದ ಕೆಲವು ಚುನಾವಣೆಗಳ ಉದಾಹರಣೆಗಳನ್ನು ಉಲ್ಲೇಖಿಸಿದ ಅವರು, ಮಹಾರಾಷ್ಟ್ರ, ದೆಹಲಿ, ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಬಿಜೆಪಿ ಅಥವಾ ಎನ್‌ಡಿಎ ಉತ್ತಮ ಪ್ರದರ್ಶನ ನೀಡಿರುವುದನ್ನು ಗಮನಿಸಬಹುದು ಎಂದಿದ್ದಾರೆ. ಕೆಲವು ರಾಜ್ಯಗಳಲ್ಲಿ ಬಿಜೆಪಿ ಹೊಸ ರಾಜಕೀಯ ನೆಲೆಯನ್ನು ನಿರ್ಮಿಸಿಕೊಂಡಿರುವುದೂ ಗಮನಾರ್ಹ ಬೆಳವಣಿಗೆ ಎಂದು ಅವರು ಹೇಳಿದ್ದಾರೆ.

ಕೇವಲ ಹಿಂದೂ ಮತಗಳ ಕ್ರೋಢೀಕರಣವೊಂದೇ ಬಿಜೆಪಿ ಗೆಲುವಿಗೆ ಕಾರಣವಲ್ಲ. ಹೀಗೆ ಹೇಳಿದರೆ ಆ ರಾಜ್ಯಗಳಲ್ಲಿ ಬಿಜೆಪಿಯ ಉತ್ತಮ ಅಭಿವೃದ್ಧಿ-ಉತ್ತಮ ಕೆಲಸಗಳನ್ನು ನೀವು ಹಾಳು ಮಾಡುತ್ತಿರಿ ಎಂದರು. ಕೇವಲ ಚುನಾವಣಾ ಭರವಸೆ, ಉಚಿತ ಕೊಡುಗೆಗಳು ಅಥವಾ ಧರ್ಮದಿಂದಲೇ ಮತದಾರರು ಪ್ರಭಾವಿತರಾಗುತ್ತಾರೆ ಎಂದರೆ ಸರಿಯಾಗದು ಎಂದರು.

ಇಂದು ವಾರ್ಷಿಕೋತ್ಸವ

ಮಡಿಕೇರಿ: ಶ್ರೀ ಕೋಟೆ ಮಹಾಗಣಪತಿ ದಸರಾ ಮಂಟಪ ಸಮಿತಿ ವತಿಯಿಂದ ನಗರದ ಇತಿಹಾಸ ಪ್ರಸಿದ್ಧ ಶ್ರೀ ಕೋಟೆ ಮಹಾಗಣಪತಿಗೆ ಚಿನ್ನದ ಕಿರೀಟ ಸಮರ್ಪಣೆ ವಾರ್ಷಿಕೋತ್ಸವ ಮೇ 22 ರಂದು ಶ್ರದ್ಧಾಭಕ್ತಿಯಿಂದ ನಡೆಯಲಿದೆ.

ಶುಕ್ರವಾರ ಬೆಳಿಗ್ಗೆ ಶ್ರೀ ಕೋಟೆ ಮಹಾಗಣಪತಿ ದೇವರಿಗೆ ಅಭಿಷೇಕ, 12 ತೆಂಗಿನ ಕಾಯಿಯ ಗಣ ಹೋಮ, 10 ಸಹಸ್ರ ದುರ್ವಾಂಕುರ ಸಮರ್ಪಣೆ, ಒಂದು ಸಹಸ್ರ ಎಕ್ಕ ಸಮರ್ಪಣೆಯಾಗಲಿದೆ. ನಂತರ ಪೂರ್ಣಾಹುತಿ, ಹಾಗೂ ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆ ಕಲ್ಪಿಸಲಾಗಿದೆ ಶ್ರೀ ಕೋಟೆ ಮಹಾಗಣಪತಿ ದಸರಾ ಮಂಟಪ ಸಮಿತಿ ಮನವಿ ಮಾಡಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

21-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 415 - 455
ಚೋಲ್ ಅಡಿಕೆ	: 510 - 535
ಡಬಲ್ ಚೋಲ್	: 510 - 535
ಹೊಸ ಪಟೋರ	: 345 - 395
ಹಳೆ ಪಟೋರ	: 365 - 395
ಹೊಸ ಉಳ್ಳಿ	: 140 - 290
ಹಳೆ ಉಳ್ಳಿ	: 130 - 290
ಹೊಸ ಕೋಕಾ	: 315 - 335
ಹಳೆ ಕೋಕಾ	: 315 - 335
ಹೊಸ ಕರಿಗೋಟು	: 255 - 285
ಹಳೆ ಕರಿಗೋಟು	: 255 - 285
ಹಸಿ ಕೊಕ್ಕೋ	: 70 - 105
ಒಣ ಕೊಕ್ಕೋ	: 270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 670

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 250.00
ಆರ್‌ಎಸ್‌ಎಸ್ 2	- 211.00
ಸ್ಕ್ರಾಪ್ 1	- 147.00
ಸ್ಕ್ರಾಪ್ 2	- 140.00

IN THE COURT OF THE ASSISTANT COMMISSIONER
D.K. MANGALURU
R.R.T.(2)S.R. NO. 2/2026

Between:
Mrs. Yashavanthi V. Shetty ...Appellant
AND
The Tahshildar
Mangaluru Taluk & Others ...Respondents

NOTICE

To,
Respondent No.1
Mr. Ramanna Shetty
Adult,
R/at Kadial Guttu
Kodialbail post, Mangaluru.

Take notice that an Appeal has been filed by Mrs. Yashavanthi V. Shetty in R.R.T.(2)SR. No. 2/2026 before the Assistant Commissioner, D.K., Mangaluru, under Sec. 136(2) of the Karnataka Land Revenue Act, 1964, against the order dated 14.06.2024 passed in **R.R.T(2)C.R.** 329/2024-25 by the Tahsildar, Mangaluru.

The appellants seek to direct entry of the name of Pushpavathi as the absolute owner and delete the name of Ramanna Shetty as mooladar in Column 9 of the RTC.

The matter is posted on **01/06/2026 at 3 P.M.** before this Court. You are hereby called upon to appear in person or through counsel, failing which the matter will be heard and decided ex parte.

Given under my hand and seal of this Hon'ble Court, this 21st day of May 2026.

(BY ORDER OF THE COURT)
Sd/- The Assistant Commissioner,
D.K. Mangaluru
Sd/- (B. JINENDRA KUMAR)
Advocate for Appellant
MANGALURU

ಮಂಗಳೂರು ಮಹಾನಗರಪಾಲಿಕೆ

MCC/EE1/TC1/2026-27 ದಿನಾಂಕ: 20-05-2026

ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO.58456, 58458, 58461, 58418, 58428, 58432, 58462, 58469, 58434, 58527, 58437, 58528, 58470, 58483, 58484, 58413, 58415, 58471, 58477, 58478, 58443, 58465 ದಿನಾಂಕ 15.05.2026** ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದ್ರಿ 22 ಕಾಮಗಾರಿಗಳ ಟೆಂಡರನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ

DIPR/DK/KSMCA/253/26-27 dt: 21.05.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು

ಟೆಂಡರ್ ಅಧಿಸೂಚನೆ ಸಂಖ್ಯೆ: ದ.ಕ.ಜಿ.ಪ/ಮಂ/ಟೆಂಡರ್–9/ಎಇ–1/ಜೆಇ1/ಜೆಇ2/2026–27/408 ದಿನಾಂಕ: 20–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವರ್ಷನ್–2 ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದ್ದು ಟೆಂಡರ್ ಸಲ್ಲಿಸುವ ದಿನಾಂಕವನ್ನು ಈ ಕೆಳಕಂಡಂತಿದೆ.

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16–06–2026 ಅಪರಾಹ್ನ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–06–2026 ಅಪರಾಹ್ನ 4.30 ಗಂಟೆಗೆ (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್‌ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824–2451281 ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

DIPR/DK/KSMCA/254/26-27 Dt. 21.05.2026

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ಸತ್ಯಮೇವ ಜಯತೇ | ಆರೋಗ್ಯವೇ ಭಾಗ್ಯ

ದೂರವಾಣಿ ಸಂ.: 0836–2741277, 0836–2748374, ಫ್ಯಾಕ್ಸ್ ಸಂ: 0836–2741277, ಇ–ಮೇಲ್: dsdharwad@gmail.com

ಕ್ರ.ಸಂ.: ಜಿಆಧಾ/ಎ.ಆರ್.ಎಸ್/02/2026–27 ದಿನಾಂಕ: 19.05.2026

ಟೆಂಡರ್ ಪ್ರಕಟಣೆ

2026–2027ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ **32–ಗ್ರೂಪ್ ಡಿ, 04–ಸ್ವೀಪರ್, 02–ಡಾಟಾ ಎಂಟ್ರಿ ಆಪರೇಟರ್, 01–ಲ್ಯಾಬ್ ಟೆಕ್ನೀಷಿಯನ್, 01–ಫಾರ್ಮಾಸಿಸ್ಟ್, 03–ಶುಶ್ರೂಷಾ** ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ–ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರ ಪ್ರಕಾರ ದ್ವಿ–ಬಿಡ್ (Technical and Financial) ಪದ್ಧತಿಯಲ್ಲಿ ಟೆಂಡರ್ (ಇ–ಟೆಂಡರ್) ಆಹ್ವಾನಿಸಲಾಗಿದೆ. Tender No.: DHFWS/2026-27/SE2192/CALL-2

1) ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ದಿನಾಂಕ: 19.05.2026 ರಿಂದ 26.05.2026ರ ಸಾಯಂಕಾಲ 4.00 ಘಂಟೆಯವರೆಗೆ, **2) ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ:** 27.05.2026 ರಂದು 4.30 ಘಂಟೆಗೆ, **3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:** 29.05.2026 ರಂದು 12.00 ಘಂಟೆಗೆ.

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯುಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/–
ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಧಾರವಾಡ

DIPR/Dharwad/218/Adverto/2026-27

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಜಿಲ್ಲಾ ಪಂಚಾಯತ್ ಕೋಲಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ

ಹೊರಗುತ್ತಿಗೆ ಆದಾರದ ಮೇಲೆ ವಿಭಾಗ ಮತ್ತು ಉಪವಿಭಾಗಗಳಿಗೆ ವಾಹನಗಳನ್ನು ಒದಗಿಸುವ ಟೆಂಡರ್ ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಸೇವಾ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27 ದಿನಾಂಕ: 18.05.2026

ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ ಹಾಗೂ ಉಪವಿಭಾಗಗಳಾದ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ಕಚೇರಿಗಳಿಗೆ ವಾಹನಗಳನ್ನು ಹೊರಗುತ್ತಿಗೆ ಆದಾರದ ಮೇಲೆ ಅಧಿಕೃತ ವಾಹನ ಸರಬರಾಜುದಾರರು/ವಾಹನ ಮಾಲೀಕರಿಂದ ವಾಹನಗಳನ್ನು ಪೂರೈಸುವುದು (**RDPR/2026-27/SE3897**) ಸೇವಾ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಕೆ.ಪಿ.ಪಿ.ಪೋರ್ಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು ಕೊನೆಯ **ದಿನಾಂಕ: 18.05.2026 ರಿಂದ 02.06.2026 ರ ಸಂಜೆ 4.00 ಗಂಟೆವರೆಗೆ** (2) ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಾಲ್‌ನಲ್ಲಿ ತೆರೆಯುವ **ದಿನಾಂಕ: 03.06.2026 ರಂದು ಸಂಜೆ 4.30 ಗಂಟೆಗೆಂದು ನಿಗದಿ ಪಡಿಸಲಾಗಿದೆ.** ಈ ಸೇವೆಯನ್ನು (ಷರತ್ತು ಮತ್ತು ನಿಬಂಧನೆಗಳಂತೆ ಹೆಚ್ಚಿನ ವಿವರಗಳಿಗೆ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ. ಪ್ರೋಟಾಲ್‌ನಲ್ಲಿ ಸಂಪರ್ಕಿಸಬಹುದಾಗಿದೆ. ಸದರಿ ಸೇವಾ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಸಹಾಯವಾಣಿ ದೂರವಾಣಿ ಸಂಖ್ಯೆ: +91–8046010000, +91–8068948777 ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:77/ಕೆಎಸ್‌ಎಂಸಿಎ/2026–27

ಕರ್ನಾಟಕ ಮೃಗಾಲಯ ಪ್ರಾಧಿಕಾರ
ಸಹಾಯಕ ನಿರ್ದೇಶಕರು ಗದಗ ಮೃಗಾಲಯ ಹಾಗೂ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ಉಪ ವಿಭಾಗ, ಗದಗ

ZOO AUTHORITY OF KARNATAKA | GADAG ZOO

ದೂರವಾಣಿ/ಫ್ಯಾಕ್ಸ : 08372–200289 ಇ–ಮೇಲ್ : acfgadag@gmail.com

ನಂ.ಎ3/ರಖಡ್‌ಎಕೆ/ಹೊರಗುತ್ತಿಗೆ ಸಿಬ್ಬಂದಿ/ಟೆಂಡರ/2026–27, ದಿನಾಂಕ: 16–05–2026

ಇ–ಟೆಂಡರ್ ಪ್ರಕಟಣೆ

ಗದಗ ಮೃಗಾಲಯಕ್ಕೆ 2026–27 ನೇ ಸಾಲಿಗೆ (ದಿನಾಂಕ : **01–07–2026** ರಿಂದ **31–03–2027** ರವರೆಗೆ) ಗದಗ ಮೃಗಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇರೆಗೆ ಕಛೇರಿಗೆ ಕೆಲಸಗಳಿಗೆ ಡಾಟಾ ಎಂಟ್ರಿ ಆಪರೇಟರ್ ಮತ್ತು 'ಡಿ'–ಗ್ರೂಪ್ ಸಿಬ್ಬಂದಿ ಪೂರೈಕೆ ಕುರಿತು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿ ಪ್ರಕಾರ ಕಾರ್ಯನಿರ್ವಾಹಕ ನಿರ್ದೇಶಕರು ಗದಗ ಮೃಗಾಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ವಿಭಾಗ, ಗದಗ ಇವರಲ್ಲಿ ನೋಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರು ಮಾತ್ರ ಹಾಗೂ ಕರ್ನಾಟಕ ಸರ್ಕಾರ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ **https://kppp.karnataka.gov.in** ಇ–ಪೋರ್ಟಲ್ ಮೂಲಕ ಇ–ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಯುನಿಟ್ ನಂ./ ಕ್ರ.ಸಂ.	ಇಂಡೆಂಟ್ ನಂ.	ವಿವರ	ಅಂದಾಜು ಮೊತ್ತ ರೂ. ಗಳಲ್ಲಿ	ಇ.ಎಂ.ಡಿ.ಮೊತ್ತ ರೂ. ಗಳಲ್ಲಿ (2.5%)
1		ಡಾಟಾ ಎಂಟ್ರಿ ಆಪರೇಟರ್ ಮತ್ತು 'ಡಿ'–ಗ್ರೂಪ್ ಸಿಬ್ಬಂದಿ ಪೂರೈಕೆ.	50,44,450.00	1,26,111.00

ಷರತ್ತುಗಳು : (1) ಇ–ಪೋರ್ಟಲ್‌ನಲ್ಲಿ ಟೆಂಡರ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ : **16–05–2026** (2) ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **30–05–2026** ರ ಅಪರಾಹ್ನ 4.00 ಘಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **01–06–2026** ರ ಮುಂಜಾನೆ 11.00 ಘಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **06–06–2026** ರ ಮುಂಜಾನೆ 11.00 ಘಂಟೆಗೆ ತೆರೆಯಲಾಗುವುದು. (5) ಇ.ಎಂ.ಡಿ.ಗಳು ಇ–ಪೋರ್ಟ್‌ಲ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ರೀತಿಯಲ್ಲಿರತಕ್ಕದ್ದು. ಮತ್ತು ಅವುಗಳ ಚಲಾವಣೆ ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಠ 90 ದಿನಗಳವರೆಗೆ ಇರತಕ್ಕದ್ದು. (6) ಯಾವುದೇ ಟೆಂಡರಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಾಗೂ ಆಡಳಿತಾತ್ಮಕ ಕಾರಣಗಳಿಂದ ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ, ಕೈಬಿಡುವ ಅಧಿಕಾರ ಈ ಕೆಳ ಸಹಿದಾರರಿಗೆ ಇರುತ್ತದೆ. (7)ಹೆಚ್ಚಿನ ವಿವರಗಳನ್ನು **https://kppp.karnataka.gov.in** ಇ–ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು ಗದಗ ಮೃಗಾಲಯ ಹಾಗೂ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಗದಗ ಉಪ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/82/2026–27

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ
(ಸ್ವಾಯತ್ತ ಸಂಸ್ಥೆ)

ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಗಾವಿ – 590001. (ಆಸ್ಪತ್ರೆ) ದೂ. : 0831–2420320
ಫ್ಯಾಕ್ಸ್ : 0831–2420173, (ಕಾಲೇಜ್) ದೂ. : 0831–2421464 ಫ್ಯಾಕ್ಸ್ : 0831–2403126
ಇ–ಮೇಲ್ : belgaum.bims@gmail.com, ವೆಬ್‌ಸೈಟ್ : www.bimsbelgaum.org

ಸಂಖ್ಯೆ : ಬಿಮ್ಸ್/ಆಬೆ/ಸರಬರಾಜು–1/ಕೆ.ಪಿ.ಪಿ./ಟೆಂಡರ್/ಸಿ.ಆರ್–25/2026–27 ದಿನಾಂಕ : 21–05–2026

ಟೆಂಡರ್ ಅಧಿಸೂಚನೆ

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಬಿಮ್ಸ್ ಬೆಳಗಾವಿ ಟೆಂಡರ್ ಪ್ರಾಧಿಕಾರ ಇವರಿಂದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಈ ಕೆಳಕಾಣಿಸಿದ ಟೆಂಡರ್‌ಗಳ ಸೇವೆಗಾಗಿ ಕೆ.ಪಿ.ಪಿ. ನಿಯಮಾವಳಿಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

Sl. No.	Tender Notification	Description of Tender	Tender Value (Approximate) (Rs. In Lakhs)	Downloading of Tender Document
01	BIMS/HOSP/SUP-1/ CR-25/2026-27 DATE : 22-05-2026	Purchase of Smart New Born & Maternal Monitors in OBG Department of BIMS, Belagavi.	Rs. 70 Lakhs	KPP-Procurement Portal

ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೊಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್ ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/– ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು,
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/284/ಮಣಿಪಾಲ್/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–5/2026–27/910 ದಿನಾಂಕ:18–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT35935	300.00
2)	PWD/2026-27/BR/WORK_INDENT35979	105.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **22–05–2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **29–05–2026 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **30–05–2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/161

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ: ಪಂರಾ.ಇಂ/ಕಾ/ಪಿಬಿ–1/2026–27/09 ದಿ: 20.05.2026

ಟೆಂಡರ್ ಪ್ರಕಟಣೆ–09/2026–27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025–26ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನ **K.W-1** ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ವಿಶೇಷ ಘಟಕ ಯೋಜನೆಯಡಿ ಹೊನ್ನಾವರ ತಾಲೂಕಿನ ಕುದ್ರಿಗಿ ಪಂ.ದ ಶ್ರೀ ಪರಿವಾರ ನಾಗಯಕ್ಷಿ ಹಾಗೂ ನಾಗಚೌಡೇಶ್ವರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ **RDPR/2026-27/BD/WORK_INDENT26496.** ಅಂದಾಜು ಮೊತ್ತ: ರೂ. 10.00 ಲಕ್ಷ, ಮುಂಗಡ ಶೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(2) 2023–24 ಹಾಗೂ 2024–25 ನೇ ಸಾಲಿನ ಪಿ.ಎಂ ಶ್ರೀ ಅನುದಾನ (2ನೇ ಕಂತು) ಭಟ್ಕಳ ತಾಲೂಕಿನ ಕಾಯ್ಕಿಣಿ ಗ್ರಾಪಂ ಕರ್ನಾಟಕ ಪಬ್ಲಿಕ್ ಶಾಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತೆರ್ನಮಕ್ಕಿ ಶಾಲೆಗೆ ಹೆಚ್ಚುವರಿ ಕೊಠಡಿ ನಿರ್ಮಾಣ. **RDPR/2026-27/BD/WORK_INDENT26785**. ಅಂದಾಜು ಮೊತ್ತ: ರೂ. 17.70 ಲಕ್ಷ, ಮುಂಗಡ ಶೇವಣಿ: ರೂ. 44,250.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(3) 2024–25ನೇ ಸಾಲಿನ 4235–02–102–0–06–13 ಹಾಗೂ ನರೇಗಾ ಯೋಜನೆಯಡಿ ಕುಮಟಾ ತಾಲೂಕಿನ ತೊರ್ಕೆ ಪಂಚಾಯತ್ ತೊರೆಗಜನಿ ಅಂಗನವಾಡಿ ಕಟ್ಟಡ ನಿರ್ಮಾಣ. **RDPR/2026-27/BD/WORK_INDENT26368/Call-2.** ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಶೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು **Technical Bid** ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 04.06.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ **Technical Bid** ನ್ನು ತೆರೆಯುವ ದಿನಾಂಕ: 05.06.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರು,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/150/26-27 dt. 21.05.2026

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಹಿರೇಮಗಳೂರು ವಸತಿ ಬಡಾವಣೆ, ಒಂದನೇ ಹಂತ, ಹಿರೇಮಗಳೂರು-ಕಡೂರು ಬೈಪಾಸ್ ರಸ್ತೆ,
ಕಲ್ಯಾಣನಗರ, ಚಿಕ್ಕಮಗಳೂರು-577102,
ಕಛೇರಿ: 08262-295712, ಇ-ಮೇಲ್: cmr_cudackm@yahoo.in ವೆಬ್‌ಸೈಟ್: www.chikmagalur.uda.gov.in

ಸಂ.ನಅಪ್ರಾ.ಚಿ:ಶ್ರೀ.ಎ.ಬಿ.ವಿ.ಪಿ & ಹಿ.ವ.ಬ.ಮೂ/ಮ ನಿವೇಶನ: ಇ-ಹರಾಜು/ಪ್ರಕಟಣೆ:03:2026-27/99 ದಿನಾಂಕ: 19-05-2026

ಇ-ಹರಾಜು ಪ್ರಕಟಣೆ

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ, ಹಿರೇಕೊಳಲೆ ರಸ್ತೆಗೆ, ಹೊಂದಿಕೊಂಡಂತಿರುವ ಉಪ್ಪಳ್ಳಿ-ಇಂದಾವರ ಗ್ರಾಮದ ಶ್ರೀ ಎ.ಬಿ.ವಾಜಪೇಯಿ ವಸತಿ ಬಡಾವಣೆಯ ಮೂಲೆ ನಿವೇಶನಗಳ
ಇ-ಹರಾಜು ಪ್ರಕಟಣೆ

ಕ್ರಮಸಂಖ್ಯೆ : 01 ರಿಂದ 54 ರ ವರೆಗಿನ ನಿವೇಶನಗಳ ಇ-ಹರಾಜನ್ನು ತೆರೆಯುವ ದಿನಾಂಕ:19-05-2026 ಭಾರತೀಯ ಕಾಲಮಾನ 10:00 ಗಂಟೆಯ ನಂತರ. ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ **ದಿನಾಂಕ:04-06-2026** ಭಾರತೀಯ ಕಾಲಮಾನ 17:30ಗಂಟೆವರೆಗೆ.	ಕ್ರಮಸಂಖ್ಯೆ : **01** ರಿಂದ **54** ರ ವರೆಗಿನ ನಿವೇಶನಗಳ ಇ-ಹರಾಜನ್ನು ನೇರ ಬಿಡ್ಡಿಂಗ್ ಆರಂಭಿಸಲು ದಿನಾಂಕ: 05-06-2026 ಭಾರತೀಯ ಕಾಲಮಾನ 11:00 ರಿಂದ 17:00 ಗಂಟೆಗೆವರೆಗೆ (ಸಂಜೆ 5:00 ಗಂಟೆಗೆ) (ಡೆಲ್ಟಾ ಟೈಮ್ 5 ನಿಮಿಷ ಇರುತ್ತದೆ)

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ, ಹಿರೇಮಗಳೂರು ವಸತಿ ಬಡಾವಣೆಯ ಮಧ್ಯಂತರ ನಿವೇಶನಗಳ
ಇ-ಹರಾಜು ಪ್ರಕಟಣೆ

ಕ್ರಮಸಂಖ್ಯೆ : 01 ರಿಂದ 29 ರ ವರೆಗಿನ ನಿವೇಶನಗಳ ಇ-ಹರಾಜನ್ನು ತೆರೆಯುವ ದಿನಾಂಕ:19-05-2026 ಭಾರತೀಯ ಕಾಲಮಾನ 10:00 ಗಂಟೆಯ ನಂತರ. ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ **ದಿನಾಂಕ:04-06-2026** ಭಾರತೀಯ ಕಾಲಮಾನ 17:30ಗಂಟೆವರೆಗೆ.	ಕ್ರಮಸಂಖ್ಯೆ : **01** ರಿಂದ **29** ರ ವರೆಗಿನ ನಿವೇಶನಗಳ ಇ-ಹರಾಜನ್ನು ನೇರ ಬಿಡ್ಡಿಂಗ್ ಆರಂಭಿಸಲು ದಿನಾಂಕ: 05-06-2026 ಭಾರತೀಯ ಕಾಲಮಾನ 11:00 ರಿಂದ 17:00 ಗಂಟೆಗೆ ವರೆಗೆ (ಸಂಜೆ 5:00 ಗಂಟೆಗೆ) (ಡೆಲ್ಟಾ ಟೈಮ್ 5 ನಿಮಿಷ ಇರುತ್ತದೆ)

ಇ-ಹರಾಜಿನಲ್ಲಿ ಭಾಗವಹಿಸಲು ಪಾವತಿ ಮಾಡಬೇಕಾದ ಇ.ಎಂ.ಡಿ. ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ
ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ. 10,000/-ಗಳು
ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ
ವಿವರಕ್ಕೆ ಸಂಪರ್ಕಿಸಬೇಕಾದ ಜಾಲತಾಣ: **https://kppp.karnataka.gov.in**

ಸಹಿ/- ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಗ್ರಾಮ ಪಂಚಾಯತು ಕಾರ್ಯಾಲಯ ಲಾಯಿಲ
ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ
ದೂರವಾಣಿ: 9480862221 Email: gplaila123@gmail.com

ಗ್ರಾಪಂಲಾ: 20/2026–27 ದಿನಾಂಕ: 21.05.2026

ಪತ್ರಿಕಾ ಪ್ರಕಟಣೆ

(ಸರ್ಕಾರದ ಸುತ್ತೋಲೆ ಸಂಖ್ಯೆ: ನಾಇ/237/ಬೆಮಪ್ರಾ/2009 ದಿನಾಂಕ 19.09.2009)
ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕು ಲ್ಯಾಲ ಗ್ರಾಮ ಪಂಚಾಯತ್ ವ್ಯಾಪ್ತಿಯ ಖಾತಾ ಸಂಖ್ಯೆ 101/6, 103/1ಪಿ1ಬಿ, 101/7, 103/1ಡಿ, 103/1ಪಿ5 ರ ಸ್ವತ್ತಿನ ಸಂಖ್ಯೆ 151100103200122534 ರಲ್ಲಿನ ನಿವೇಶನದಲ್ಲಿ ನವಜ್ಞಾನ ಸುಧಾ ಸೇವಾ ಟ್ರಸ್ಟ್ (ರಿ) ಇವರ ಅರ್ಜಿಯನ್ನು ಸ್ಥಳೀಯ ಸಂಸ್ಥೆಗೆ ಸಲ್ಲಿಸಿ, ನಿವೇಶನದಲ್ಲಿ ನವಜ್ಞಾನ ಸುಧಾ ಸೇವಾ ಟ್ರಸ್ಟ್ (ರಿ) ಕಾಶಿಬೆಟ್ಟು ಲ್ಯಾಲ ಗ್ರಾಮ ಬೆಳ್ತಂಗಡಿ ತಾಲೂಕು ರವರು ಶೈಕ್ಷಣಿಕ ಕಟ್ಟಡ ನಿರ್ಮಿಸುವ ಸಂಬಂಧ ಕಟ್ಟಡ ಪರವಾನಿಗೆ ನೀಡುವಂತೆ ಕೋರಿರುತ್ತಾರೆ. ಈ ಸಂಬಂಧ ಪ್ರಸ್ತಾವಿತ ನಿವೇಶನಕ್ಕೆ ಅರ್ಜಿದಾರರ ಕೋರಿಕೆಯಂತೆ ನವಜ್ಞಾನ ಸುಧಾ ಸೇವಾ ಟ್ರಸ್ಟ್ (ರಿ) ಕಾಶಿಬೆಟ್ಟು ಲ್ಯಾಲ ಗ್ರಾಮ ಬೆಳ್ತಂಗಡಿ ತಾಲೂಕುರವರು ಶೈಕ್ಷಣಿಕ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಪತ್ರದ ಮುಖೇನ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಹದಿನೈದು(15)ದಿನಗಳ ಅವಧಿಯೊಳಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತು ಲ್ಯಾಲ ಇವರಿಗೆ ಸಲ್ಲಿಸಬೇಕೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ. ಸದರಿ ಅವಧಿ ಹೊರತಾಗಿ ಸ್ವೀಕೃತವಾಗುವ ಪತ್ರಗಳಿಗೆ ಯಾವುದೇ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/– ಪಂಚಾಯತು ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತು, ಲ್ಯಾಲ
ಸಹಿ/– ಆಡಳಿತಾಧಿಕಾರಿ, ಗ್ರಾಮ ಪಂಚಾಯತು, ಲ್ಯಾಲ

DIPR/DK/KSMCA/257/26-27 Date: 21.05.2026

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ
ತಾ॥ ಜಿ॥ ಗದಗ

ಸಂಪಪಂಮು/ಶಾಂ.ಎ./ಎಸ್.ಬಿ.ಎಂ/ಟೆಂಡರ್/ವಹಿ–/2026–27 ದಿನಾಂಕ:–21–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್" ಪದ್ಧತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಇಂಡೆಂಟ್ ನಂಬರಗಳ ಸಂಖ್ಯೆಗಳು–**DMA/2026-27/SE7843** ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ 1/23 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವದು.

1] ಇ–ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:	29–05–2026 ಸಂಜೆ 16.00 ಗಂಟೆಗೆ
2] ಇ–ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ:	30–05–2026 ಸಂಜೆ 16.30 ಗಂಟೆಗೆ

ನಿಗದಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಭಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/–
(ಶ್ರೀ.ಮಂಜುನಾಥ ಪಿ ಗುಳೇದ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಮುಳಗುಂದ

ಸಹಿ/–
(ಶ್ರೀನಿವಾಸಮೂರ್ತಿ ಕುಲಕರ್ಣಿ)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಮುಳಗುಂದ
ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಸಂ.ಇ/ಗದಗ/84/ದೇಶಪಾಂಡೆಪಬ್ಲಿಸಿಟಿ/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-624) ಡ್ರಾ ಮೇ 21ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PN 945080 (ATTINGAL)

Consolation Prize Rs.5,000/-
PO 945080 PP 945080 PR 945080 PS 945080
PT 945080 PU 945080 PV 945080 PW 945080
PX 945080 PY 945080 PZ 945080

2nd Prize Rs.30,00,000/- [30 Lakhs]
PT 771990 (THIRUVANANTHAPURAM)

3rd Prize Rs.5,00,000/- [5 Lakhs]
PV 714581 (ADOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0054 0244 0617 2281 2662 3384 3534 4830 5485 7194
7244 7348 7402 7816 7974 8065 9046 9745 9921

5th Prize Rs.2,000/-
1477 2891 3532 6206 6919 9514

6th Prize Rs.1,000/-
0326 0385 0915 1529 1641 2274 2429 2477 2513 3980
4146 4343 4441 4576 5229 5549 5659 7263 7424 7566
7621 8202 9136 9277 9472

7th Prize Rs.500/-
0100 0308 0678 0722 0874 1006 1063 1105 1154 1174
1340 1450 1615 1783 1794 2134 2171 2200 2206 2221
2511 2558 2602 2672 2807 2819 2926 3052 3561 3639
3799 3893 4247 4356 4618 4630 4655 4857 4975 5035
5069 5115 5265 5544 5929 5967 6285 6468 6677 6705
6759 6959 6961 7106 7378 7477 7519 7768 7801 8263
8311 8451 8510 8637 8736 8750 8810 8908 8927 9190
9204 9254 9260 9619 9663 9758

8th Prize Rs.200/-
0039 0063 0093 0189 0195 0264 0286 0417 0462 0549
0582 0884 0919 1060 1128 1133 1198 1311 1697 1731
1747 2039 2103 2279 2391 2424 2521 2624 2922 2999
3012 3222 3360 3470 3519 3793 3851 3936 4046 4081
4094 4157 4248 4363 4515 4548 4745 4755 4799 4999
5126 5150 5160 5204 5212 5282 5554 5908 5937 5980
6116 6422 6655 6669 6838 6869 7070 7230 7296 7332
7514 7905 7941 8101 8482 8570 8586 8614 8682 8870
9029 9500 9813 9891

9th Prize Rs.100/-
0001 0082 0115 0119 0154 0206 0208 0272 0285 0436
0440 0520 0532 0700 0727 0744 0801 0834 0907 0914
0941 0957 1016 1036 1092 1112 1130 1247 1279 1341
1388 1565 1665 1724 1739 1781 1807 1808 1876 1884
1904 1944 2015 2028 2049 2110 2115 2207 2235 2473
2592 2693 2876 2907 2913 3236 3405 3477 3565 3576
3592 3691 3712 3858 3860 3865 4039 4175 4236 4252
4590 4686 4716 4753 4762 4776 4829 4862 4876 5025
5061 5112 5137 5155 5388 5454 5541 5569 5616 5646
5683 5693 5710 5869 5944 5964 6079 6089 6250 6257
6267 6277 6278 6318 6322 6491 6556 6594 6791 7037
7068 7069 7100 7105 7124 7232 7317 7481 7511 7527
7640 7775 7961 8016 8017 8170 8240 8282 8302 8337
8400 8404 8509 8641 8659 8778 8799 8897 8970 9119
9186 9213 9270 9313 9320 9325 9370 9460 9537 9566
9650 9698 9747 9845 9848 9885

ಕಿರುಸುದ್ದಿ

ಮೇ 24ರಂದು 'ಫನ್ ಟೋಪಿಯಾ' ಮೆಗಾ ಮನೋರಂಜನಾ ಉತ್ಸವ

• **ಮಂಗಳೂರು:** ನಗರದ ಕೆಲರಾಯ್ ಪ್ರೆಸಿಡೆನ್ಸಿ ಸ್ಕೂಲ್ ವತಿಯಿಂದ ಮೇ 24ರಂದು ಸಂಜೆ 4ರಿಂದ ರಾತ್ರಿ 8ರವರೆಗೆ ನಗರದ ಕದ್ರಿ ಪಾರ್ಕ್‌ನಲ್ಲಿ 'ಫನ್‌ಟೋಪಿಯಾ' ಮೆಗಾ ಮನೋರಂಜನಾ ಉತ್ಸವ 2026 ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮಾಜಿ ಕಾರ್ಪೋರೇಟರ್ ಮನೋಹರ ಶೆಟ್ಟಿ ಕದ್ರಿ, ಕದ್ರಿ ಪೊಲೀಸ್ ಠಾಣೆ ಉಪನಿರೀಕ್ಷಕಿ ಜ್ಯೋತಿ ಬಿ., ನಟಿಯರಾದ ಶೈಲಶ್ರೀ ಮುಲ್ಕಿ, ವೆನ್ಸಿಟಾ ಡಯಾಸ್ ಭಾಗವಹಿಸಲಿದ್ದಾರೆ. 'ಫನ್‌ಟೋಪಿಯಾ' ಕಾರ್ಯಕ್ರಮ ಮನೋರಂಜನೆ, ಯುವಜನ ಚಟುವಟಿಕೆ, ಕುಟುಂಬ ಆಕರ್ಷಣೆ, ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮ ಒಳಗೊಂಡಿದೆ. ಕಾರ್ಯಕ್ರಮ ಎಲ್ಲ ವಯೋಮಾನದವರಿಗೂ ಅನೇಕ ವಿಶೇಷ ಅನುಭವ ನೀಡಲಿದೆ. ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಪ್ರೆಸಿಡೆನ್ಸಿ ಸ್ಕೂಲ್ ಮತ್ತು ಪಪೂ ಕಾಲೇಜು ಪ್ರಾಂಶುಪಾಲ ರಾಘವೇಂದ್ರ ಶೆಣೈ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜತೆಗೆ ಕಲಾ ಪ್ರದರ್ಶನದಲ್ಲಿ ಮಿಕ್ಕಿ ಮಂಚ್ ಮೇನಿಯಾ, ಸ್ಪ್ಲಾಶ್ ಆ್ಯಂಡ್ ಸ್ನಾಕ್, ಕಪ್ ಸ್ಟಕ್ ಚಾಂಪ್ಸ್, ಲಕ್ಕಿ ರಿಂಗ್, ಏಮ್ ಆ್ಯಂಡ್ ಗ್ರೈನ್ ಚಟುವಟಿಕೆಗಳು ಇರಲಿದೆ. ಪ್ರೆಸಿಡೆನ್ಸಿ ಮ್ಯೂಸಿಕ್ ಬ್ಯಾಂಡ್‌ನಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಪ್ರವೇಶಾತಿ ಪೂರ್ತಿ ಉಚಿತವಾಗಿರಲಿದೆ ಎಂದರು. ಪ್ರಮುಖರಾದ ಡಾ. ಅರುಣ್ ದೇವರಾಜ್, ಶೈಲಾ ಸಲ್ದಾನಾ, ಜಗನ್ನಾಥ ಶೆಟ್ಟಿ, ಶರತ್ ಕೆ., ವರ್ಷಾ, ಸುದೇಶ್ ಉಪಸ್ಥಿತರಿದ್ದರು.

ಸಂಗೀತ, ನೃತ್ಯ ಪರೀಕ್ಷೆಗೆ 3,398 ಮಂದಿ ಹಾಜರು

• **ಮಂಗಳೂರು:** ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಸಂಘಟಿಸಿದ ಸಂಗೀತ, ನೃತ್ಯ, ತಾಳವಾದ್ಯ ವಿಶೇಷ ಪರೀಕ್ಷೆ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಮಂಗಳವಾರ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಈ ಬಾರಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಟ್ಟು 3,398 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಕಳೆದ ಬಾರಿಗಿಂತ ಎರಡುಪಟ್ಟು ಹೆಚ್ಚು ಮಂದಿ ಪರೀಕ್ಷೆಗೆ ಹಾಜರಾದಂತಾಗಿದೆ. ಈ ಬಾರಿ ರಾಜ್ಯದಲ್ಲಿ 32 ಕೇಂದ್ರಗಳಲ್ಲಿ ಒಟ್ಟು 18,400 ಮಂದಿ ಪರೀಕ್ಷೆಗೆ ನೋಂದಾಯಿಸಿದ್ದು, ಮೊದಲ ಹಂತದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಮೇ 10 ರಿಂದ 19ರ ವರೆಗೆ ಸಂಗೀತ, ಭರತನಾಟ್ಯ, ಕಥಕ್ ಹಾಗೂ ಕೂಚುಪುಡಿ ನೃತ್ಯಗಳ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳು ನಡೆದಿತ್ತು. ದ.ಕ. ಜಿಲ್ಲೆಯ ಪುತ್ತೂರಲ್ಲಿ 933, ಮಂಗಳೂರಲ್ಲಿ 1,318, ಉಡುಪಿಯಲ್ಲಿ 939 ಹಾಗೂ ಉತ್ತರ ಕನ್ನಡದ ಹೊನ್ನಾವರದಲ್ಲಿ 208 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿ ಹೊರತುಪಡಿಸಿ ಬೇರೆ ಕಡೆಗಳಲ್ಲಿ ಈ ಪರೀಕ್ಷೆ ಮುಕ್ತಾಯಗೊಂಡಿದೆ. ಮೇ 22 ರಿಂದ ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿಗಳಲ್ಲಿ ಪರೀಕ್ಷೆ ನಡೆಯಲಿದ್ದು, ಮೇ 30 ರಂದು ಪರೀಕ್ಷೆಗಳು ಕೊನೆಗೊಳ್ಳಲಿವೆ. ಪರೀಕ್ಷಾರ್ಥಿಗಳಿಗೆಲ್ಲ ವಿವಿ ಅಂಕಪಟ್ಟಿ ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಈ ಬಾರಿ 3ನೇ ವರ್ಷ ನಡೆಸಿದ ಸಂಗೀತ, ನೃತ್ಯ, ತಾಳವಾದ್ಯ ಪರೀಕ್ಷೆಗಳು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಕೇಂದ್ರಗಳ ಮುಖ್ಯಸ್ಥರು, ಕಾಲೇಜುಗಳ ಪ್ರಾಂಶುಪಾಲರು ಹಾಗೂ ನೃತ್ಯಗುರುಗಳ ಸಹಕಾರದಲ್ಲಿ ಇದು ಸಾಧ್ಯವಾಗಿದೆ. ಜೂ.30ರಂದು ಕೊನೆ ಪರೀಕ್ಷೆಗಳು ಮುಕ್ತಾಯಗೊಂಡ ಬಳಿಕ ಮೌಲ್ಯಮಾಪನ ಕಾರ್ಯ ನಡೆಯಲಿದ್ದು, ತ್ವರಿತವಾಗಿ ಫಲಿತಾಂಶ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು. ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳಿಗೆ ಹಿಂದಿನಂತೆಯೇ ವಿಶ್ವವಿದ್ಯಾಲಯದ ಅಂಕಪಟ್ಟಿ ಲಭ್ಯವಾಗಲಿದೆ ಎಂದು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್ ತಿಳಿಸಿದ್ದಾರೆ.

ಅಕ್ರಮ ಮರಳು ಸಾಗಾಟ: ಲಾರಿ ಚಾಲಕ ಸೆರೆ

• **ಕುಂಬಳೆ:** ಅಕ್ರಮವಾಗಿ ಸಾಗಿಸುತ್ತಿದ್ದ ಮರಳು ಹಾಗೂ ಸಾಗಾಟಕ್ಕೆ ಬಳಸಿದ ಟಿಪ್ಪರ್ ಲಾರಿಯನ್ನು ಕುಂಬಳೆ ಎಸ್‌ಐ ಅನಂತಕೃಷ್ಣನ್ ಆರ್.ಮೆನೋನ್ ವಶಪಡಿಸಿಕೊಂಡಿದ್ದಾರೆ. ಟಿಪ್ಪರ್ ಲಾರಿ ಚಾಲಕನನ್ನು ಸೆರೆಹಿಡಿದಿದ್ದು, ವಾಹನದ ಮಾಲಕ ಸಹಿತ ಇಬ್ಬರ ವಿರುದ್ಧ ಕೇಸು ದಾಖಲಾಗಿದೆ.

ಬುಧವಾರ ಮಧ್ಯರಾತ್ರಿ ಶಿರಿಯ ಹೊಳೆಯ ಪಾಚಾಣೆಯಿಂದ ಮರಳು ಸಂಗ್ರಹಿಸಿ ಸಾಗಿಸುತ್ತಿರುವ ಬಗ್ಗೆ ಮಾಹಿತಿ ಲಭಿಸಿದ ಪೊಲೀಸರು ಮಫ್ತಿ ವೇಷದಲ್ಲಿ ಕಾರಿನಲ್ಲಿ ತಲುಪಿ ಶಿರಿಯ ವಳಯಂನಲ್ಲಿ ಟಿಪ್ಪರ್ ಲಾರಿಗೆ ತಡೆಯೊಡ್ಡಿದರು. ಕೂಡಲೇ ಚಾಲಕ ಮನೋಜ್‌ಕುಮಾರ್ (26)ನನ್ನು ಸೆರೆಹಿಡಿದರು. ಲಾರಿ ಮಾಲಕ ವಲಯಂನ ಸಲಿಂ ಹಾಗೂ ಕಂಡರೆ ಪತ್ತೆಹಚ್ಚಬಹುದಾದ ಇನ್ನೋರ್ವನ ವಿರುದ್ಧ ಕೇಸು ದಾಖಲಿಸಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಜಯಂತಿ ಸದಾಶಿವ ಶೆಟ್ಟಿ, 'ಶಿವಸದನ', ನವೋದಯ ನಗರ, ರಾಜರತ್ನಪುರ, ಕಿನ್ನಿಗೋಳಿ.
2. ಶ್ರೀಶೈಲ್ ಶೆಟ್ಟಿ, ರಹೇಜ ರೆಸಿಡೆನ್ಸಿ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – ಕಟೀಲು ಸಾನಿಧ್ಯ ಹಾಲ್‌ನಲ್ಲಿ.
3. ವಿಮಲ, ಪಂಡಿತ್‌ಹೌಸ್, ಶಿವಾಜಿ ನಗರ, ಕುತ್ತಾರು ವಯಾ ತೊಕ್ಕೊಟ್ಟು.
4. ಸವಿತಾ ಪ್ರದೀಪ್ ಆಚಾರ್ಯ, ಬೊಳ್ಳೂರು ಹೌಸ್, ಕೊಯ್ಯೂರು – ಶ್ರೀ ದುರ್ಗಾಪರಮೇಶ್ವರೀ ವಿನಾಯಕ ಮಠದ ವಠಾರ, ಹಳೆಯಂಗಡಿ.
5. ಬಾಬು ಶೆಟ್ಟಿ, ದೇರೆಬೆಟ್ಟು ಹೌಸ್, ದಂಡೆಗೋಳಿ, ಬುಡೋಳಿ, ಬಂಟ್ವಾಳ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ದೀರಜ್ ರಾವ್, ವಸುಂಧರಾ ಅಪಾರ್ಟ್‌ಮೆಂಟ್, ಮಾರಿಗುಡಿ ಕ್ರಾಸ್, ಉರ್ವ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ದೀಪಾ, ವಿಶ್ವನಾಥ ಪೂಜಾರಿ, ಮಕ್ಕಳು, ಕುಟುಂಬಸ್ಥರು, ಹೊಸಕಾಡು ಶ್ರೀ ನಾಗಬ್ರಹ್ಮ ಭಜನಾ ಮಂದಿರದ ಬಳಿ.

ಶ್ರೀ ಧರ್ಮಸ್ಥಳ ಮೇಳ

ಬೂದಾಡಿ-ಬಿಲ್ಲಾಡಿಯಲ್ಲಿ
ಶ್ರೀಮತಿ ಸರೋಜಿನಿ ರಘುರಾಮ ಶೆಟ್ಟಿ ಮತ್ತು ಮನೆಯವರು, ಹಾರ್ದಳ್ಳಿ ಮನೆ

ಶ್ರೀ ಹನುಮಗಿರಿ ಮೇಳ

ಕಾಟಿಪಳ್ಳದಲ್ಲಿ

ಶ್ರೀ ಪಾವಂಜೆ ಮೇಳ

ಯಕ್ಷಸ್ವರ್ಗ ಅಜೆಕಾರು ಪೇಟೆಯಲ್ಲಿ
ಪಾಪಣ್ಣ ವಿಜಯ- ಗುಣಸುಂದರಿ

ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದಲ್ಲಿ ವಿವಿಧ ಕಾರ್ಯಕ್ರಮಗಳ ಆಯೋಜನೆ

ನಾಳೆ 'ವಿಶ್ವ ಜೇನು ದಿನಾಚರಣೆ -2026'

• **ಮಡಿಕೇರಿ:** ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯ ಮಡಿಕೇರಿ ವಿಸ್ತರಣಾ ಘಟಕ ಹಾಗೂ ಅರಣ್ಯ ಮಹಾ ವಿದ್ಯಾಲಯ, ರೈನ್ ಫಾರೆಸ್ಟ್ ಮತ್ತು ಬೈಫ್ ಸಬಲ ಯೋಜನೆಯ ವತಿಯಿಂದ ಮೇ 23 ರಂದು ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದಲ್ಲಿ 'ವಿಶ್ವ ಜೇನು ದಿನಾಚರಣೆ–2026' ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಮಡಿಕೇರಿ ವಿಸ್ತರಣಾ ಶಿಕ್ಷಣ ಘಟಕದ ಮುಖ್ಯಸ್ಥ ಡಾ.ಆರ್.ಎನ್. ಕೆಂಚಾರೆಡ್ಡಿ ಅವರು ಈ ಕುರಿತು ಮಾಹಿತಿ ನೀಡಿ, ಕೃಷಿಯಲ್ಲಿನ ರಾಸಾಯನಿಕ ಗೊಬ್ಬರಗಳ ಬಳಕೆ, ಆಹಾರದ ಅಲಭ್ಯತೆ ಮೊದಲಾದ ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಜೇನುಹುಳುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ವಿವಿಧ ಬೆಳೆಗಳಲ್ಲಿ ಪರಾಗಸ್ಪರ್ಶಕ್ಕೆ ಅತ್ಯವಶ್ಯಕವಾಗಿರುವ ಜೇನು ಹುಳುಗಳನ್ನು ಸಂರಕ್ಷಿಸುವ ಮತ್ತು ಜೇನು ಕೃಷಿಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವ ಜೇನು ದಿನಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆಯೆಂದು ತಿಳಿಸಿದರು.

ವಿಶ್ವ ಜೇನು ದಿನಾಚರಣೆಯನ್ನು ಅಂದು ಬೆಳಗ್ಗೆ 10.30 ಗಂಟೆಗೆ ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಕುಲಪತಿ ಡಾ.ಕೆ.ಸಿ. ನಾರಾಯಣಸ್ವಾಮಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೃಷಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಡಾ.ಎ.ಬಿ.ಪಾಟೀಲ್ ಪಾಲ್ಗೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನಗಳ ವಿವಿಯ ವಿಸ್ತರಣಾ ನಿರ್ದೇಶಕ ಡಾ.ರಾಮಚಂದ್ರ ಸಿ. ವಹಿಸಲಿದ್ದಾರೆ. ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಜಿ.ಎಂ.ದೇವಗಿರಿ ಅವರ ಗೌರವ ಉಪಸ್ಥಿತಿ ಇರಲಿದೆಯೆಂದು ವಿವರಿಸಿದರು.

ಜೇನು ಕೃಷಿ ಮಾನವನ ಆರೋಗ್ಯಕ್ಕೆ ಹೇಗೆ ಸಹಕಾರಿಯಾಗಬಲ್ಲುದು ಮತ್ತು ವಿವಿಧ ಬೆಳೆಗಳ ಇಳುವರಿಯಲ್ಲಿ ಅವುಗಳ ಪಾತ್ರ, ಜೇನು ಕೃಷಿ ಕೈಗೊಳ್ಳುವ ವಿಧಾನ, ಜೇನು ಕುಟುಂಬಗಳ ನಿರ್ವಹಣೆಯ ಮಾಹಿತಿಯನ್ನು ಕಾರ್ಯಕ್ರಮದ ಮೂಲಕ ಒದಗಿಸಲಾಗುತ್ತದೆಂದು ಡಾ. ಕೆಂಚಾರೆಡ್ಡಿ ತಿಳಿಸಿದರು.



ಕೃಷಿಕರಿಗೆ ಜೇನು ಕುಟುಂಬಗಳ ಮಾರಾಟ

ಕೃಷಿ ವಿಜ್ಞಾನಗಳ ವಿವಿಯ ವಿಸ್ತರಣಾ ಘಟಕಗಳ ಮೂಲಕ ಸ್ಥಳೀಯ 'ತುಡುವೆ' ಜೇನು ಕುಟುಂಬಗಳನ್ನು ಆಸಕ್ತ ಕೃಷಿಕರಿಗೆ ಒದಗಿಸಲಾಗುತ್ತದೆ. ಇದಕ್ಕಾಗಿ ಪ್ರತಿ ಒಂದು ಜೇನು ಕುಟುಂಬಕ್ಕೆ 1600 ರೂ.ಗಳನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ಜಿಲ್ಲೆಯ ವಿಸ್ತರಣಾ ಘಟಕಗಳಲ್ಲಿ 600 ಜೇನು ಕುಟುಂಬಗಳಿರುವುದಾಗಿ ಮಾಹಿತಿಯನ್ನಿತ್ತರು.

> **ಜೇನು ಕೃಷಿಕರಿಗೆ ಸನ್ಮಾನ**
> ಕಾರ್ಯಕ್ರಮದಲ್ಲಿ ಕೊಡಗಿನ ಆಯ್ದ ಪ್ರಗತಿಪರ ಜೇನು ಕೃಷಿಕರನ್ನು ಸನ್ಮಾನಿಸಿ ಗೌರವಿಸಲಾಗುತ್ತದೆ. ಇದರೊಂದಿಗೆ ಕೊಡಗಿನಲ್ಲಿ ಲಭ್ಯವಿರುವ ವಿವಿಧ ಬಗೆಯ ಜೇನು ತುಪ್ಪ, ಬೇರೆಡೆಗಳಿಂದ ತಂದ ಜೇನು ತುಪ್ಪಗಳ ಮಾದರಿ ಪ್ರದರ್ಶನವಿರುತ್ತದೆ. ವಿಶೇಷವಾಗಿ ಜೇನಿನ ಪರಿಶುದ್ಧತೆಯನ್ನು ಪರೀಕ್ಷಿಸುವ ಕೆಲ ವಿಧಾನಗಳ ಪ್ರಾತ್ಯಕ್ಷಿಕೆಯನ್ನು ಕಾರ್ಯಕ್ರಮದಲ್ಲಿ ಅಳವಡಿಸಲಾಗಿದೆ. ವಿವಿಧ ಜೇನು ಕೃಷಿ ಉಪಕರಣಗಳ ಪ್ರದರ್ಶನ ಮತ್ತು ಮಾರಾಟವನ್ನೂ ಆಯೋಜಿಸಲಾಗಿದೆ
> ■ ಡಾ.ಆರ್.ಎನ್.ಕೆಂಚಾರೆಡ್ಡಿ

ರೋಗ ಕ್ಷೀಣಿಸಿದೆ

ಮಾಧ್ಯಮಗಳ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಸುಮಾರು ಮೂರು ದಶಕಗಳ ಹಿಂದೆ ಕಾಣಿಸಿಕೊಂಡ 'ಥಾಯಿ ಸ್ಯಾಕ್ ಬ್ರೂಡ್' ಎನ್ನುವ ವೈರಲ್ ರೋಗದಿಂದ ಜೇನು ಹುಳುಗಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿತ್ತು. ಪ್ರಸ್ತುತ ರೋಗ ಬಾಧೆ ಸಾಕಷ್ಟು ಇಳಿಮುಖವಾಗಿದ್ದು, ಈಗ ರೋಗ ನಿಯಂತ್ರಣದ ಕ್ರಮಗಳನ್ನು ಕಂಡುಕೊಳ್ಳಲಾಗಿದೆಯೆಂದು ತಿಳಿಸಿದರು. ಗೋಷ್ಠಿಯಲ್ಲಿ ಮಡಿಕೇರಿ ವಿಸ್ತರಣಾ ಶಿಕ್ಷಣ ಘಟಕದ ತೋಟಗಾರಿಕೆ ತಜ್ಞ ಡಾ.ಹೇಮಂತ್ ಕುಮಾರ್ ಪಿ., ಪೊನ್ನಂಪೇಟೆಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಕ ಡಾ. ಪ್ರಶಾಂತ್ ಸಿ. ಉಪಸ್ಥಿತರಿದ್ದರು.

- ▸▸ ಕೃಷಿಯಲ್ಲಿನ ರಾಸಾಯನಿಕ ಗೊಬ್ಬರಗಳ ಬಳಕೆ, ಆಹಾರದ ಅಲಭ್ಯತೆ ಮೊದಲಾದ ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಜೇನುಹುಳುಗಳ ಸಂಖ್ಯೆ ಕ್ಷೀಣಿಸುತ್ತಿದೆ.
- ▸▸ ಜೇನು ಕೃಷಿಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವ ಜೇನು ದಿನಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ

ಬಿಜೈ ಜಂಕ್ಷನ್ ಬಳಿ ಮೂರು ವರ್ಷದ ಹಿಂದೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಸಾವು

ಆಟೋರಿಕ್ಷಾ ಮಾಲಕ-ಚಾಲಕನಿಗೆ ಜೈಲು ಶಿಕ್ಷೆ

• **ಮಂಗಳೂರು:** ಇಲ್ಲಿನ ಬಿಜೈ ಜಂಕ್ಷನ್ ಬಳಿ ಮೂರು ವರ್ಷದ ಹಿಂದೆ ನಡೆದ ಪ್ರಕರಣದ ತೀರ್ಪು ಹೊರಬಿದ್ದಿದೆ. ಬಿಜೈ ಜಂಕ್ಷನ್ ಬಳಿ ಬೈಕ್ ಆಟೋ ರಿಕ್ಷಾ ಡಿಕ್ಕಿಯಾಗಿ ಬೈಕ್ ಸವಾರನ ಸಾವಿಗೆ ಕಾರಣವಾಗಿರುವುದು ಮಾತ್ರವಲ್ಲದೆ, ಆಟೋ ಸವಾರ ಸ್ಥಳದಿಂದ ಪರಾರಿಯಾಗಿರುವುದು ಹಾಗೂ ಊರ್ಜಿತ ಲೈಸನ್ಸ್ ಇಲ್ಲದ ಚಾಲಕನಿಗೆ ಆಟೋವನ್ನು ಚಲಾಯಿಸಲು ಕೊಟ್ಟಿರುವ ಪ್ರಕರಣದಲ್ಲಿ ಆಟೋ ಚಾಲಕ ಮತ್ತು ಮಾಲಕ ಇಬ್ಬರಿಗೂ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

2023ರ ಫೆ.21ರಂದು ಬಿಜೈ ಜಂಕ್ಷನ್ ಕಡೆಯಿಂದ ರಂಗೋಲಿ ಕ್ರಾಸ್ ಕಡೆಗೆ ಸಾಗುವ ರಸ್ತೆಯ ಎಸ್.ಎಲ್.ವಿ . ಬುಕ್ ಹೌಸ್ ಎದುರು ರಿಕ್ಷಾ ಚಾಲಕ ಸಾಯಿರಾಮ್ ಯು–ಟರ್ನ್ ಮಾಡುವ ಭರದಲ್ಲಿ ಏಕಾಏಕಿ ನಿರ್ಲಕ್ಷತನದಿಂದ ಚಲಾಯಿಸಿದ ಕಾರಣ, ಬಿಜೈ ಕಡೆಗೆ ಬರುತ್ತಿದ್ದ ಬೈಕ್ ಸವಾರ ಕವನ್ ಆಳ್ವಾ ಅವರ ಬೈಕ್ ಆಟೋಗೆ ಡಿಕ್ಕಿಯಾಗಿದೆ. ಪರಿಣಾಮ ಬೈಕ್ ಸಮೇತ ಎಸೆಯಲ್ಪಟ್ಟು ರಸ್ತೆ ಬದಿಯಲ್ಲಿದ್ದ ಮರಕ್ಕೆ ಗುದ್ದಿ ತಲೆಗೆ ತೀವ್ರ ತರದ ಗಾಯವಾಗಿತ್ತು. ರಿಕ್ಷಾ ಚಾಲಕನು ಬೈಕ್ ಸವಾರನಿಗೆ ಯಾವುದೇ ಆರೈಕೆ, ಚಿಕಿತ್ಸೆ ನೀಡಲು ಮುಂದಾಗದೇ ಸ್ಥಳದಿಂದ ಪರಾರಿಯಾಗಿದ್ದು, ಗಂಭೀರ ಗಾಯಗೊಂಡ ಬೈಕ್ ಸವಾರ ಬಳಿಕ ಮೃತ ಪಟ್ಟಿದ್ದಾರೆ. ತನಿಖೆ ವೇಳೆ ಚಾಲಕನ ಬಳಿ ಊರ್ಜಿತ ಚಾಲನ ಪರವಾನಗಿ ಇಲ್ಲದಿರುವುದು ತಿಳಿದು ಬಂದಿದೆ.

ಆ ಹಿನ್ನೆಲೆಯಲ್ಲಿ ರಿಕ್ಷಾ ಚಾಲಕ ಹಾಗೂ ಆರ್.ಸಿ. ಮಾಲಕನ ವಿರುದ್ಧ ಕದ್ರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆಗಿನ ಇನ್ಸಪೆಕ್ಟರ್ ನಾಗರಾಜ್ ಕೆ. ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ಕೈಗೆತ್ತಿಕೊಂಡ 8ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶರಾದ ಫವಾಜ್ ಪಿ.ಎ ಅವರು ಸಾಕ್ಷಿ ವಿಚಾರಣೆಗಳನ್ನು ನಡೆಸಿ ವಾದ ಪ್ರತಿವಾದಗಳನ್ನು ಆಲಿಸಿದ್ದು, ಪ್ರಾಸಿಕ್ಯೂಶನ್ ಪ್ರಕರಣವನ್ನು ಸಾಬೀತು ಪಡಿಸಿದ ಹಿನ್ನಲೆಯಲ್ಲಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಚಾಲಕನಿಗೆ ಐ.ಎಂ.ವಿ ಕಾಯ್ದೆ ಕಲಂ 187ರ ಅಡಿಯಲ್ಲಿ 1 ತಿಂಗಳ ಸಾದಾ ಸಜೆ ಮತ್ತು 5,000 ರೂ. ದಂಡ. ದಂಡ ಕಟ್ಟಲು ತಪ್ಪಿದಲ್ಲಿ 10 ದಿನಗಳ ಸಾದಾ ಸಜೆ. ಕಲಂ: 181ರ ಅಡಿಯಲ್ಲಿ 15 ದಿನಗಳ ಸಾದಾ ಸಜೆ ಹಾಗೂ 1,000 ರೂ. ದಂಡ. ದಂಡ ಕಟ್ಟಲು ತಪ್ಪಿದಲ್ಲಿ 7 ದಿನಗಳ ಸಾದಾ ಸಜೆ ವಿಧಿಸಿದ್ದಾರೆ.

ಪ್ರಕರಣದಲ್ಲಿ ಸರಕಾರದ ಪರವಾಗಿ ಮೊದಲಿಗೆ ಗೀತಾ ರೈ ಸಾಕ್ಷಿ ವಿಚಾರಣೆ ನಡೆಸಿದ್ದು, ಅನಂತರ ಆರೋನ್ ಡಿ'ಸೋಜಾ ವಿಟ್ಲ ಸಾಕ್ಷಿ ವಿಚಾರಣೆ ಮುಂದುವರಿಸಿ ವಾದ ಮಂಡಿಸಿದ್ದಾರೆ.

ಈಜಲು ಹೋದ ವಿದ್ಯಾರ್ಥಿ ನದಿಯಲ್ಲಿ ನಾಪತ್ತೆ

• **ಪುತ್ತೂರು:** ಬೆಳ್ಳಿಪಾಡಿ ಗ್ರಾಮದ ಕಠಾರ ಸಮೀಪ ಕುಮಾರಧಾರ ನದಿಯಲ್ಲಿ ಈಜಲು ತೆರಳಿದ್ದ ಕಾಲೇಜು ವಿದ್ಯಾರ್ಥಿಯೋರ್ವ ನೀರುಪಾಲಾದ ದುರ್ಘಟನೆ ಗುರುವಾರ ಸಂಭವಿಸಿದೆ.



ಮೃತರನ್ನು ಗದಗ ಮೂಲದ ಕಿರಣ್ ಎಂದು ಗುರುತಿಸಲಾಗಿದೆ. ಅವರು ಪುತ್ತೂರಿನ ವಿದ್ಯಾಸಂಸ್ಥೆಯೊಂದರಲ್ಲಿ ಫಾರ್ಮಸಿ ವ್ಯಾಸಂಗ ಮಾಡುತ್ತಿದ್ದರು ಎಂದು ತಿಳಿದುಬಂದಿದೆ. ಮಾಹಿತಿಯಂತೆ, ನಾಲ್ವರು ಯುವಕರು ಈಜಲೆಂದು ನೇತ್ರಾವತಿ ನದಿಗೆ ತೆರಳಿದ್ದರು. ಈ ವೇಳೆ ಕಿರಣ್ ಅವರು ನದಿಗೆ ಇಳಿದಾಗ ನೀರಿನ ಸೆಳೆತಕ್ಕೆ ಸಿಲುಕಿ ಮುಳುಗಿದ್ದಾರೆ ಎನ್ನಲಾಗಿದೆ.

ಇಟಲಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮ

ಮಂಗಳೂರಿನ ಶಾಲಾ ತಂಡ ಭಾಗಿ



• **ಮಂಗಳೂರು:** ಸಂತ ಅಲೋಶಿಯಸ್ ಗೊನ್ಜಾಗ ಶಾಲೆ ಮತ್ತು ಮಿಲಾನ್ನ ಜೆಸ್ಯೂಟ್ ಶಾಲೆಯಾದ ಇಸ್ಟಿಟುಟೋ ಲಿಯೋನೆ ಜತೆಗೆ ಮೂರನೇ ಅಂತಾರಾಷ್ಟ್ರೀಯ ವಿದ್ಯಾರ್ಥಿ–ವಿನಿಮಯ ಕಾರ್ಯಕ್ರಮದ ಅಂಗವಾಗಿ 11ನೇ ತರಗತಿಯ (2025– 26ನೇ ಬ್ಯಾಚ್) ಎಂಟು ವಿದ್ಯಾರ್ಥಿಗಳ ತಂಡ ಪ್ರಿನ್ಸಿಪಾಲ್ ಫಾ.ರೋಹನ್ ಡಿಅಲ್ಮೇಡಾ ಎಸ್.ಜೆ. ಮತ್ತು ಶಿಕ್ಷಕರಾದ ದೀಪಾ ಕರ್ಕಡ ಮತು ದೀಪ್ತಿ ಸಹನಾ ಅವರೊಂದಿಗೆ ಇಟಲಿಯ ಮಿಲಾನ್ನಲ್ಲಿ ನಡೆದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿತು.

ಕಾರ್ಯಕ್ರಮದ ಭಾಗವಾಗಿ, ವಿದ್ಯಾರ್ಥಿಗಳು ಫ್ಲಾರೆನ್ಸ್ ಮತ್ತು ಇಟಲಿಯ ಹಲವಾರು ಐತಿಹಾಸಿಕವಾಗಿ ಮಹತ್ವದ ಸ್ಥಳಗಳಿಗೆ ಭೇಟಿ ನೀಡಿ, ದೇಶದ ಶ್ರೀಮಂತ ಪರಂಪರೆ, ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಒಳನೋಟ ಪಡೆದರು. ಕಳೆದ ಅಕ್ಟೋಬರ್‌ನಲ್ಲಿ ಸಂತ ಅಲೋಶಿಯಸ್ ಗೊನ್ಜಾಗ ಶಾಲೆಗೆ ಭೇಟಿ ನೀಡಿದ್ದ ಇಟಾಲಿಯನ್ ವಿದ್ಯಾರ್ಥಿಗಳು ಗೊನ್ಜಾಗ ತಂಡಕ್ಕೆ ಆತಿಥ್ಯ ನೀಡಿದ್ದು, ಇಟಾಲಿಯನ್ ಸಂಪ್ರದಾಯಗಳು, ಜೀವನಶೈಲಿ ಮತ್ತು ಆತಿಥ್ಯವನ್ನು ನೇರವಾಗಿ ಅನುಭವಿಸಲು ಅವರಿಗೆ ವಿಶಿಷ್ಟ ಅವಕಾಶವನ್ನು ಕಲ್ಪಿಸಿತು.

ವಿದ್ಯಾರ್ಥಿಗಳು ಇಸ್ಟಿಟುಟೋ ಲಿಯೋನೆನಲ್ಲಿ ತರಗತಿಗಳಿಗೆ ಹಾಜರಾಗಿ, ಇಟಾಲಿಯನ್ ಶಾಲೆಗಳಲ್ಲಿ ಅನುಸರಿಸುವ ವಿಭಿನ್ನ ಬೋಧನಾ–ಕಲಿಕಾ ಪದ್ಧತಿಗಳನ್ನು ಗಮನಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗಿನ ಸಂವಾದವು ಅವರ ದೃಷ್ಟಿಕೋನವನ್ನು ವಿಸ್ತರಿಸಲು ಮತ್ತು ಜಾಗತಿಕ ಶಿಕ್ಷಣದ ಬಗ್ಗೆ ಅವರ ತಿಳುವಳಿಕೆಯನ್ನು ಆಳವಾಗಿಸಲು ಸಹಾಯ ಮಾಡಿತು.

ವೈದ್ಯರ ಮನೆಯಲ್ಲಿ ಎರಡನೇ ಬಾರಿ ಕಳ್ಳತನ

• **ಪುತ್ತೂರು:** 5 ತಿಂಗಳ ಹಿಂದೆಯಷ್ಟೇ ನಗದು ಸಹಿತ ದೇವರ ಬೆಳ್ಳಿಯ ಮೂರ್ತಿ ಕಳವಾದ ವೈದ್ಯರೊಬ್ಬರ ಮನೆಯಿಂದ ಇದೀಗ ಮತ್ತೊಮ್ಮೆ ಕಳ್ಳತನ ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಮೈಸೂರಿನಲ್ಲಿ ಕ್ಲಿನಿಕ್ ಹೊಂದಿರುವ ಡಾ. ವೆಂಕಟರಮಣ ಭಟ್ ಅವರ ಪುತ್ತೂರು ಉರ್ಲಾಂಡಿ ಕಸಬಾ ಗ್ರಾಮದ ಸುಶ್ರುತ ಆಸ್ಪತ್ರೆಯ ಬಳಿಯಲ್ಲಿರುವ ಮನೆಯಿಂದ 2025ರ ಡಿಸೆಂಬರ್ ತಿಂಗಳಲ್ಲಿ ನಗದು ಮತ್ತು ಬೆಳ್ಳಿಯ ಮೂರ್ತಿ ಕಳವಾಗಿತ್ತು. ಇದೀಗ 2026ರ ಎಪ್ರಿಲ್ ತಿಂಗಳಲ್ಲಿ ಮತ್ತೊಮ್ಮೆ ನಗದು ಕಳವಾಗಿದೆ.

ಡಾ. ವೆಂಕಟರಮಣ ಭಟ್ ಅವರು ಒಬ್ಬರೇ ಮನೆಯಲ್ಲಿ ವಾಸವಾಗಿದ್ದು, ಅವರು ವೃತ್ತಿಗಾಗಿ ಮೈಸೂರಿಗೆ ಹೋಗಿ ಬರುತ್ತಿದ್ದರು. ಈ ವೇಳೆ ಅವರ ಸಂಬಂಧಿಕರಾದ ಪಾಣಾಜೆ ಗ್ರಾಮದ ಗಿಳಿಯಾಲು ಬಿ.ಕೆ.ಅವಿನಾಶ್ ಅವರು ಮನೆಯನ್ನು ನೋಡಿಕೊಳ್ಳುತ್ತಿದ್ದರು. ಏ.4 ರಂದು ಬೆಳಗ್ಗೆ ಡಾ.ವೆಂಕಟರಮಣ ಭಟ್ ಅವರು ಮೈಸೂರಿಗೆ ಹೋಗಿದ್ದರು. ಈ ಬಗ್ಗೆ ಅವರು ಸಂಬಂಧಿಕ ಅವಿನಾಶ್ ಅವರಿಗೆ ತಿಳಿಸಿದ್ದರು. ಮೇ 19ರಂದು ಡಾ.ವೆಂಕಟರಮಣ ಭಟ್ ಅವರು ತನ್ನ ಮನೆಗೆ ಬಂದಾಗ ಅವರು ಮಲಗುವ ಹಾಸಿಗೆಯ ತಲೆ ದಿಂಬಿನ ಅಡಿಯಲ್ಲಿ ಇಟ್ಟಿದ್ದ 45 ಸಾವಿರ ಕಳವು ಆಗಿರುವುದು ಕಂಡು ಬಂದಿದೆ. ಈ ವಿಚಾರವನ್ನು ಅವರು ಅವಿನಾಶ್‌ಗೆ ಕರೆ ಮಾಡಿ ತಿಳಿಸಿದ್ದರು. ಅವಿನಾಶ್ ಅವರು ಮನೆಗೆ ಹೋಗಿ ನೋಡಿದಾಗ ಡಾ.ವೆಂಕಟರಮಣ ಭಟ್ ಅವರ ಮನೆಯ ಹಂಚು ತೆಗೆದು ಮನೆಯ ಒಳಗಡೆ ಪ್ರವೇಶಿಸಿ ಹಣವನ್ನು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ.

ಘಟನೆ ಕುರಿತು ಅವಿನಾಶ್ ಅವರು ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್

ಇಂದು ಎಐ, ರೊಬೊಟಿಕ್ಸ್ ಲ್ಯಾಬ್ ಉದ್ಘಾಟನೆ

• **ಮಂಗಳೂರು:** ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್, ಎಂಫಸಿಸ್ ಫೌಂಡೇಶನ್ ಸಹಯೋಗದೊಂದಿಗೆ ಮೇ 22ರಂದು ಎಂಫಸಿಸ್ ಎಐ ಮತ್ತು ರೊಬೊಟಿಕ್ಸ್ ಲ್ಯಾಬ್ ಹಾಗೂ ಮೇ 23ರಂದು ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ಉದ್ಘಾಟನೆಗೊಳ್ಳಲಿದೆ.

ಕಾಲೇಜು ಆವರಣದಲ್ಲಿ ಮೇ 22ರಂದು ಬೆಳಗ್ಗೆ 10 ಗಂಟೆಗೆ ಎಂಫಸಿಸ್ ಎಐ ಮತ್ತು ರೊಬೊಟಿಕ್ಸ್ ಲ್ಯಾಬ್‌ನ ಉದ್ಘಾಟನೆಯನ್ನು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ನೆರವೇರಿಸಲಿದ್ದಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಎಸ್. ವಿದ್ಯಾಶಂಕರ್, ಸ್ಪಾರ್ಕಲ್ ಇನ್ನೋವೇಶನ್ ಇಕೋಸಿಸ್ಟಮ್ ಮತ್ತು ಕಮ್ಯುನಿಕೇಷನ್ಸ್‌ನ ಹಿರಿಯ ಉಪಾಧ್ಯಕ್ಷೆ ದೀಪಾ ನಾಗರಾಜ್, ಎಂಫಸಿಸ್ ಫೌಂಡೇಶನ್‌ನ ಸಿಎಸ್‌ಆರ್ ಮುಖ್ಯಸ್ಥ ಸುಮಿತ್ ಚೌಹಾಣ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಉಪಾಧ್ಯಕ್ಷ ಚೇತನ್ ದೀಕ್ಷಿತ್, ನ್ಯಾಸ್‌ಕಾಮ್ ಪ್ರಾದೇಶಿಕ ನಿರ್ದೇಶಕ ಭಾಸ್ಕರ್ ಭಾಗವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಎಸ್.ಎಸ್. ಇಂಜಗನೇರಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಲ್ಯಾಬ್ ಅನ್ನು ಸಹ್ಯಾದ್ರಿ ಹಬ್ ಫಾರ್ ಇನ್ನೋವೇಶನ್ ಆ್ಯಂಡ್ ಎಂಟರ್ ಪ್ರೆನ್ಯೂರ್ ಶಿಪ್ ಫೌಂಡೇಶನ್ (ಶೈನ್ ಫೌಂಡೇಶನ್), ಕೆಡಿಇಎಂ ಮತ್ತು ನ್ಯಾಸ್‌ಕಾಮ್ ಸಹಯೋಗದೊಂದಿಗೆ ಎಂಫಸಿಸ್ ಫೌಂಡೇಶನ್‌ನ ಸಿಎಸ್‌ಆರ್ ಉಪ ಕ್ರಮದ ಭಾಗವಾಗಿ ಸ್ಥಾಪಿಸಲಾಗಿದೆ. ಉದ್ಯಮ ಸಿದ್ಧ ಪ್ರತಿಭೆ, ನಾವೀನ್ಯತೆ, ಸ್ಟಾರ್ಟ್‌ಅಪ್‌ಗಳು ಮತ್ತು ಪ್ರಾದೇಶಿಕ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಸುಧಾರಿತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ನಾಲ್ಕು ವರ್ಷಗಳಿಗೆ 2 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ಸಮಗ್ರ ಕೈಗಾರಿಕಾ ಕಾರ್ಯಕ್ಷೇತ್ರ ಉದ್ಘಾಟನಾ ಸಮಾರಂಭ ಮೇ 23ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದ್ದಯ, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ್ ಉದ್ಘಾಟಿಸುವರು. ಆಲ್ ಕಾರ್ಗೋ ಲಾಜಿಸ್ಟಿಕ್ಸ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷ ಶಶಿ ಕಿರಣ್ ಶೆಟ್ಟಿ, ಸೈಂಟಿಯಾ ಕನ್ಸಲ್ಟಿಂಗ್ ಪ್ರಧಾನ ಸಲಹೆಗಾರ ರಾಹುಲ್ ಖಿರ್ಗೆ, ಆಲ್‌ಕಾರ್ಗೋ ಲಾಜಿಸ್ಟಿಕ್ಸ್ ಗ್ರೂಪ್ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಇಂದ್ರಾಣಿ ಚಟರ್ಜಿ, ಎಂಆರ್‌ಡಿಸಲ್ಟ್ ಉಪಾಧ್ಯಕ್ಷೆ ಪದ್ಮಶ್ರೀ ಆಳ್ವ, ಡಿಸ್ಕವರ್ ಡಾಲರ್ ಸಿಇಒ ಸುಬ್ರಹ್ಮಣ್ಯ ರಾವ್ ಭಾವಹಿಸಲಿದ್ದಾರೆ ಎಂದರು.

ವಿದ್ಯಾರ್ಥಿಗಳು ನೇರವಾಗಿ ಉದ್ಯಮ ತಜ್ಞರೊಂದಿಗೆ ಬೆರೆಯುವ ಲೈವ್ ಪ್ರಾಜೆಕ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುವುದು, ಇಂಟರ್ನ್‌ಶಿಪ್ ಮತ್ತು ಫ್ರೀಲ್ಯಾನ್ಸಿಂಗ್ ಕಾರ್ಯ ಯೋಜನೆಗಳಲ್ಲಿ ಭಾಗವಹಿಸಲು ಈ ಕಾರ್ಯಕ್ಷೇತ್ರ ನೆರವಾಗಲಿದೆ. ಸದ್ಯ 100 ಸೀಟುಗಳನ್ನು ಹೊಂದಿರುವ ಕಾರ್ಯಕ್ಷೇತ್ರವನ್ನು 300 ಸೀಟುಗಳಿಗೆ ವಿಸ್ತರಿಸುವ ಜತೆಗೆ ಸದ್ಯ 4 ಕಂಪನಿಗಳು ಹೊಂದಿರುವುದನ್ನು ಒಂದು ವರ್ಷದೊಳಗೆ ಅದನ್ನು 25 ಕಂಪನಿಗಳು ಕೈಜೋಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ಅವರು ಹೇಳಿದರು.

ಉಪಪ್ರಾಂಶುಪಾಲ ಡಾ. ಸುಧೀರ್ ಶೆಟ್ಟಿ, ಸಿಇಒ ಜಾನ್ಸನ್, ಡಾ. ರಾಮಕೃಷ್ಣ ದೇವಾನಂದ, ಮಾನಸ ಶೆಟ್ಟಿ ಉಪಸ್ಥಿತರಿದ್ದರು.

ಕಿರುಸುದ್ದಿ

ಮೇ 23-24ರಂದು ಬಾಳಂಭಟ್ ಹಾಲ್‌ನಲ್ಲಿ ಸಾವಯುವ ಕೃಷಿಕ ಗ್ರಾಹಕ ಬಳಗದ ಹಲಸು ಹಬ್ಬ

ಮಂಗಳೂರು: ನಗರದಲ್ಲಿ ಕಳೆದ ಒಂದು ದಶಕಕ್ಕೂ ಮಿಕ್ಕಿ ಸಾವಯುವ ಕೃಷಿ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿರುವ ಸಾವಯುವ ಕೃಷಿಕ ಗ್ರಾಹಕ ಬಳಗ ತನ್ನ 9ನೇ ವರ್ಷದ ಹಲಸು- ಮಾವು ಮೇಳವನ್ನು ಮೇ 23 ಮತ್ತು 24ರಂದು ನಗರದ ಶರವು ದೇವಸ್ಥಾನ ಬಳಿಯ ಬಾಳಂಭಟ್ ಹಾಲ್‌ನಲ್ಲಿ ಆಯೋಜಿಸುತ್ತಿದೆ. ಮೇ 23ರಂದು ಬೆಳಗ್ಗೆ 9.30ಕ್ಕೆ ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ಉದ್ಘಾಟಿಸಲಿದ್ದು, ದ.ಕ. ಜಿಪಂ ಯೋಜನಾ ನಿರ್ದೇಶಕ ಮತ್ತು ಉಪ ಕಾರ್ಯದರ್ಶಿ ಜಯರಾಮ್ ಕೆ.ಇ., ಜಾದೂಗಾರ ಕುದ್ರೋಳಿ ಗಣೇಶ್, ಬಳಗದ ಪ್ರಮುಖರು ಭಾಗವಹಿಸುವರು.

ರಾಜ್ಯದಾದ್ಯಂತದ ಕೃಷಿಕರು ಹಲಸು, ಮಾವು, ಅವುಗಳ ಮೌಲ್ಯ ವರ್ಧಿತ ಉತ್ಪನ್ನಗಳು, ಸಿರಿ ಧಾನ್ಯ ತರಲಿದ್ದಾರೆ. ದೈನಂದಿನ ಉಪಯೋಗಿ ಸಾವಯುವ ಅಕ್ಕಿ ದಿನಸಿಗಳು, ಸ್ಥಳದಲ್ಲೇ ತೆಂಗಿನ ಎಣ್ಣೆ ಉಪಯೋಗಿಸಿ ತಯಾರಿಸುವ ಶುಚಿಯಾದ ರುಚಿಕರ ಖಾದ್ಯಗಳು ಈ ಮೇಳದಲ್ಲಿ ಲಭ್ಯ. 10ಕ್ಕೂ ಮಿಕ್ಕಿ ವಿವಿಧ ತಳಿಯ ಹಲಸು, ಅಷ್ಟೆ ವಿಧದ ಮಾವುಗಳ ಪ್ರದರ್ಶನ ಮತ್ತು ಮಾರಾಟ, ಹಣ್ಣುಗಳಿಂದ ತಯಾರಿಸಲಾಗುವ ಐಸ್‌ಕ್ರೀಮ್ ಮತ್ತು ತಾಜಾ ಹೋಳಿಗೆ ಈ ಬಾರಿಯ ವೈಶಿಷ್ಟ್ಯತೆ ಎಂದು ಬಳಗದ ಪ್ರಕಟಣೆ ತಿಳಿಸಿದೆ.

ನಾಳೆ ಮೌನ ಧರಣಿ

ಮಂಗಳೂರು: ಜಾಗತಿಕ ಯುದ್ಧ ಭೀತಿ, ಮಾನವೀಯ ಸಂಬಂಧಗಳಲ್ಲಿ ಬಿರುಕು ಹೋಗಲಾಡಿಸಿ, 'ಭೂಮಿಯ ಮೇಲೆ ರಕ್ತ ಸಿಂಚನ ನಿಲ್ಲಲಿ ಹಸಿರು ಹಂದರ ಬೆಳೆಯಲಿ' ಎನ್ನುವ ಮೂಲಕ ವಿಶ್ವ ಶಾಂತಿಗಾಗಿ ಮೌನ ಧರಣಿ, ಜಾಗೃತಿ ಅಭಿಯಾನ ಮೇ 23ರಂದು ನಗರದ ಹಂಪನಕಟ್ಟೆ ಕ್ಲಾಕ್ ಟವರ್ ಬಳಿಯಲ್ಲಿ ಬೆಳಗ್ಗೆ 8ರಿಂದ ಸಂಜೆ 7ರ ವರೆಗೆ ನಡೆಸಲಿದ್ದೇನೆ ಎಂದು ಕುಂದಾಪುರದ ಉಪನ್ಯಾಸಕ ರಾಮಾಂಜಿ ಹೇಳಿದರು. ಧರಣಿಯ ಆರಂಭದಲ್ಲಿ ಮಂಗಳೂರು ಪುರಭವನ ಮುಂಭಾಗದ ಮಹಾತ್ಮಾ ಗಾಂಧಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಯುದ್ಧದಲ್ಲಿ ಮಡಿದವರಿಗೆ ನಮನ ಸಲ್ಲಿಸಿ, ಪುಟ್ಟ ಮಗುವಿನೊಂದಿಗೆ ಬೆಳಗ್ಗಿನಿಂದ ಸಂಜೆವರೆಗೆ ಜಾಗೃತಿ ಅಭಿಯಾನ ನಡೆಸಲಿದ್ದೇನೆ. ಈ ಚಳವಳಿ ಮೂಲಕ ಜಾಗತಿಕ ಮಟ್ಟದಲ್ಲಿ ಸಹಬಾಳ್ವೆ, ಶಾಂತಿ, ಸೌಹಾರ್ದತೆ, ಪರಸ್ಪರ ಹೊಂದಾಣಿಕೆ, ಮಾನವ ಪ್ರೀತಿ, ಪರಿಸರ ಕಾಳಜಿ ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಲು ಅವಕಾಶ ನೀಡುವಂತೆ ಮೌನವಾಗಿ ಆಗ್ರಹಿಸಲಾಗುತ್ತದೆ ಎಂದರು.

ಇಂದು ಯುವ ಜನತೆಯ ಮಾನಸಿಕ ಆರೋಗ್ಯ ಕಾರ್ಯಾಗಾರ

ಮಂಗಳೂರು: ಎಸ್‌ಡಿಎಂ ಕಾಲೇಜ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪಿ.ಜಿ.ಸೆಂಟರ್ ಫಾರ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಮತ್ತು ರಿಸರ್ಚ್ ಹಾಗೂ ಇಂಡಿಯನ್ ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಸಹಯೋಗದಲ್ಲಿ ವಿಶ್ವ ರೆಡ್‌ಕ್ರಾಸ್ ದಿನಾಚರಣೆ ಅಂಗವಾಗಿ ಮೇ 22ರಂದು ಬೆಳಗ್ಗೆ 9.30ಕ್ಕೆ ನಗರದ ಎಸ್‌ಡಿಎಂ ಪಿ.ಜಿ.ಸೆಂಟರ್ ಸಭಾಂಗಣದಲ್ಲಿ ಆಹಾರ, ನೈರ್ಮಲ್ಯ ಮತ್ತು ಯುವ ಜನತೆಯ ಮಾನಸಿಕ ಆರೋಗ್ಯ ವಿಷಯದ ಬಗ್ಗೆ ಕಾರ್ಯಾಗಾರ ನಡೆಯಲಿದೆ. ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಯೂತ್ ರೆಡ್‌ಕ್ರಾಸ್ ನಿರ್ದೇಶಕಿ ಡಾ.ಸುಮನಾ ಬೋಳಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಡಿ-ಅಡಿಕ್ಷನ್ ಸಮಾಲೋಚಕಿ ಡಾ.ಕುಸುಮ್ ತಂತ್ರಿ ಡೆಸಾ ದಿಕ್ರೂಜ್ ಭಾಷಣ ಮಾಡಲಿದ್ದಾರೆ. ಎಸ್‌ಡಿಎಂ ಪಿ.ಜಿ. ಸೆಂಟರ್‌ನ ನಿರ್ದೇಶಕಿ ಡಾ.ಸೀಮಾ ಎಸ್. ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಸೂತಿ ಮತ್ತು ಸ್ತ್ರೀ ರೋಗಶಾಸ್ತ್ರ ತಜ್ಞೆ ಡಾ.ಹೇಮಾ ಮಲ್ಯ, ಪೌಷ್ಟಿಕಾಂಶ ಮತ್ತು ಆಹಾರ ಪದ್ಧತಿ ಸಲಹೆಗಾರ್ತಿ ಸಂಜನಾ ಎಂ. ಶೆಣೈ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ರಮ ಗೋಸಾಗಟ ಪತ್ತೆ

ವಿಟ್ಲ: ಕೊಳ್ನಾಡು ಪಂಜರಕೋಡಿ ಎಂಬಲ್ಲಿ ಅಕ್ರಮ ಗೋಸಾಟದ ಮಾಹಿತಿ ಹಿನ್ನಲೆಯಲ್ಲಿ ಪಿಕ್‌ಅಪ್ ವಾಹನವನ್ನು ತಡೆದು ನಿಲ್ಲಿಸಿದಾಗ ಬೆಂಗಾವಲು ವಾಹನದ ಚಾಲಕ ಪೊಲೀಸರ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಪರಾರಿಯಾಗಿದ್ದಾನೆ. ಬಶೀರ್ ಎಂಬಾತ ದರ ಚಾಲಕ ಎಂದು ತಿಳಿದುಬಂದಿದೆ. ಪಿಕ್‌ಅಪ್‌ನಲ್ಲಿ ಎರಡು ಜಾನುವಾರುಗಳು ಹಿಂಸಾತ್ಮಕ ಕಟ್ಟಿರುವುದು ಪತ್ತೆಯಾಗಿದ್ದು, ಚಾಲಕ ಬಂಟ್ವಾಳ ಬಾಳೆಪುಣಿ ನಿವಾಸಿ ಮೊಹಮ್ಮದ್ ಹನೀಫ್ (44) ಎಂಬಾತನಲ್ಲಿ ವಿಚಾರಿಸಲಾಗಿ ಜಾನುವಾರುಗಳನ್ನು ವಧೆ ಮಾಡಲು ಸಾಗಿಸುತ್ತಿರುವುದಾಗಿ ತಿಳಿಸಿದ್ದಾನೆ. ಮುಂದಿನ ಕಾನೂನು ಕ್ರಮಕ್ಕಾಗಿ ಚಾಲಕನನ್ನು ವಶಕ್ಕೆ ಪಡೆದು, ವಾಹನ, ಎರಡು ಜಾನುವಾರುಗಳನ್ನು ಸ್ವಾಧೀನಪಡಿಸಿಕೊಂಡು, ಆರೋಪಿ ಚಾಲಕ ಮೊಹಮ್ಮದ್ ಹನೀಫ್ ಹಾಗೂ ಬಶೀರ್ ವಿರುದ್ಧ ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಕುಮಾರ್ ಶೆಟ್ಟಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರ ಸುಬ್ರಹ್ಮಣ್ಯ, ಪೌರಾಯುಕ್ತ ಮಹಾಂತೇಶ್ ಹಂಗರಗಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಗೊನ್ಸಾಗ ಶಾಲೆಯ ಶೌರ್ಯ ಕುಮಾರ್‌ಗೆ ಅಂತಾರಾಷ್ಟ್ರೀಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ 3 ಚಿನ್ನದ ಪದಕ

ಮಂಗಳೂರು: ನಗರದ ಸಂತ ಅಲೋಶಿಯಸ್ ಗೊನ್ಸಾಗ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಶೌರ್ಯ ಕುಮಾರ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಗಳಿಸಿದ್ದಾರೆ.

ಭಾರತ ಸರ್ಕಾರದ ಆಯುಷ್ ಸಚಿವಾಲಯದಿಂದ ಮಾನ್ಯತೆ ಪಡೆದ ಇಂಡಿಯನ್ ಯೋಗಾಸನ ಸ್ಪೋರ್ಟ್ಸ್ ಫೆಡರೇಶನ್ ಮೂಲಕ ಟೀಮ್ ಇಂಡಿಯಾವನ್ನು ಪ್ರತಿನಿಧಿಸಿ, ಹಾಂಕಾಂಗ್‌ನಲ್ಲಿ ಇತ್ತೀಚೆಗೆ ನಡೆದ ಮೊದಲ ಅಂತಾರಾಷ್ಟ್ರೀಯ ಯೋಗಾಸನ ಕ್ರೀಡಾ ಚಾಂಪಿಯನ್ ಶಿಪ್-2026ರಲ್ಲಿ 3 ಚಿನ್ನದ ಪದಕಗಳು ಮತ್ತು 2ನೇ ರನ್ನರ್ ಅಪ್ ಟ್ರೋಫಿಯನ್ನು ಗೆದ್ದಿದ್ದಾರೆ. ಅವರು 10-14 ವರ್ಷ ವಯೋಮಾನದ ವಿಭಾಗದಲ್ಲಿ ಸ್ಪರ್ಧಿಸಿ, ಅತ್ಯಂತ ಕೌಶಲ್ಯ ಮತ್ತು ನಿಖರತೆಯೊಂದಿಗೆ ಅಸಾಧಾರಣ ಯೋಗಾಸನಗಳನ್ನು ಪ್ರದರ್ಶಿಸಿ ಸಾಂಪ್ರದಾಯಿಕ ಚಾಂಪಿಯನ್‌ಶಿಪ್, ಸ್ವಂತ ಆಯ್ಕೆ ಚಾಂಪಿಯನ್‌ಶಿಪ್, ಕಲಾತ್ಮಕ ಸೋಲೋ ಚಾಂಪಿಯನ್ ಶಿಪ್ ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು ಪಡೆದರು. ಇದರೊಂದಿಗೆ ಚಾಂಪಿಯನ್ ಆಫ್ ಚಾಂಪಿಯನ್ಸ್ (28 ವರ್ಷದೊಳಗಿನ) ವಿಭಾಗದಲ್ಲಿ 2ನೇ



ರನ್ನರ್ ಅಪ್ ಟ್ರೋಫಿಯನ್ನೂ ತಮ್ಮದಾಗಿಸಿಕೊಂಡರು. ಅವರ ಈ ವಿಜಯಗಳು ಟೀಮ್ ಇಂಡಿಯಾ ಈ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಸಮಗ್ರವಾಗಿ ನಂ. 1 ಸ್ಥಾನ ಪಡೆಯಲು ಸಹಕಾರಿಯಾದವು. ಶೌರ್ಯ ಕುಮಾರ್ ಅವರು ಅಜಯ್ ಕುಮಾರ್ ಮತ್ತು ರಾಗಿಣಿ ಅವರ ಪುತ್ರ. ಸಂಸ್ಥೆಯ ಪ್ರಾಂಶುಪಾಲ ವಂ.ಫಾ. ರೋಹನ್ ಡಿ ಅಲ್ಮೇಡ ಅವರು ಶೌರ್ಯ ಕುಮಾರ ಅವರ ಸಾಧನೆಗೆ ಸಂಸ್ಥೆಯ ಪರವಾಗಿ ಅಭಿನಂದಿಸಿದ್ದಾರೆ.

ಶತಮಾನಗಳಷ್ಟು ಇತಿಹಾಸವಿರುವ ಸ್ಮಾರಕ ಬೇಕಲಕೋಟೆಯ ಐತಿಹಾಸಿಕ ಪರಂಪರೆ ಉಳಿಸಿಕೊಂಡು ಕಾಮಗಾರಿ

ಕುಸಿದು ಬಿದ್ದಿರುವ ಗೋಡೆ ದುರಸ್ತಿ ಕಾರ್ಯ

ಕಾಸರಗೋಡು: ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವಾದ ಬೇಕಲಕೋಟೆಯಲ್ಲಿ ಕುಸಿದು ಬಿದ್ದಿರುವ ಗೋಡೆಯ ದುರಸ್ತಿ ಕಾಮಗಾರಿಗಳನ್ನು ಭಾರತೀಯ ಪ್ರಾಚ್ಯವಸ್ತು ಸರ್ವೇ (ಎಎಸ್‌ಐ) ಇಲಾಖೆಯು ಆರಂಭಿಸಿದೆ. ಈ ಮೂಲಕ ಬೇಕಲಕೋಟೆಯನ್ನು ಇನ್ನಷ್ಟು ಆಕರ್ಷಕವನ್ನಾಗಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಇದೇ ವೇಳೆ ಕಳೆದ ವರ್ಷ ಗೋಡೆಯ ಕೆಲಸಕಾರ್ಯವನ್ನು ನಡೆಸಲಾಗಿತ್ತು. ಎರಡು ತಿಂಗಳೊಳಗೆ ಕಾಮಗಾರಿ ಪೂರ್ತಿಗೊಳಿಸುವ ಗುರಿ ಹೊಂದಲಾಗಿತ್ತು. ಆದರೆ ಅದು ಅರ್ಧದಲ್ಲೇ ಮೊಟಕುಗೊಂಡಿತ್ತು. ಇದೀಗ ಮತ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಯೋಜನೆಯ ಅಂಗವಾಗಿ ಪ್ರಥಮ ಹಂತದಲ್ಲಿ 35 ಲಕ್ಷ ರೂಪಾಯಿ ಅನುದಾನವನ್ನು ಒದಗಿಸಲಾಗಿದೆ.

ಮಂಗಾರು ಮಳೆಯು ಧಾರಾಕಾರವಾಗಿ ಸುರಿದ ಹಿನ್ನೆಲೆಯಲ್ಲಿ ಶತಮಾನಗಳಷ್ಟು ಇತಿಹಾಸವಿರುವ ಬೇಕಲಕೋಟೆಯು ಕಳೆದ ಮಳೆಗಾಲದಲ್ಲಿ ಸತತವಾಗಿ ಹಾನಿಗೊಳಗಾಗಿತ್ತು. ಮಾತ್ರವಲ್ಲದೆ 2019ರಲ್ಲಿ ಕೋಟೆಯ 14 ಕಾವಲು ಗೋಪುರಗಳಲ್ಲಿ ಒಂದು ಕುಸಿದು ಬಿದ್ದಿತ್ತು. ಅದನ್ನು ಬಳಿಕ ಪ್ರಾಚ್ಯವಸ್ತು ಇಲಾಖೆಯು ದುರಸ್ತಿಗೊಳಿಸಿತ್ತು. ನಂತರ 2025ನೇ ಜೂನ್ ತಿಂಗಳಲ್ಲಿ ಸುರಿದ ಬಿರುಸಿನ ಮಳೆಗೆ ಕೋಟೆಯ ಗೋಡೆ ಕುಸಿದು ಬಿದ್ದು ಅಪಾರ ನಾಶ



ನಷ್ಟ ಸಂಭವಿಸಿತ್ತು.

ಸುರಕ್ಷತೆಯನ್ನು ಮುಂದಿರಿಸಿ ಈ ಭಾಗಕ್ಕಿರುವ ಪ್ರವೇಶವನ್ನು ಬಳಿಕ ನಿಯಂತ್ರಿಸಲಾಯಿತು. ಇದೀಗ ಎಎಸ್‌ಐ ತ್ರಿಶೂರು ಸರ್ಕಲ್ ಸೂಪರ್‌ವೈಸರ್, ಪ್ರಾಚ್ಯವಸ್ತು ತಜ್ಞ ಎಸ್. ವಿಜಯಕುಮಾರ್ ನಾಯರ್ ನಿರ್ಮಾಣ ಕಾಮಗಾರಿಗಳನ್ನು ಉದ್ಘಾಟಿಸಿ, ಕೆಲವು ಮಾಹಿತಿ ಮತ್ತು ಮಾರ್ಗದರ್ಶನಗಳನ್ನು ಒದಗಿಸಿದ್ದಾರೆ.

ಐತಿಹಾಸಿಕ ಸ್ಮಾರಕಗಳ ದುರಸ್ತಿಯು ಸಾಮಾನ್ಯ ಕಾಮಗಾರಿಗಿಂತ ಭಿನ್ನವಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ನಿರ್ಮಾಣ ನಡೆದ ಕಾಲದ ಅತ್ಯಾಧುನಿಕ ಮಾದರಿಯ ತಂತ್ರಜ್ಞಾನಗಳನ್ನು ಬಳಸಿಕೊಂಡು ಇದೀಗ ಗೋಡೆ ನಿರ್ಮಾಣ ಕಾರ್ಯವು ತ್ವರಿತಗತಿಯಲ್ಲಿ ಸಾಗುತ್ತಿದೆ. 1650ರಲ್ಲಿ ನಿರ್ಮಿಸಲಾದ ಬೇಕಲಕೋಟೆಯಲ್ಲಿ ಸಿಮೆಂಟಿನ ಬದಲಿಗೆ ಸುಣ್ಣ ಮಿಶ್ರಣ ಉಪಯೋಗಿಸಿ ಪರಂಪರಾಗತ ಸುರ್ಗಿ ವಿಧಾನವನ್ನು ಅನುಸರಿಸಲಾಗಿತ್ತು. ಅದೇ ವ್ಯವಸ್ಥೆಯನ್ನು ಈಗಲೂ ಅಳವಡಿಸಲಾಗುವುದು ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ.

ಹೊಸದಿಲ್ಲಿ ಕೇಂದ್ರವಾಗಿರುವ ಎಕ್ಸ್‌ಕಾಲಿಬರ್ ಕಂಪೆನಿಯ ನೇತೃತ್ವದಲ್ಲಿ ಗೋಡೆ ದುರಸ್ತಿಯು ನಡೆಯುತ್ತಿದೆ. ದುರಸ್ತಿ ಕಾಮಗಾರಿಗಾಗಿ ಅತ್ಯುತ್ತಮ ಸುಣ್ಣ ಮಿಶ್ರಣವು ತಮಿಳುನಾಡಿನ ಪೊಳ್ಳಾಚಿಯಿಂದ ಪೂರೈಕೆಯಾಗುತ್ತಿದೆ. ಬೇಕಲಕೋಟೆಯ ಹಳೆಯ ಸುಂದರ ನೋಟವನ್ನು ಉಳಿಸಿಕೊಂಡು ಕುಸಿದು ಬಿದ್ದಿರುವ ಗೋಡೆಯ ಕಲ್ಲುಗಳ ಪೈಕಿ ಶೇಕಡಾ 25ರಷ್ಟನ್ನು ಮರುಬಳಕೆಗೆ ಯೋಜನೆ ರೂಪಿಸಲಾಗಿದೆ.

ಬೇಕಲಕೋಟೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ

ಸಂಪೂರ್ಣ ಬೇಕಲಕೋಟೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಇದಕ್ಕಿರುವ ಪೂರ್ವಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ಪ್ರಾಥಮಿಕ ಹಂತದ ಕಾರ್ಯಚಟುವಟಿಕೆಗಳನ್ನು ಸದ್ಯದಲ್ಲೇ ಸಿದ್ಧಪಡಿಸಲು ನಿರ್ಧರಿಸಲಾಗಿದೆ. ಮಾತ್ರವಲ್ಲದೆ ಬೇಕಲಕೋಟೆಯೊಳಗೆ ಪ್ರವಾಸಿಗರಿಗೆ ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಆಕರ್ಷಿತರನ್ನಾಗಿಸುವ ಉದ್ದೇಶ ಹೊಂದಲಾಗಿದೆ.

ರಾಜ್ಯ ಮಟ್ಟದ ಮಹಿಳೆಯರ ವಾಲಿಬಾಲ್ ಪಂದ್ಯಾಟ

ಉಜಿರೆಯ ಎಸ್‌ಡಿಎಂ ತಂಡ ಚಾಂಪಿಯನ್ಸ್

ಉಜಿರೆ : ಬೆಂಗಳೂರು ನಗರ ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ಜಯನಗರದ ಕಿತ್ತೂರರಾಣಿ ಚೆನ್ನಮ್ಮ ಒಳಾಂಗಣದಲ್ಲಿ ಆಯೋಜಿಸಿದ್ದ 'ಬಾಂಧವ ಕಪ್ -2026' ರಾಜ್ಯ ಮಟ್ಟದ ಪುರುಷರ ಹಾಗೂ ಮಹಿಳೆಯರ ಮುಕ್ತ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜಿನ ತಂಡವು ಪ್ರಥಮ ಸ್ಥಾನ ಪಡೆಯುವ ಮೂಲಕ ಪಂದ್ಯಾಟದ ಚಾಂಪಿಯನ್‌ಗಳಾಗಿದ್ದಾರೆ.

ತಂಡದಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕ್ರೀಡಾ ಸಂಘದ ವಿದ್ಯಾರ್ಥಿಗಳಾದ ಶ್ರಿಯಾ, ಪ್ರಿಯಾಂಕ, ಐಶ್ವರ್ಯ ರಕ್ಷಿತಾ, ಶ್ರಿಯಾ, ಸಂಗೀತ, ಜಸ್ಲಿನ್, ಇಂಚರ, ಸಾಕ್ಷಿ, ಸ್ಮಿತಾ, ಲಾಸ್ಯ, ಅಪೂರ್ವ, ಅಂಜಲಿ ,ಚಂದು, ಹರಿಣಿ, ವರುಣಾ, ವರ್ಷಾ , ಇಂಚರಾ ಪಾಲ್ಗೊಂಡಿದ್ದರು. ತಂಡಕ್ಕೆ ಎಸ್.ಡಿ.ಎಂ ಕ್ರೀಡಾ ಸಂಘದ ಕಾರ್ಯದರ್ಶಿ ರಮೇಶ ಎಚ್ ತರಬೇತಿ ನೀಡಿದ್ದಾರೆ.

ಚಾಂಪಿಯನ್ ಶಿಪ್ ಪಂದ್ಯಾವಳಿಯನ್ನು ಕರ್ನಾಟಕ ಸರ್ಕಾರದ ಸಾರಿಗೆ ಹಾಗೂಮುಜರಾಯಿಇಲಾಖೆಯಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಯಲಹಂಕ ಕ್ಷೇತ್ರದ ಶಾಸಕ ಎಸ್. ಆರ್. ವಿಶ್ವನಾಥ್ , ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್



ಅಧ್ಯಕ್ಷೆ ಸೌಮ್ಯ ರೆಡ್ಡಿ , ಪದ್ಮನಾಭನಗರ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಪ್ರಮೋದ್ ಶ್ರೀನಿವಾಸ್ ಭಾಗಿಯಾಗಿ ಉಜಿರೆಯ ಎಸ್.ಡಿ.ಎಂ. ತಂಡಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಆರ್. ಹರ್ಷ, ಪ್ರಧಾನ ಕಾರ್ಯದರ್ಶಿ ಆಂಟೋನಿ ಜೋಸೆಫ್ ವಿಜೇತ ತಂಡಕ್ಕೆ ಪ್ರಶಸ್ತಿ ನೀಡಿ ಗೌರವಿಸಿದರು.

ಅಭಿನಂದನೆ

ವಿಜೇತ ತಂಡಕ್ಕೆ ಎಸ್.ಡಿ.ಎಂ ಆಡಳಿತ ಮಂಡಳಿ ಸೇರಿದಂತೆ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್, ಐಟಿ ಮತ್ತು ಹಾಸ್ಟೆಲ್ ಆಡಳಿತ ವಿಭಾಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರನ್ ವರ್ಮ, ಕಾಲೇಜಿನ ಪ್ರಾಚಾರ್ಯ ಪ್ರೊ. ವಿಶ್ವನಾಥ್ ಪಿ, ಎಸ್.ಡಿ.ಎಂ ಕ್ರೀಡಾ ಸಂಘದ ಕಾರ್ಯ ದರ್ಶಿ ರಮೇಶ್, ದೈಹಿಕ ಶಿಕ್ಷಣ ಉಪನ್ಯಾಸಕ ಮತ್ತು ವಾಲಿಬಾಲ್ ತರಬೇತುದಾರ ಸುದೀನ್ ಪೂಜಾರಿ, ವಿದ್ಯಾರ್ಥಿಗಳು, ಪೋಷಕರು ಸೇರಿದಂತೆ ಸಿಬ್ಬಂದಿ ವರ್ಗದವರು ಅಭಿನಂದನೆ ತಿಳಿಸಿದ್ದಾರೆ.

ಪುರುಷರ ತಂಡಕ್ಕೆ ಪ್ರಶಸ್ತಿ

ಕಿತ್ತೂರ ರಾಣಿ ಚೆನ್ನಮ್ಮ ಒಳಾಂಗಣದಲ್ಲಿ ಆಯೋಜಿಸಿದ್ದ 'ಬಾಂಧವ ಕಪ್ -2026' ರಾಜ್ಯ ಮಟ್ಟದ ಪುರುಷರ ಮುಕ್ತ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜಿನ ತಂಡವು ತೃತೀಯ ಸ್ಥಾನವನ್ನು ಪಡೆದುಕೊಂಡಿದೆ.

ಎಸ್‌ಡಿಎಂ ಕಾಲೇಜಿನ ಕ್ರೀಡಾ ಸಂಘದ ವಿದ್ಯಾರ್ಥಿಗಳಾದ ಶಿವು, ಸುಭಾಷ್ ರಾಜ್ , ಮನ್ವಿತ್, ಪ್ರತೀಕ್, ಮಯೂರ, ಕುಮಾರ್, ಸಚಿನ್, ಪ್ರಣೀತ್, ಆಡಿಸ್, ಕೌಶಿಕ್ ಶೇಯನ್ ಪಾಲ್ಗೊಂಡಿದ್ದರು. ತಂಡಕ್ಕೆ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಸುದೀನ್ ಪೂಜಾರಿ ತರಬೇತಿ ನೀಡಿದ್ದಾರೆ.

ಮೇ 22-23: ಸವಣೂರು ರಶ್ಮಿ ನಿವಾಸದಲ್ಲಿ

'ಸೀತಾ-ಕಸ್ತೂರಿ ಕಲ್ಯಾಣ' 50ರ ಸಂಭ್ರಮ

ಪುತ್ತೂರು: ಸವಣೂರಿನ ಶಿಕ್ಷಣ ಕ್ರಾಂತಿಯ ಹರಿಕಾರ, ಸಹಕಾರ ರತ್ನ ಪ್ರಶಸ್ತಿ ಸವಣೂರು ಕೆ. ಸೀತಾರಾಮ ರೈ ಮತ್ತು ಕಸ್ತೂರಿಕಲಾ ಎಸ್. ರೈ ದಂಪತಿಯ ವೈವಾಹಿಕಜೀವನದ50ರಸಂಭ್ರಮಾಚರಣೆ 'ಸೀತಾ-ಕಸ್ತೂರಿ ಕಲ್ಯಾಣ' ಕಾರ್ಯಕ್ರಮ ಮೇ 22 ಹಾಗೂ 23ರಂದು ಸೀತಾರಾಮ ರೈಯವರ ಸವಣೂರಿನ ರಶ್ಮಿ ನಿವಾಸದಲ್ಲಿ ನಡೆಯಲಿದೆ.

ಮೇ 22ರಂದು ಬೆಳಿಗ್ಗೆ 8ರಿಂದ ಮಾಲೆಂಗಲ್ಲು ವಿಜಯಕುಮಾರ್ ತಂತ್ರಿಗಳ ನೇತೃತ್ವದಲ್ಲಿ, ಶಿವಕುಮಾರ್ ಭಟ್ ಎಡಮಂಗಲ ಮಾರ್ಗದರ್ಶನದಲ್ಲಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿದೆ. ವೇದಮೂರ್ತಿ ಶ್ರೀವತ್ಸ ಕೆದಿಲಾಯ ಮತ್ತು ಸುಳ್ಯ ಅರಂಬೂರು ಕಂಚಿಕಾಮಕೋಟಿವೇದವಿದ್ಯಾಲಯದ ವೆಂಕಟೇಶ ಶಾಸ್ತ್ರೀ ಈ ಸಂದರ್ಭದಲ್ಲಿ ಗೌರವ ಉಪಸ್ಥಿತರಿರಲಿದ್ದಾರೆ.

ಮೇ 23 ರಂದು ಅಪರಾಹ್ನ 3ರಿಂದ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ ಸಂಗೀತ ಗಾನ ಸಂಭ್ರಮ ಜರಗಲಿದೆ. ಸಂಜೆ ಗಂಟೆ 5.30 ರಿಂದ ಸೀತಾ-ಕಸ್ತೂರಿ ಕಲ್ಯಾಣದ ಸಭಾ ಕಾರ್ಯಕ್ರಮದಲ್ಲಿ ಸವಣೂರು ಸೀತಾರಾಮ ರೈ ಮತ್ತು ಕಸ್ತೂರಿಕಲಾ ಎಸ್. ರೈವರ ವೈವಾಹಿಕ ಜೀವನದ 50ನೇ ಸಂಭ್ರಮದ ಆಚರಣೆ ನಡೆಯಲಿದೆ. ಶ್ರೀ ಸುಬ್ರಹ್ಮಣ್ಯ ಮಠದ ಮಠಾಧೀಶರಾದ ವಿದ್ಯಾ ಪ್ರಸನ್ನತೀರ್ಥ ಸ್ವಾಮೀಜಿ ಮತ್ತು ಒಡಿಯೂರು ಶ್ರೀ ಗುರುದೇವ ದತ್ತ



ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ ಆಶೀರ್ವಚನನೀಡಲಿದ್ದಾರೆ. ಮಂಗಳೂರಿನ ಲಕ್ಷ್ಮೀ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಡಾ. ಎ.ಜೆ. ಶೆಟ್ಟಿ ದೀಪ ಪ್ರಜ್ವಲನೆಮಾಡಲಿದ್ದಾರೆ. ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಸನ್ಮಾನ ಸಮಾರಂಭ ನಡೆಸಿಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಭಾಗವಹಿಸಲಿದ್ದಾರೆ.

ಕೊಂಬೆಟ್ಟು ಸರಕಾರಿ ಜೂನಿಯರ್ ಕಾಲೇಜಿನ ಉಪನ್ಯಾಸಕಿ ಕಾವ್ಯ ಶೆಟ್ಟಿ ಅಭಿನಂದನಾ ನುಡಿಗಳನ್ನು ಆಡಲಿದ್ದಾರೆ. ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸಂಸ್ಥಾಪಕ ಪಟ್ಲ ಸತೀಶ್ ಶೆಟ್ಟಿ, ಕಂಬಳ ಉದ್ಘೋಷಕ ಮತ್ತು ತೀರ್ಪುಗಾರರಾದ ಎಡ್ತೂರು ರಾಜೀವ್ ಶೆಟ್ಟಿ ಮತ್ತು ಕನ್ನಡ ಚಲನಚಿತ್ರ ರಂಗದ ನಿರ್ಮಾಪಕ ರವಿ ರೈ ಕಳಸ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು ಎಂದು ಸವಣೂರು ಸೀತಾರಾಮ ರೈಯವರ ಪುತ್ರಿ ರಶ್ಮಿ ಎ. ಶೆಟ್ಟಿ ಮತ್ತು ಅಳಿಯ ಅಶ್ವಿನ್ ಎಲ್. ಶೆಟ್ಟಿ ಸವಣೂರು, ಸೊಸೆ ಪಲ್ಲವಿ ಎಂ. ರೈ ಮತ್ತು ಪುತ್ರ ಮಹೇಶ್ ರೈ ಸವಣೂರು, ಸೊಸೆ ಅಶ್ವಿತಾ ಆರ್. ರೈ ಮತ್ತು ಪುತ್ರ ಡಾ. ರಾಜೇಶ್ ರೈ ಸವಣೂರು ತಿಳಿಸಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಅಭಿವೃದ್ಧಿ ಕಾರ್ಯ : ಶಾಸಕ ವೇದವ್ಯಾಸ ಕಾಮತ್

ಕೆ.ಜಿ.ಟಿ.ಟಿ.ಐ. ಸ್ವಂತ ಕಟ್ಟಡ ಉದ್ಘಾಟನೆಗೆ ಸಿದ್ಧ

ಮಂಗಳೂರು: ನಗರದ ಕದ್ರಿಹಿಲ್ಸ್‌ನಲ್ಲಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ 20.85 ಕೋಟಿ ವೆಚ್ಚದಲ್ಲಿ ನೂತನ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯ (ಕೆ.ಜಿ.ಟಿ.ಟಿ.ಐ.) ಸ್ವಂತ ಕಟ್ಟಡವು ಉದ್ಘಾಟನೆಗೆ ಸಿದ್ಧವಾಗಿದ್ದು, ಇದು ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಅಭಿವೃದ್ಧಿಯೆಡೆಗಿನ ಬದ್ಧತೆಯಾಗಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಈ ಕಟ್ಟಡಕ್ಕೆ 2019ರಲ್ಲಿ 2 ಎಕರೆ ಜಮೀನು ನೀಡುವಲ್ಲಿಂದ ಹಿಡಿದು, 2021 ರಲ್ಲಿ 15.23 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು ಹಾಗೂ 2022 ರಲ್ಲಿ ಪರಿಷ್ಕೃತ ಆದೇಶದಲ್ಲಿ 20.85 ಕೋಟಿ ರೂ. ಅನುದಾನ ಮಂಜೂರುಗೊಳಿಸಿ ಅಂದಿನ ಬಿಜೆಪಿ ಸರ್ಕಾರವು ಸಂಪೂರ್ಣ ಸಹಕಾರ ನೀಡಿದ್ದು ಸ್ಮರಣಾರ್ಹ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಈ ನೂತನ ಕಟ್ಟಡಕ್ಕೆ 2022ರ ಡಿಸೆಂಬರ್ 16ರಂದು ಅಂದಿನ ಉನ್ನತ ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಸಚಿವ ಡಾ.ಅಶ್ವಥ್ ನಾರಾಯಣ್ ಶಂಕುಸ್ಥಾಪನೆ ನೆರವೇರಿಸಿದ್ದರು. ಅಂದಿನಿಂದ ಕಾಮಗಾರಿಯ ಪ್ರತಿ ಹಂತದಲ್ಲಿಯೂ ಯಾವುದೇ ಲೋಪವಾಗದಂತೆ, ವಿಳಂಬವಾಗದಂತೆ ಎಚ್ಚರಿಕೆ ವಹಿಸಲಾಗಿತ್ತು. ಅವೆಲ್ಲದರ ಪರಿಣಾಮವಾಗಿ ಕಟ್ಟಡವು ಸುಸಜ್ಜಿತವಾಗಿ ನಿರ್ಮಾಣಗೊಂಡಿರುವುದು ಸಂತಸ ತಂದಿದ್ದು, ಪ್ರಸ್ತುತ ಕಾಂಗ್ರೆಸ್ ಸರ್ಕಾರಕ್ಕೆ ಉದ್ಘಾಟನಾ ಕಾರ್ಯವನ್ನು ನೆರವೇರಿಸುವ ಅವಕಾಶ ದೊರೆತಿದೆ ಎಂದರು. ಅಭಿವೃದ್ಧಿ ವಿಷಯದಲ್ಲಿ ರಾಜಕೀಯಕ್ಕೆ ಅವಕಾಶ ಇಲ್ಲ. ಯುವಜನಾಂಗದ ಅನುಕೂಲಕ್ಕಾಗಿ ಹಿಂದಿನ ಬಿಜೆಪಿ ಸರ್ಕಾರ ವಿಶೇಷ ಮುತುವರ್ಜಿ ವಹಿಸಿದ್ದು, ಈಗಿನ ಕಾಂಗ್ರೆಸ್ ಸರ್ಕಾರ ಇಲ್ಲಿಗೆ ಮೂಲಭೂತ ಸೌಕರ್ಯ ಸಹಿತ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಆದ್ಯತೆಯ ಮೇರೆಗೆ ಒದಗಿಸಿಕೊಡುವಂತೆ ಮನವಿ ಮಾಡುತ್ತೇನೆ ಎಂದು ಹೇಳಿದರು.



> ರಾಜ್ಯದಲ್ಲಿ ಸಾಲ ಹೆಚ್ಚಳವೇ ಸಿದ್ದರಾಮಯ್ಯ ಅವರು ನೇತೃತ್ವದ ಕಾಂಗ್ರೆಸ್ ಸರಕಾರದ ಸಾಧನೆಯಾಗಿದೆ. ನಿರಂತರ ಬೆಲೆ ಹೆಚ್ಚಳ, ಅತ್ಯಧಿಕ ಸಾಲದ ಮೂಲಕ ರಾಜ್ಯ ಸರಕಾರ ಜನತೆತನ್ನು ಸಂಕಷ್ಟಕ್ಕೆ ತಳ್ಳಿದೆ. ಅಭಿವೃದ್ಧಿಗೆ ಯಾವುದೇ ಅನುದಾನ ದೊರೆಯುತ್ತಿಲ್ಲ. ಕೇಂದ್ರ ಸರಕಾರ ಸಾಲ ಮಾಡಿದ್ದರೂ ವಿಮಾನನಿಲ್ದಾಣ, ರೈಲ್ವೆ ನಿಲ್ದಾಣ ಅಭಿವೃದ್ಧಿ, ಜಲಸಿರಿ ಸಹಿತ ಕೇಂದ್ರ ಪುರಸ್ಕೃತ ಯೋಜನೆಗಳ ಮೂಲಕ ಅಭಿವೃದ್ಧಿಗೆ ಹಣ ನೀಡುತ್ತಿದೆ. ವೆನ್ಲಾಕ್ ಆಸ್ಪತ್ರೆಯ ಅಭಿವೃದ್ಧಿ ಕಾರ್ಯ ಕೇಂದ್ರ ಸರಕಾರ ಹಾಗೂ ಸಿಎಸ್ ಆರ್ ನಿಧಿ ಮೂಲಕ ನಡೆಯುತ್ತಿದೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದ ಕಾರಣ ಕೇಂದ್ರ ಸರಕಾರದ ಅನುದಾನಕ್ಕೆ ತಡೆಯಾಗಿದೆ.
>
> ■ ವೇದವ್ಯಾಸ ಕಾಮತ್, ಶಾಸಕರು


ಪಿಂಚಣಿ ಸಿಗದೇ ಜನಸಾಮಾನ್ಯರ ಪರದಾಟ

ರಾಜ್ಯದಲ್ಲಿ ಕಳೆದ 3 ತಿಂಗಳಿಂದ ವೃದ್ಧಾಪ್ಯ ವೇತನ, ಲಿಂಗತ್ವ ಅಲ್ಪಸಂಖ್ಯಾತರು, ವಿಧವಾ ವೇತನ, ನಿವೃತ್ತ ನೌಕರರ ಪಿಂಚಣಿ, ಹೀಗೆ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಹಾಗೂ ಮಾಸಾಶನಗಳು ಸ್ಥಗಿತಗೊಂಡಿದೆ. ಅದನ್ನೇ ನಂಬಿ ಜೀವನ ಸಾಗಿಸುವವರು ಸಂಕಷ್ಟದಲ್ಲಿದ್ದರೆ, ಕಾಂಗ್ರೆಸ್ ಸರ್ಕಾರ ಮಾತ್ರ ಸಾಧನಾ ಸಮಾವೇಶ ಮಾಡಿಕೊಂಡು ಜನರ ಹೊಟ್ಟೆ ಉರಿಸುತ್ತಿದೆ. ಕೂಡಲೇ ಸರ್ಕಾರ ಪಿಂಚಣಿಗಳನ್ನು ಬಿಡುಗಡೆ ಮಾಡಬೇಕೆಂದು ಜನಸಾಮಾನ್ಯರ ಪರವಾಗಿ ಆಗ್ರಹಿಸುತ್ತೇನೆ ಎಂದರು.

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್

ಸುದರ್ಶನ್ (ಗುಜರಾತ್) 624 ರನ್

ಭುವನೇಶ್ವರ್ (ಬೆಂಗಳೂರು) 24 ವಿಕೆಟ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಕೆಕೆಆರ್	13	6	6	1	13	+0.011
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಮುಂಬೈ	13	4	9	0	8	-0.510
ಲಖನೌ	13	4	9	0	8	-0.702

ಇಂದು ಹೈದರಾಬಾದ್ ವಿರುದ್ಧ ಕೊನೆ ಲೀಗ್ ಪಂದ್ಯ

ಆರ್‌ಸಿಬಿ ನಂ.1 ಫೈಟ್

ಹೈದರಾಬಾದ್: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಂಬರ್ 1 ಸ್ಥಾನ ಬಿಟ್ಟುಕೊಡದಿರಲು ಶುಕ್ರವಾರದಂದು ಪಂದ್ಯದಲ್ಲಿ ಸೆಣಸಾಟ ನಡೆಸಲಿದೆ. ಐಪಿಎಲ್ ಕೂಟದ ರಾಜನಾಗಿ, ಗೆಲುವಿನ ಸರ್ದಾರನಾಗಿ ಮಿಂಚಿರುವ ಆರ್‌ಸಿಬಿಗೆ ತನ್ನ ಸ್ಥಾನ ಭದ್ರವಾಗಿ ಉಳಿಸಿಕೊಳ್ಳುವ ಸವಾಲು ಎದುರಾಗಿದೆ. ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕಳೆದ ಬಾರಿಯಿಂದಲೂ ಲೀಗ್ ಮೇಲೆ ಪ್ರಬಲ್ಯ ಸಾಧಿಸುತ್ತಿದೆ. ಸದ್ಯ 18 ಅಂಕಗಳನ್ನು ಹೊಂದಿರುವ ತಂಡವು ಮೊದಲನೇ ಸ್ಥಾನದಲ್ಲಿದೆ. ಪಂದ್ಯಾವಳಿಯಲ್ಲಿ ಮೂರು ತಂಡಗಳು ಮಾತ್ರ 18 ಅಂಕ ಗಳಿಸುವ ಅವಕಾಶಗಳನ್ನು ಹೊಂದಿವೆ. ರಾಜಸ್ಥಾನ ತನ್ನ ಸ್ಥಾನ ಭದ್ರವಾಗಿರಿಸಿದರೂ ಮೊದಲೆರಡು ಸ್ಥಾನಕ್ಕೆ ಹೋಗಲಾಗಲ್ಲ. ಈ ನಡುವೆ ಆರ್‌ಸಿಬಿಯೊಂದೇ 20 ಅಂಕ ಗಳಿಸುವ ಅವಕಾಶವನ್ನು ಹೊಂದಿದೆ. ಸನ್‌ರೈಸರ್ಸ್ ಹೈದರಾಬಾದ್ ಈ ಪಂದ್ಯದಲ್ಲಿ ಗೆದ್ದರೆ ಟಾಪ್ 2ರಲ್ಲಿ ಉಳಿಯುವ ಅವಕಾಶ ಹೊಂದಿದ್ದು ಪೈಪೋಟಿಗೆ ಕುತೂಹಲ ಹೆಚ್ಚಿದೆ.

ಅಂಕಪಟ್ಟಿ ಲೆಕ್ಕಾಚಾರ: ಎರಡೂ ತಂಡಗಳ ಅಂಕಪಟ್ಟಿ ಭವಿಷ್ಯ ಈ ಪಂದ್ಯದಲ್ಲಿ ನಿರ್ಧಾರವಾಗಲಿದೆ. ಐಪಿಎಲ್‌ನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳಿಗೆ ಪ್ಲೇಆಫ್‌ನಲ್ಲಿ ಎರಡು ಅವಕಾಶಗಳು ಸಿಗುತ್ತವೆ. ಹೀಗಿರುವಾಗ ಟಾಪ್ ಸ್ಥಾನಗಳಿಗಾಗಿ ದೊಡ್ಡ ಪೈಪೋಟಿ ನಡೆಯುತ್ತದೆ. ಸದ್ಯ ಆರ್‌ಸಿಬಿ-ಗುಜರಾತ್ ಮೊದಲೆರಡು ಸ್ಥಾನಗಳಲ್ಲಿವೆ. ಚೆನ್ನೈ ವಿರುದ್ಧ ನಡೆಯಲಿರುವ ಗುಜರಾತ್ ಪಂದ್ಯ ಕೂಡ ಇದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಪಂದ್ಯದಲ್ಲಿ ಆರ್‌ಸಿಬಿ ಗೆದ್ದರೆ ಖಚಿತ ಮೊದಲ ಸ್ಥಾನ. ಇತ್ತ ಹೈದರಾಬಾದ್‌ಗೂ ಅವಕಾಶವಿದ್ದು, ಚೆನ್ನೈ ಗೆದ್ದರೆ, ಉತ್ತಮ ರನ್‌ರೇಟ್‌ನೊಂದಿಗೆ ಮೊದಲೆರಡು ಸ್ಥಾನಗಳಲ್ಲಿ ಕಾಣಿಸಬಹುದಾದ ಅವಕಾಶ ಹೊಂದಿದೆ.

ಆತ್ಮವಿಶ್ವಾಸದಲ್ಲಿ ಬೆಂಗಳೂರು: ಈ ಆವೃತ್ತಿಯಲ್ಲಿ ಆರ್‌ಸಿಬಿ ಗೆಲುವಲ್ಲೇ ತೇಲಾಡಿದ ತಂಡ ಅನಿಸಿಕೊಂಡಿದೆ. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಮೂರರಲ್ಲೂ ಭರ್ಜರಿ ಪ್ರದರ್ಶನ ನೀಡಿದೆ. ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಪ್ರತಿಯೊಂದು ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆರಂಭಿಕ ಓವರ್‌ಗಳಲ್ಲೇ ಪಂದ್ಯ ಜೇಬಿಗೆ ಹಾಕುತ್ತಾರೆ. 13 ಪಂದ್ಯಗಳಲ್ಲಿ ಬರೋಬ್ಬರಿ 23 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿದ್ದರೆ, ತಂಡದಲ್ಲಿ ಡಫಿ ಅವರನ್ನು ಸೇರಿಸಿಕೊಂಡಿರುವುದು ವೇಗಕ್ಕೆ ಬಲ ತಂದಿದೆ.

ಪಿಚ್ ರಿಪೋರ್ಟ್: ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೂ ಮತ್ತು ಬೌಲರ್‌ಗಳಿಗೆ ಸಮಾನ ಲಾಭ ಸಿಗಲಿದೆ. ಆದಾಗ್ಯೂ ಸ್ಫೋಟಕ ಬ್ಯಾಟರ್‌ಗಳಿಗೆ ಹೇಳಿ ಮಾಡಿಸಿದ ಪಿಚ್ ಅನ್ನಬಹುದು. ಸ್ಪಿನ್‌ಗೂ ಅಲ್ಪ ಬಲ ತುಂಬಲಿದೆ. ಮೊದಲು ಬೌಲಿಂಗ್ ಮಾಡಿದವರೇ ಗೆದ್ದಿರುವುದು ಹೆಚ್ಚು.

ಯಾವಾಗ: ಶುಕ್ರವಾರ, ಎಲ್ಲಿ: ಹೈದರಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಜಿಯೋ ಹಾಟ್‌ಸ್ಟಾರ್



ಕೊಹ್ಲಿ ಮಿಂಚಿನಾಟ, ಆರ್‌ಸಿಬಿಗೆ ಭರವಸೆ

ವಿರಾಟ್ ಕೊಹ್ಲಿ ಶತಕ ಬಾರಿಸಿದ್ದಲ್ಲದೆ ಲಯಕ್ಕೆ ಮರಳಿರುವುದು ವಿಶ್ವಾಸ ಹೆಚ್ಚಿಸಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥೆಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ಮರಳುವ ಸಾಧ್ಯತೆ ಇದೆ ಎನ್ನಲಾಗಿದೆ. ಅವರ ಬದಲಿಗೆ ಆಡಿದ ವೆಂಕಟೇಶ್ ಅಯ್ಯರ್ ಕೂಡ ತಕ್ಕ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ.

ಸನ್‌ಗೆ ಗೆಲುವಿನ ಹಂಬಲ

ಸನ್‌ರೈಸರ್ಸ್ ಹೈದರಾಬಾದ್ ಗೆಲುವಿನ ಹಳಿಗೆ ಮರಳಿದ್ದು, ಗೆಲುವಿನ ಆಟವನ್ನು ಆರ್‌ಸಿಬಿ ಪಂದ್ಯಕ್ಕೆ ವಿಸ್ತರಿಸುವ ತವಕದಲ್ಲಿದೆ. ಹಿಂದಿನ ಪಂದ್ಯಗಳಲ್ಲಿ ಗುಜರಾತ್ ವಿರುದ್ಧ ಭಾರೀ ಸೋಲನುಭವಿಸಿದ್ದ ಸನ್‌ರೈಸರ್ಸ್ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಲಯದಲ್ಲಿ ಕಾಣಿಸಿಕೊಂಡಿತು. ಇಶಾನ್ ಕಿಶನ್, ಅಭಿಷೇಕ್ ಶರ್ಮ ಲಯದಲ್ಲಿದ್ದಾರೆ. ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಎಲ್ಲಿಲ್ಲದ ಭರವಸೆ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದಲ್ಲಿ ನಿತಿಶ್ ಕುಮಾರ್ ರೆಡ್ಡಿ ಕೂಡ ಅಲ್ಪ ರನ್ ಜೋಡಿಸಿರುವುದು ಕೆಳಕ್ರಮಾಂಕದ ಬದ್ಧತೆ ತೋರಿಸಿದೆ. ಬೌಲಿಂಗ್ ವಿಭಾಗವನ್ನು ನಾಯಕ ಪ್ಯಾಟ್ ಕಮ್ಮಿನ್ಸ್ ಗಟ್ಟಿಗೊಳಿಸಿದ್ದಾರೆ. ಅಲ್ಲದೆ, ಪಂದ್ಯಾವಳಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಸಾಕಿಬ್ ಹುಸೈನ್ ಕೂಡ ಮಿಂಚಿರುವುದು ತಂಡಕ್ಕೆ ಸಿಕ್ಕ ದೊಡ್ಡ ಬಲ. ಸ್ಪಿನ್ ವಿಭಾಗದಲ್ಲಿ ಹರ್ಷ ದುಬೆ ಹಾಗೂ ಶಿವಾಂಗ್ ವಿಕೆಟ್ ಕಿತ್ತಿದ್ದಾರೆ.

ಚೆನ್ನೈಗೆ 230 ರನ್ ಗುರಿ!

ಅಹಮದಾಬಾದ್: ಗುಜರಾತ್ ಟೈಟಾನ್ಸ್ ತಂಡದ ಅಗ್ರ ಮೂರು ಬ್ಯಾಟರ್‌ಗಳಾದ ಶುಭಮನ್ ಗಿಲ್(64), ಸಾಯಿ ಸುದರ್ಶನ್(84) ಮತ್ತು ಜಾಸ್ ಬಟ್ಲರ್(57) ಚೆನ್ನೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದು, ಸೂಪರ್ ಕಿಂಗ್ಸ್ ತನ್ನ ಕೊನೆಯ ಪಂದ್ಯದಲ್ಲಿ ಕಠಿಣ ಗುರಿ ಪಡೆಯಿತು. ಪಂದ್ಯದ ಪ್ರತಿಯೊಂದು ಓವರ್‌ಗಳಲ್ಲಿ ಒಂದಾದರೂ ಬೌಂಡರಿ ಬಾರಿಸಿದ ಗುಜರಾತ್ ಕೊನೆ ಓವರ್‌ವರೆಗೂ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಇದರೊಂದಿಗೆ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗುಜರಾತ್ 229 ರನ್ ಗಳಿಸಿದೆ.

ಗಿಲ್-ಸುದರ್ಶನ್ ಅಬ್ಬರ: ಟಾಸ್ ಗೆದ್ದ ಚೆನ್ನೈ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಗಿಲ್ ಹಾಗೂ ಸುದರ್ಶನ ಈ ನಿರ್ಧಾರವನ್ನು ತಪ್ಪು ಸಾಬೀತು ಮಾಡಿದರು. ಮೊದಲನೇ ಎಸೆತದಿಂದಲೂ ಬೌಂಡರಿಗಳ ಮೂಲಕ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ನಾಯಕ ಶುಭಮನ್ ಗಿಲ್ 23 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಇದು ಅವರ ಸ್ವಾಭಾವಿಕ ಆಟಕ್ಕೂ ಮಿಗಿಲಾಗಿತ್ತು. ಅತ್ತ ಸುದರ್ಶನ್ ಮೊದಲಿಗೆ ಸಿಂಗಲ್‌ಗಳ ಮೂಲಕ ಸೆಟ್ ಆದರು. 6 ಓವರ್ ಮುಕ್ತಾಯಕ್ಕೆ ಗುಜರಾತ್ 62 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಗಿಲ್ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 37 ಬಾಲ್‌ಗಳನ್ನು ಎದುರಿಸಿದ ಗಿಲ್ 3 ಸಿಕ್ಸರ್, 7 ಭರ್ಜರಿ ಬೌಂಡರಿಗಳೊಂದಿಗೆ ಬರೋಬ್ಬರಿ 64 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಅವರು ವಿಕೆಟ್ ಒಪ್ಪಿಸಿದ್ದೆ ತಡ ಅತ್ತ ಸುದರ್ಶನ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾದರು. ಜಾಸ್ ಬಟ್ಲರ್ ಬರುತ್ತಲೇ ಸಿಕ್ಸರ್‌ಗಳ ಅಬ್ಬರ ಶುರು ಮಾಡಿದರು.

ಮಧ್ಯಮ ಓವರ್‌ಗಳ ವರೆಗೂ ಈ ಜೋಡಿ ಚೆನ್ನೈ ಬೌಲರ್‌ಗಳನ್ನು ದಂಡಿಸಿತು. ಪ್ರತಿ ಓವರ್‌ನಲ್ಲೂ ಒಂದಾದರೂ ಸಿಕ್ಸರ್-ಬೌಂಡರಿ ಬಾರಿಸುತ್ತಾ ಮಿಂಚಿತು. ಮಧ್ಯಮ ಓವರ್‌ಗಳ ಮುಕ್ತಾಯಕ್ಕೆ ಗುಜರಾತ್ 111 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಬಟ್ಲರ್ ಇನ್ನಷ್ಟು ಆಕ್ರಮಣಕಾರಿಯಾಗಿ ದಂಡಿಸಿದರು. ಸ್ಫೋಟಕ ಬ್ಯಾಟಿಂಗ್ ಅಬ್ಬರಕ್ಕೆ ಚೆನ್ನೈ ಬೌಲರ್‌ಗಳು ತತ್ತರಿಸಿದರು. 19ನೇ ಓವರ್ ವೇಳೆ ಸುದರ್ಶನ್ ವಿಕೆಟ್ ಒಪ್ಪಿಸಿದರು. 53 ಬಾಲ್‌ಗಳನ್ನು ಎದುರಿಸಿದ್ದ ಸುದರ್ಶನ್ 7 ಬೌಂಡರಿ, 4 ಸಿಕ್ಸರ್‌ಗಳೊಂದಿಗೆ 84 ರನ್ ಬಾರಿಸಿದರು. 23 ಬಾಲ್ ಮಾತ್ರದಲ್ಲಿ ಬಟ್ಲರ್ ಕೂಡ ಅರ್ಧಶತಕ ಬಾರಿಸಿದರು. 27 ಬಾಲ್‌ಗಳಲ್ಲಿ ಅವರು 57★ ರನ್ ಗಳಿಸಿದರು.



ಕಿರುಸುದ್ದಿ

ಭಾರತ ಎ ತಂಡಕ್ಕೆ ಅನುಕುಲ್ ರಾಯ್ ಆಯ್ಕೆ

ಮುಂಬೈ: ಶ್ರೀಲಂಕಾದಲ್ಲಿ ನಡೆಯಲಿರುವ ತ್ರಿಕೋನ ಸರಣಿಗಾಗಿ ಭಾರತ ಎ' ತಂಡಕ್ಕೆ ಸ್ಪಿನ್ ಆಲ್‌ರೌಂಡರ್ ಅನುಕುಲ್ ರಾಯ್ ಅವರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಬಿಸಿಸಿಐ ಗುರುವಾರ ಪ್ರಕಟಿಸಿದೆ. ಅನುಕುಲ್ ರಾಯ್, ಹರ್ಷ ದುಬೆ ಅವರ ಬದಲಿಗೆ ತಂಡಕ್ಕೆ ಆಯ್ಕೆಯಾಗಿದ್ದಾರೆ. ಹರ್ಷ ದುಬೆ ಅವರಿಗೆ ಅಫ್ಘಾನಿಸ್ತಾನ ವಿರುದ್ಧದ ತವರಿನ ಟೆಸ್ಟ್ ಹಾಗೂ ಏಕದಿನ ಸರಣಿಗೆ ಮೊದಲ ಬಾರಿಗೆ ಭಾರತ ಹಿರಿಯ ತಂಡದಿಂದ ಕರೆ ಬಂದಿದೆ. ಶ್ರೀಲಂಕಾ ಎ', ಭಾರತ ಎ' ಮತ್ತು ಅಫ್ಘಾನಿಸ್ತಾನ ಎ' ತಂಡಗಳು ಭಾಗವಹಿಸುವ ಈ ತ್ರಿಕೋನ ಸರಣಿ ಜೂನ್ 9ರಿಂದ ಜೂನ್ 21ರವರೆಗೆ ದಂಬುಲ್ಲಾದಲ್ಲಿ ನಡೆಯಲಿದೆ. ಇದರ ಮಧ್ಯೆ ಅಫ್ಘಾನಿಸ್ತಾನ ವಿರುದ್ಧದ ಸರಣಿ ಜೂನ್ 6ರಿಂದ ನ್ಯೂ ಚಂಡೀಗಢದಲ್ಲಿ ನಡೆಯುವ ಏಕೈಕ ಟೆಸ್ಟ್ ಪಂದ್ಯದಿಂದ ಆರಂಭವಾಗಲಿದೆ. ಬಳಿಕ ಜೂನ್ 14ರಿಂದ 20ರವರೆಗೆ ಮೂರು ಏಕದಿನ ಪಂದ್ಯಗಳು ನಡೆಯಲಿವೆ. ನವೀಕರಿಸಿದ ಭಾರತ ಎ' ತಂಡ: ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪನಾಯಕ), ಆಯುಷ್ ಬದೋನಿ, ನಿಶಾಂತ್ ಸಿಂಧು, ಸೂರ್ಯಾಂಶ್ ಶೆಡ್ಗೆ, ಪ್ರಭ್‌ಸಿಮ್ರನ್ ಸಿಂಗ್, ಕುಮಾರ್ ಕುಶಾಗ್ರ, ವಿಪ್ರಜ್ ನಿಗಮ್, ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅಂಶುಲ್ ಕಾಂಬೋಜ್, ಅರ್ಷದ್ ಖಾನ್ ಮತ್ತು ಅನುಕುಲ್ ರಾಯ್.

ಫ್ರಾನ್ಸ್‌ಗೆ ಇ-ಸ್ಪೋರ್ಟ್ಸ್ ಸ್ಥಳಾಂತರ

ಹೊಸದಿಲ್ಲಿ: ಈ ಬಾರಿಯ ಇ-ಸ್ಪೋರ್ಟ್ಸ್ ವಿಶ್ವಕಪ್ ಸೌದಿ ಅರೇಬಿಯಾದ ರಿಯಾದ್ ಬದಲಿಗೆ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆಯಲಿದೆ ಎಂದು ಇ-ಸ್ಪೋರ್ಟ್ಸ್ ಫೌಂಡೇಶನ್ ಗುರುವಾರ ಪ್ರಕಟಿಸಿದೆ. ಇಡಬ್ಲ್ಯೂಸಿ 2026 ಜುಲೈ 6 ಮತ್ತು ಆಗಸ್ಟ್ 23 ರ ನಡುವೆ ನಡೆಯಲಿದ್ದು, 100 ಕ್ಕೂ ಹೆಚ್ಚು ದೇಶಗಳಿಂದ 2,000 ಕ್ಕೂ ಹೆಚ್ಚು ಆಟಗಾರರು ಮತ್ತು 200 ಕ್ಲಬ್‌ಗಳು 25 ಪಂದ್ಯಾವಳಿಗಳ 24 ಪಂದ್ಯಗಳಲ್ಲಿ ಸ್ಪರ್ಧಿಸುತ್ತಿದ್ದು, ದಾಖಲೆಯ 75 ಮಿಲಿಯನ್ + ಡಾಲರ್ ಬಹುಮಾನ ಪಡೆಯುತ್ತವೆ. ಇಡಬ್ಲ್ಯೂಸಿ 2024 ರಲ್ಲಿ ಪ್ರಾರಂಭವಾಯಿತು, ಪಂದ್ಯಾವಳಿಯ ಮೊದಲ ಎರಡು ಆವೃತ್ತಿಗಳು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದವು. ಆದಾಗ್ಯೂ, ಪಶ್ಚಿಮ ಏಷ್ಯಾದಲ್ಲಿನ ರಾಜಕೀಯ ಪ್ರಕ್ಷುಬ್ಧತೆ – ಇಸ್ರೇಲ್ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಇರಾನ್ ಮೇಲೆ ನಡೆಸಿದ ವಾಯುದಾಳಿಗಳ ನಂತರ ಪಂದ್ಯಾವಳಿಯನ್ನು ಸೌದಿ ಅರೇಬಿಯಾದಿಂದ ಸ್ಥಳಾಂತರಿಸುವ ನಿರ್ಧಾರದ ಮೇಲೆ ಪ್ರಭಾವ ಬೀರಿದೆ. ವಿಸ್ತೃತ ಮೌಲ್ಯಮಾಪನ ಪ್ರಕ್ರಿಯೆ ನಂತರ ಮತ್ತು ಪ್ರಸ್ತುತ ಪ್ರಾದೇಶಿಕ ಪರಿಸ್ಥಿತಿಯ ಬೆಳಕಿನಲ್ಲಿ, ಇ-ಸ್ಪೋರ್ಟ್ಸ್ ಫೌಂಡೇಶನ್ ಆವೃತ್ತಿಗಾಗಿ ಅಂತಾರಾಷ್ಟ್ರೀಯ ಮಹತ್ವಾಕಾಂಕ್ಷೆಯನ್ನು ಬಲಪಡಿಸಲು ನಿರ್ಧರಿಸಿದೆ, ಆಟಗಾರರು, ಕ್ಲಬ್‌ಗಳು, ಪಾಲುದಾರರು ಮತ್ತು ವಿಶ್ವಾದ್ಯಂತ ಅಭಿಮಾನಿಗಳಿಗೆ ಸ್ಪಷ್ಟತೆ ಮತ್ತು ಸ್ಥಿರತೆಯನ್ನು ನೀಡುತ್ತದೆ, ಆದರೆ ಪಂದ್ಯಾವಳಿಯ ಪ್ರಮಾಣ, ರಚನೆ ಮತ್ತು ಸ್ಪರ್ಧಾತ್ಮಕ ಸಮಗ್ರತೆಯನ್ನು ಕಾಪಾಡುತ್ತದೆ ಎಂದು ಫೌಂಡೇಶನ್‌ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರ್ಚರಿ: ಕಾಂಪೌಂಡ್ ತಂಡಕ್ಕೆ ಕಸಿನ್ಸ್ ಕೋಚ್

ಹೊಸದಿಲ್ಲಿ: ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕಾಂಪೌಂಡ್ ವಿಭಾಗದ ಆರ್ಚರಿಗೆ ಭಾರತ ತನ್ನ ಸಿದ್ಧತೆಗಳನ್ನು ಆರಂಭಿಸಿದ್ದು, ಮಾಜಿ ವಿಶ್ವ ಚಾಂಪಿಯನ್ ಡೇವ್ ಕಸಿನ್ಸ್ ಅವರನ್ನು ಮುಖ್ಯ ಕಾಂಪೌಂಡ್ ಕೋಚ್ ಆಗಿ ನೇಮಿಸಿದೆ. ಮುಂದಿನ ತಿಂಗಳು ಅಂಟಲ್ಯದಲ್ಲಿ ನಡೆಯಲಿರುವ ಸ್ಟೇಜ್ 3 ವಿಶ್ವಕಪ್‌ಗೆ ಎರಡು ವಾರಗಳಲ್ಲಿ ಅಮೆರಿಕನ್ ಡೇವ್ ಕಸಿನ್ಸ್ ಭಾರತಕ್ಕೆ ಬರಲಿದ್ದಾರೆ. 49 ವರ್ಷದ ಡೇವ್ ಕಸಿನ್ಸ್ ಅವರಿಗೆ ಇದು ಮೊದಲ ಅಂತಾರಾಷ್ಟ್ರೀಯ ಕೋಚಿಂಗ್ ಹುದ್ದೆಯಾಗಿದ್ದು, ಅವರು ಈ ಹಿಂದೆ ಯುಎಸ್‌ಎಯಲ್ಲಿ ಕ್ಲಬ್‌ಗಳು ಮತ್ತು ರಾಜ್ಯ ತಂಡಗಳಿಗೆ ತರಬೇತಿ ನೀಡಿದ್ದು, ಎರಡು ದಶಕಗಳಿಗೂ ಹೆಚ್ಚು ಕಾಲದ ಸ್ಪರ್ಧಾತ್ಮಕ ವೃತ್ತಿಜೀವನವನ್ನು ಅನುಭವಿಸಿದ್ದಾರೆ. ಕಾಂಪೌಂಡ್ ಬಿಲ್ಲುಗಾರಿಕೆ 2028 ರಲ್ಲಿ ಮಿಶ್ರ ತಂಡ ಸ್ಪರ್ಧೆಯೊಂದಿಗೆ ಬಹುನಿರೀಕ್ಷಿತ ಒಲಿಂಪಿಕ್ ಚೊಚ್ಚಲ ಪ್ರವೇಶ ಮಾಡಲಿದೆ.

ಕೋಲ್ಕತ್ತಾಗೆ ಭರ್ಜರಿ ಜಯ

ಮನೀಶ್ ಆಟಕ್ಕೆ ಮುಂಬೈ ತತ್ತರ

ಕೋಲ್ಕತ್ತಾ: ತಂಡ ಸಂಕಷ್ಟದಲ್ಲಿದ್ದಾಗ ಬಂದು ಹೋರಾಡಿ ಮಿಂಚಿದ ಕನ್ನಡಿಗ ಮನೀಶ್ ಪಾಂಡೆ ಕೆಕೆಆರ್ ಪ್ಲೇಆಫ್ ಕನಸನ್ನು ಜೀವಂತವಾಗಿರಿಸಿದ್ದಲ್ಲದೆ, ದೊಡ್ಡ ಕಂಬ್ಯಾಕ್ ಸೂಚನೆ ಈ ಮೂಲಕ ನೀಡಿದರು. ಪ್ಲೇಆಫ್‌ಗೆ ನಾಲ್ಕನೇ ತಂಡದ ಆಯ್ಕೆಯಾಗಬೇಕಿದೆ. ಹೀಗಿರುವಾಗ ಪ್ರತಿಯೊಂದು ಪಂದ್ಯ ಪ್ರಮುಖ ಪಾತ್ರ ವಹಿಸುತ್ತಿದೆ. ಮೊದಲಿನ ಆರು ಪಂದ್ಯಗಳಲ್ಲಿ ಎಲ್ಲವನ್ನೂ ಸೋತಿದ್ದ ಕೆಕೆಆರ್ ನಂತರದ ಪಂದ್ಯಗಳಲ್ಲಿ ಗೆಲುವಿನ ಹಾದಿಗೆ ಮರಳಿದೆ.

ಮುಂಬೈ ವಿರುದ್ಧದ ಪಂದ್ಯದಲ್ಲಿ ಕೆಕೆಆರ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಗ್ರೀನ್, ತ್ಯಾಗಿ, ದುಬೆ ದಾಳಿಗೆ ಮುಂಬೈ ಇಂಡಿಯನ್ಸ್ ತತ್ತರಿಸಿತು. ಕೊನೆಯಲ್ಲಿ ಅಲ್ಪ ಹಾರ್ದಿಕ್, ಅಲ್ಪ ಕಾರ್ಬಿನ್ ಬಾಷ್ ಮಿಂಚಿದ ನಂತರ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿತು ಮುಂಬೈ. ಮನೀಶ್ ಪಾಂಡೆ ಮತ್ತು ರೋಮನ್ ಪೋವೆಲ್ ಆಟದ ನೆರವಿನೊಂದಿಗೆ ಮಿಂಚಿದ ಕೆಕೆಆರ್ 18.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿ ಪಂದ್ಯ ಗೆದ್ದಿತು.


ಮನೀಶ್ ಪಾಂಡೆ ಗೆಲುವಿನಾಟ: ಗುರಿ ಬೆನ್ನತ್ತುವಾಗ ಕೆಕೆಆರ್‌ಗೆ ಆರಂಭಿಕ ಆಘಾತ. ಮೊದಲೇ ಫೀಲ್ಡಿಂಗ್ ಮಾಡುವ ವೇಳೆ ತಂಡದ ಶಕ್ತಿಯಾಗಿದ್ದ ಅಂಗ್ರಿಶ್ ರಘುವಂಶಿ ಗಾಯಗೊಂಡು ಹೊರನಡೆದಿದ್ದರು. ಫಿನ್ ಆಲೆನ್ ಬೇಗನೇ ವಿಕೆಟ್ ಒಪ್ಪಿಸಿದರು. ಕೆಕೆಆರ್ ಪರ ಲಯದಲ್ಲಿದ್ದವರೇ ಹೊರನಡೆದರು. ತಂಡ ಸಂಕಷ್ಟದಲ್ಲಿ ಸಿಲುಕಿಕೊಂಡಿತು. ಈ ಸಮಯದಲ್ಲಿ ಬಂದವರೇ ಮನೀಶ್ ಪಾಂಡೆ. ಕಳೆದ ಕೆಲವು ಪಂದ್ಯಗಳಲ್ಲಿ ತಂಡದಲ್ಲಿದ್ದರು. ಆಡುವ ಅವಕಾಶ ಹೊಂದಿರದ ಅವರು, ಈ ಬಾರಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲಿಳಿದರು. ಪೋವೆಲ್ ಅವರೊಂದಿಗೆ ನಿಂತುಕೊಂಡರೆ, ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪೋವೆಲ್ ಪಂದ್ಯವನ್ನು ಕೆಕೆಆರ್‌ನತ್ತ ಜಗ್ಗಿದರು. ಮನೀಶ್ ಕೂಡ ಮನಮೋಹಕ ಬೌಂಡರಿಗಳನ್ನು ಬಾರಿಸಿದರು. ಈ ಮೂಲಕ ಈ ಜೋಡಿ ಕೆಕೆಆರ್ ಜೇಬಿಗೆ ಎರಡು ಅಂಕಗಳನ್ನು ಹಾಕಿತು. 33 ಬಾಲ್ ಎದುರಿಸಿದ ಮನೀಶ್ 45 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ಉಳಿದ ಔಪಚಾರಿಕತೆ ಮುಗಿಸಲು ರಿಂಕು ಸಿಂಗ್ ಬರಬೇಕಾಯಿತು. ತೇಜಸ್ವಿ 11, ಪೋವೆಲ್ 40 ರನ್‌ಗೆ ವಿಕೆಟ್ ಒಪ್ಪಿಸಿದರು. ಅನುಕುಲ್ 4 ರನ್‌ಗಳಿಸಿದರು. ಕೆಕೆಆರ್ 18.5 ಓವರ್‌ಗಳಲ್ಲಿ 148 ರನ್ ಗಳಿಸಿ ಪಂದ್ಯ ಗೆದ್ದಿತು.

ಸಂಕ್ಷಿಪ್ತ ಸ್ಕೋರ್

- **ಮುಂಬೈ 20 ಓವರ್‌ಗಳಲ್ಲಿ 147/8:** ಬಾಷ್ 32★, ಪಾಂಡ್ಯ 26; ಗ್ರೀನ್ 23/2, ಸೌರಭ್ ದುಬೆ 34/2
- **ಕೆಕೆಆರ್ 18.5 ಓವರ್‌ಗಳಲ್ಲಿ 148/6:** ಮನೀಶ್ 45, ಪೋವೆಲ್ 40; ಬಾಷ್ 30/3, ಚಾಹರ್ 23/1

ಪದಬಂಧ

ರಾಜಾ ಸಂಗಮೇಶ ಹಿರೇಮಠ



5991

ಎಡದಿಂದ ಬಲಕ್ಕೆ
2.ಸಣ್ಣ-ಸಣ್ಣ ಹನಿಗಳಿಂದ ಕೂಡಿದ ವೃಷ್ಟಿ (5)
6.ಬೆಟ್ಟವೂ ಹೌದು-ಆಭರಣವೂ ಹೌದು (2)
8.ಸೇವಕ-ಕೂಲಿಗಾಗಿ ದುಡಿಯುವವನು (2)
9.ಇದು ತೂತುಗಳಿರುವ ಕಿಟಕಿ (3)
11.ಶಹನಾಯಿಯ ಇನ್ನೊಂದು ಹೆಸರು (3)
13.ಹಾರದೊಂದಿಗೆ ಇರುವ ಹೂವಿನ ಗುಚ್ಛ(3)
14.ಅತ್ತಿತ್ತ ತೂಗಾಡುವ ವಸ್ತು (3)
16.ಸ್ವರ್ಗ-ಯಮಪುರಿ ಕೂಡಿ ಕಾಣುತ್ತಿವೆ (5)
17.ಮಾವನಿಗೆ ಈ ಧರೆಯ ಮೇಲೆ ಕಂಡ ವಿಷ್ಣು(4)
18.ಒಂದು ನಿರ್ಣಯಕ್ಕೆ ಬರು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
1.ತಕ್ಕಡಿಯಲ್ಲಿ ತೂಗುವುದು-ತಾಳೆ ನೋಡುವುದು (3)
3.ವಿರಸ ಹೆಚ್ಚಾಗುವಂತೆ ಮಾಡು ಎಂಬರ್ಥದ ನುಡಿಗಟ್ಟು (4)
4.ಹರ್ಷ-ಪ್ರಫುಲ್ಲತೆ ಎಂಬರ್ಥದ ಶಬ್ದ (4)
5.ಅಂತಃಕರಣ ಮಿಡಿವ ಪಚನಾಂಗ (3)
7.ಸ್ಥಳವಿಲ್ಲಿ ತಲೆಕೆಳಗಾಗಿದೆ (2)
8.ಮೊದಲು-ಪ್ರಾರಂಭ ಎಂಬರ್ಥದ ಶಬ್ದ (2)
10.ಎಂದೆಂದೂ ನೆಟ್ಟಗಾಗದ್ದು ತಲೆಕೆಳಗಾಗಿದೆ (4)
12.ಇದು ಸರ್ಪಗಳ ಪ್ರಪಂಚ (4)
13.ದನಗಳನ್ನು ಕಾಯುವವನು-ಗೊಲ್ಲ (4)
15.ದಯಪಾಲಿಸು ಎಂಬರ್ಥದ ಶಬ್ದ (4)

5990 ಉತ್ತರ

ಎಡದಿಂದ ಬಲಕ್ಕೆ:
2.ಲೋಚನವಾರಿ
6.ಯಮ 8.ಮನು
9.ತವಕ 10.ಕ್ಷಣಿಕ
11.ಮರ 12.ಹಲ್ಲು
14.ಶಿಳಿವಳಿಕೆ 16.ಮಿತ್ರಪಕ್ಷ
17.ಚಿಂದಿಚಿಂದಿ

ಮೇಲಿನಿಂದ ಕೆಳಕ್ಕೆ
: 1.ತೃತೀಯ
3.ಚಕ್ರವಾಕ 4.ವಾರಿಜಾಕ್ಷ
5.ದಾಸ್ತಾನು 7.ಮತದಾರ
8.ಮಕಮಲ್ಲು
11.ಮರುಭೂಮಿ
13.ಹಠವಾದಿ 14.ಪದ್ಧತಿ
15.ಕೆಳದಿ

ಕಿರುಸುದ್ದಿ

ಆಳ್ವಾಸ್‌ನಲ್ಲಿ ಮೇ 23ರಂದು ಯೋಗ ಮಹೋತ್ಸವ

ಮೂಡುಬಿದಿರೆ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನ ವತಿಯಿಂದ ಭಾರತ ಸರ್ಕಾರದ ಆಯುಷ್ ಸಚಿವಾಲಯದ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ಸಹಯೋಗದಲ್ಲಿ 'ಯೋಗ ಮಹೋತ್ಸವ' ಕಾರ್ಯಕ್ರಮವನ್ನು ಮೇ 23ರಂದು ಮಿಜಾರಿನ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ.

ಆರೋಗ್ಯ, ಜ್ಞಾನ ಮತ್ತು ವಿಶ್ವಶಾಂತಿಗಾಗಿ ಯೋಗ ಎಂಬ ಮಹತ್ವದ ಆಶಯದೊಂದಿಗೆ ನಡೆಯಲಿರುವ ಈ ಕಾರ್ಯಕ್ರಮವು ಯೋಗದ ಮೂಲಕ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ. ಸುಮಾರು 500ಕ್ಕೂ ಹೆಚ್ಚು ಯೋಗಾಸಕ್ತರು, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆಯಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಳ್ವಾ ಫಾರ್ಮಸಿಯ ವ್ಯವಸ್ಥಾಪಕ ನಿರ್ದೇಶಕಿ ಡಾ. ಗ್ರೀಷ್ಮಾ ವಿವೇಕ್ ಆಳ್ವ ಭಾಗವಹಿಸಲಿದ್ದಾರೆ. ಯೋಗಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಆಯೋಜಕರು ಕೋರಿದ್ದಾರೆ.

ಮಾದಕ ವಸ್ತು ಸೇವನೆ : ಓರ್ವನ ಬಂಧನ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಬಪ್ಪನಾಡು ಗ್ರಾಮದ ಕೊಳಚಿಕಂಬ್ಳದ ಸುಖಾನಂದ ಶೆಟ್ಟಿ ಪಾರ್ಕ್ ಬಳಿ ಮಾದಕ ವಸ್ತು ಸೇವಿಸುತ್ತಿದ್ದ ಆರೋಪಿಯನ್ನು ಮುಲ್ಕಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಆರೋಪಿಯನ್ನು ಕೆ. ಎಸ್. ರಾವ್ ನಗರದ ಬಳಿಯ ನಿವಾಸಿ ಮಹಮ್ಮದ್ ಅನ್ವರ್ (42)ಎಂದು ಗುರುತಿಸಲಾಗಿದೆ.

ಮುಲ್ಕಿ ಪೊಲೀಸರು ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಮೊಹಮ್ಮದ್ ಅನ್ವರ್ ಅಮಲಿನಲ್ಲಿರುವುದು ಕಂಡುಬಂದಿದ್ದು ಆತನನ್ನು ವಿಚಾರಿಸಿ ತನಿಖೆ ನಡೆಸಿದಾಗ ಆತ ಎಂಡಿಎಂಎ ಮಾದಕ ವಸ್ತು ಹಾಗೂ ಎರಡು ದಿನದ ಹಿಂದೆ ಸ್ವಲ್ಪ ಗಾಂಜಾವನ್ನು ಸಹ ಸೇವಿಸಿರುವುದಾಗಿ ಒಪ್ಪಿಕೊಂಡಿದ್ದಾನೆ.

ಹೋರಿ ಹಾಯ್ದು ಓರ್ವ ಸಾವು

ಬೆಳ್ತಂಗಡಿ: ತಾಲೂಕಿನ ಗೇರುಕಟ್ಟೆ ನಿವಾಸಿಯೊಬ್ಬರು ಹೋರಿ ಹಾಯ್ದು ಗಾಯಗೊಂಡು ಉಪ್ಪಿನಂಗಡಿಯ ಸೂರ್ಯ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಆರೋಗ್ಯ ಹದಗೆಟ್ಟ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದರೂ ಫಲಕಾರಿಯಾಗದೆ ಬುಧವಾರ ಮಂಗಳೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಈ ಬಗ್ಗೆ ಉಪ್ಪಿನಂಗಡಿ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯವಿದೆ ಎಂದು ಆರೋಪಿಸಿ ಮೃತನ ಮನೆಯವರು ಬೆಳ್ತಂಗಡಿ ಪೊಲೀಸರಿಗೆ ದೂರು ನೀಡಿದ್ದು ಪ್ರಕರಣ ದಾಖಲಿಸಲಾಗಿದೆ.

ಗೇರುಕಟ್ಟೆಯಲ್ಲಿ ರಸ್ತೆ ಬದಿ ವ್ಯಾಪಾರ ಮಾಡುತ್ತಿದ್ದ ಮೊಹಮ್ಮದ್ ಶರೀಫ್ (35) ಎಂಬಾತನೇ ಮೃತ ವ್ಯಕ್ತಿ. ಈತ ಮೇ 14 ರಂದು ಮನೆಯಲ್ಲಿ ಹೋರಿ ಹಾಯ್ದು ಗಾಯಗೊಂಡಿದ್ದ. ಕೂಡಲೇ ಉಪ್ಪಿನಂಗಡಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಮಹಮ್ಮದ್ ಶರೀಫ್ ಅವರ ಆರೋಗ್ಯ ಪರಿಸ್ಥಿತಿ ಹದಗೆಟ್ಟಿದ್ದು ಬಳಿಕ ಅವರನ್ನು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆ ನೀಡಿದರೂ ಅವರು ಚಿಕಿತ್ಸೆಗೆ ಸ್ಪಂದಿಸಿದೆ ಮೇ 20 ರಂದು ಮೃತಪಟ್ಟಿದ್ದಾರೆ. ಮೃತನ ಸಹೋದರ ನಾಸಿರುದ್ದೀನ್ ಬೆಳ್ತಂಗಡಿ ಪೊಲೀಸರಿಗೆ ದೂರು ನೀಡಿದ್ದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇಲಿವಿಷ ಬೆರೆಸಿದ ಆಹಾರ ತಿನ್ನಲು ನೀಡಿದ ಬಗ್ಗೆ ದೂರು

ಕಾಸರಗೋಡು: ಇಲಿವಿಷ ಬೆರೆಸಿದ ಪಾರ್ಸೆಲ್ ಆಹಾರವನ್ನು ತಿನ್ನಲು ನೀಡಿರುವುದಾಗಿ ಆರೋಪಿಸಿ ಕಾಸರಗೋಡು ಪೊಲೀಸರಿಗೆ ದೂರು ನೀಡಲಾಗಿದೆ.

ಅಣಂಗೂರು ಟಿ.ವಿ.ಸ್ಟೇಷನ್ ರಸ್ತೆ ಬಳಿಯ ತಾಜುದ್ದೀನ್ ಮಂಜಿಲ್‌ನ ಕಲಂದರ್ ಶಾ ಎಂಬವರು ಈ ಬಗ್ಗೆ ದೂರು ನೀಡಿದ್ದು, ಅಣಂಗೂರಿನ ಅಬ್ದುಲ್‌ಖಾದರ್ ಎಂಬಾತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ತನ್ನ ಸಹೋದರ ಕಬೀರ್‌ನೊಂದಿಗಿರುವ ಪೂರ್ವ ದ್ವೇಷದಿಂದ ಆರೋಪಿ ಇಲಿವಿಷ ಬೆರೆಸಿದ ಪಾರ್ಸೆಲ್ ಆಹಾರವನ್ನು ನೀಡಿದ್ದನೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಕಲಂದರ್ ಶಾ ಆರೋಪಿಸಿದ್ದಾರೆ.

ತಲೆಬುರುಡೆ: ಎಸ್‌ಐಟಿ ಮತ್ತೆ ಕಾರ್ಯಾಚರಣೆ

ಬೆಳ್ತಂಗಡಿ : ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಟ್ಟ ಪ್ರಕರಣದಲ್ಲಿ ಸಾಕ್ಷಿ ದೂರುದಾರನಾಗಿ ಬಂದ ಚಿನ್ನಯ್ಯ ಆರಂಭದಲ್ಲಿ ನ್ಯಾಯಾಲಯಕ್ಕೆ ತಂದಿದ್ದ ತಲೆಬುರುಡೆಯನ್ನು ಬಂಗ್ಲೆಗುಡ್ಡೆಯಲ್ಲಿ ತೆಗೆಯಲಾಗಿದ್ದು ಈ ಮಾನವನ 'ತಲೆ ಬುರುಡೆ' ತೆಗೆದು ಅದರ ವಿಡಿಯೋ ಮಾಡಿದ ಪ್ರಕರಣ ಸಂಬಂಧ ಎಸ್‌ಐಟಿ ಅಧಿಕಾರಿಗಳು ಧರ್ಮಸ್ಥಳದ ನೇತ್ರಾವತಿಯ ಬಂಗ್ಲೆಗುಡ್ಡೆಯಲ್ಲಿ ಮತ್ತೆ ಕಾರ್ಯಾಚರಣೆಗೆ ಇಳಿದಿದ್ದಾರೆ. ಧರ್ಮಸ್ಥಳ ಗ್ರಾಮದ ನೇತ್ರಾವತಿಯ ಬಂಗ್ಲೆಗುಡ್ಡೆಯಲ್ಲಿ ಸೌಜನ್ಯ ಮಾವ ವಿಠಲ್ ಗೌಡ ಮತ್ತು ಬಂಟ್ವಾಳ ನಿವಾಸಿ ಪ್ರದೀಪ್ ಕುಲಾಲ್ ಮಾನವನ ತಲೆ ಬರುಡೆ ತೆಗೆದ ಸ್ಥಳದಲ್ಲಿ ವಿಡಿಯೋ ಮಾಡಿ ವೈರಲ್ ಮಾಡಿದ ಘಟನೆಗೆ ಸಂಬಂಧಿಸಿದಂತೆ ಮರು ಸೃಷ್ಟಿ ಮಾಡಿ ಘಟನಾ ಸ್ಥಳವನ್ನು ಎಫ್‌ಎಸ್‌ಎಲ್ ಅಧಿಕಾರಿಗಳು ಖಚಿತ ಪಡಿಸಿ ಎಸ್ ಐಟಿಗೆ ವರದಿ ನೀಡಲು ಬೆಂಗಳೂರಿನಿಂದ ಆಗಮಿಸಿದ ಎಫ್ ಎಸ್‌ಎಲ್ ತಜ್ಞರು ಮತ್ತು ಸೋಕೋ ತಂಡದವರ ಜೊತೆ ಎಸ್‌ಐಟಿ ಅಧಿಕಾರಿಗಳು ಮೇ 21 ರಂದು ಮಧ್ಯಾಹ್ನ 2.40 ಕ್ಕೆ ಪ್ರಕರಣದ ಸಾಕ್ಷಿಯಾಗಿರುವ ಪ್ರದೀಪ್ ಕುಲಾಲ್‌ನನ್ನು ಕರೆದುಕೊಂಡು ಬಂದು ಪರಿಶೀಲನೆ ನಡೆಸಿ ಮಹಜರು ಕಾರ್ಯ ಆರಂಭಿಸಿದ್ದಾರೆ. ಆರಂಭದಲ್ಲಿ ನಡೆಸಲಾಗಿದ್ದ ಮಹಜರು ಸಮರ್ಪಕವಾಗಿ ನಡೆದಿಲ್ಲ ಎಂಬ ಕಾರಣಕ್ಕೆ ಇದೀಗ ಮತ್ತೆ ಮಹಜರು ಪ್ರಕ್ರಿಯೆ ನಡೆಸುತ್ತಿದ್ದಾರೆ.

ಮಾದಕ ದ್ರವ್ಯ ಮಾರಾಟ: ಆರೋಪಿ ಬಂಧನ

ಮಂಗಳೂರು: ನಗರದ ಹೊಯ್ಗೆ ಬಜಾರ್ ರಸ್ತೆಯ ಗೂಡ್ಸ್ ಶೆಡ್ ಬಳಿ ಮಾದಕ ವಸ್ತು ಎಂಡಿಎಂಎ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಓರ್ವ ಆರೋಪಿಯನ್ನು ಪಾಂಡೇಶ್ವರ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಅನ್ಸಾರ್ ಬಂಧಿತ ಆರೋಪಿ. ಈತನಿಂದ 50,000 ರೂ. ಮೌಲ್ಯದ 5.27 ಗ್ರಾಂ. ತೂಕದ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಜತೆಗೆ 10 ಸಾವಿರ ರೂ. ಮೌಲ್ಯದ ಮೊಬೈಲ್ ಫೋನ್, 1 ಲಕ್ಷ ರೂ. ಮೌಲ್ಯದ 1.60 ಲಕ್ಷ ರೂ. ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆತನನ್ನು ಬಂಧಿಸಲಾಗಿದೆ.

ಬೆಳ್ತಂಗಡಿ ತಾಲೂಕಿನ ನದಿಗಳಲ್ಲಿ ನೀರಿನ ಹರಿವು । ಕಿಂಡಿ ಅಣೆಕಟ್ಟುಗಳಲ್ಲಿ ಬಿರುಸಿನ ಚಟುವಟಿಕೆ

ಭರದಿಂದ ಸಾಗಿದೆ ಹಲಗೆ ತೆರವು ಕಾರ್ಯ

ಬೆಳ್ತಂಗಡಿ: ತಾಲೂಕಿನಲ್ಲಿ ಸುಸ್ಥಿತಿಯಲ್ಲಿರುವ ಕಿಂಡಿ ಅಣೆಕಟ್ಟುಗಳಿಗೆ ಬೇಸಿಗೆಯ ಕೃಷಿ ನೀರಿಗಾಗಿ ಅಳವಡಿಸಲಾಗಿದ್ದ ಹಲಗೆಗಳ ತೆರವು ಕಾರ್ಯಾಚರಣೆ ಆರಂಭವಾಗಿದೆ. ನೇತ್ರಾವತಿ, ಮೃತ್ಯುಂಜಯ, ಸೋಮಾವತಿ, ಫಲ್ಗುಣಿ, ಕಪಿಲಾ ನದಿಗಳು, ನೆರಿಯ, ಅಣಿಯೂರು ಹೊಳೆಗಳಲ್ಲದೆ ಅನೇಕ ಹಳ್ಳ, ತೋಡುಗಳಿದ್ದು ಇವುಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಹಲಗೆ ಅಳವಡಿಸಲಾಗಿತ್ತು. 74 ಕಿಂಡಿ ಅಣೆಕಟ್ಟುಗಳು ಇದ್ದು ಬೇಸಿಗೆಯ ಕೃಷಿ ನೀರಿಗಾಗಿ ಸುಮಾರು 50ಕ್ಕಿಂತ ಅಧಿಕ ಕಿಂಡಿ ಅಣೆಕಟ್ಟುಗಳು ಸುಸ್ಥಿತಿಯಲ್ಲಿದ್ದು ನೀರಾವರಿ ಉಪಯೋಗಕ್ಕೆ ಸಹಕಾರಿಯಾಗಿವೆ. ನಿರ್ವಹಣೆ ಕೊರತೆಯಿಂದ ಅಥವಾ ನೀರು ತುಂಬಲು ಸಾಧ್ಯವಾಗದ ಕಾರಣ ಉಳಿದ ಕಿಂಡಿ ಅಣೆಕಟ್ಟುಗಳು ಉಪಯೋಗಕ್ಕೆ ಸಿಗುತ್ತಿಲ್ಲ.

ತಾಲೂಕಿನ 30 ಕಿಂಡಿ ಅಣೆಕಟ್ಟುಗಳಿಗೆ ಮರದ ಹಲಗೆಗಳನ್ನು ಇಳಿಸಿ, 20 ಕಿಂಡಿ ಅಣೆಕಟ್ಟುಗಳಿಗೆ ತಗಡಿನ ಶೀಟುಗಳನ್ನು ಅಳವಡಿಸಿ ನೀರು ಸಂಗ್ರಹಿಸಲಾಗುತ್ತದೆ. ಕಿಂಡಿ ಅಣೆಕಟ್ಟುಗಳ ನೀರು ಕೃಷಿ ಉಪಯೋಗದ ಜತೆ ಅಂತರ್ಜಲ ಮಟ್ಟ ಕಾಪಾಡಲು ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ಹೆಚ್ಚಿನ ತಿಂಡಿ ಅಣೆಕಟ್ಟುಗಳಲ್ಲಿ ಮಾರ್ಚ್ ಕೊನೆಯ ತನಕ ನೀರು ಸಂಗ್ರಹ ಇರುತ್ತದೆ.

ಹಲಗೆ ತೆರವು ಆರಂಭ

ಇದೀಗ ಆಗಾಗ ಮಳೆ ಸುರಿಯುತ್ತಿರುವ ಕಾರಣ ಕೃಷಿಗೆ ನೀರು ನೀಡುವ ಅಗತ್ಯ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಮಳೆಗಾಲವು ಆರಂಭವಾಗಲಿದ್ದು ಕಿಂಡಿ ಅಣೆಕಟ್ಟುಗಳ ಹಲಗೆ ತೆರವು ಆರಂಭಿಸಲಾಗಿದೆ. ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲೇ ನದಿ, ಹೊಳೆಗಳಲ್ಲಿ ಹೆಚ್ಚಿನ ನೀರು ಹರಿದು ಬಂದ ಕಾರಣ ಕಿಂಡಿ ಅಣೆಕಟ್ಟುಗಳ ಹಲಗೆ ತೆರವು ಸಾಧ್ಯವಾಗದೆ ಮೇ ತಿಂಗಳ ಕೊನೆಯ ವಾರದಲ್ಲಿ ಹೆಚ್ಚಿನ ನದಿಗಳಲ್ಲಿ ಕೃತಕ ನೆರೆ ಉಂಟಾಗಿ ಹಲವಾರು ತೋಟಗಳಿಗೆ ನದಿ ನೀರು ನುಗ್ಗಿತ್ತು. ಈ ಸಮಯ ಕಿಂಡಿ ಅಣೆಕಟ್ಟು ಪರಿಸರದಲ್ಲಿ ಸಾಕಷ್ಟು ತ್ಯಾಜ್ಯ ಮರಮಟ್ಟು ಕೂಡ ಸಂಗ್ರಹಗೊಂಡಿತ್ತು. ಬಳಿಕ ಜೂನ್ ಮೊದಲ ವಾರ ಹಲಗೆ ತೆರವು ಕಾರ್ಯ ನಡೆದಿತ್ತು. ಈ ಬಾರಿ ನದಿಗಳಲ್ಲಿ ನೀರು ಹರಿಯಲು ಆರಂಭವಾದಂತೆ ಹಲಗೆ ತೆರವು ಕಾರ್ಯ ನಡೆಸಲಾಗುತ್ತಿದೆ.





ಎಚ್ಚರ ಅಗತ್ಯ

ಪ್ರಸ್ತುತ ನದಿ, ಹೊಳೆಗಳಲ್ಲಿ ನೀರಿನ ಹರಿವು ಹೆಚ್ಚುತ್ತಿದ್ದು ಕಿಂಡಿ ಅಣೆಕಟ್ಟುಗಳು ತುಂಬಿವೆ. ಈ ಕಾರಣದಿಂದ ಹಲಗೆಗಳನ್ನು ತೆರವುಗೊಳಿಸುವವರು ಎಚ್ಚರ ವಹಿಸುವುದು ಅಗತ್ಯವಾಗಿದೆ. ಹಲಗೆಗಳನ್ನು ತೆರವುಗೊಳಿಸುತ್ತಿದ್ದಂತೆ ನದಿಗಳ ತಗ್ಗು ಪ್ರದೇಶದಲ್ಲಿ ಏಕಾಏಕಿ ನೀರ ಹರಿವು ಹೆಚ್ಚಳಗೊಳ್ಳುತ್ತದೆ. ಇದರಿಂದ ನದಿ ದಾಟುವಾಗ ಹಾಗೂ ಇತರ ಸಮಯ ನದಿ ಪ್ರದೇಶದ ಜನರು ಹೆಚ್ಚಿನ ಎಚ್ಚರಿಕೆಯಿಂದ ಇರಬೇಕು.

ಸಹಕಾರ ಕೋರಿಕೆ

ಕಿಂಡಿ ಅಣೆಕಟ್ಟುಗಳ ಹಲಗೆ ತೆರವು ಕಾರ್ಯ ಆರಂಭಿಸಲಾಗಿದೆ. ಇದಕ್ಕೆ ಸ್ಥಳೀಯ ಫಲಾನುಭವಿಗಳ ಸಹಕಾರವನ್ನು ಕೋರಲಾಗಿದೆ. ಕಿಂಡಿ ಅಣೆಕಟ್ಟುಗಳ ನಿರ್ವಹಣೆಗೆ ಖರ್ಚಾಗುವ ಹಣವನ್ನು ಅನುದಾನದ ಆಧಾರದಲ್ಲಿ ಫಲಾನುಭವಿಗಳಿಗೆ ನೀಡಲಾಗುವುದು.

■ ರಾಕೇಶ್, ಇಂಜಿನಿಯರ್,
ಸಣ್ಣ ನೀರಾವರಿ ಇಲಾಖೆ, ಬೆಳ್ತಂಗಡಿ

ಹೊಸ ಕಿಂಡಿ ಅಣೆಕಟ್ಟುಗಳು

ಶಾಸಕ ಹರೀಶ್ ಪೂಂಜ ಅವರ ಮುತುವರ್ಜಿಯಲ್ಲಿ ಕಳೆದ ಅವಧಿಯಲ್ಲಿ ತಾಲೂಕಿನಲ್ಲಿ 30 ಕ್ಕಿಂತ ಅಧಿಕ ಹೊಸ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇವೆಲ್ಲವು ಸೇತುವೆ ಸಹಿತ ಕಿಂಡಿ ಅಣೆಕಟ್ಟುಗಳಾಗಿದ್ದು ಹಲವು ಪ್ರದೇಶದ ಸಂಪರ್ಕವನ್ನು ಹತ್ತಿರಗೊಳಿಸಿವೆ. ಹಿಂದಿನ ದಶಕಗಳಲ್ಲಿ ಹೆಚ್ಚಿನ ಕಡೆ ಸಾಂಪ್ರದಾಯಿಕ ಕಟ್ಟ ಕಟ್ಟುವ ಪ್ರದೇಶಗಳಲ್ಲಿ ಈ ಕಿಂಡಿ ಅಣೆಕಟ್ಟುಗಳು ನಿರ್ಮಾಣವಾಗಿದ್ದು ಕೃಷಿಕರಿಗೆ ವರದಾನವಾಗಿದ್ದು, ಹಲವು ಕಿ.ಮೀ.ದೂರದವರೆಗೆ ನೀರು ಸಂಗ್ರಹಗೊಳ್ಳುವ ಕಾರಣ ತಾಲೂಕಿನ ಅಂತರ್ಜಲದ ವೃದ್ಧಿಗೂ ಸಹಕಾರಿಯಾಗಿವೆ. ಅರಸಿನಮಕ್ಕಿ, ತಣ್ಣೀರುಪಂಥ, ಪಟ್ರಮೆ, ನೆರಿಯ, ಮಿತ್ತಬಾಗಿಲು, ನಾವೂರ, ಶಿರ್ಲಾಲು, ಸುಲ್ಕೇರಿಮೊಗ್ರು, ಸುಲ್ಕೇರಿ ಮೊದಲಾದ 22 ಕಡೆಗಳಲ್ಲಿ ಹೊಸ ಕಿಂಡಿ ಅಣೆಕಟ್ಟುಗಳಿಗೆ ಬೇಡಿಕೆ ಇದ್ದು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ದ್ವಿತೀಯ ಪಿಯುಸಿ ಪರೀಕ್ಷೆ–2ರ ಫಲಿತಾಂಶ

ಶಾರದಾ ಕಾಲೇಜಿನ ರಚಿತಾ ರಾಘವೇಂದ್ರರಿಗೆ 600 ಅಂಕ: ರಾಜ್ಯಕ್ಕೆ ಪ್ರಥಮ ರ‍್ಯಾಂಕ್

ಮಂಗಳೂರು: 2025–26ನೇ ಸಾಲಿನ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆ–2ರ ಫಲಿತಾಂಶ ಪ್ರಕಟಗೊಂಡಿದ್ದು, ಮಂಗಳೂರಿನ ಶಾರದಾ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ರಚಿತಾ ರಾಘವೇಂದ್ರ ಅವರು 600ರಲ್ಲಿ 600 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.

ಈಕೆಯ ಅವಳಿ ಸಹೋದರಿ ರಚನಾ ರಾಘವೇಂದ್ರ (598/600) ಅವರು ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ತೃತೀಯ ರ‍್ಯಾಂಕ್ ಪಡೆದು ವಿದ್ಯಾ ಸಂಸ್ಥೆಗೆ ಹಾಗೂ ಹೆತ್ತವರಿಗೂ ಕೀರ್ತಿ ತಂದಿದ್ದಾರೆ.

ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 9 ಹಾಗೂ ವಾಣಿಜ್ಯ ವಿಭಾಗದಲ್ಲಿ 7 ರ‍್ಯಾಂಕ್‌ಗಳನ್ನು ಶಾರದಾ ಸಂಸ್ಥೆಯ ವಿದ್ಯಾರ್ಥಿಗಳು ಪಡೆದು ಅಮೋಘ ಸಾಧನೆಗೈದಿದ್ದಾರೆ. 59 ವಿದ್ಯಾರ್ಥಿಗಳು ಸಂಸ್ಕೃತದಲ್ಲಿ 100 ಪೂರ್ಣ ಅಂಕಗಳನ್ನು ಪಡೆದಿದ್ದಾರೆ.


ರಚಿತಾ ರಾಘವೇಂದ್ರ


ರಚನಾ ರಾಘವೇಂದ್ರ

ಅಭಿನಂದನೆ

ಇವರ ಅತ್ಯುತ್ತಮ ಸಾಧನೆಗೆ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್, ನಿರ್ದೇಶಕ ಸಮೀರ್ ಪುರಾಣಿಕ್, ಆಡಳಿತ ಮಂಡಳಿಯ ಎಲ್ಲಾಪದಾಧಿಕಾರಿಗಳು ಹಾಗೂ ಪ್ರಾಂಶುಪಾಲರುಗಳು, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ತೆಂಕನಿಡಿಯೂರು ಕಾಲೇಜಿನಲ್ಲಿ ರಕ್ಷಣಾ ಕಾರ್ಯಾಚರಣೆ

ವಾಯುದಾಳಿಯ ಅಣಕು ಪ್ರದರ್ಶನ

ಉಡುಪಿ: ಹಠಾತ್ತಾಗಿ ನಡೆದ ವಾಯುದಾಳಿಯ ತೀವ್ರತೆಗೆ ತತ್ತರಿಸಿ ಮೂರ್ಛೆ ಬಿದ್ದು ಬಿದ್ದಿರುವ ವಿದ್ಯಾರ್ಥಿಗಳು, ಸುತ್ತಮುತ್ತಲೂ ಆತಂಕದಿಂದ ಅವಾಕ್ಕಾಗಿ ನಿಂತು ನೋಡುತ್ತಿರುವ ಸಹಪಾಠಿಗಳು ಹಾಗೂ ಶಿಕ್ಷಕ ವೃಂದ, ಮತ್ತೊಂದೆಡೆ ದಾಳಿಯಲ್ಲಿ ಗಾಯಗೊಂಡವರಿಗೆ ತುರ್ತಾಗಿ ಪ್ರಥಮ ಚಿಕಿತ್ಸೆ ನೀಡುತ್ತಿರುವ ವೃದ್ಯರು, ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸುತ್ತಿರುವ ಗೃಹರಕ್ಷಕರು ಮತ್ತು ಧಗಧಗನೆ ಉರಿಯುತ್ತಿರುವ ಬೆಂಕಿಯನ್ನು ನಂದಿಸಲು ಹರಸಾಹಸ ಪಡುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿ. ಉಡುಪಿಯ ತೆಂಕನಿಡಿಯೂರು ಕಾಲೇಜು ಆವರಣದಲ್ಲಿ ಗುರುವಾರ ಬೆಳಿಗ್ಗೆ ಕಂಡುಬಂದ ಅತ್ಯಂತ ರೋಮಾಂಚನಕಾರಿ ದೃಶ್ಯಾವಳಿಗಳಿವು.

ಯುದ್ಧ ಅಥವಾ ತುರ್ತು ಪರಿಸ್ಥಿತಿಯ ಆಕಸ್ಮಿಕ ಸಂದರ್ಭಗಳಲ್ಲಿ ರಕ್ಷಣಾಕಾರ್ಯಾಚರಣೆಗಳನ್ನು ಯಾವ ರೀತಿ ಅತ್ಯಂತ ಸಮನ್ವಯತೆಯಿಂದ ಕೈಗೊಳ್ಳಬೇಕು ಹಾಗೂ ದೀಪಗಳನ್ನು ನಂದಿಸುವ ಮೂಲಕ ವೈಮಾನಿಕ ದಾಳಿಯಿಂದ ಹೇಗೆ ಪಾರಾಗಬೇಕು ಎನ್ನುವ ಬಗ್ಗೆ ಕಾಲೇಜು ಆವರಣದಲ್ಲಿ ಜಂಟಿಯಾಗಿ ಈ ವಿಶೇಷ ಅಣಕು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಜಿಲ್ಲೆಯ ಅಗ್ನಿಶಾಮಕ ಇಲಾಖೆ, ಗೃಹರಕ್ಷಕ ದಳ, ಪೊಲೀಸ್ ಇಲಾಖೆ, ಕರಾವಳಿ ಕಾವಲು ಪಡೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಡುಪಿ ಪೌರರಕ್ಷಕ ದಳ, ಲಯನ್ಸ್ ಕ್ಲಬ್ ಉಡುಪಿ, ರೆಡ್ ಕ್ರಾಸ್ ಘಟಕ ಹಾಗೂ ತೆಂಕನಿಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಹಳೆ ವಿದ್ಯಾರ್ಥಿ ಸಂಘದ ಜಂಟಿ ಆಶ್ರಯದಲ್ಲಿ ಈ ಯಶಸ್ವಿ ಪ್ರಾಯೋಗಿಕ ಕಾರ್ಯಾಚರಣೆ ಜರುಗಿತು.

ಅಣಕು ಪ್ರದರ್ಶನವನ್ನು ವೀಕ್ಷಿಸಿ ಮಾತನಾಡಿದ ಉಡುಪಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು, ನಿಜ ಜೀವನದಲ್ಲಿ ದುರಂತಗಳು ಸಂಭವಿಸಿದಾಗ ಸಾರ್ವಜನಿಕರು ರಕ್ಷಣಾ ಕಾರ್ಯದಲ್ಲಿ ನೆರವಾಗುವ ಬದಲು ಕೆಲವರು ಮೊಬೈಲ್‌ಗಳಲ್ಲಿ ರೀಲ್ಸ್ ಮಾಡುತ್ತಾ, ಅತ್ತಿಂದಿತ್ತ ಓಡಾಡುತ್ತಾ ರಕ್ಷಣಾ ಸಿಬ್ಬಂದಿಯ ಕೆಲಸಕ್ಕೆ ಅಡ್ಡಿಪಡಿಸುವ ಪ್ರವೃತ್ತಿಯ ಬಗ್ಗೆ ಜಿಲ್ಲಾಧಿಕಾರಿಗಳು ಕಳವಳ ವ್ಯಕ್ತಪಡಿಸಿದರು. ನಮ್ಮ ರಕ್ಷಣಾ ಸಿಬ್ಬಂದಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಜನರ ಜೀವ ಉಳಿಸಲು ಶ್ರಮಿಸುತ್ತಿರುತ್ತಾರೆ. ಇಂತಹ ವಿಷಮ ಪರಿಸ್ಥಿತಿಗಳಲ್ಲಿ ವಿವಿಧ ಇಲಾಖೆಗಳು ಹೇಗೆ ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡುತ್ತವೆ ಎಂಬ ಜ್ಞಾನ ಇಂತಹ ಅಣಕು ಕಾರ್ಯಾಚರಣೆಗಳಿಂದ ಲಭಿಸುತ್ತದೆ ಎಂದರು.

ಈ ಮಹತ್ವದ ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯ್ಕ್, ಗೃಹರಕ್ಷಕ ದಳದ ಕಮಾಂಡೆಂಟ್ ಡಾ. ರೋಷನ್ ಶೆಟ್ಟಿ, ಸೆಕೆಂಡ್ ಇನ್ ಕಮಾಂಡೆಂಟ್ ಕೆ.ಸಿ. ರಾಜೇಶ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ವಿನಾಯಕ ಉ. ಕಲ್ಗಟಕರ, ಪೌರ ರಕ್ಷಣಾ ದಳದ ಕಮಾಂಡಿಂಗ್ ಆಫೀಸರ್ ಡಾ. ವಿಜಯೇಂದ್ರ ರಾವ್, ರೆಡ್ ಕ್ರಾಸ್ ಘಟಕದ ಸಂಚಾಲಕ ಪ್ರಶಾಂತ್ ಎನ್., ಲಯನ್ಸ್ ಕ್ಲಬ್ ಅಧ್ಯಕ್ಷ ಲಯನ್ ದಿನೇಶ್ ಕಿಣಿ ಹಾಗೂ ತೆಂಕನಿಡಿಯೂರು ಕಾಲೇಜಿನ ಪ್ರಾಂಶುಪಾಲ ನಿತ್ಯಾನಂದ ವಿ. ಗಾಂವಕರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಗೃಹರಕ್ಷಕ ದಳದ ಸಿಬ್ಬಂದಿ ಸ್ಟೀವನ್ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.





» ಉಡುಪಿಯ ತೆಂಕನಿಡಿಯೂರು ಕಾಲೇಜು ಆವರಣದಲ್ಲಿ ಕಂಡುಬಂದ ಅತ್ಯಂತ ರೋಮಾಂಚನಕಾರಿ ದೃಶ್ಯಾವಳಿ

ಪೆರಿಯ ಕಲ್ಲೋಟ್ ಬಳಿ ನಡೆದ ಅವಳಿ ಕೊಲೆ ಪ್ರಕರಣ

ಆರೋಪಿಗಳಿಗೆ ಮತ್ತೆ ಪರೋಲ್: ಕೋರ್ಟ್ ಮೊರೆ ಹೋಗಲು ಕುಟುಂಬಗಳ ತೀರ್ಮಾನ

ಕಾಸರಗೋಡು: ಪೆರಿಯ ಕಲ್ಲೋಟ್ ಎಂಬಲ್ಲಿ ಅವಳಿ ಕೊಲೆ ಪ್ರಕರಣದ ಆರೋಪಿಗಳಿಗೆ ಜೈಲು ಇಲಾಖೆ ಸಾಮೂಹಿಕ ಪರೋಲ್ ನೀಡಿದೆ. ಮೊದಲ ಆರೋಪಿ ಪೀತಾಂಬರನ್, 4ನೇ ಆರೋಪಿ ಅನಿಲ್, 5ನೇ ಆರೋಪಿ ಗಿಜಿನ್, 7ನೇ ಆರೋಪಿ ಅಶ್ವಿನ್ ಮತ್ತು 15ನೇ ಆರೋಪಿ ಸುರೇಂದ್ರನ್ ಅವರಿಗೆ ಪೆರೋಲ್ ನೀಡಲಾಗಿದೆ.

ಎಡರಂಗ ಸರ್ಕಾರ ಅಧಿಕಾರ ತೊರೆಯುವ ಮುನ್ನ ತರಾತುರಿಯಲ್ಲಿ ಪರೋಲ್ ನೀಡಲಾಗಿದೆ. 20 ದಿನಗಳ ಕಾಲ ಪೆರೋಲ್ ಪಡೆದ ಅವರೆಲ್ಲರೂ ಪ್ರಸ್ತುತ ಕಾಸರಗೋಡು ಜಿಲ್ಲೆಯಲ್ಲಿ ತಿರುಗಾಡುತ್ತಿದ್ದಾರೆ. ಫೆಬ್ರವರಿ 17, 2019ನೇ ಫೆಬ್ರವರಿ 19ರಂದು ಕಾಸರಗೋಡಿನ ಪೆರಿಯ ಕಲ್ಯೋಟ್‌ನಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರಾದ ಕೃಪೇಶ್ ಮತ್ತು ಶರತ್ ಲಾಲ್ ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಈ ಪ್ರಕರಣದ ಆರೋಪಿ ಸಿಪಿಎಂ ಕಾರ್ಯಕರ್ತರಿಗೆ ಸಿಬಿಐ ವಿಶೇಷ ನ್ಯಾಯಾಲಯವು ಡಬಲ್ ಜೀವಾವಧಿ ಶಿಕ್ಷೆ ವಿಧಿಸಿತ್ತು. ಕೊಲೆಗೀಡಾದ ಕೃಪೇಶ್ ಮತ್ತು ಶರತ್‌ಲಾಲ್ ಅವರ ಕುಟುಂಬಗಳು ಮತ್ತು ಕಾಂಗ್ರೆಸ್ ನಾಯಕತ್ವವು ಆರೋಪಿಗಳಿಗೆ ನಿರಂತರ ಪರೋಲ್ ನೀಡುವುದನ್ನು ವಿರೋಧಿಸಿ ತೀವ್ರ ಪ್ರತಿಭಟನೆ ನಡೆಸಿವೆ. ಎಲ್‌ಡಿಎಫ್ ಸರ್ಕಾರವು ತಮಗೆ ನ್ಯಾಯ ನಿರಾಕರಿಸುತ್ತಿದೆ ಮತ್ತು ಘೋರ ಅಪರಾಧಿಗಳನ್ನು ರಕ್ಷಿಸುವಲ್ಲಿ ವಿಶೇಷ ಆಸಕ್ತಿ ತೋರಿಸುತ್ತಿದೆ ಎಂದು ಕುಟುಂಬ ಆರೋಪಿಸಿದೆ.

ಈ ಹಿಂದೆ ಪ್ರಕರಣದ ಆರೋಪಿಗಳಿಗೆ ಪರೋಲ್ ನೀಡುವುದು ಪ್ರಮುಖ ರಾಜಕೀಯ ವಿವಾದಗಳಿಗೆ ಕಾರಣವಾಗಿತ್ತು. ನಿರಂತರ ಪರೋಲ್ ನೀಡುವುದನ್ನು ಕಾನೂನುಬದ್ಧವಾಗಿ ಪ್ರಶ್ನಿಸಲು ಬಲಿಪಶುಗಳ ಕುಟುಂಬಗಳು ನ್ಯಾಯಾಲಯದ ಮೊರೆ ಹೋಗಲು ತೀರ್ಮಾನಿಸಿದ್ದಾರೆ.





» ಎಡರಂಗ ಸರ್ಕಾರ ಅಧಿಕಾರ ತೊರೆಯುವ ಮುನ್ನ ತರಾತುರಿಯಲ್ಲಿ ಪರೋಲ್ ನೀಡಲಾಗಿದೆ.

» 20 ದಿನಗಳ ಕಾಲ ಪೆರೋಲ್ ಪಡೆದವರು ಪ್ರಸ್ತುತ ಜಿಲ್ಲೆಯಲ್ಲಿ ತಿರುಗಾಡುತ್ತಿದ್ದಾರೆಂಬ ಆರೋಪ.

ನಾಗರಮಠ ಮರಳು ದಕ್ಕೆ: ಲೋಕಾಯುಕ್ತ ಸೂಚನೆ ಮೇರೆಗೆ ತಜ್ಞರ ಸಮಿತಿ ಪರಿಶೀಲನೆ

ಉಡುಪಿ: ಬಾರಕೂರು ಸಮೀಪದ ಹೊಸಾಳ ಗ್ರಾಮದ ಸೀತಾ ನದಿಯಲ್ಲಿ ಮರಳುಗಾರಿಕೆ ಕಾನೂನು ನಿಯಮಗಳನ್ನು ಮೀರಿ ಹಾಗೂ ಪರಿಸರಕ್ಕೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ನಡೆಯುತ್ತಿದೆ ಎಂಬ ಆರೋಪದ ಹಿನ್ನೆಲೆ, ಕರ್ನಾಟಕ ಲೋಕಾಯುಕ್ತದ ಸೂಚನೆ ಮೇರೆಗೆ ತಜ್ಞರ ಜಂಟಿ ಸಮಿತಿ ಸ್ಥಳ ಪರಿಶೀಲನೆ ನಡೆಸಿತು.

ಸ್ಥಳೀಯರಾದ ಗಣೇಶ್ ಶೆಟ್ಟಿ ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದು, ದೂರಿನ ಗಂಭೀರತೆಯನ್ನು ಪರಿಗಣಿಸಿದ ಲೋಕಾಯುಕ್ತರು ವಿವಿಧ ಇಲಾಖೆಗಳ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಪರಿಶೀಲನೆ ನಡೆಸುವಂತೆ ಆದೇಶಿಸಿದ್ದರು. ಅದರಂತೆ ಮೇ 21ರಂದು ಸಮಿತಿ ದೋಣಿ ಮೂಲಕ ಮರಳುಗಾರಿಕೆ ಪ್ರದೇಶಕ್ಕೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಿತು.

ಸಮಿತಿಯಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಉಡುಪಿ ವಿಭಾಗದ ಹಿರಿಯ ಪರಿಸರ ಅಧಿಕಾರಿಗಳು, ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್, ಕುಂದಾಪುರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪರಿಸರ ಹಾಗೂ ಭೂವಿಜ್ಞಾನ ವಿಭಾಗದ ಮುಖ್ಯಸ್ಥರು, ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಲೋಕಾಯುಕ್ತ ಅಧಿಕಾರಿಗಳು ಭಾಗವಹಿಸಿದ್ದರು.

ಮರಳುಗಾರಿಕೆಯಲ್ಲಿ ನಡೆದಿರುವ ಅಕ್ರಮಗಳ ಸ್ವರೂಪ, ಪರಿಸರ ಹಾನಿ, ಪರಿಸರ ವ್ಯತ್ಯಯ ಹಾಗೂ ಸರ್ಕಾರದ ಖಜಾನೆಗೆ ಉಂಟಾದ ಆರ್ಥಿಕ ನಷ್ಟದ ಪ್ರಮಾಣವನ್ನು ಅಂದಾಜು ಮಾಡುವ ಉದ್ದೇಶದಿಂದ ಈ ಪರಿಶೀಲನೆ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಇದಕ್ಕೂ ಮುನ್ನ ಉಡುಪಿ ಲೋಕಾಯುಕ್ತ ಪೊಲೀಸರು ಏಪ್ರಿಲ್ 27ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ತನಿಖೆ ವೇಳೆ ಅಕ್ರಮ ಹಾಗೂ ಕಾನೂನುಬಾಹಿರ ಚಟುವಟಿಕೆಗಳು ನಡೆದಿರುವುದು ಕಂಡುಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ವಿವಿಧ ಇಲಾಖೆಗಳು ಸ್ವತಂತ್ರ ಪರಿಶೀಲನೆ ನಡೆಸದ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಸಮಾಧಾನ ವ್ಯಕ್ತಪಡಿಸಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಜ್ಞರ ಸಮಿತಿಯಿಂದ ವರದಿ ನೀಡುವಂತೆ ಸೂಚಿಸಿತ್ತು.

ಪರಿಶೀಲನೆ ವೇಳೆ ಲೋಕಾಯುಕ್ತ ಡಿವೈಎಸ್ಪಿ ಹಾಲಮೂರ್ತಿ ರಾವ್, ವೃತ್ತ ನಿರೀಕ್ಷಕ ಮಂಜುನಾಥ್, ಎಡಿಎಲ್‌ಆರ್ ತಿಪ್ಪೇರಾಯ ತೊರವಿ, ಸಣ್ಣ ನೀರಾವರಿ ಇಲಾಖೆಯ ರಾಜುದ್ದೀನ್, ಅರಣ್ಯ ಇಲಾಖೆಯ ಶ್ರೀಧರ್, ಮಾಲಿನ್ಯ ನಿಯಂತ್ರಣ ಮಂಡಳಿಯ ಕೀರ್ತಿ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಶುಕ್ರವಾರ 22, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಘಟನೆ ಯಾವ ದಿನ?
22.05.2010

ಸಮಯ ಎಷ್ಟು?
ಬೆಳಿಗ್ಗೆ ಸುಮಾರು 6.00 ಗಂಟೆಗೆ

ಸ್ಥಳ ಯಾವುದು?
ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ನತದೃಷ್ಟ ವಿಮಾನ?
ಏರ್ ಇಂಡಿಯಾ ಎಕ್ಸ್‌ಪ್ರೆಸ್ IX 812

ಒಟ್ಟು ಸಾವು
000158

ಮರೆತೇನೆಂದಾರಾ ಮರೆಯಲಿ ಹ್ಯಾಂಗಾ...



ಮಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಕೆಂಜಾರು ಪರಿಸರದಲ್ಲಿ 2010ರ ಮೇ 22ರಂದು ನಡೆದಿದ್ದ ಏರ್ ಇಂಡಿಯಾ ವಿಮಾನ ದುರಂತದ ದೃಶ್ಯ. ಈ ಘಟನೆಯಲ್ಲಿ 158 ಮಂದಿ ಸಾವನ್ನಪ್ಪಿದ್ದರು.

ಕಹಿ ನೆನಪಿಗೆ
16
ವರುಷಗಳು

ಕಾಡುತ್ತಲೇ ಇದೆ ಕೆಂಜಾರಿನ ಮೃತ್ಯುಕೂಪ

ಮರೆತಿಲ್ಲ ಮರೆಯಲ್ಲ

ಮತ್ತೆ ನೆನಪಾಗಿದೆ ಮೇ 22ರ ಆ ದುರಂತ

ಮಂಗಳೂರು: ಮಂಗಳೂರಿಗರ ಪಾಲಿಗೆ ಮೇ 22ರ ಶನಿವಾರ ಮರೆಯಲಾಗದ ಕರಾಳ ಶನಿವಾರವಾಗಿ ದಾಖಲಾಯಿತು. ಹಿಂದೆಂದೂ ಕಾಣದ ಭಯಾನಕ, ಭೀಭತ್ಸ ಘಟನೆಯೊಂದು ನಡೆದಿದ್ದು, ದೇಶವನ್ನು ಶೋಕ ಸಾಗರದಲ್ಲಿ ಮುಳುಗಿಸಿದೆ.ಬೆಳ್ಳಂಬೆಳಗ್ಗೆ ನಡೆದ ವಿಮಾನ ಪತನ ದುರಂತದಲ್ಲಿ 158 ಮಂದಿ ಸಾವನ್ನಪ್ಪಿದ್ದಾರೆ. ದುಬೈಯಿಂದ 166 ಮಂದಿ ಪ್ರಯಾಣಿಕರನ್ನು ಹೊತ್ತು ಬಂದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಐಗಿ812 ವಿಮಾನ ಇನ್ನೇನು ಲ್ಯಾಂಡ್ ಆಗಬೇಕು ಎನ್ನುವಷ್ಟರಲ್ಲಿ ರನ್‌ವೇಯಿಂದ ಜಾರಿದ ವಿಮಾನ ಕೆಂಜಾರಿನ ಕಂದಕಕ್ಕೆ ಉರುಳಿ ಅವಶೇಷವನ್ನೂ ಉಳಿಸಿಕೊಳ್ಳದೆ ಸುಟ್ಟು ಕರಕಲಾಗಿದೆ. ನಿದ್ದೆಯ ಮಂಪರಿನಲ್ಲಿದ್ದ 6 ಮಂದಿ ಸಿಬ್ಬಂದಿಗಳು ಸೇರಿ 166 ಮಂದಿಯ ಪೈಕಿ 158 ಮಂದಿ ಬಾರದ ಲೋಕಕ್ಕೆ ಪಯಣಿಸಿದ್ದಾರೆ. 8 ಮಂದಿ ಪವಾಡ ಸದೃಶ ರೀತಿಯಲ್ಲಿ ಬದುಕುಳಿದಿದ್ದಾರೆ. ಈ ದುರಂತಕ್ಕೆ ದೇಶಕ್ಕೆ ದೇಶವೇ ಕಂಬನಿ ಮಿಡಿದಿದೆ...

ಈ ವರದಿಗೆ ಈಗ 16 ವರ್ಷ...

2010ರ ಮೇ 22ರಂದು ನಡೆದುಹೋದ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ದುರಂತದ ಕುರಿತಾಗಿ ಅಂದು ಮೇ 23ರಂದು ಪತ್ರಿಕೆಗಳು ಈ ರೀತಿಯಾಗಿ ಸುದ್ದಿ ಮಾಡಿದ್ದವು.

ಘಟನೆ ನಡೆದು ಹದಿನಾರು ವರ್ಷಗಳು ಕಳೆದರೂ ಆ ಕರಾಳ ದಿನದ ನೆನಪುಗಳು ಮಾತ್ರ ಜನಮಾನಸದಿಂದ ಮಾಸಿಲ್ಲ. ವಿಮಾನ ದುರಂತದ ಘಟನೆಗಳು ಎಲ್ಲೇ ನಡೆದರೂ ಮಂಗಳೂರಿನ ಜನ ಬಜ್ಪೆ ಕೆಂಜಾರಿನಲ್ಲಿ ಸಂಭವಿಸಿದ ಆವಿಮಾನ ಪತನವನ್ನು ನೆನಪಿಸಿಕೊಳ್ಳುತ್ತಾರೆ. 2010ರಲ್ಲಿ ನಡೆದ ಮಂಗಳೂರಿನ ಈ ವಿಮಾನ ದುರಂತವು ಭಾರತದ ಇತಿಹಾಸದಲ್ಲಿ ಅತಿ ದಾರುಣ ವಿಮಾನ ಅಪಘಾತಗಳಲ್ಲಿ ಒಂದು ಎಂದು ದಾಖಲಾಗಿದೆ.





ಮೃತ್ಯುಕೂಪವಾಗಿತ್ತು ಕೆಂಜಾರಿನ ಕಂದಕ

ಆ ದಿನವನ್ನು ಎಂದೂ ಮರೆಯಲಾಗದು. ಜನತೆ ಎಂದೂ ಮರೆಯುವುದೂ ಇಲ್ಲ. ಕೆಂಜಾರಿನ ಕಂದಕದಲ್ಲಿ ಮೃತದೇಹಗಳು ಸುಟ್ಟು ಕರಕಲಾಗಿ ಎಲ್ಲೆಂದರಲ್ಲಿ ಬಿದ್ದಿತ್ತು. ಯಾರಲ್ಲೂ ಮಾತಿಲ್ಲ, ಕಥೆಯಿಲ್ಲ ಬರಿ ಮೌನ. ಮಣ್ಣಲ್ಲಿ ಮಣ್ಣಾಗಿ ಬಿದ್ದಿದ್ದ ಆ ಜೀವಗಳನ್ನು ಕಂಡ ಪ್ರತಿಯೊಬ್ಬರ ಬಾಯಲ್ಲೂ ಅಯ್ಯೋ! ಎಂಬ ಉದ್ಗಾರ ಅಷ್ಟೇ. ಈ ಘಟನೆ ನಡೆದು 16 ವರ್ಷಗಳೇ ಉರುಳಿವೆ. ಕೆಂಜಾರಿನ ಮೃತ್ಯುಕೂಪ ಸಾಕ್ಷಿಯಾಗಿ ಉಳಿದುಕೊಂಡಿದೆ.

ದುರಂತದಲ್ಲಿ ಮೃತರ ನೆನಪಿಗೆ ಪಾರ್ಕ್ ನಿರ್ಮಾಣ

2010ರ ಮೇ 22ರಂದು ನಡೆದುಹೋದ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ದುರಂತದಲ್ಲಿ ಮಡಿದವರ ಪೈಕಿ 12 ಶವಗಳು ಗುರುತು ಪತ್ತೆಯಾಗದೇ ಇದ್ದುದರಿಂದ ಅದನ್ನು ತಣ್ಣೀರುಬಾವಿ ಬಳಿ ಸಾಮೂಹಿಕ ದಫನ ಮಾಡಲಾಗಿತ್ತು. ಇಲ್ಲಿಯೇ ಸಣ್ಣದಾದ ಪಾರ್ಕ್ ಮಾಡಲಾಗಿದೆ. ಪ್ರತಿ ವರ್ಷ ಈ ಜಾಗದಲ್ಲಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯವನ್ನು ಜಿಲ್ಲಾಡಳಿತ ಮಾಡುತ್ತಿದೆ.

ಹೌದು, ಇದು ಈಗ ನನಗೆ ಸಿಕ್ಕಿದ ಪುನರ್ಜನ್ಮ

ಬದುಕುಳಿದ ಹಲವರು ತಮ್ಮ ಬದುಕನ್ನು ಇದು ತಮ್ಮ ಎರಡನೇ ಜನ್ಮ ಎಂದು ವರ್ಣಿಸುತ್ತಾರೆ. ಆ ದಿನದ ಬಳಿಕ ಜೀವನದ ಬಗ್ಗೆ ಅವರ ದೃಷ್ಟಿಕೋನವೇ



ಬದಲಾಗಿದೆ. ಜೀವ ಎಷ್ಟು ಅಮೂಲ್ಯ ಎಂಬುದು ಆ ದಿನ ಅರ್ಥವಾಯಿತು ಎಂದು ಕೆಲವರು ಹೇಳಿಕೊಂಡಿದ್ದಾರೆ. ಮಂಗಳೂರು ವಿಮಾನ ದುರಂತ ಕೇವಲ ಒಂದು ಅಪಘಾತವಾಗಿರಲಿಲ್ಲ, ಅದು ನೂರಾರು ಕುಟುಂಬಗಳ ಕನಸುಗಳನ್ನು ಕ್ಷಣಾರ್ಧದಲ್ಲಿ ಭಸ್ಮಗೊಳಿಸಿದ ದುರಂತವಾಗಿತ್ತು. ಇಂದಿಗೂ ಆ ದುರಂತದ ಚಿತ್ರಗಳು, ಸುಟ್ಟ ವಿಮಾನದ ಅವಶೇಷಗಳು ಮತ್ತು ಕಣ್ಣೀರಿನಲ್ಲಿ ಮುಳುಗಿದ್ದ ಕುಟುಂಬಗಳ ದೃಶ್ಯ ಜನರ ಮನಸ್ಸನ್ನು ಕಲಕುತ್ತವೆ. ಆ ಬೆಂಕಿ, ಆ ಹೊಗೆ, ಆ ಕಿರುಚಾಟ ನಿನ್ನೆ ನಡೆದ ಘಟನೆಯಂತೆ ಉಳಿದಿದೆ.

ಇಷ್ಟಕ್ಕೂ ಮೇ 22ರ ಆ ದಿನ ನಡೆದಿದ್ದೇನು?

2010ರ ಮೇ 22ರಂದು ದುಬೈನಿಂದ ಮಂಗಳೂರಿಗೆ ಬರುತ್ತಿದ್ದ ವಿಮಾನ ಟೇಬಲ್‌ಟಾಪ್



ರನ್‌ವೇ ಮೇಲೆ ಸರಿಯಾಗಿ ನಿಲ್ಲದೇ ಕಣಿವೆಗೆ ಬಿದ್ದಿದ್ದರಿಂದ ದುರಂತ ಸಂಭವಿಸಿತ್ತು. ತನಿಖಾ ವರದಿಗಳ ಪ್ರಕಾರ ವಿಮಾನ ಅತಿಯಾದ ವೇಗದಲ್ಲಿ ಇಳಿದಿತ್ತು. ರನ್‌ವೇ ಮೇಲೆ ಸಾಕಷ್ಟು ಅಂತರ ಉಳಿದಿರಲಿಲ್ಲ, ಪೈಲಟ್ ಎಚ್ಚರಿಕೆಗಳನ್ನು ಲೆಕ್ಕಿಸಿಲ್ಲ ಎಂಬ ಅಂಶಗಳು ಬೆಳಕಿಗೆ ಬಂದಿದ್ದವು.

ಜಿಟಿ ಜಿಟಿ ಮಳೆ ನಡುವೆ ಸೇರಿಕೊಂಡಿತ್ತು ಕಂಬನಿ

ಒಂದೆಡೆ ಜಿಟಿಜಿಟಿ ಮಳೆ. ಮತ್ತೊಂದೆಡೆ ಆಘಾತ, ಆತಂಕ, ರೋಧನ... ಮಡುಗಟ್ಟಿದ ನೋವಿನ ಕಂಬನಿಯಾಗಿ ಮಳೆಯೊಂದಿಗೆ ಸೇರಿಕೊಳ್ಳುತ್ತಿತ್ತು.



ಮಳೆಯ ನಡುವೆ ಮೃತದೇಹಗಳನ್ನು ಹೊತ್ತು ತರುವುದೇ ಸವಾಲಾಗಿತ್ತು. ಕಂದಕದಿಂದ ಶವಗಳನ್ನು ಹೊತ್ತು ತರುತ್ತಿದ್ದ ಮಂದಿ ಕೆಸರಿನಲ್ಲಿ ಜಾರುತ್ತ ಬರುವ ಆ ದೃಶ್ಯಗಳು ಕರುಳು ಕಿತ್ತು ಬರುವಂತೆ ಮಾಡಿದ್ದವು. ಆ ದಿನದ ಅಗ್ನಿಶಾಮಕದಳ, ಪೊಲೀಸರು ಮತ್ತು ಸ್ಥಳೀಯರ ಕಾರ್ಯಾಚರಣೆಯನ್ನು ಎಂದೂ ಮರೆಯುವಂತಿಲ್ಲ. ಮಹಾದುರಂತದಿಂದಾಗಿ ಬಹುತೇಕ ಮಂದಿಯ ಮೃತದೇಹ ಸುಟ್ಟು ಕರಕಲಾಗಿ ಹೋಗಿದ್ದು, ಗುರುತು ಪತ್ತೆ ಮಾಡುವುದೇ ಕಷ್ಟಕರವಾಗಿತ್ತು. ಘಟನೆಯ ಸಮಗ್ರ ತನಿಖೆಗೆ ನಾಗರಿಕ ವಿಮಾನಯಾನ ಇಲಾಖೆ ಹಾಗೂ ಡಿಜಿಸಿಎ ಪ್ರತ್ಯೇಕ ತನಿಖೆಗೆ ಆದೇಶಿಸಿತ್ತು.

ತಮ್ಮವರನ್ನು ಕಳಕೊಂಡ ನೋವು ಇನ್ನೂ ಜೀವಂತ

2010ರ ಮೇ 22ರಂದು ನಡೆದುಹೋದ ಮಂಗಳೂರು ಅಂತಾರಾಷ್ಟ್ರೀಯ ವಿಮಾನ



ದುರಂತದಲ್ಲಿ ಅನೇಕ ಕುಟುಂಬಗಳು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದವು. ಕೆಲ ಮಕ್ಕಳು ತಂದೆ-ತಾಯಿಯನ್ನು ಕಳೆದುಕೊಂಡರೆ, ಕೆಲವರು ಜೀವನ ಸಂಗಾತಿಯನ್ನು ಕಳೆದು ಕೊಂಡಿದ್ದರು. 16 ವರ್ಷಗಳಾದರೂ ಆ ಕುಟುಂಬ ಗಳಿಗೆ ಮೇ 22 ಎಂದರೆ ಇನ್ನೂ ಕಣ್ಣೀರಿನ ದಿನವೇ.

ದುರಸ್ತಿ ಕಾಣದೆ ಧರಾಶಾಹಿಯಾಗುತ್ತಿದೆ ಶಿರೂರಿನಲ್ಲೊಂದು ಸರ್ಕಾರಿ ಕಟ್ಟಡ

ಇತಿಹಾಸ ಪುಟದತ್ತ ಸಾಗಿದೆ ಸಮಾಜಭವನದ ಹೆಜ್ಜೆ

ಬೈಂದೂರು: ಶಿರೂರಿನಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ನಿರ್ಮಿಸಿದ ಸಮಾಜ ಭವನ ದುರಸ್ತಿ ಕಾಣದೇ ಶಿಥಿಲಗೊಂಡಿದ್ದು, ಜನಪಯೋಗಿ ಕಾರ್ಯಕ್ಕೆ ಬಳಕೆಯಾಗಬೇಕಿದ್ದ ಸರ್ಕಾರಿ ಕಟ್ಟಡ ದುರಸ್ತಿ ಕಾಣದೆ ಧರಾಶಾಯಿಯಾಗುವ ಪರಿಸ್ಥಿತಿ ಬಂದೊದಗಿದೆ.

ನಿರ್ವಹಣೆಯ ಕೊರತೆ

ಶಿರೂರು ಗ್ರಾ.ಪಂ. ವ್ಯಾಪ್ತಿಯ ಕೆಳಪೇಟೆ ಶಾಲೆಯ ಹಿಂಭಾಗದಲ್ಲಿ ಈ ಸಮುದಾಯ ಭವನ ಮೂರು ದಶಕಗಳ ಹಿಂದೆ ನಿರ್ಮಾಣಗೊಂಡಿತ್ತು. ನಿರ್ವಹಣೆ ಹಾಗೂ ವಿದ್ಯುತ್ ಬಿಲ್‌ಗಳನ್ನು ಶಿರೂರು ಗ್ರಾಮ ಪಂಚಾಯತ್ ಭರಿಸುತ್ತಿದ್ದು, ಸಾಕ್ಷರತಾ ಅಭಿಯಾನದ ವೇಳೆ ಈ ಕಟ್ಟಡ ಉತ್ತಮವಾಗಿ ಬಳಕೆಯಾಗಿತ್ತು. ಬಳಿಕ ಜಯಂತಿ ಜೇಸಿಸ್ ಕಾರ್ಯಕ್ರಮ ಸೇರಿದಂತೆ ಒಂದಿಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಯಾಯಿತು. ಕಾಲಕ್ರಮೇಣ ನಿರ್ವಹಣೆ ಕೊರತೆ ಕಂಡಿದೆ. ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಅನುದಾನದಲ್ಲಿ ನಿರ್ಮಾಣಗೊಂಡಿರುವ ಈ ಭವನ ಅಂಬೇಡ್ಕರ್ ಭವನವಾಗಿ ನಿರ್ಮಾಣವಾಗಬೇಕೆನ್ನುವ ಬೇಡಿಕೆಯಿದೆ.



ದುರಸ್ತಿಗೊಳಿಸಲು ಸಾರ್ವಜನಿಕರ ಆಗ್ರಹ

ಊರಿನ ಅಭಿವೃದ್ಧಿ ದೃಷ್ಟಿಯಿಂದ ಶಿಥಿಲಗೊಂಡಿರುವ ಈ ಬಹುಪಯೋಗಿ ಕಟ್ಟಡ ದುರಸ್ತಿಯಾಗಿ ಜನರ ಉಪಯೋಗಕ್ಕೆ ದೊರೆಯಬೇಕು. ಈ ನಿಟ್ಟಿನಲ್ಲಿ ಗ್ರಾ.ಪಂ.ನ ಮುಂದಾಳತ್ವದಲ್ಲಿ ತಾ.ಪಂ. ಜಿಲ್ಲಾಡಳಿತ ಗಮನಹರಿಸಿ, ಹಳೆ ಕಟ್ಟಡ ನೆಲಕ್ಕುರುಳುವ ಮುನ್ನ ಅನುದಾನ ಬಳಸಿ ಸಾರ್ವಜನಿಕರ ಅನುಕೂಲಕ್ಕೆ ಒದಗಿಸಿಕೊಡಬೇಕು ಎಂಬುದೇ ಸಾರ್ವಜನಿಕರ ಆಶಯ.

ಕುಕ್ಕೆ ಕ್ಷೇತ್ರದಲ್ಲಿ ಶುದ್ಧ ಷಷ್ಠಿಯ ಸಂಭ್ರಮ



ಶುದ್ಧ ಷಷ್ಠಿ ದಿನವಾದ ಗುರುವಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಬಂದ ಹಿನ್ನೆಲೆ ಗೋಪುರದ ಬಳಿಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ಆಗಮಿಸಿ ದೇವರ ದರುಶನ ಪಡೆದರು.

ಭದ್ರಮ ಸೇತುವೆಯ ಬಳಿ ತುಂಬಿಕೊಂಡಿದೆ ಹೂಳು | ಕೃಷಿ ಭೂಮಿ, ಮನೆಗಳಿಗೆ ಮತ್ತೆ ಕಾಡುತ್ತಿದೆ ನೆರೆ ಭೀತಿ | ತಕ್ಷಣವೇ ಸೂಕ್ತ ಕ್ರಮಕ್ಕಾಗಿ ಆಗ್ರಹ

ಮಳೆಗಾಲದ ಆರಂಭಕ್ಕೂ ಮುನ್ನವೇ ಭಯ ಹುಟ್ಟಿಸಿದ್ದಾಳೆ ಬೆಳ್ಳೆಯಲ್ಲಿ ಪಾಪನಾಶಿನಿ!

ಸಂಗಮ ವಿಶೇಷ

ಶಿರ್ವ: ಇಲ್ಲಿನ ಬಂಟಕಲ್ಲು-ಪಡುಬೆಳ್ಳೆ-ಕುಂತಳನಗರ ಸಂಪರ್ಕ ರಸ್ತೆಯಲ್ಲಿರುವ ಬೆಳ್ಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಭದ್ರಮ ಸೇತುವೆ ಬಳಿ ಕಳೆದ ವರ್ಷದ ಮಳೆಗಾಲದಲ್ಲಿ ತುಂಬಿ ಹರಿದ ಪಾಪನಾಶಿನಿ ನದಿಯ ನೀರು ಹಲವಾರು ಅವಾಂತರವನ್ನು ಸೃಷ್ಟಿಸಿ ಮನೆ, ಬೆಳೆ, ಕೃಷಿಯನ್ನು ಹಾಳು ಮಾಡಿತ್ತು. ಇದೀಗ ಇಂತಹದ್ದೇ ಘಟನೆ ಈ ಬಾರಿಯ ಮಳೆಗಾಲದಲ್ಲಿಯೂ ಮರುಕಳಿಸೀತೇ ಎಂಬ ಆತಂಕ ಕಾಡುತ್ತಿದೆ.

ನದಿ ಮಧ್ಯದಲ್ಲಿ ಹೂಳು ತುಂಬಿದ್ದು ಮಳೆ ನೀರು ಸರಾಗ ಹರಿಯಲು ಅಸಾಧ್ಯವಾದ್ದು ಈ ಆತಂಕಕ್ಕೆ ಕಾರಣವಾಗಿದೆ.

ಮುಂಗಾರು ಆಗಮನಕ್ಕೆ ದಿನಗಣನೆ ಶುರು

ಹವಾಮಾನ ಇಲಾಖೆ ವರದಿ, ಮುಂದಿನ ಕೆಲವೇ ದಿನಗಳಲ್ಲಿ ನಾಡಿಗೆ ಮುಂಗಾರು ಪ್ರವೇಶ ಮಾಡುವ ಸ್ಪಷ್ಟ ಮುನ್ಸೂಚನೆ ನೀಡಿದೆ. ನದಿಯಲ್ಲಿ ತುಂಬಿಕೊಂಡ ಹೂಳಿನಿಂದ ಭೂ ಪ್ರದೇಶದ ಬಳಿ ನುಗ್ಗುವ ನೀರು ಉತ್ತಮ ಫಸಲು ನೀಡುತ್ತಿರುವ ಕೃಷಿ ಭೂಮಿಯನ್ನೇ ಕಬಳಿಸಲಿದೆ. ಇದೀಗ ಈ ಭಾಗದ ಕೃಷಿಕರು ಕಂಗಾಲಾಗಿದ್ದಾರೆ. ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ಅಪಾಯ ಗ್ಯಾರಂಟಿ. ನೆರೆ ನೀರು ಶಿರ್ವ ಗ್ರಾಮಪಂಚಾಯತ್ ವ್ಯಾಪ್ತಿಯ ಅಟ್ಟಂಜೆಯವರೆಗೂ ತುಂಬಿ ನದೀ ಪಾತ್ರದ ರೈತರಿಗೆ ತುಂಬಾ ನಷ್ಟ ಆಗುವ ಸಾಧ್ಯತೆ ಹೆಚ್ಚಿದೆ. ಕೃಷಿ ಜಾನುವಾರುಗಳಿಗೆ, ಮನೆಗಳಿಗೆ ಅಪಾಯ ಗ್ಯಾರಂಟಿ. ಈ ಬಗ್ಗೆ ತಕ್ಷಣವೇ ಜಿಲ್ಲಾಡಳಿತ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮಕ್ಕಾಗಿ ಸ್ಪಂದಿಸಬೇಕಾಗಿದೆ. »ಪುಟ 6





- ಭದ್ರಮ ಸೇತುವೆ ಬಳಿ ಕಂಡಿತ್ತು ಕಳೆದ ಮಳೆಗಾಲದಲ್ಲಿ ಭಾರೀ ಜಲಪ್ರವಾಹ
- ಅಪಾರ ಪ್ರಮಾಣದಲ್ಲಿ ಆಸ್ತಿಪಾಸ್ತಿ, ಕೃಷಿ ಹಾನಿಗೆ ಕಾರಣವಾಗಿದ್ದ ಕೃತಕ ನೆರೆ
- ಇದೇ ಮಾದರಿಯಲ್ಲಿ ಈ ಬಾರಿಯೂ ಹಾನಿ ಉಂಟಾಗುವ ಆತಂಕದಲ್ಲಿ ಜನತೆ
- ಪಾಪನಾಶಿನಿ ಮಡಿಲಿನಲ್ಲಿ ತುಂಬಿದ ಹೂಳು ತೆರವಿಗೆ ಆಡಳಿತಕ್ಕೆ ಜನಾಗ್ರಹ

ಸೇತುವೆಗಾಗಿ ಹಾಕಿದ ಮಣ್ಣು

ಈ ಭಾಗದಲ್ಲಿ ನೂತನ ಸೇತುವೆ ನಿರ್ಮಿಸುವ ಸಂದರ್ಭ ಹಾಕಿದ ಮಣ್ಣನ್ನು ಸಂಪೂರ್ಣವಾಗಿ ತೆಗೆಯದ ಕಾರಣ ಪಾಪನಾಶಿನಿ ನದಿಯ ಮೇಲೆ ಹೂಳು ನಿಂತು ಈಗ ಅದು ತಡೆಗೋಡೆಯಂತಾಗಿದೆ. ತಕ್ಷಣವೇ ಇದನ್ನು ತೆರವುಗೊಳಿಸದಿದ್ದಲ್ಲಿ ಸ್ಥಳೀಯರು ತುಂಬಾ ಅಪಾಯದಲ್ಲಿ ಸಿಲುಕುತ್ತಾರೆ.

● ಬೆಳ್ಳೆ ಅಂಗಡಿ ಸದಾನಂದ ಶೆಣೈ, ಹಿರಿಯ ಪ್ರಗತಿಪರ ಕೃಷಿಕರು

ಆಶಯ ಪತ್ರದ ಅವಧಿ ಮುಗಿದಿದೆ...

ನದಿಯಲ್ಲಿ ಆಶಯ ಪತ್ರ ಪಡೆದು ಮರಳು ದಿಬ್ಬಗಳ ತೆರವುಗೊಳಿಸಲಾಗಿದೆ. ಆದರೆ ಆಶಯ ಪತ್ರ ಅವಧಿ ಮುಗಿದಿರುವುದರಿಂದ ಮತ್ತೆ ಮರಳು ತೆಗೆಯುವುದು ಕಷ್ಟ. ಜಿಲ್ಲಾಡಳಿತ ಮತ್ತು ಗಣಿ-ಭೂವಿಜ್ಞಾನ ಇಲಾಖೆ ಮತ್ತೊಮ್ಮೆ ನೀಡಿದ್ದಲ್ಲಿ ಇಲ್ಲಿನ ಮರಳು ದಿಬ್ಬಗಳ ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಬಹುದು.

● ಶಶಿಧರ ವಾಗ್ಲೆ, ನಿಕಟ ಪೂರ್ವ ಉಪಾಧ್ಯಕ್ಷರು, ಬೆಳ್ಳೆ ಗ್ರಾ.ಪಂ.

ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕರಂಗಲ್ಪಾಡಿ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಕರಂಗಲ್ಪಾಡಿ ಮಾರ್ಕೆಟ್, ತಂದೂರು ಬಾರ್, ಗಣೇಶ್ ರಾವ್ ಲೇನ್, ಪಿವಿಎಸ್ ಸರ್ಕಲ್, ಕದ್ರಿ ಕಂಬಳ, ಕದ್ರಿ ಗ್ರೌಂಡ್, ಕದ್ರಿ ರಾಕ್ಸ್, ವಿಜಯ ಕ್ಲಿನಿಕ್, ತೇಜಸ್ವಿನಿ ಹಾಸ್ಪಿಟಲ್, ವ್ಯಾಸ್ ರಾವ್ ರೋಡ್, ಪಿಂಟೋಸ್ ಲೇನ್, ವಿನಯ ನರ್ಸಿಂಗ್ ಹೋಂ, ಶ್ರೀದೇವಿ ನರ್ಸಿಂಗ್ ಹೋಂ, ಕರಂಗಲ್ಪಾಡಿ, ಮೆಡಿಕೇರ್ ಬಿಲ್ಡಿಂಗ್, ಸೈಂಟ್ ಅಲೋಶಿಯಸ್ ಹೈಸ್ಕೂಲ್, ಸೈಂಟ್ ಅಲೋಶಿಯಸ್ ಐಟಿಐ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 22ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 30: ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಕಡಬ: ಕಳೆದ (2025–26) ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಭಾಷೆ ಕನ್ನಡದಲ್ಲಿ ಪೂರ್ಣ ಅಂಕ ಗಳಿಸಿರುವ ಹಾಗೂ ವಿಶೇಷ ಸಾಧನೆ ಮಾಡಿದ ಕಡಬ ತಾಲೂಕಿನ ವಿದ್ಯಾರ್ಥಿಗಳನ್ನು ಕಡಬ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಘಟಕದಿಂದ ಮೇ 30ಕ್ಕೆ ಮಧ್ಯಾಹ್ನ 2.30ಕ್ಕೆ ರಾಮಕುಂಜದ ಶ್ರೀ ರಾಮಕುಂಜೇಶ್ವರ ವಸತಿ ಶಾಲೆಯ ವಿಶ್ವೇಶ ಸೌಧ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಸಮಾರಂಭದಲ್ಲಿ ಸಮ್ಮಾನಿಸಿ ಅಭಿನಂದಿಸಲಾಗುವುದು ಎಂದು ಕಸಾಪ ಕಡಬ ತಾಲೂಕು ಘಟಕದ ಅಧ್ಯಕ್ಷ ಕೆ. ಸೇಸಪ್ಪ ರೈ ತಿಳಿಸಿದ್ದಾರೆ.

ದೇಂದಡ್ಕ ದೇವಸ್ಥಾನದಲ್ಲಿ ದೃಢಕಲಶಾಭಿಷೇಕ

ಮುಲ್ಕಿ: ಅತಿಕಾರಿಬೆಟ್ಟು ಪುತ್ತೂರು ದೇಂದಡ್ಕ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬುಧವಾರ ಶ್ರೀ ದೇವರಿಗೆ ದೃಢಕಲಶಾಭಿಷೇಕವು ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ



ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಸುಬ್ರಹ್ಮಣ್ಯ ಭಟ್ ನೇತೃತ್ವದಲ್ಲಿ ಬೆಳಿಗ್ಗೆ ವಿಶೇಷ ಪ್ರಾರ್ಥನೆ, ಗಂಟೆ 8:30ರಿಂದ ಶ್ರೀ ಮಹಾಲಿಂಗೇಶ್ವರ ದೇವರಿಗೆ ದೃಢಕಲಶಾಭಿಷೇಕ,ಪ್ರಸಾದ ವಿತರಣೆ,ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

ವಿವೇಕಾನಂದ ಕಾಲೇಜಿನಲ್ಲಿ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ

ಪುತ್ತೂರು: ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ಆಂಗ್ಲ ಭಾಷಾ ವಿಭಾಗದಿಂದ ಉಪನ್ಯಾಸಕರಿಗಾಗಿ ಒಂದು ದಿನದ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು. ಮಂಗಳೂರಿನ ಬಲ್ಮಠದ ಸರಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕಿ ಸ್ಮಿತಾ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ವೇದಿಕೆಯಲ್ಲಿ ಪ್ರಾಂಶುಪಾಲ ದೇವಿಚರಣ್ ರೈ, ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥ ಆದಿತ್ಯ ಶರ್ಮ ಉಪಸ್ಥಿತರಿದ್ದರು. ಆಂಗ್ಲ ಭಾಷಾ ಉಪನ್ಯಾಸಕಿ ಜಯಶ್ರೀ ಪ್ರಾರ್ಥಿಸಿದರು. ಉಪನ್ಯಾಸಕಿ ವಿದ್ಯಾ ಪಾರ್ವತಿ ಸ್ವಾಗತಿಸಿ, ರಂಜಿನಿ ವಂದಿಸಿದರು.

ವಿಶ್ವ ಡೆಂಗ್ಯೂ ದಿನ: ಜಾಗೃತಿ ಜಾಥಾ

ಕಿನ್ನಿಗೋಳಿ: ಕೆಮ್ರಾಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪಕ್ಷಿಕೆರೆ ಸಂತ ಜೂದರಚರ್ಚ್, ಮತ್ತು ಶ್ರೀ ದೇವಿ ನರ್ಸಿಂಗ್ ಕಾಲೇಜ್ ಸಹಯೋಗದಲ್ಲಿ 'ವಿಶ್ವ ಡೆಂಗ್ಯೂ ದಿನಾಚರಣೆ' ಯ ಪ್ರಯುಕ್ತ ಜಾಥಾ ನಡೆಯಿತು. ಡೆಂಗ್ಯೂ ರೋಗದ ಮಾಹಿತಿ, ತಡೆಗಟ್ಟುವ ವಿಧಾನಗಳ ಬಗ್ಗೆ ಮಾಹಿತಿ ನೀಡಲಾಯಿತು. ಬಳಿಕ ಲಾರ್ವ ಸಮೀಕ್ಷೆ ನಡೆಸಲಾಯಿತು. ಕೆಮ್ರಾಲ್ ಪ್ರಾ. ಆ. ಕೇಂದ್ರದ ವೈದ್ಯಾಧಿಕಾರಿ ಡಾ. ಅನ್ಸಿಲ್ಲ ಪತ್ರಾವೋ, ಪರಿಸರ ಸಂರಕ್ಷಣೆ ಹಾಗೂ ಸ್ವಚ್ಛತೆಯಿಂದ ಮಾರಕ ರೋಗಗಳ ತಡೆಗಟ್ಟಲು ಸಾಧ್ಯ ಎಂದರು. ಸಂತ ಜೂದರ ಚರ್ಚ್ ನ ಫಾದರ್. ಅನಿಲ್ ಡಿಸೋಜಾ, ಶ್ರೀ ದೇವಿ ನರ್ಸಿಂಗ್ ಕಾಲೇಜಿನ ಕಮ್ಯೂನಿಟಿ ಹೆಲ್ತ್ ವಿಭಾಗದ ಉಪನ್ಯಾಸಕ ಶ್ರೀ ೀ ನಿವಾಸ್, ಆರೋಗ್ಯ ಕೇಂದ್ರದ ಸುರಕ್ಷಾಧಿಕಾರಿ, ಮಾರ್ಗರೆಟ್ ಸುಧರ್ಶಿನಿ, ಸ. ಆ. ಅಧಿಕಾರಿ ಗಣೇಶ್ ಉಪಸ್ಥಿತರಿದ್ದರು.

ಮೇ 26ರಂದು ಹಕ್ಕುಪತ್ರ ಒದಗಿಸುವ ಬಗ್ಗೆ ಭರವಸೆ | ಶಾಸಕ ನ್ಯಾಕ್, ತಹಶೀಲ್ದಾರ್‌ರಿಂದ ಮನವೊಲಿಕೆ

ಪುಣಚದ 3 ಕುಟುಂಬಗಳ ಅಹೋರಾತ್ರಿ ಧರಣಿ ವಾಪಸ್

ಬಂಟ್ವಾಳ: ಪುತ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬಂಟ್ವಾಳ ತಾಲೂಕಿನ ಪುಣಚ ಗ್ರಾಮದ ಪರಿಶಿಷ್ಟ ಪಂಗಡದ ಮೂರು ಕುಟುಂಬಗಳು ಹಕ್ಕುಪತ್ರಕ್ಕಾಗಿ ನಾಲ್ಕು ದಿನಗಳಿಂದ ಬಂಟ್ವಾಳ ಮಿನಿವಿಧಾನ ಸೌಧದ ಕಚೇರಿಯ ಮುಂಭಾಗದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಮಧ್ಯಪ್ರವೇಶದಿಂದ ಅಂತ್ಯಗೊಂಡಿದೆ.

ಪೆರ್ನೆಯ ಗ್ರಾ.ಪಂ.ನಲ್ಲಿ ಮೇ 26ರಂದು ಮೂರು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸುವ ಭರವಸೆಯನ್ನು ತಹಶೀಲ್ದಾರ್ ಜಿ. ಮಂಜುನಾಥ್ ಅವರು ಬಂಟ್ವಾಳ ಶಾಸಕರಿಗೆ ನೀಡಿದ ಭರವಸೆಯ ಹಿನ್ನೆಲೆಯಲ್ಲಿ ಪ್ರತಿಭಟನಾ ನಿರತ ಕುಟುಂಬಗಳು ಪ್ರತಿಭಟನೆಯನ್ನು ಹಿಂತೆಗೆದುಕೊಂಡರು.

ಮೇ 26ರಂದು ವಿತರಣೆ

ಗುರುವಾರ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ತಹಶೀಲ್ದಾರ್ ಮಂಜುನಾಥ್ ಅವರೊಂದಿಗೆ ಚರ್ಚೆ ನಡೆಸಿದರು. ಆರಂಭದಲ್ಲಿ ಜೂ.2ರಂದು ಪುಣಚದಲ್ಲಿ ನಡೆಯಲಿ ರುವ



ಕಾರ್ಯಕ್ರಮವೊಂದರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಧರಣಿ ನಿರತ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸುವ ನಿಟ್ಟಿನಲ್ಲಿ ತಾಲೂಕಾಡಳಿತ ಕಚೇರಿಯಲ್ಲಿ ಸುದ್ದಿ ಹರಿದಾಡಿತ್ತು. ಗುರುವಾರ ಬೆಳಿಗ್ಗೆ ಶಾಸಕ ರಾಜೇಶ್ ನ್ಯಾಕ್ ಅವರು ಮಧ್ಯಪ್ರವೇಶಿಸಿ ತಹಶೀಲ್ದಾರರ ಜೊತೆ ಚರ್ಚೆ ನಡೆಸಿದ ಬಳಿಕ ಮೇ 26ರಂದು ಪೆರ್ನೆ ಗ್ರಾ.ಪಂ.ನಲ್ಲಿ ಹಕ್ಕುಪತ್ರ ವಿತರಿಸುವ ಅಧಿಕೃತ ಘೋಷಣೆ ಹೊರಬಿತ್ತು.ಇದಕ್ಕೆ ಪುತ್ತೂರು ಶಾಸಕರು ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಲಾಯಿತು. ಬಳಿಕ ಶಾಸಕ ರಾಜೇಶ್ ನ್ಯಾಕ್ ಹಾಗೂ ತಹಶಿಲ್ದಾರ್ ಜಿ. ಮಂಜುನಾಥ್ ಅವರು ಜಂಟಿಯಾಗಿ ಧರಣಿ ನಿರತ ಕುಟುಂಬದ ಬಳಿಗಾಗಮಿಸಿ ಆದ ಬೆಳವಣಿಗೆಯ ಮಾಹಿತಿ ಕುಟುಂಬಕ್ಕೆ ನೀಡಿದರು. ಇವರ ಭರವಸೆಯನ್ವಯ ಧರಣಿ ನಿರತ ಕುಟುಂಬ ನಾಲ್ಕು ದಿನಗಳ ಕಾಲ ಹಕ್ಕುಪತ್ರಕ್ಕಾಗಿ ನಡೆಸುತ್ತಿದ್ದ ಧರಣಿಯನ್ನು ಅಂತ್ಯಗೊಳಿಸಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ರಾಜೇಶ್ ನ್ಯಾಕ್, ಹಕ್ಕು ಪತ್ರ ಕೊಡುವ ಬಗ್ಗೆ ಒಂದಷ್ಟು ಗೊಂದಲವಾಗಿತ್ತು. ತಹಶೀಲ್ದಾರರು ಹಕ್ಕುಪತ್ರ ವಿಚಾರದಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿದ್ದಾರೆ. ಕುಟುಂಬಕ್ಕೆ ಹಕ್ಕುಪತ್ರ ವಿತರಿಸಬೇಕನ್ನು ವಷ್ಟರಲ್ಲಿ ಶಿಷ್ಟಾಚಾರದಂತೆ ಯಾವುದೇ ಶಾಸಕರು, ಜನಪ್ರತಿನಿಧಿಗಳ ಮುಖಾಂತರ ವಿತರಿಸಬೇಕೆಂಬ ಎಂಬ ಕಾರಣದಿಂದ ಸ್ವಲ್ಪ ಗೊಂದಲವಾಗಿತ್ತು. ಕಳೆದ ಮೂರು ದಿನಗಳಿಂದ ಪ.ಪಂ.ಕ್ಕೆ ಸೇರಿದ ಮೂರು ಕುಟುಂಬ ಹಕ್ಕುಪತ್ರ ಕೋರಿ ಧರಣಿ ಕುಳಿತಾಗ ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು, ಸಂಸದ ಕ್ಯಾ.ಬ್ರಿಜೇಶ್ ಚೌಟ ಸೇರಿದಂತೆ ಜಿಲ್ಲಾ ಬಿಜೆಪಿಯೇ ಅವರ ಬೆಂಬಲಕ್ಕೆ ನಿಂತಿತ್ತು. ಇದೀಗ ತಾನು ತಹಶೀಲ್ದಾರ್ ಅವರನ್ನು ಖುದ್ದು ಭೇಟಿಯಾಗಿ ಚರ್ಚಿಸಿದ್ದು, ಮೂರು ಕುಟುಂಬದ ಹಕ್ಕುಪತ್ರ ಸಿದ್ಧವಾಗಿದೆ. ಅವರು ಕೂಡ ಪುತ್ತೂರು ಶಾಸಕರೊಂದಿಗೆ ಮಾತನಾಡಿದ್ದು, ಮೇ 26ಕ್ಕೆ ಪೆರ್ನೆ ಗ್ರಾ.ಪಂ.ನಲ್ಲಿ ವಿತರಿಸಲು ತೀರ್ಮಾನಿಸಿದ್ದಾರೆ. ಅಂದು ಈ ಮೂರು ಕುಟುಂಬಕ್ಕೂ ಹಕ್ಕು ಪತ್ರ ದೊರಕುವ ವಿಶ್ವಾಸವಿದೆ ಎಂದು ತಿಳಿಸಿದರು.

ತಹಶೀಲ್ದಾರ್ ಮಂಜುನಾಥ್ ಮಾತನಾಡಿ, ಹಕ್ಕು ಪತ್ರ ಸಹಿತ ಸರಕಾರದ ಸೌಲಭ್ಯವನ್ನು ಫಲಾನುಭವಿಗಳಿಗೆ ಶಿಷ್ಟಾಚಾರದನ್ವಯ ಜನಪ್ರತಿನಿಧಿಗಳು ಅಥವಾ ಸ್ಥಳೀಯ ಶಾಸಕರು ವಿತರಿಸಬೇಕೆನ್ನುವ ಎನ್ನುವ ಕಾರಣಕ್ಕೆ ಗೊಂದಲವಾಗಿದೆ ಎಂದರು.

ಬಿಜೆಪಿ ಮುಖಂಡರಾದ ಹರೀಶ್ ಬಿಜತ್ರೆ, ಹರಿಪ್ರಸಾದ್ ಯಾದವ್, ವಿದ್ಯಾಧರ್ ಜೈನ್, ನಿತೇಶ್ ಕುಮಾರ್ ಶಾಂತಿವನ, ಉದಯ್ ಕುಮಾರ್ ವಿಟ್ಲ, ಪುರುಷೋತ್ತಮ ಮುಂಗ್ಲಿಮನೆ, ಜಯಂತ ವಿಟ್ಲ, ಅಜಿತ್ ಹೊಸಮನೆ ಮತ್ತಿತರರಿದ್ದರು.

ಭರವಸೆ ಈಡೇರದಿದ್ದರೆ ಮತ್ತೆ ಪ್ರತಿಭಟನೆಯ ಎಚ್ಚರಿಕೆ

ಮೇ 26ರಂದು ಹಕ್ಕುಪತ್ರ ಸಿಗದಿದ್ದರೆ ತಾಲೂಕು ಕಚೇರಿ ಮುಂದೆ ಕೂರುತ್ತೇವೆ. ಮೂರು ಕುಟುಂಬ ಹಕ್ಕುಪತ್ರ ಪಡೆದುಕೊಂಡು ಬಂದ ಬಳಿಕ ನಾವಿಲ್ಲಿಂದ ತೆರಳುತ್ತವೆ ಎಂದು ಧರಣಿಯ ನೇತೃತ್ವ ವಹಿಸಿದ್ದ ಗಿರಿಧರ್ ನಾಯ್ಕ್ ಎಚ್ಚರಿಸಿದರು.

ಆಗ್ರಹ ಪತ್ರ ಬಿಡುಗಡೆ | ವೀರರ ಬಗ್ಗೆ ಪ್ರಚಾರ ಅಭಿಯಾನಕ್ಕೆ ತೀರ್ಮಾನ

ಮಂಜ ಬೈದ್ಯ ಸ್ಮಾರಕ, ಪುತ್ಥಳಿ ಸ್ಥಾಪನೆಗೆ ಬೇಡಿಕೆ

ಪುತ್ತೂರು: ಅಪ್ರತಿಮ ದೇಶಭಕ್ತ, ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರ, ಬ್ರಿಟಿಷರ ವಿರುದ್ಧ ದಂಗೆ ಎದ್ದು ಹುತಾತ್ಮರಾದ ಉಪ್ಪಿನಂಗಡಿಯ ಕ್ರಾಂತಿ ವೀರ ಮಂಜ ಬೈದ್ಯ ಅವರ ಸಂಸ್ಮರಣೆ ಅಂಗವಾಗಿ ಸ್ಮಾರಕ, ಪುತ್ಥಳಿ ಸ್ಥಾಪನೆ ಸೇರಿದಂತೆ ಹಲವು ಚಟುವಟಿಕೆ ನಡೆಸುವ ನಿಟ್ಟಿನಲ್ಲಿ ಸರಕಾರಕ್ಕೆ ಬೇಡಿಕೆ ಸಲ್ಲಿಸಿ ಅನುಷ್ಠಾನಕ್ಕಾಗಿ ಅಭಿಯಾನ ನಡೆಸಲಾಗುವುದು ಎಂದು ಕ್ರಾಂತಿ ವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ದ.ಕ. ಜಿಲ್ಲಾ ಅಧ್ಯಕ್ಷ ಸಂಪತ್ ಬಿ. ಸುವರ್ಣ ಹೇಳಿದರು.

ಪುತ್ತೂರಿನಲ್ಲಿ ಕ್ರಾಂತಿ ವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ಹಾಗೂ ಬೆಳ್ತಂಗಡಿ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಹೊರತಂದ ಆಗ್ರಹ ಪತ್ರ ಬಿಡುಗಡೆಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಉಬಾರ್ ಮಂಜ ಬೈದ್ಯ ಎಂದು ಕರೆಸಿಕೊಳ್ಳುತ್ತಿದ್ದ ಉಪ್ಪಿನಂಗಡಿಯ ಮಂಜಯ್ಯ ಬೈದ್ಯ ಅವರು ಬ್ರಿಟಿಷರ ವಿರುದ್ಧ ಹೋರಾಡಿದ ಕರ್ನಾಟಕ ಕರಾವಳಿಯ ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರಾಗಿದ್ದು, ಕ್ರಾಂತಿಕಾರಿ ರೈತ ನಾಯಕರಾಗಿದ್ದರು. ಬ್ರಿಟಿಷ್ ಸರಕಾರ ದಲ್ಲಿ ಉದ್ಯೋಗಿಯಾಗಿದ್ದ ಅವರ ಕ್ರಾಂತಿಯ ಹೋರಾಟದ ವಿಚಾರಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಅವರ ವಂಶಸ್ಥರನ್ನು ಒಳಗೊಂಡ ಕ್ರಾಂತಿಕಾರಿ



ಮಂಜ ಬೈದ್ಯ ಸಂಸ್ಮರಣ ಸಮಿತಿ ರಚಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಮಾಜದ ಎಲ್ಲಾ ಸಮುದಾಯದವರನ್ನು ಒಳಗೊಂಡು ದ.ಕ.ಜಿಲ್ಲೆಯ ಪ್ರತಿ ತಾಲೂಕಿನಲ್ಲೂ ಸಮಿತಿ ರಚಿಸಲಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಿ ಅಮರರಾದ ಮಂಜ ಬೈದ್ಯರ ಜೀವನ, ಹೋರಾಟ ಹಾಗೂ ವಿಚಾರಧಾರೆ ಜನತೆಗೆ ತಿಳಿಸುವ ಉದ್ದೇಶದಿಂದ ಸಮಿತಿಯ ನೇತೃತ್ವದಲ್ಲಿ ಪ್ರಚಾರ ಅಭಿಯಾನ ಕೈಗೊಳ್ಳಲಾಗಿದೆ. ದಾಖಲೆಗಳ ಪ್ರಕಾರ 1837ರ ಮೇ 27 ರಂದು ಮಂಗಳೂರಿನಲ್ಲಿ ಬ್ರಿಟಿಷರು ಮಂಜ ಬೈದ್ಯರನ್ನು ಗಲ್ಲಿಗೇರಿಸಲಾಗಿತ್ತು ಎಂದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಧಾನ ಸಂಚಾಲಕ ಡಾ.ರಾಜಾರಾಮ್ ಕೆ.ಬಿ, ಪ್ರಮುಖರಾದ ಆರ್.ಸಿ.ನಾರಾಯಣ್, ಸುರೇಶ್ ಅತ್ರಮಜಲು, ವೆಂಕಪ್ಪ ಪೂಜಾರಿ, ಸುನೀಲ್ ದಡ್ಡು ಮನೋಜ್ ಸಾಲಿಯಾನ್, ಶಶಿಧರ್ ಕಲ್ಮಂಜ, ರಾಮಚಂದ್ರ ಪೂಜಾರಿ, ಜನಾರ್ದನ ಪೂಜಾರಿ, ವಸಂತ ಕುಕ್ಕುಜೆ, ರಮೇಶ್ ಬಿಳಿಯೂರು, ರಮಾನಾಥ ವಿಟ್ಲ ಉಪಸ್ಥಿತರಿದ್ದರು.

ಪ್ರಮುಖ ಬೇಡಿಕೆಗೆ

ಮಂಜಯ್ಯ ಬೈದ್ಯ ಅವರ ಸ್ಮಾರಕ ಹಾಗೂ ಕಂಚಿನ ಪ್ರತಿಮೆಯನ್ನು ಅವರ ಹುಟ್ಟೂರು ಉಪ್ಪಿನಂಗಡಿಯಲ್ಲಿ ನಿರ್ಮಾಣ, ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಬಳಿ ಅಥವಾ ನಗರದ ಪ್ರಮುಖ ಜಾಗದಲ್ಲಿ ಅವರ ಪ್ರತಿಮೆ ಸ್ಥಾಪನೆ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ತಾಲೂಕಿನ ಯಾವುದಾದರೊಂದು ತಾಲೂಕು ಆಡಳಿತ ಸೌಧಕ್ಕೆ, ಸರಕಾರ ಕಾಲೇಜಿಗೆ ಮಂಜ ಬೈದ್ಯರ ಹೆಸರಿಡಬೇಕು. ಉಪ್ಪಿನಂಗಡಿ-ಗುರುವಾಯನಕೆರೆ ಮುಖ್ಯರಸ್ತೆಗೆ ಉಪ್ಪಿನಂಗಡಿ ಮಂಜ ಬೈದ್ಯರ ಹೆಸರು, ಕಲ್ಲೇರಿಯಲ್ಲಿ ಅವರ ಹೆಸರಿನ ವೃತ್ತ ನಿರ್ಮಾಣ, ಶಾಲಾ ಪಠ್ಯಪುಸ್ತಕಗಳಲ್ಲಿ ಅವರ ಸ್ವಾತಂತ್ರ್ಯ ಹೋರಾಟದ ವಿಚಾರ ಅಳವಡಿಸುವ ಬಗ್ಗೆ ಆಗ್ರಹ ಪತ್ರದಲ್ಲಿ ತಿಳಿಸಲಾಗಿದೆ.

ಕೊಲ್ಲಮೊಗ್ರು, ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಧನೆ

ಪ್ರಸ್ತಕ ಸಾಲಿನಲ್ಲಿ ಒಟ್ಟು 1.80 ಕೋ.ರೂ. ಲಾಭ

ಸುಬ್ರಹ್ಮಣ್ಯ: ಗ್ರಾಮೀಣ ಪ್ರದೇಶ ಹರಿಹರ ಪಲ್ಲತ್ತಡ್ಕದ ಕೊಲ್ಲಮೊಗ್ರು, ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 2025–26ನೇ ಸಾಲಿನಲ್ಲಿ ರೂ.1.80 ಕೋಟಿಯಷ್ಟು ಲಾಭ ಗಳಿಸಿದೆ.

ಒಟ್ಟು ರೂ.480.80 ಕೋಟಿ, ವ್ಯವಹಾರ ಮಾಡಿದ್ದು, ರೂ.27 ಕೋಟಿಯಷ್ಟು ವ್ಯವಹಾರ ವಿಸ್ತರಣೆ ಮಾಡಿದೆ. ಪ್ರಸಕ್ತ ವರ್ಷದಲ್ಲಿ ಸಂಘದ ಸಾಲ ವಸೂಲಾತಿ ಪ್ರಮಾಣವು ಅಂದಾಜು ಶೇ.99 ಆಗಿದೆ ಎಂದು ಕೊಲ್ಲಮೊಗ್ರು ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಾ. ಸೋಮಶೇಖರ ಕಟ್ಟೆಮನೆ ಹೇಳಿದರು.

ಸುಬ್ರಹ್ಮಣ್ಯದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, 1925ರಲ್ಲಿ ಆರಂಭಗೊಂಡ ಈ ಸಂಸ್ಥೆ ಕಲ್ಮಕಾರು, ಕೊಲ್ಲಮೊಗ್ರು, ಹರಿಹರ ಪಲ್ಲತ್ತಡ್ಕ ಮತ್ತು ಬಾಳುಗೋಡು ಗ್ರಾಮಗಳನ್ನು ಒಳಗೊಂಡು ಈ ಪ್ರದೇಶದ ರೈತರ ಅಭಿವೃದ್ಧಿಗೆ ಪೂರಕ ಕಾರ್ಯವೆಸಗಿದೆ ಎಂದರು.

ರೂ.1.80 ಕೋಟಿ ಲಾಭ

ಸಂಘದಲ್ಲಿ ಹಲವು ಸ್ವಸಹಾಯ ಸಂಘಗಳ ಜೊತೆಗೂಡಿಸಿದ್ದು, ಪ್ರಸ್ತುತ ಸಂಘದ ದುಡಿಯುವ ಬಂಡವಾಳ ರೂ.83.09 ಕೋಟಿಯಷ್ಟಿದ್ದು ಸಂಘದ ಇತರೆ ಹೂಡಿಕೆಗಳು ಸುಮಾರು ರೂ.10 ಕೋಟಿಯನ್ನು ದಾಟಿರುತ್ತದೆ. ಪ್ರಸಕ್ತ ವ್ಯವಹಾರಿಕ ವರ್ಷ 2025–26ರಲ್ಲಿ ಸಂಘವು ಅಂದಾಜು



ರೂ.1.80 ಕೋಟಿಯಷ್ಟು ಲಾಭವನ್ನು ಹೊಂದಿದ್ದು, ಸಂಘದ ಒಟ್ಟು ವ್ಯವಹಾರವು ರೂ.480.80 ಕೋಟಿಯಾಗಿ ಕಳೆದ ವಾರ್ಷಿಕಕ್ಕಿಂತ ಸುಮಾರು ರೂ.27 ಕೋಟಿಯಷ್ಟು ವಿಸ್ತರಣೆಯಾಗಿರುತ್ತದೆ ಎಂದು ಸೋಮಶೇಖರ್ ಕಟ್ಟೆಮನೆ ಹೇಳಿದರು.

ಸಂಘವು ಸದೃಢ ವ್ಯಾಪಾರ ವಿಭಾಗವನ್ನು ಹೊಂದಿದೆ. ಇದರಲ್ಲಿ ಅಂದಾಜು ರೂ.3 ಕೋಟಿಗಿಂತ ಹೆಚ್ಚಿನ ವ್ಯವಹಾರ ನಡೆಸಿ ರೂ.21.50 ಲಕ್ಷ ಲಾಭ ಗಳಿಸಿದೆ ಎಂದವರು ಮಾಹಿತಿ ನೀಡಿದರು.

ಸಂಘದ ಉಪಾಧ್ಯಕ್ಷ ಗಣೇಶ್ ಭಟ್ ಇಡ್ಯಡ್ಕ, ಸಿಇಒ ಬೆಳ್ಯಪ್ಪ ಗೌಡ ಮಣಿಯಾನ ಮನೆ, ನಿರ್ದೇಶಕ ಶೇಷಪ್ಪ ಗೌಡ ಕಿರಿಭಾಗ, ಹಿಮ್ಮತ್ ಕೆ.ಸಿ., ಕಮಲಾಕ್ಷ ಮುಳ್ಳುಬಾಗಿಲು, ರಘುನ್ ಶೆಟ್ಟಿಯಡ್ಕ, ಗೋಪಾಲಕೃಷ್ಣ ಚಾಂತಾಳ, ಡ್ಯಾನಿ ಯಲದಾಳು, ವೇದಾವತಿ ಮುಳ್ಳುಬಾಗಿಲು, ಮಹಾಲಿಂಗ ನಾಯ್ಕ, ಮೇನಕ ಕೊಪ್ಪಡ್ಕ, ಬೊಳಿಯ ಅಜಿಲ ಬೆಂಡೋಡಿ ಉಪಸ್ಥಿತರಿದ್ದರು.

> 2025-2026ರ ವಾರ್ಷಿಕ ಸಾಲಿನ ಅನ್ವಯ 3306 'ಎ' ತರಗತಿ, 1129 ಸಿ ತರಗತಿ ಯ ಸದಸ್ಯರನ್ನು ಹೊಂದಿದ್ದು, ಸದಸ್ಯರ ಷೇರು ರೂ.5.25 ಕೋ. ಇದೆ. ಸಂಘದ ಸದಸ್ಯರ ಠೇವಣಿ ರೂ.38.50 ಕೋಟಿ ಹೊಂದಿ ಸದಸ್ಯರ ಹೊರಬಾಕಿ ಸಾಲವು ರೂ.70.80 ಕೋಟಿಯಾಗಿದೆ. ಪ್ರಸಕ್ತ ವರ್ಷದಲ್ಲಿ ಸಂಘದ ಸಾಲ ವಸೂಲಾತಿ ಪ್ರಮಾಣವು ಅಂದಾಜು ಶೇ.99 ಆಗಿದೆ. ಜಿಲ್ಲಾ ಕೇಂದ್ರ ಬ್ಯಾಂಕಿನಿಂದ ಸದಸ್ಯರಿಗೆ ಒದಗಿಸಿದ ಸಾಲವು ಒಟ್ಟು ರೂ.35.88 ಕೋಟಿ.
>
> • ಡಾ. ಸೋಮಶೇಖರ ಕಟ್ಟೆಮನೆ, ಸಂಘದ ಅಧ್ಯಕ್ಷ

ಪೂರ್ಣದತ್ತ ಕಾವೂರಿನ ಬಂಟರ ಭವನ: ಮುಂದಿನ ವರ್ಷ ಉದ್ಘಾಟನೆ



ಮಂಗಳೂರು: ಕಾವೂರಿನ ಮಾಲಾಡಿ ಕೋರ್ಟ್ ಮುಖ್ಯ ರಸ್ತೆಯಲ್ಲಿ ಸುಮಾರು 10 ಕೋ.ರೂ. ವೆಚ್ಚದಲ್ಲಿ ಕಾವೂರು ಬಂಟರ ಭವನ ನಿರ್ಮಾಣವಾಗುತ್ತಿದ್ದು, 2027ರ ಜನವರಿ 20ರಂದು ಉದ್ಘಾಟನೆ ನಡೆಯಲಿದೆ. ಇದರ ಪೂರ್ವ ಸಿದ್ಧತಾ ಸಭೆ ಸಂಘದ ಅಧ್ಯಕ್ಷ ಆನಂದ ಶೆಟ್ಟಿ ಅಡ್ಯಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭ ಆನಂದ ಶೆಟ್ಟಿ ಅಡ್ಯಾರ್ ಮಾತನಾಡಿ, ಸಮಾರಂಭವನ್ನು ನಾವೆಲ್ಲರೂ ಸಂಘಟಿತರಾಗಿ ಜೊತೆಗೂಡಿ ಕಾರ್ಯ ನಿರ್ವಹಿಸುವ ಮೂಲಕ ಯಶಸ್ವಿಗೊಳಿಸಬೇಕಾಗಿದೆ. ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷ ಮುಗ್ರೋಡಿ ಡಿ. ಸುಧಾಕರ ಶೆಟ್ಟಿ ಕಳೆದ 2 ವರ್ಷಗಳಿಂದ ಸಂಕೀರ್ಣದ ಕಾಮಗಾರಿ ನಡೆಸಿದ್ದರಿಂದ ಇದು ಸಾಧ್ಯವಾಯಿತು ಎಂದರು.

ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷ ಮುಗ್ರೋಡಿ ಸುಧಾಕರ ಶೆಟ್ಟಿ ಮಾತನಾಡಿ, ಬಂಟರ ಭವನವು ಸುಮಾರು 1,300 ಆಸನವುಳ್ಳ ಹವಾ ನಿಯಂತ್ರಣದ ಸಭಾಂಗಣ ಮತ್ತು ಪ್ರತ್ಯೇಕ ಊಟೋಪಚಾರದ ವ್ಯವಸ್ಥೆಯ ಹಾಲ್ ಒಳಗೊಂಡಿದ್ದು, ವಾಹನ ನಿಲುಗಡೆ, ಪೂಜಾ ಮಂದಿರ ಇನ್ನಿತರ ಸೌಲಭ್ಯ ಒಳಗೊಂಡಿದೆ ಎಂದರು.

ನಿಕಟಪೂರ್ವ ಅಧ್ಯಕ್ಷ ಎಂ.ಎಸ್. ಶೆಟ್ಟಿ ಸರಪಾಡಿ ಮಾತನಾಡಿದರು. ಈ ಸಂದರ್ಭ ಪ್ರೇಮಾ ಕೆ. ಶೆಟ್ಟಿ, ಚಿಪ್ಪಾರುಗುತ್ತು ಇವರು ಕಟ್ಟಡ ನಿರ್ಮಾಣಕ್ಕೆ 1 ಲಕ್ಷ ನಗದನ್ನು ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷರ ಡಿ.ಸುಧಾಕರ ಶೆಟ್ಟಿಗೆ ಹಸ್ತಾಂತರಿಸಿದರು.

ಬಂಟರ ಭವನದ ಮತ್ತು ಕಟ್ಟಡ ಸಮಿತಿಯ ಪದಾಧಿಕಾರಿಗಳಾದ ವಿಠಲ್ ಆಳ್ವ, ಲಕ್ಷ್ಮೀನಾರಾಯಣ ಶೆಟ್ಟಿ, ಶಂಭು ಶೆಟ್ಟಿ, ರೇಖಾ ವಿ. ಶೆಟ್ಟಿ, ಸುಧಾಕರ ಆಳ್ವ, ಅವಿನಾಶ್ ನಾಯಕ್ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಸುಧಾಕರ ಆಳ್ವ ಪ್ರಸ್ತಾವಿಸಿ, ಕೋಶಾಧಿಕಾರಿ ಶಂಭು ಶೆಟ್ಟಿ ಲೆಕ್ಕಪತ್ರ ಮಂಡಿಸಿದರು. ಪ್ರಧಾನ ಕಾರ್ಯದರ್ಶಿ ಅವಿನಾಶ್ ನಾಯಕ್ ವಂದಿಸಿದರು.

ಕಲಾವಿದ ಸರಪಾಡಿ ಅಶೋಕ್ ಶೆಟ್ಟಿ, ಪೋಷಕ ದೇಜಪ್ಪ ಬಾಚಕೆರೆಗೆ ಸನ್ಮಾನ



ಬಂಟ್ವಾಳ: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಇದರ ಬಂಟ್ವಾಳ ಘಟಕದ ತೃತೀಯ ವಾರ್ಷಿಕೋತ್ಸವವು ಬಿ.ಸಿ. ರೋಡಿನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ವಠಾರದಲ್ಲಿ ಬುಧವಾರ ರಾತ್ರಿ ನಡೆಯಿತು.

ಬಂಟ್ವಾಳ ಘಟಕದ ಅಧ್ಯಕ್ಷ ದಿವಾಕರ ಶೆಟ್ಟಿ ಪರಾರಿಗುತ್ತು ಅಧ್ಯಕ್ಷತೆ ವಹಿಸಿದ್ದರು. ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟಿನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಮೇ 30ರಂದು ನಡೆಯುವ ಪಟ್ಲ ಸಂಭ್ರಮದ ಕುರಿತು ಮಾಹಿತಿ ಹಂಚಿಕೊಂಡರು.

ಇದೇ ವೇಳೆ ಹಿರಿಯ ಯಕ್ಷಗಾನ ಕಲಾವಿದ ಸರಪಾಡಿ ಅಶೋಕ್ ಶೆಟ್ಟಿ ಹಾಗೂ ಶ್ರೀ ಕ್ಷೇತ್ರ ಬಾಚಕೆರೆಯ ಧರ್ಮದರ್ಶಿ, ಕಲಾಪೋಷಕ ದೇಜಪ್ಪ ಬಾಚಕೆರೆ ಅವರನ್ನು ಘಟಕದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭ ಮಾತನಾಡಿದ ಯಕ್ಷಗಾನ ಕಲಾವಿದ ಸರಪಾಡಿ ಅಶೋಕ್ ಶೆಟ್ಟಿ ಅವರು ಪಟ್ಲ ಫೌಂಡೇಶನ್ ಕಲಾವಿದರ ಸಮಸ್ಯೆಗಳನ್ನು ಗುರುತಿಸಿ ಅವರಿಗೆ ನೆರವು ನೀಡುವ ಕಾರ್ಯ ಮಾಡುತ್ತಿದೆ ಎಂದರು.

ಅಗ್ರಜ ಬಿಲ್ಡರ್ಸ್ ಮಾಲೀಕ ಸಂದೇಶ್ ಶೆಟ್ಟಿ ಅರೆಬೆಟ್ಟು, ಪಟ್ಲ ಫೌಂಡೇಶನ್ ಬಂಟ್ವಾಳ ಘಟಕ ಸಂಚಾಲಕ ಭುವನೇಶ್ ಪಚ್ಚಿನಡ್ಕ, ಗೌರವಾಧ್ಯಕ್ಷ ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಜಗನ್ನಾಥ ಚೌಟ ಬದಿಗುಡ್ಡೆ, ನ್ಯಾಯವಾದಿ ಶ್ರೀಧರ ಶೆಟ್ಟಿ ಪುಳಿಂಚ, ನಿಕಟಪೂರ್ವ ಅಧ್ಯಕ್ಷ ಚಂದ್ರಹಾಸ ಶೆಟ್ಟಿ ರಂಗೋಲಿ ಮತ್ತು ಘಟಕದ ಪದಾಧಿಕಾರಿಗಳು ಇದ್ದರು. ಬಂಟ್ವಾಳ ಘಟಕದ ಅಧ್ಯಕ್ಷರಾದ ದಿವಾಕರ ಶೆಟ್ಟಿ ಪರಾರಿಗುತ್ತು ಸ್ವಾಗತಿಸಿ, ಬಿ. ದೇವದಾಸ್ ಶೆಟ್ಟಿ ನಿರೂಪಿಸಿ, ವಂದಿಸಿದರು. ಬೊಂಡಾಲ ಚಿತ್ತರಂಜನ ಶೆಟ್ಟಿ ಮತ್ತು ಸತೀಶ್ ಶೆಟ್ಟಿ ಮೊಡಂಕಾಪು ಅವರು ಸನ್ಮಾನಪತ್ರ ವಾಚಿಸಿದರು. ಪಾವಂಜೆ ಮೇಳದವರಿಂದ 'ಛಾಯಾನಂದನ' ಯಕ್ಷಗಾನ ಬಯಲಾಟ ಜರುಗಿತು.

25 ವರ್ಷ ತಿರುಗಾಟ: ಭಾಗವತ ರವಿಚಂದ್ರ ಕನ್ನಡಿಕಟ್ಟೆಗೆ ಗೌರವ



ಉಜಿರೆ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆಶ್ರಯದಲ್ಲಿ ಉಜಿರೆಯ ಯಕ್ಷ ಕಲಾಭಿಮಾನಿಗಳ ಸಹಯೋಗದೊಂದಿಗೆ ಮೇ 16ರಂದು ಶ್ರೀ ರಾಮಕೃಷ್ಣ ಸಭಾಮಂಟಪದಲ್ಲಿ ನಡೆದ ಹನುಮಗಿರಿ ಮೇಳದ ಯಕ್ಷಗಾನ ಬಯಲಾಟ ಪ್ರದರ್ಶನ ಸಂದರ್ಭ ತನ್ನ ವೃತ್ತಿ ಜೀವನದಲ್ಲಿ ಭಾಗವತರಾಗಿ 25 ವರ್ಷ ತಿರುಗಾಟ ನಡೆಸಿದ ರವಿಚಂದ್ರ ಕನ್ನಡಿಕಟ್ಟೆ ಅವರನ್ನು ಉಜಿರೆಯ ಯಕ್ಷ ಕಲಾಭಿಮಾನಿ ಗೌರವಿಸಿದರು.

ಇದೇ ಸಂದರ್ಭದಲ್ಲಿ ವಿಶೇಷವಾಗಿ ಕನ್ನಡಿಕಟ್ಟೆಯವರ ಪುತ್ರ ಭವಿಷ್ ಕನ್ನಡಿಕಟ್ಟೆ ಬಿಡುವಿನ ವೇಳೆಯಲ್ಲಿ ಹನುಮಗಿರಿ ಮೇಳದಲ್ಲಿ ಯಕ್ಷಗಾನ ವೇಷ ಮಾಡಿ ತನ್ನ ಕಲಾ ಪ್ರತಿಭೆ ಅಭಿವ್ಯಕ್ತಪಡಿಸುತ್ತಿದ್ದು, ಕಳೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 93 ಅಂಕ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿರು ಅವರನ್ನು ಕೀಡ ಗುರುತಿಸಿ ವೇದಿಕೆಯಲ್ಲಿ ವಿಶೇಷವಾಗಿ ಗೌರವಿಸಲಾಯಿತು.

ಮೇಳದ ಪ್ರಬಂಧಕ ಹರೀಶ್ ಬಳಂತಿಮೊಗರು ಸನ್ಮಾನಿತರನ್ನು ಅಭಿನಂದಿಸಿದರು. ಹಿರಿಯ ಯಕ್ಷಗಾನ ಸಂಘಟಕ, ಕಲಾಪೋಷಕ ಭುಜಬಲಿ ಧರ್ಮಸ್ಥಳ, ರಾಜ್ಯ ಕ.ಸಾಪ. ಅಧ್ಯಕ್ಷ ಡಾ. ಎಂ. ಪಿ. ಶ್ರೀನಾಥ್, ತಾಲೂಕು ತುಳು ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ರವೀಂದ್ರ ಶೆಟ್ಟಿ ಸುರಭಿ ಮತ್ತು ಹನುಮಗಿರಿ ಮೇಳದ ಪ್ರಬಂಧಕ ಹರೀಶ್ ಬಳಂತಿ ಮೊಗರು ಹಾಗೂ ಪತ್ರಕರ್ತ ಸಾಂತೂರು ಶ್ರೀನಿವಾಸ ತಂತ್ರಿ, ಯಕ್ಷಗಾನ ಸಂಘಟಕ ಹರೀಶ್ ಕೊಳ್ತಿಗೆ ಉಪಸ್ಥಿತರಿದ್ದರು.

ರಸ್ತೆ ಅಪಘಾತದಲ್ಲಿ ಮೃತಪಟ್ಟ ಸದಸ್ಯನ ಕುಟುಂಬಕ್ಕೆ ನೆರವು | ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್‌ನಿಂದ ಸಹಕಾರ ಕ್ಷೇತ್ರದಲ್ಲಿ ಮಾದರಿ ಕಾರ್ಯ

ರೂ.11 ಲಕ್ಷ ವಿಮಾ ಪರಿಹಾರ, ಬ್ಯಾಂಕ್‌ನಿಂದ 8 ಸಾವಿರ ಮರಣೋತ್ತರ ನಿಧಿ ಹಸ್ತಾಂತರ

ಪುತ್ತೂರು: ಕೇವಲ ವ್ಯವಹಾರವಷ್ಟೇ ಅಲ್ಲದೆ, ಸಾಮಾಜಿಕ ಕಳಕಳಿ ಹಾಗೂ ಸಾರ್ವಜನಿಕರ ಭದ್ರತೆಗೆ ಪ್ರಥಮ ಆದ್ಯತೆ ನೀಡುವ ಮೂಲಕ 'ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್' ಮತ್ತೊಮ್ಮೆ ಸಹಕಾರ ಕ್ಷೇತ್ರದಲ್ಲಿ ತನ್ನ ಅನನ್ಯ ಸಾಮಾಜಿಕ ಬದ್ಧತೆಯನ್ನು ಸಾಬೀತುಪಡಿಸಿದೆ. ಕಷ್ಟದ ಕಾಲದಲ್ಲಿ ಸದಸ್ಯರ ಕುಟುಂಬಕ್ಕೆ ಆಸರೆಯಾಗಿ ನಿಲ್ಲುವ ಮೂಲಕ ಬ್ಯಾಂಕ್ ಸಾರ್ವಜನಿಕ ವಲಯದಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ.

ಬ್ಯಾಂಕಿನ ಸದಸ್ಯರಾಗಿದ್ದ ಬನ್ನೂರು ಗಣೇಶ್ ಗೌಡ ಅವರ ಅಕಾಲಿಕ ನಿಧನದಿಂದ ಸಂಕಷ್ಟಕ್ಕೀಡಾಗಿದ್ದ ಅವರ ಕುಟುಂಬಕ್ಕೆ ಇಫ್ಕೋ ಟೋಕಿಯೋ ಸಂಸ್ಥೆಯ ಸಹಯೋಗದೊಂದಿಗೆ ಭಾರಿ ಮೊತ್ತದ ವಿಮಾ ಪರಿಹಾರ ಹಾಗೂ ಬ್ಯಾಂಕಿನ ವತಿಯಿಂದ ಮರಣೋತ್ತರ ನಿಧಿಯನ್ನು ಬ್ಯಾಂಕಿನ ಆಡಳಿತ



ಮಂಡಳಿಯ ಸಭೆಯಲ್ಲಿ ಹಸ್ತಾಂತರಿಸಲಾಯಿತು.

ಬ್ಯಾಂಕಿನ ಸದಸ್ಯರಾಗಿದ್ದ ಬನ್ನೂರು ಗಣೇಶ್ ಗೌಡ ಅವರು ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕಿನಿಂದ ಅಡಮಾನ ಸಾಲ ಪಡೆದುಕೊಂಡಿದ್ದರು. ಸಾಲ ನೀಡುವ ಸಂದರ್ಭದಲ್ಲಿ ಗ್ರಾಹಕರ ಹಿತದೃಷ್ಟಿಯಿಂದ ಬ್ಯಾಂಕು, ಪ್ರಸಿದ್ಧ ವಿಮಾ ಸಂಸ್ಥೆಯಾದ ಇಫ್ಕೋ ಟೋಕಿಯೋ ನೆರವಿನೊಂದಿಗೆ ಆ ಮನೆಗೆ ಇನ್ಶೂರೆನ್ಸ್ ಮಾಡಿಸಿತ್ತು. ಇತ್ತೀಚೆಗೆ ದುರ್ದೈವವಶಾತ್ ಗಣೇಶ್ ಗೌಡ ಅವರು ರಸ್ತೆ ಅಪಘಾತವೊಂದರಲ್ಲಿ ಮೃತಪಟ್ಟಿದ್ದರು. ಇವರ ನಿಧನದಿಂದಾಗಿ ಬ್ಯಾಂಕಿನಲ್ಲಿ ಅವರು ಪಡೆದಿದ್ದ ಸಾಲ ಬಾಕಿಯಾಗುಳಿದಿತ್ತು ಹಾಗೂ ಅವರ ಕುಟುಂಬವು ತೀವ್ರ ಆರ್ಥಿಕ ಕಷ್ಟಕ್ಕೆ ಸಿಲುಕಿತ್ತು.

ಇಂತಹ ಅತ್ಯಂತ ಕ್ಲಿಷ್ಟಕರ ಸಂದರ್ಭದಲ್ಲಿ ಮಾನವೀಯತೆಯ ನೆಲೆಗಟ್ಟಿನಲ್ಲಿ ತಕ್ಷಣ ಕಾರ್ಯ ಪ್ರವೃತ್ತರಾದ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇಫ್ಕೋ ಟೋಕಿಯೋ ಸಂಸ್ಥೆಯೊಂದಿಗೆ ತಾವು ಮಾಡಿಕೊಂಡಿದ್ದ ಒಪ್ಪಂದದಂತೆ ಅಪಘಾತ ವಿಮಾ ಕ್ಲೈಮ್ ಪ್ರಕ್ರಿಯೆಯನ್ನು ಆರಂಭಿಸಿತು. ಬ್ಯಾಂಕಿನ ಅಧಿಕಾರಿಗಳ ನಿರಂತರ ಪರಿಶ್ರಮದ ಫಲವಾಗಿ, ವಿಮಾ ಸಂಸ್ಥೆಯ ಸಹಕಾರದೊಂದಿಗೆ ರೂ. 11,00,000 ವಿಮಾ ಪರಿಹಾರ ಹಣ ಮಂಜೂರಾಗಿ ಬ್ಯಾಂಕಿಗೆ ಬಂದಿದೆ.

ಚೆಕ್ ಹಸ್ತಾಂತರ

ಬ್ಯಾಂಕಿನ ಆಡಳಿತ ಮಂಡಳಿಯ ಕಚೇರಿಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಮೃತ ಗಣೇಶ್ ಗೌಡ ಅವರ ಪತ್ನಿ ಪುಷ್ಪಾವತಿ ಅವರಿಗೆ ಹನ್ನೊಂದು ಲಕ್ಷದ ವಿಮಾ ಪರಿಹಾರದ ಮೊತ್ತ ಹಾಗೂ ಬ್ಯಾಂಕು ತನ್ನ ಸದಸ್ಯರಿಗೆ ನೀಡುವ ಮರಣೋತ್ತರ ನಿಧಿಯಿಂದ ರೂ. 8 ಸಾವಿರಗಳ ಧನಸಹಾಯವನ್ನು ಒಟ್ಟಿಗೆ ಹಸ್ತಾಂತರಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ಅವರು ಅಧಿಕೃತವಾಗಿ ಚೆಕ್ಕುಗಳನ್ನು ಹಸ್ತಾಂತರಿಸಿ, ಸಂತ್ರಸ್ತ ಕುಟುಂಬಕ್ಕೆ ಧೈರ್ಯ ತುಂಬಿದರು.

ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ. ಶೇಖರ್ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಶ್ರೀಧರ ಗೌಡ, ನಿರ್ದೇಶಕರಾದ ಚಂದ್ರಶೇಖರ ರಾವ್ ಬಪ್ಪಳಿಗೆ, ಕಿರಣಕುಮಾರ ರೈ, ಮಲ್ಲೇಶ ಕುಮಾರ್, ಸುಜೀಂದ್ರ ಪ್ರಭು, ಶ್ರೀಧರ ಪಟ್ಲ, ಗಣೇಶ ಕೌಕ್ರಾಡಿ, ವೀಣಾ ಹಾಗೂ ಬ್ಯಾಂಕಿನ ಪುತ್ತೂರು ಶಾಖಾಧಿಕಾರಿಯಾದ ಚಿದಂಬರ ಉಪಸ್ಥಿತರಿದ್ದರು. ಇಫ್ಕೋ ಟೋಕಿಯೋ ಕಂಪೆನಿಯ ಸ್ಥಳೀಯ ಶಾಖಾಧಿಕಾರಿ ಎಸ್.ಆರ್. ಮಿಥುನ್ ಮಂಜೂರಾತಿಯಲ್ಲಿ ಸಹಕರಿಸಿದ್ದರು.

> ಸಾಲ ತೆಗೆದುಕೊಳ್ಳುವವರ ಆಸ್ತಿಯ ಭದ್ರತೆಗಾಗಿ ನಾವು ಇನ್ಶೂರೆನ್ಸ್ ಅನ್ನು ಕಡ್ಡಾಯಗೊಳಿಸಿದ್ದೇವೆ. ವಿಶೇಷವಾಗಿ ಮನೆ ಅಥವಾ ಇತರ ಕಟ್ಟಡಗಳ ಭದ್ರತೆಯ ಮೇಲೆ ಪಡೆಯುವ ಎಲ್ಲಾ ಸಾಲಗಳ ಮೇಲೆ ಇನ್ಶೂರೆನ್ಸ್ ಮಾಡಿಸಲಾಗುತ್ತದೆ. ಇದು ಅವರ ಕುಟುಂಬಕ್ಕೆ ಕಷ್ಟಕಾಲದಲ್ಲಿ ನೆರವಾಗಲಿದೆ.
>
> • ಎನ್. ಕಿಶೋರ್ ಕೊಳತ್ತಾಯ, ಬ್ಯಾಂಕಿನ ಅಧ್ಯಕ್ಷ

ಸುತ್ತಮುತ್ತ

ವಿದ್ಯಾರ್ಥಿ ನಿಲಯ ಪ್ರವೇಶಾತಿ: ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಗಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ –1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ. ವರ್ಗಗಳ ಪಿ.ಯು.ಸಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವೆಬ್‌ಸೈಟ್ ಌಣಣಠ?://?಩ಠ. ಇಚಿಡಿಟಿಚಿಣಚಿಞಚಿ.ರಠ಴.ಎಟಿ/ಛಛಿತಿಜ ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಉಡುಪಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಪ್ರಕಟಣೆ ತಿಳಿಸಿದೆ.

ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕ ಪ್ರಕಟ

ಉಡುಪಿ: 2022 ನೇ ವರ್ಷದಲ್ಲಿ ಮುದ್ರಣಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಕನ್ನಡ, ಆಂಗ್ಲ, ಹಿಂದಿ ಮತ್ತು ಭಾರತೀಯ ಇತರೆ ಭಾಷೆಗಳ ಪುಸ್ತಕಗಳ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದ್ದು, ಆಯ್ಕೆ ಪಟ್ಟಿಯ ಪ್ರತಿಯನ್ನು ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶನ ಸಂಸ್ಥೆಗಳ ಹಾಗೂ ಸಾರ್ವಜನಿಕರ ತಿಳುವಳಿಕೆಗಾಗಿ ಜಿಲ್ಲಾ ಕೇಂದ್ರ ಗ್ರಂಥಾಲಯ, ಅಜ್ಜರಕಾಡು, ಉಡುಪಿ ಇಲ್ಲಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಅಜ್ಜರಕಾಡು, ಉಡುಪಿ ದೂ.ಸಂಖ್ಯೆ: 0820-2523438, 9740938025 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳ ಕಛೇರಿ ಪ್ರಕಟಣೆ ತಿಳಿಸಿದೆ.

ಸಣ್ಣ ಉದ್ದಿಮೆಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ 2025-26 ನೇ ಸಾಲಿನ ಎಸ್.ಎಫ್.ಸಿ ಶೇ. 5 ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮದಡಿ ಅನುದಾನದ ವ್ಯಕ್ತಿ ಸಂಬಂಧಿತ ಕಾರ್ಯಕ್ರಮದಡಿ ಸಣ್ಣ ಉದ್ದಿಮೆಗೆ ಸಹಾಯಧನ ನೀಡುವ ಸಲುವಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ನಿಗಧಿತ ಅರ್ಜಿಯೊಂದಿಗೆ ಪೂರಕ ದಾಖಲೆಗಳನ್ನು ಸಲ್ಲಿಸಲು ಮೇ 28 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು, ನಗರಸಭೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಲ್ಯ: ಬಾಗಿಲು ಮುರಿದು ಅಂಗಡಿಯಿಂದ ಕಳವು

ಕಡಬ: ಕಡಬ ತಾಲೂಕಿನ ಬಲ್ಯ ಪೇಟೆಯಲ್ಲಿ ಅಂಗಡಿಯೊಂದರ ರೋಲಿಂಗ್ ಶಟರ್ ಎತ್ತಿ ಲಾಕ್ ಮುರಿದು ಒಳನುಗ್ಗಿರುವ ಕಳ್ಳರು ಅಂಗಡಿಯೊಳಗಿದ್ದ ಸುಮಾರು 14 ಸಾವಿರ ರೂ. ನಗದನ್ನು ಕದ್ದೊಯ್ದಿರುವ ಘಟನೆ ಸಂಭವಿಸಿದೆ. ಮೇ 19ರಂದು ರಾತ್ರಿ ಅಂಗಡಿ ಮುಚ್ಚಿ ಮನೆಗೆ ತೆರಳಿದ್ದ ಅಂಗಡಿ ಮಾಲಕ ಬಲ್ಯ ಗ್ರಾಮದ ಗೋವಿಂದಕಟ್ಟೆ ನಿವಾಸಿ ಬೇಬಿ ಕೆ.ಇ. ಅವರು ಮರುದಿನ ಬೆಳಗ್ಗೆ ಅಂಗಡಿ ತೆರೆಯಲು ಬಂದಾಗ ಘಟನೆ ಬೆಳಕಿಗೆ ಬಂದಿದೆ. ಅಂಗಡಿ ಮಾಲಕನ ದೂರಿನಂತೆ ಪ್ರಕರಣ ದಾಖಲಿಸಿಕೊಂಡಿರುವ ಕಡಬ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕೋಡಿಂಬಾಳ: ಮದ್ಯಪಾನಿಯಿಂದ ಹಲ್ಲೆ

ಕಡಬ: ಕೋಡಿಂಬಾಳ ಗ್ರಾಮದ ಬಳ್ಳಿಕಜೆಯಲ್ಲಿ ಕುಡಿತದ ಅಮಲಿನಲ್ಲಿ ವ್ಯಕ್ತಿಯೊಬ್ಬ ತನ್ನ ಸಂಬಂಧಿ ಯುವತಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ನಡೆಸಿ ಕೊಲೆ ಬೆದರಿಕೆ ಒಡ್ಡಿರುವ ಘಟನೆಗೆ ಸಂಬಂಧಿಸಿ ಕಡಬ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನ್ನ ತಾಯಿಯ ಮರಣದ ಬಳಿಕ ಬಳ್ಳಿಕಜೆಯಲ್ಲಿ ತನ್ನ ಅಜ್ಜಿಯ ಜೊತೆ ವಾಸ್ತವ್ಯವಿರುವ ಸೋನ್ವಿ (22) ಅವರ ಮೇಲೆ ಆಕೆಯ ಸಂಬಂಧಿ ಮೂಲತಃ ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ನಿವಾಸಿ ಬಿಜು ಎಂಬಾತ ಹಲ್ಲೆ ನಡೆಸಿರುವುದಾಗಿ ಆರೋಪಿಸಲಾಗಿದೆ. ಏ. 26ರಂದು ಘಟನೆ ನಡೆದಿದ್ದು, ಆ ಸಂದರ್ಭ ಪೊಲೀಸರಿಗೆ ದೂರು ನೀಡಿದ್ದರೂ ಅದು ಅಸಂಜ್ಞೆಯ ಪ್ರಕರಣವಾಗಿದ್ದರಿಂದ ನ್ಯಾಯಾಲಯದ ಅನುಮತಿ ಪಡೆದುಕೊಂಡು ಬಿಜು ವಿರುದ್ಧ ಇದೀಗ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೊಂಕಣ್ ರೈಲ್ವೆ ವ್ಯಾಪ್ತಿಯ ಮುಲ್ಕಿ ರೈಲ್ವೆ ಪ್ರಯಾಣಿಕರ ಬಹುವರ್ಷಗಳ ಬೇಡಿಕೆ ಕೊನೆಗೂ ಈಡೇರಿಕೆ

ರೈಲ್ವೆ ನಿಲ್ದಾಣದ ಹೊಸ ಪ್ಲಾಟ್‌ಫಾರ್ಮ್ ಉದ್ಘಾಟನೆಗೆ ಸಿದ್ಧ

ಮುಲ್ಕಿ: ರೈಲ್ವೆ ಪ್ರಯಾಣಿಕರ ಬಹುವರ್ಷಗಳ ಬೇಡಿಕೆಯಾಗಿದ್ದ ಕೊಂಕಣ್ ರೈಲ್ವೆ ವ್ಯಾಪ್ತಿಯ ಮುಲ್ಕಿ ರೈಲು ನಿಲ್ದಾಣದ ನೂತನ ಪ್ಲಾಟ್‌ಫಾರ್ಮ್ ಲೋಕಾರ್ಪಣೆಗೆ ಕ್ಷಣಗಣನೆ ಆರಂಭವಾಗಿದೆ.

ಸಂಸದ ಬ್ರಿಜೇಶ್ ಚೌಟ ಅವರ ಅನುದಾನದಿಂದ ಮುಲ್ಕಿ ರೈಲು ನಿಲ್ದಾಣದಲ್ಲಿ ಸುಮಾರು 1.42 ಕೋಟಿ ರೂಪಾಯಿಗಳ ಉಡುಪಿ ಕಡೆ ಇಂದ ಮಂಗಳೂರು ಕಡೆಗೆ ಹೋಗುವ ದಿಕ್ಕಿನಲ್ಲಿ ನೂತನ ಪ್ಲಾಟ್ಫಾರ್ಮ್, ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಪೂರ್ಣಗೊಂಡಿದೆ. ಮೂಲ್ಕಿ ರೈಲು ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್‌ಗಳ ಅಭಿವೃದ್ಧಿ ಮತ್ತು ಮೂಲಸೌಕರ್ಯಗಳನ್ನು ಸುಧಾರಿಸಬೇಕೆಂದು ಸ್ಥಳೀಯ ನಿವಾಸಿಗಳು ಹಲವಾರು ವರ್ಷಗಳಿಂದ ಒತ್ತಾಯಿಸುತ್ತಿದ್ದರು. ಇಲ್ಲಿ ಅಗತ್ಯ ಸೌಲಭ್ಯಗಳ ಕೊರತೆಯಿಂದಾಗಿ, ಪ್ರಯಾಣಿಕರು, ವಿಶೇಷವಾಗಿ ಸ್ಥಳೀಯರು ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದರು. ಪ್ರಸ್ತುತ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದ್ದು, ಸ್ಥಳೀಯರು ಮತ್ತು ರೈಲು ಪ್ರಯಾಣಿಕರಿಗೆ ಅನುಕೂಲವಾಗಿದೆ.





ಶೀಘ್ರ ಸ್ಕೈ ವಾಕ್ ನಿರ್ಮಾಣ

ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುವ ದಿಕ್ಕಿನಲ್ಲಿ ನಿರ್ಮಾಣಗೊಂಡ ಸುಸಜ್ಜಿತ ಫ್ಲಾಟ್ ಫಾರ್ಮ್‌ಗೆ ಸಂಪರ್ಕ ಕಲ್ಪಿಸುವ ಸ್ಕೈ ವಾಕ್ ನಿರ್ಮಾಣ ಕಾಮಗಾರಿಗೆ ಅನುದಾನ ಮಂಜೂರಾಗಿದ್ದು, ಕಾಮಗಾರಿ ಶೀಘ್ರ ನಡೆಯಲಿದೆ ಎಂದು ಪಡು ಪಣಂಬೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ವಿನೋದ್ ಸಾಲ್ಯಾನ್ ಬೆಳ್ಳಾಯರು ಹೇಳಿದ್ದಾರೆ. ಸಾಮಾಜಿಕ ಕಾರ್ಯಕರ್ತ ವಿಶುಕುಮಾರ್ ಕೆಎಸ್ ರಾವ್ ನಗರ ಮಾತನಾಡಿ, ಮುಲ್ಕಿ ರೈಲ್ವೇ ನಿಲ್ದಾಣ ಬೆಳೆಯುತ್ತಿದ್ದು, ವಂದೇ ಭಾರತ್ ಸಹಿತ ಪ್ರಮುಖ ರೈಲುಗಳ ನಿಲುಗಡೆ ಅವಶ್ಯಕತೆ ಇದೆ. ರೈಲ್ವೇ ನಿಲ್ದಾಣ ಸಂಪರ್ಕ ರಸ್ತೆ ಅಭಿವೃದ್ಧಿಯಾಗಬೇಕಾಗಿದೆ ಎಂದರು.

ವಕೀಲ ರವೀಶ್ ಕಾಮತ್ ಮಾತನಾಡಿ ಕೇಂದ್ರ ಸರ್ಕಾರ ಹಿಂದಿನ, ಈಗಿನ ಸಂಸದರ ಪರಿಶ್ರಮ, ಶಾಸಕರ ಬೆಂಬಲ, ಅದೇ ರೀತಿ ಸ್ಥಳೀಯ ಈಗಿನ ಹಿಂದಿನ ಜನ ಪ್ರತಿನಿಧಿಗಳ ಬೆಂಬಲದೊಂದಿಗೆ ನಿಜವಾದ ಸಾಮಾಜಿಕ ಹೋರಾಟಗಾರ ಕಾರ್ಯಕರ್ತರ ಹೋರಾಟದಿಂದ ರೈಲ್ವೇ ನಿಲ್ದಾಣ ಅಭಿವೃದ್ಧಿಪಥದತ್ತ ಸಾಗುತ್ತಿದೆ ಎಂದು ಹೋರಾಟಗಾರರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ರಸ್ತೆಯ ದುರಸ್ತಿಗೆ ಆಗ್ರಹ

ರೈಲ್ವೇ ನಿಲ್ದಾಣ ಮೇಲ್ದರ್ಜೆಗೇರಿಸಿದರೂ ನಿಲ್ದಾಣದ ಸಂಪರ್ಕ ರಸ್ತೆ ಅವ್ಯವಸ್ಥೆಗಳ ಆಗರವಾಗಿ ಪರಿಣಮಿಸಿದೆ ಎಂದು ಸಾಮಾಜಿಕ ಕಾರ್ಯಕರ್ತ ಶರತ್ ಕಾರ್ನಾಡ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮುಲ್ಕಿ ರೈಲ್ವೇ ನಿಲ್ದಾಣಕ್ಕೆ ದೂರದ ಮುಂಬೈಯಿಂದ ಅನೇಕ ಪ್ರಯಾಣಿಕರು ಮೂಡಬಿದ್ರೆ, ಕಾರ್ಕಳ ಕಿನ್ನಿಗೋಳಿ ಕಟೀಲು ಮತ್ತಿತರ ಕಡೆಗೆ ಬಂದು ಹೋಗುತ್ತಿದ್ದಾರೆ. ನಿಲ್ದಾಣ ಸಂಪರ್ಕ ರಸ್ತೆ ಅಧೋಗತಿಗೆ ಇಳಿದಿದ್ದು ದುರಸ್ತಿ ಪಡಿಸಬೇಕಾದ ಅನಿವಾರ್ಯತೆ ಇದೆ. ಈ ಭಾಗದಲ್ಲಿ ಕೆಲ ದುಷ್ಕರ್ಮಿಗಳು ತ್ಯಾಜ್ಯ ಕೂಡ ಎಸೆಯುತ್ತಿದ್ದು, ನಿಯಂತ್ರಿಸಲು ಸಿಸಿ ಕ್ಯಾಮೆರಾ ಅಳವಡಿಸಬೇಕಾಗಿದೆ ಎಂದು ಹೇಳಿದ್ದಾರೆ.

ಪೂರ್ಣಪ್ರಜ್ಞ ಕಾಲೇಜಿನಲ್ಲಿ ಉದ್ಯೋಗ ಮೇಳ | ಪ್ರಶಾಂತ್ ಹೊಳ್ಳ ಸಲಹೆ

ಸ್ಪರ್ಧಾತ್ಮಕ ಜಗತ್ತಿನಲ್ಲಿ ಅವಕಾಶ ಬಳಸಿಕೊಳ್ಳಿ

ಉಡುಪಿ: ಪೂರ್ಣಪ್ರಜ್ಞ ಕಾಲೇಜು ಉಡುಪಿ ವತಿಯಿಂದ ಮಂಗಳೂರು ವಿಶ್ವವಿದ್ಯಾನಿಲಯ ವಾಣಿಜ್ಯ ಉಪನ್ಯಾಸಕರ ಸಂಘ ಹಾಗೂ ಸೃಷ್ಟಿ ಇಂಫೋಟೆಕ್ ಕುಂದಾಪುರ ಇವರ ಸಹಯೋಗದೊಂದಿಗೆ ಏರ್ಪಡಿಸಿದ ಉದ್ಯೋಗ ಮೇಳ -2026 ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟಕರಾಗಿ ಭಾಗವಹಿಸಿದ್ದ ಪೂರ್ಣಪ್ರಜ್ಞ ಕಾಲೇಜು ಉಡುಪಿ ಆಡಳಿತ ಮಂಡಳಿ ಗೌರವ ಕೋಶಾಧಿಕಾರಿ ಸಿಎ ಪ್ರಶಾಂತ್ ಹೊಳ್ಳ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಮಾರುಕಟ್ಟೆ ಎನ್ನುವುದು ಸುಲಭದ ಮಾತಲ್ಲ, ಇಂತಹ ಉದ್ಯೋಗ ಮೇಳಗಳಲ್ಲಿ ಭಾಗವಹಿಸಿ ಉದ್ಯೋಗವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಬೇಕು, ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಉದ್ಯೋಗಾಕಾಂಕ್ಷಿಗಳಿಗೆ ಕರೆ ಕೊಟ್ಟರು.

ಮಂಗಳೂರು ವಿಶ್ವವಿದ್ಯಾನಿಲಯ ವಾಣಿಜ್ಯ ಉಪನ್ಯಾಸಕರ ಸಂಘದ ಕಾರ್ಯದರ್ಶಿ ಡಾ. ಉದಯ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಅಂಕಗಳಿಗೆ ಪ್ರಾಮುಖ್ಯತೆ ಕೊಡುವುದರ ಜೊತೆಗೆ ಉದ್ಯೋಗ ನಿರ್ವಹಣೆಗೆ ಬೇಕಾದ ಜ್ಞಾನ ಹಾಗೂ ಕೌಶಲ್ಯಗಳನ್ನು ತಮ್ಮಲ್ಲಿ ಬೆಳೆಸಿಕೊಂಡಲ್ಲಿ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಹಿತವಚನ ನೀಡಿದರು.

ಉದ್ಯೋಗ ಮೇಳದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ರಾಮು ಎಲ್. ಇವರು ಇಂತಹ ಉದ್ಯೋಗ ಮೇಳವನ್ನು ಪ್ರತಿವರ್ಷ ನಮ್ಮ ಕಾಲೇಜಿನಲ್ಲಿ ಆಯೋಜಿಸಲಾಗುತ್ತಿದ್ದು, ಹಲವಾರು ಜನರು ಇದರ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳಿಗೂ ಕೂಡ ಇಂತಹ ಅವಕಾಶಗಳನ್ನು ಕಲ್ಪಿಸುವುದು ನಮ್ಮ ವಿದ್ಯಾಸಂಸ್ಥೆಯ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದರು.

ಕುಂದಾಪುರದ ಸೃಷ್ಟಿ ಇನ್ಫೋಟೆಕ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಹರ್ಷವರ್ಧನ್ ಶೆಟ್ಟಿ ಉದ್ಯೋಗ ಮೇಳದ ಉಸ್ತುವಾರಿ ವಹಿಸಿದ್ದರು. ಪರೀಕ್ಷಾ ವಿಭಾಗದ ನಿಯಂತ್ರಣ ಅಕಾರಿ ಡಾ ರಮೇಶ್ ಟಿ.ಎಸ್., ಆಂತರಿಕ ಗುಣಮಟ್ಟ ಖಾತರಿ ಘಟಕದ ಸಂಯೋಜಕ ಡಾ. ವಿನಯ್ ಕುಮಾರ್, ಉದ್ಯೋಗ ಮಾರ್ಗದರ್ಶನ ಘಟಕದ ಸಂಯೋಜಕ ಡಾ. ಆನಂದ ಆಚಾರ್ಯ, ವಿದ್ಯಾರ್ಥಿ ತರಬೇತಿ ಘಟಕದ ಸಂಯೋಜಕೀ, ಪ್ಲೇಸ್‌ಮೆಂಟ್ ಆಫೀಸರ್ ಧನ್ಯಶ್ರೀ, ಉದ್ಯೋಗ ಮೇಳದ ಸಂಯೋಜಕಿ ಜಯಲಕ್ಷ್ಮಿ ಉಪಸ್ಥಿತರಿದ್ದರು. ನೇಹಾ ನಿರ್ವಹಿಸಿದರು. ಸಿಂಧೂ ಹೆಗಡೆ ಪ್ರಾರ್ಥಿಸಿದರು.



135 ಅಭ್ಯರ್ಥಿಗಳು ಆಯ್ಕೆ

ಉದ್ಯೋಗ ಮೇಳದಲ್ಲಿ 17 ಕಂಪನಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಸುಮಾರು 623 ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಂಡಿದ್ದರು. ವಿವಿಧ ಕಂಪನಿಗಳಲ್ಲಿ ಸುಮಾರು 213 ಮಂದಿ ಮುಂದಿನ ಸುತ್ತಿಗೆ ಆಯ್ಕೆಯಾದರು. 135 ಅಭ್ಯರ್ಥಿಗಳು ಅಂತಿಮವಾಗಿ ಆಯ್ಕೆಗೊಂಡಿದ್ದಾರೆ.

ಗೃಹ ಸಚಿವರಿಗೆ ಮನವಿ ಸಲ್ಲಿಸಿದ ಶಾಸಕ ಕಿಶೋರ್‌ಕುಮಾರ್ ಪುತ್ತೂರು

ಕಸ ಬಿಸಾಡುವವರ ಮೇಲೆ ಕಠಿಣ ಕ್ರಮಕ್ಕೆ ಆಗ್ರಹ

ಪುತ್ತೂರು: ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರು ರಸ್ತೆ ಬದಿಯಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬೇಕಾ ಬಿಟ್ಟಿಯಾಗಿ ಕಸ ಎಸೆಯುವುದನ್ನು ತಡೆಯಲು ಪೊಲೀಸ್ ಇಲಾಖೆಯಿಂದ ದಂಡ ವಿಧಿಸಿ ಸ್ವಯಂ ಪ್ರೇರಿತವಾಗಿ (ಸೋ ಮೋಟೋ) ಎಫ್ ಐಆರ್ ದಾಖಲಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಕೋರಿ ಕರ್ನಾಟಕ ವಿಧಾನ ಪರಿಷತ್ತಿನ ಶಾಸಕ ಕಿಶೋರ್ ಕುಮಾರ್ ಪುತ್ತೂರು ಅವರು ರಾಜ್ಯ ಗೃಹ ಸಚಿವ ಪರಮೇಶ್ವರ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಸಾರ್ವಜನಿಕರು ರಸ್ತೆ ಬದಿಯಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬೇಕಾ ಬಿಟ್ಟಿಯಾಗಿ ಕಸ ಎಸೆಯುವ ಪ್ರವೃತ್ತಿ ಹೆಚ್ಚುತ್ತಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ಇದರಿಂದ ಪರಿಸರ ಮಾಲಿನ್ಯ ಹೆಚ್ಚುವುದರ ಜೊತೆಗೆ ಸಾರ್ವಜನಿಕ ಆರೋಗ್ಯಕ್ಕೂ ಗಂಭೀರ ಹಾನಿ ಉಂಟಾಗುತ್ತಿದೆ. ಸ್ವಚ್ಛತೆ ಕಾಪಾಡುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಇದು ದೊಡ್ಡ ಅಡ್ಡಿಯಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ.



ವಿಶೇಷವಾಗಿ ಇಂತಹ ಕೃತ್ಯಗಳಲ್ಲಿ ತೊಡಗಿರುವವರ ಮೇಲೆ ದಂಡ ವಿಧಿಸುವುದರ ಜೊತೆಗೆ, ಪೊಲೀಸ್ ಇಲಾಖೆಯಿಂದ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ಆದುದರಿಂದ, ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವ ಮೂಲಕ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಹಾಗೂ ಸ್ವಚ್ಛತೆಯನ್ನು ಕಾಪಾಡುವಲ್ಲಿ ಜನರಲ್ಲಿ ಜಾಗೃತಿ ಮೂಡಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿಯಲ್ಲಿ ಕೋರಿದ್ದಾರೆ.

ಬಜೆಟ್ ಅಧಿವೇಶನದಲ್ಲೂ ಪ್ರಸ್ತಾಪ

ಕಳೆದ ಬಜೆಟ್ ಅಧಿವೇಶನದಲ್ಲಿ ಕೂಡ ಶಾಸಕರು ಈ ಕುರಿತು ಶೂನ್ಯ ವೇಳೆಯಲ್ಲಿ ಸದರಿ ವಿಷಯ ಪ್ರಸ್ತಾಪಿಸುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಕಿಶೋರ್ ಕುಮಾರ್ ಸರಕಾರವನ್ನು ಆಗ್ರಹಿಸಿದ್ದರು.

ಸಂಘಟನೆಗಳ ಪ್ರಯತ್ನ

ಕೇಂದ್ರ ಸರಕಾರವು ಸಂಪೂರ್ಣ ಸ್ವಚ್ಛತಾ ಆಂದೋಲನ (ಟಿಎಸ್‌ಸಿ), ನಿರ್ಮಲ್ ಭಾರತ್ ಅಭಿಯಾನ(ಎನ್‌ಬಿಎ), ಸ್ವಚ್ಛ ಭಾರತ್ ಮಿಷನ್(ಎಸ್‌ಬಿಎಂ) ಮುಂತಾದ ಹಲವಾರು ಯೋಜನೆಗಳ ಮೂಲಕ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಉತ್ತಮ ಉಪಕ್ರಮಗಳನ್ನು ಕೈಗೊಂಡಿದೆ. ಸ್ವಚ್ಛ ಭಾರತ್ ಮಿಷನ್ ನಡಿ ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ಘನ ತ್ಯಾಜ್ಯ ಘಟಕವನ್ನು ನಿರ್ಮಿಸಿ ಮನೆಗಳಿಂದ ಒಣ ಮತ್ತು ಹಸಿ ಕಸವನ್ನು ಸಂಗ್ರಹಿಸಲಾಗುತ್ತಿದೆ. ನಗರ ಪ್ರದೇಶಗಳಲ್ಲೂ ಕಸ ಸಂಗ್ರಹಣೆಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅದಲ್ಲದೆ ರಾಮಕೃಷ್ಣ ಮಿಷನ್ ಮಂಗಳೂರು ಮತ್ತು ಜನ ಶಿಕ್ಷಣ ಟ್ರಸ್ಟ್ ಮುಡಿಪು ನಂತಹ ಸ್ವಯಂ ಸೇವಾ ಸಂಸ್ಥೆಗಳು ಸಹ ಸ್ವಚ್ಛತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಭಿಯಾನದ ಯಶಸ್ಸಿಗೆ ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂದು ಅವರು ಮನವಿಯಲ್ಲಿ ವಿವರಿಸಿದ್ದಾರೆ.

ಕೊರಗ ಸಮುದಾಯದವರು, ಇತರೆ ಪರಿಶಿಷ್ಟ ಪಂಗಡದವರ ಕುಂದುಕೊರತೆ ಸಭೆ



ಬಂಟ್ವಾಳ: ಜನಜಾತಿಯ ಗರಿಮಾ ಉತ್ಸವ 2026 ಪ್ರಯುಕ್ತ ಮೂಲ ನಿವಾಸಿಗಳಾದ ಕೊರಗ ಸಮುದಾಯದವರು ಮತ್ತು ಇತರೆ ಪರಿಶಿಷ್ಟ ಪಂಗಡದವರ ಕುಂದುಕೊರತೆ ಅಲಿಸುವ ಕಾರ್ಯಕ್ರಮ ಬುಧವಾರ ವೀರಕಂಭ ಗ್ರಾಮದ ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರಗಿತು.

ಕೊರಗ ಸಮುದಾಯದ ಮತ್ತು ಇತರೆ ಪರಿಶಿಷ್ಟ ಪಂಗಡದವರಿಗೆ ಸಾಮಾಜಿಕ ಭದ್ರತೆ ಯೋಜನೆಗಳು, ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿವಿಧ ಯೋಜನೆಗಳ ಪ್ರಯೋಜನಗಳ ಕುರಿತು ಅರಿವು ಮೂಡಿಸುವುದರ ಜತೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲಾಯಿತು.

ಬಂಟ್ವಾಳ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ವಿನಯ ಕುಮಾರಿ ಕೆ. ಬಿ, ತಾಲೂಕು ಆರೋಗ್ಯಾಧಿಕಾರಿ ಅಶೋಕ್ ರೈ, ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ, ವೀರಕಂಬ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಂಭು ಕುಮಾರ ಶರ್ಮಾ, ತಾಲೂಕು ಆಹಾರ ನಿರೀಕ್ಷಕರಾದ ಪ್ರಶಾಂತ್ ಶೆಟ್ಟಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಕಿ ರೂಪಕಲಾ , ಬಂಟ್ವಾಳ ತಾಲೂಕು ಪಂಚಾಯತ್ ಮ್ಯಾನೇಜರ್ ಪ್ರಕಾಶ್ ,ವೀರಕಂಭ ಗ್ರಾಮ ಆಡಳಿತ ಅಧಿಕಾರಿ ವೈಶಾಲಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಇಲಾಖೆಗಳಿಂದ ಕೊರಗ ಸಮುದಾಯ ಮತ್ತು ಪರಿಶಿಷ್ಟ ಪಂಗಡದವರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಗ್ರಾಮ ವ್ಯಾಪ್ತಿಯ ಆರೋಗ್ಯ ಸುರಕ್ಷಣಾಧಿಕಾರಿ, ಆಶಾ ಕಾರ್ಯಕರ್ತೆಯರು, ಪಂಚಾಯತ್ ಸಿಬ್ಬಂದಿಗಳು ಉಪಸ್ಥಿತರಿದ್ದರು. ವೀರಕಂಬ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಕೊರಗ ಸಮುದಾಯದವರು ಭಾಗವಹಿಸಿದ್ದರು.

ಹಿರೆಬಂಡಾಡಿ: ನಂದಿನಿ ನಗರ-ಹರಿನಗರ ಸಂಪರ್ಕ ರಸ್ತೆಯ ಕಾಮಗಾರಿಗೆ ಶಿಲಾನ್ಯಾಸ



ಉಪ್ಪಿನಂಗಡಿ: ರಾಜಕೀಯ ಜಿದ್ದಾಜಿದ್ದಿನಿಂದ ಸತತವಾಗಿ ಕಡೆಗಣಿಸಲ್ಪಟ್ಟಿದ್ದ ಹಿರೆಬಂಡಾಡಿ ಗ್ರಾಮದ ನಂದಿನಿ ನಗರದಿಂದ ಹರಿನಗರ ಸಂಪರ್ಕ ಕಲ್ಪಿಸುವ ರಸ್ತೆಯ ಕಾಂಕ್ರೀಟೀಕರಣಕ್ಕೆ ಮಂಗಳೂರು ಸಂಸದರು ನೀಡಿದ 5 ಲಕ್ಷ ರೂ. ಅನುದಾನದ ಕಾಮಗಾರಿಗೆ ಮಾಜಿ ಶಾಸಕ ಸಂಜೀವ ಮಠಂದುರು ಬುಧವಾರ ಶಿಲಾನ್ಯಾಸ ಮಾಡಿದರು.

ರಸ್ತೆ ನಾದುರಸ್ತಿಯಿಂದಾಗಿ ಹಲವಾರು ಅಪಘಾತಗಳು ಸಂಭವಿಸಿ ಜನರು ನಿರಂತರ ಗಾಯಗೊಳ್ಳುತ್ತಿದ್ದರೂ ಜನಪ್ರತಿನಿಧಿಗಳು ಈ ರಸ್ತೆಯ ಅಭಿವೃದ್ಧಿಗೆ ಗಮನ ಹರಿಸದ ಕಾರಣ ಸ್ಥಳೀಯರು ಚುನಾವಣಾ ಬಹಿಷ್ಕಾರದಂತಹ ಬೆದರಿಕೆಯೊಡ್ಡುವ ಮಟ್ಟಿನಲ್ಲಿ ಆಕ್ರೋಶಗೊಂಡಿದ್ದರು.

ಐದು ಲಕ್ಷ ರೂ. ಅನುದಾನ

ಸ್ಥಳೀಯರು ನ್ಯಾಯೋಚಿತ ಬೇಡಿಕೆಗೆ ತುರ್ತು ಸ್ಪಂದನೆ ನೀಡಿದ ಸಂಸದ ಬೃಜೇಶ್ ಚೌಟ ಅವರು, 5 ಲಕ್ಷ ರೂ ಅನುದಾನವನ್ನು ಒದಗಿಸಿ ರಸ್ತೆ ದುರಸ್ತಿಗೆ ಅವಕಾಶ ಕಲ್ಪಿಸಿದರು.

ಅದರಂತೆ ನಡೆದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಮಾಜಿ ಶಾಸಕರೊಂದಿಗೆ ಬಿಜೆಪಿ ಮುಂದಾಳುಗಳಾದ ಸುನಿಲ್ ಕುಮಾರ್ ದಡ್ಡು, ಸುರೇಶ್ ಅತ್ರಮಜಲು, ಉಮೇಶ್ ಶೆಣೈ, ಪ್ರಸನ್ನ ದರ್ಬೆ, ನಿತಿನ್ ತಾರಿತ್ತಡಿ, ಸದಾನಂದ ಶೆಟ್ಟಿ ದಯಾನಂದ ಸರೋಳಿ, ಪ್ರಸಾದ್ ಭಂಡಾರಿ, ಚಂದ್ರಶೇಖರ್ ಮಡಿವಾಳ, ಸ್ಥಳೀಯರಾದ ಲಕ್ಷ್ಮಣ್ ಗೌಡ, ಕೃಷ್ಣಪ್ಪ ನೆಕ್ಕರೆ, ಕೃಷ್ಣಪ್ಪ ಪೂಜಾರಿ, ಚಂದ್ರಶೇಖರ ಪುಲಮೊಗೆರು, ಹರಿಶ್ಚಂದ್ರ ನಂದಿನಿನಗರ, ಶಿವ ಹರಿನಗರ, ಮಂಜುನಾಥ್ ಹರಿನಗರ, ಜನಾರ್ಧನ್ ಹರಿನಗರ , ಚಂದ್ರಾವತಿ , ಲಕ್ಷ್ಮೀಶ ನಿಡ್ಡೆಂಕಿ, ಮೊದಲಾದವರು ಭಾಗವಹಿಸಿದ್ದರು.

ರಾಜ್ಯಮಟ್ಟದಲ್ಲಿ ಪ್ರಥಮ: ಕಡಬ, ಸುಳ್ಯ ಜನಜಾಗೃತಿ ವೇದಿಕೆಗೆ ಜಿಲ್ಲಾ ಮಟ್ಟದ ಸನ್ಮಾನ




ಕಡಬ: ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಅನುಷ್ಠಾನ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಕಡಬ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷ ಮಹೇಶ್ ಕೆ. ಸವಣೂರು ಹಾಗೂ ದ್ವಿತೀಯ ಸ್ಥಾನ ಪಡೆದ ಸುಳ್ಯ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷ ಲೋಕನಾಥ್ ಅಮೆಚೂರ್ ಅವರನ್ನು ಸಭೆಯಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ದಕ್ಷಿಣ ಕನ್ನಡ 1 ಮತ್ತು 2ರ ಜಿಲ್ಲಾ ಜನಜಾಗೃತಿ ವೇದಿಕೆ ಸಭೆಯು ಬಂಟ್ವಾಳ ಯೋಜನಾ ಕಚೇರಿ ಸಭಾಂಗಣದಲ್ಲಿ ಜರಗಿದ ಸಭೆಯಲ್ಲಿ ಈ ಸನ್ಮಾನ ನೆರವೇರಿತು. ವೇದಿಕೆಯ ಜಿಲ್ಲಾಧ್ಯಕ್ಷ ಪದ್ಮನಾಭ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ವೇದಿಕೆ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯಸ್, ಜಿಲ್ಲಾ ಜನಜಾಗೃತಿ ವೇದಿಕೆಯ ಮಾಜಿ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ದ.ಕ.-2 ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಎ., ದ.ಕ.-1 ಜಿಲ್ಲಾ ನಿರ್ದೇಶಕ ದಿನೇಶ್, ಉಡುಪಿ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ, ಕಡಬ ಯೋಜನಾಧಿಕಾರಿ ಪ್ರಕಾಶ್ ಕುಮಾರ್, ಸುಳ್ಯ ಯೋಜನಾಧಿಕಾರಿ ಮಾಧವ, ಕಡಬ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಕಡಬ ತಾಲೂಕು ಅಧ್ಯಕ್ಷ ಇಂದುಶೇಖರ್ ಶೆಟ್ಟಿ, ಜಿಲ್ಲಾ ವೇದಿಕೆಯ ಸದಸ್ಯರಾದ ಸೀತಾರಾಮ ಗೌಡ ಪೊಸವಳಿಕೆ, ಶಿವಪ್ರಸಾದ್ ರೈ ಮೈಲೇರಿ, ಜಯಾನಂದ ಬಂಟ್ರಿಯಾಲ್, ಗಣೇಶ್ ಕೈಕುರೆ, ಮಹೇಶ್ ನೇರೇಂಕಿ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರಿನಲ್ಲಿಯೇ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಾಗಲಿ: ಶಾಸಕ ವೇದವ್ಯಾಸ್ ಕಾಮತ್

ಮಂಗಳೂರು: ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಗೆ ಸಂಬಂಧಿಸಿ ಮುಖ್ಯಮಂತ್ರಿ ಅವರು ನಮ್ಮೆಲ್ಲರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿರುವುದು ಸ್ವಾಗತಾರ್ಹ. ಇಂತಹ ಸಂದರ್ಭದಲ್ಲಿ ಒಂದಷ್ಟು ಜನರು ಮಂಗಳೂರಿನ ಬದಲು ಬೇರೆ ಜಿಲ್ಲೆಯಲ್ಲಿ ಸಂಚಾರಿ ಪೀಠವನ್ನು ಆರಂಭಿಸಿ ಎಂದು ಆಗ್ರಹಿಸುತ್ತಿರುವುದು ಸರಿಯಲ್ಲ ಮತ್ತು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ, ಮಂಗಳೂರಿನಲ್ಲಿಯೇ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಾಗಬೇಕು ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಕರಾವಳಿ ಭಾಗದ ಜನರಿಗೆ ಶೀಘ್ರಗತಿಯಲ್ಲಿ ನ್ಯಾಯದಾನ ಒದಗಿಸಲು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಾಗಬೇಕು ಎಂಬ ಮಂಗಳೂರು ವಕೀಲರ ಸಂಘದ ಹಲವು ವರ್ಷಗಳ ಬೇಡಿಕೆಯು ಎಲ್ಲಾ ರೀತಿಯಿಂದಲೂ ನ್ಯಾಯಯುತವಾಗಿದೆ. ಇಡೀ ಮಂಗಳೂರಿನ ಜನತೆಯ ಪರವಾಗಿ ನನ್ನ ಆಗ್ರಹವೂ ಅದೇ ಆಗಿದ್ದು, ಅದರಲ್ಲಿ ಯಾವುದೇ ರಾಜಿಯಿಲ್ಲ, ಆರಂಭದಿಂದಲೂ ರಾಜಕೀಯ ರಹಿತವಾಗಿ ನಡೆದುಕೊಂಡು ಬಂದ ಈ ಹೋರಾಟದ ಪ್ರತೀ ಹೆಜ್ಜೆಯಲ್ಲೂ ವಕೀಲರ ಸಂಘದ ಜೊತೆ ನಿಂತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಜಿಲ್ಲೆಯ ಎಲ್ಲಾ ಪಕ್ಷಗಳ ಜನಪ್ರತಿನಿಧಿಗಳು ಹಾಗೂ ಪ್ರಮುಖರ ಉಪಸ್ಥಿತಿಯಲ್ಲಿ ಮನವಿ ಸಲ್ಲಿಸಿದ್ದು ಮಾತ್ರವಲ್ಲದೇ, ವೈಯಕ್ತಿಕವಾಗಿ ಹಾಗೂ ಅಧಿವೇಶನದಲ್ಲೂ ಸರ್ಕಾರವನ್ನು ಹಲವು ಬಾರಿ ಆಗ್ರಹಿಸಿದ್ದೇನೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಹೈಕೋರ್ಟ್ ಪೀಠ ಸ್ಥಾಪನೆಗೆ ಹಳೆಯ ಜಿಲ್ಲಾಧಿಕಾರಿ ಕಚೇರಿಯ ಆವರಣ ಎಲ್ಲಾ ರೀತಿಯಲ್ಲಿ ಸೂಕ್ತವಾಗಿದ್ದು, ಇಲ್ಲಿರುವ ಮೂಲಸೌಕರ್ಯಗಳು ಸಹ ಹೈಕೋರ್ಟ್ ಸಂಚಾರಿ ಪೀಠಕ್ಕೆ ಅತ್ಯುತ್ತಮ ಆಯ್ಕೆಯಾಗಿದೆ. ಹಾಗಾಗಿ ಈ ವಿಷಯದಲ್ಲಿ ಸ್ಪೀಕರ್, ಸಂಸದರು, ವಿಧಾನಪರಿಷತ್ ಸದಸ್ಯರು, ಎಲ್ಲಾ ರಾಜಕೀಯ ಪಕ್ಷಗಳು, ಎಲ್ಲಾ ನಾಯಕರುಗಳು, ಹಿರಿಯರು ಮುಖಂಡರು ಸೇರಿಕೊಂಡು, ಒಕ್ಕೊರಲಿನಿಂದ ನಮ್ಮ ಬೇಡಿಕೆಯನ್ನು ಇನ್ನಷ್ಟು ಗಟ್ಟಿಯಾಗಿ ಸರ್ಕಾರದ ಮುಂದಿಡುವ ಅನಿವಾರ್ಯತೆ ಸೃಷ್ಟಿಯಾಗಿದೆ. ಮಂಗಳೂರಿನ ವಕೀಲರ ಸಂಘದ ನಿರಂತರ ಹೋರಾಟ, ತಾಳ್ಮೆ, ಸಂಯಮ ಅಭಿನಂದನೀಯ. ಮಂಗಳೂರಿನಲ್ಲಿಯೇ ಹೈಕೋರ್ಟ್ ಪೀಠ ಸ್ಥಾಪನೆ ಆಗಬೇಕು ಎಂಬುದು ನಮ್ಮ ದೃಢ ನಿಲುವಾಗಿದ್ದು ಇನ್ನು ಮುಂದಕ್ಕೂ ಆ ನಿಟ್ಟಿನಲ್ಲಿ ಎಂದಿನಂತೆ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದರು.

ಮಳೆಗಾಲದ ಪೂರ್ವ ಸಿದ್ಧತೆ ನಿರ್ಲಕ್ಷ್ಯ:

ಮಳೆಗಾಲಕ್ಕೆ ಇನ್ನೇನು ಕೆಲವೇ ದಿನಗಳು ಬಾಕಿಯಿದ್ದು ಪಾಲಿಕೆ ವ್ಯಾಪ್ತಿಯ ರಾಜಕಾಲುವೆಗಳಲ್ಲಿ ಹಾಗೂ ಚರಂಡಿಗಳಲ್ಲಿ ಹೂಳೆತ್ತುವುದು, ಪ್ರತೀ ವಾರ್ಡ್‌ಗಳಿಗೆ ಗ್ಯಾಂಗ್‌ಮೆನ್ ನೇಮಿಸುವುದು, ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅನೇಕ ಬಾರಿ ಸೂಚಿಸಿದ ಹೊರತಾಗಿಯೂ ಪಾಲಿಕೆಯ ಆಡಳಿತ ಆ ಬಗ್ಗೆ ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸದಿರುವುದು ಖಂಡನೀಯ. ಹೂಳೆತ್ತುವ ಕಾಮಗಾರಿಯೂ ಸಹ ಕಾಟಾಚಾರಕ್ಕೆ ಮಾತ್ರ ಎಂಬಂತಾಗಿದೆ. ಹೀಗೆ ಮುಂದುವರಿದರೆ ಮಳೆಯ ಸಂದರ್ಭದಲ್ಲಿ ಕೃತಕ ನೆರೆಗೆ ಕಾರಣವಾಗುತ್ತದೆ. ಪಾಲಿಕೆ ಅಧಿಕಾರಿಗಳು ಇದರ ಬಗ್ಗೆ ವಿಶೇಷ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಮುಖಂಡರಾದ ನಿತಿನ್ ಕುಮಾರ್, ರವಿಶಂಕರ್ ಮಿಜಾರ್, ಪ್ರೇಮಾನಂದ ಶೆಟ್ಟಿ, ಪೂರ್ಣಿಮಾ ಎಂ., ರಮೇಶ್ ಕಂಡೆಟ್ಟು, ರಮೇಶ್ ಹೆಗ್ಡೆ, ಲಲ್ಲೇಶ್ ಕುಮಾರ್, ಸುರೇಖಾ ಎಂ.ಎಸ್., ಮೋಹನ್ ಪೂಜಾರಿ, ಪ್ರವೀಣ್ ನಿಡ್ಡೆಲ್ ಇದ್ದರು.

ಸಚಿವರು ಸಭೆಯನ್ನೇ ನಡೆಸಿಲ್ಲ

ಬೆಂಗಳೂರಿನಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಬೃಹತ್ ತಡೆಗೋಡೆ ಕುಸಿದು ಸಾರ್ವಜನಿಕರ ಜೀವ ಹಾನಿಯಾಗಿತ್ತು. ಇಂತಹ ದುರ್ಘಟನೆಗಳು ಮಂಗಳೂರಿನಲ್ಲಿ ಮರುಕಳಿಸದಂತೆ ನಗರ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕೆ ಸಹಿತ ಎಲ್ಲಾ ರೀತಿಯ ಕ್ರಮವಹಿಸಬೇಕಾದ ಅನಿವಾರ್ಯತೆಯಿದೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಈ ಬಗ್ಗೆ ಕನಿಷ್ಠ ಕಾಳಜಿಯೂ ಇದ್ದಂತೆ ಕಾಣುತ್ತಿಲ್ಲ, ಅವರು ಒಮ್ಮೆಯಾದರೂ ಪಾಲಿಕೆ ಅಧಿಕಾರಿಗಳ, ಸ್ಥಳೀಯ ಜನಪ್ರತಿನಿಧಿಗಳ ಸಭೆ ನಡೆಸಬೇಕಿತ್ತು. ಇದರಿಂದಾಗಿ ಆಡಳಿತವೂ ನಿರ್ಲಕ್ಷ್ಯ ವಹಿಸಿದೆ ಎಂದು ಶಾಸಕರು ಆರೋಪಿಸಿದರು.

ಸುತ್ತಮುತ್ತ

ಕೊಡಗು ಬಿಜೆಪಿಯಲ್ಲಿ ನಾಯಕರ ಕೊರತೆ ಇಲ್ಲ: ಕಂಠಿ ಕಾರ್ಯಪ್ಪ

ಮಡಿಕೇರಿ: ಕೊಡಗು ಬಿಜೆಪಿಯಲ್ಲಿ ನಾಯಕತ್ವದ ಕೊರತೆಯಿಲ್ಲ, ಬಿಜೆಪಿಗೆ ಕಾರ್ಯಕರ್ತರ ನಾಯಕತ್ವವೇ ದೊಡ್ಡ ಶಕ್ತಿಯಾಗಿದೆ. ಬಿಜೆಪಿಗೆ ನಾಯಕತ್ವದ ಕೊರತೆ ಇರಬಹುದೆಂದು ಇತ್ತೀಚೆಗೆ ಮಡಿಕೇರಿ ಕ್ಷೇತ್ರದ ಶಾಸಕರು ನೀಡಿರುವ ಹೇಳಿಕೆ ಖಂಡನೀಯವೆಂದು ಸೋಮವಾರಪೇಟೆ ಬಿಜೆಪಿ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ಸದೃಢ ಹಿರಿಯ ಮುಖಂಡರ ನೇತೃತ್ವದಲ್ಲಿ ಬಿಜೆಪಿಯಲ್ಲಿರುವ ದೊಡ್ಡ ಸಂಖ್ಯೆಯ ಕಾರ್ಯಕರ್ತರೇ ನಾಯಕರಾಗಿದ್ದಾರೆ. ಆದರೆ ಕಾರ್ಯಕರ್ತರೇ ಇಲ್ಲದ ಕೊಡಗು ಕಾಂಗ್ರೆಸ್ ನಾಯಕತ್ವದ ಕೊರತೆಯನ್ನು ಎದುರಿಸುತ್ತಿದೆ. ಹೊರ ಜಿಲ್ಲೆಯಿಂದ ಬಂದು ಇಲ್ಲಿ ಶಾಸಕರಾಗಿರುವ ಮಡಿಕೇರಿ ಶಾಸಕರಿಗೆ ಇದು ಮರೆತು ಹೋಗಿದೆ. ಬಿಜೆಪಿ ಎಂದಿಗೂ ಆಮದು ನಾಯಕರನ್ನು ಶಾಸಕರನ್ನಾಗಿ ಮಾಡಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಪ್ರವಾಸಿತಾಣಗಳಲ್ಲಿ ಪ್ರವಾಸಿಗರಿಗೆ ಸುರಕ್ಷತೆ ಇಲ್ಲದಾಗಿದೆ. ಇತ್ತೀಚೆಗೆ ಸುಂಟಿಕೊಪ್ಪ ಸಮೀಪ ಹೇರೂರು ಗ್ರಾಮದಲ್ಲಿ ಅಕ್ರಮ ಚರ್ಚ್ ತಲೆ ಎತ್ತಿದೆ. ಚರ್ಚ್‌ನ ಉದ್ಘಾಟನೆಗೆ ತಮಿಳುನಾಡಿನಿಂದ ಮತಾಂತರಿಗಳು ಬಂದಿದ್ದಾರೆ. ಇದು ಜಿಲ್ಲೆಯಲ್ಲಿ ಮತಾಂತರದ ಪಿಡುಗು ವ್ಯಾಪಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ರೂ.50 ಲಕ್ಷ ಪರಿಹಾರ ನೀಡಿ

ದುಬಾರೆಯಲ್ಲಿ ಮೃತಪಟ್ಟ ಅಮಾಯಕ ಮಹಿಳೆಯ ಕುಟುಂಬಕ್ಕೆ ರಾಜ್ಯ ಸರಕಾರ ರೂ.50 ಲಕ್ಷ ಪರಿಹಾರ ನೀಡಬೇಕು, ಪ್ರವಾಸಿಗರಿಂದ ಸಂಗ್ರಹವಾಗುತ್ತಿರುವ ಹಣದ ವಾರ್ಷಿಕ ಲೆಕ್ಕಪತ್ರವನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಬೇಕು ಎಂದು ಕಂಠಿ ಕಾರ್ಯಪ್ಪ ಆಗ್ರಹಿಸಿದ್ದಾರೆ.

ಉಜಿರೆ ಶ್ರೀ ಮಹಮ್ಮಾಯಿ ಕ್ಷೇತ್ರದ ಪ್ರತಿಷ್ಠಾ ವರ್ಧಂತಿ

ಉಜಿರೆ: ಉಜಿರೆ ಶ್ರೀ ಮಹಮ್ಮಾಯಿ (ಮಾರಿಗುಡಿ) ದೇವಸ್ಥಾನದ ಪ್ರತಿಷ್ಠಾ ವರ್ಧಂತಿ ಮಹೋತ್ಸವವು ಅನುವಂಶೀಯ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರ ನೇತೃತ್ವದಲ್ಲಿ ಅರ್ಚಕ ವೇದಮೂರ್ತಿ ರಾಮಚಂದ್ರ ಹೊಳ್ಳರ ಧಾರ್ಮಿಕ ವಿಧಿಗಳೊಂದಿಗೆ ಮೇ 13 ರಂದು ಸಾರ್ವಜನಿಕ ಶ್ರೀ ಮಹಾರಂಗ ಪೂಜೆ ನಡೆಯಿತು.



ದೇವಸ್ಥಾನವನ್ನು ವಿಶೇಷವಾಗಿ ಪುಷ್ಪ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಪ್ರಮುಖರಾದ ಮೋಹನ ಶೆಟ್ಟಿಗಾರ್, ಕೆ.ಮೋಹನ ಕುಮಾರ್, ಪ್ರಕಾಶ್ ಗೌಡ ಅಪ್ರಮೇಯ, ಭರತ್ ಕುಮಾರ್, ರವೀಂದ್ರ ಶೆಟ್ಟಿ ಸುರಭಿ, ಲಕ್ಷ್ಮಣ ಸಫಲ್ಯ ಮತ್ತು ಶ್ರೀ ಮಹಮ್ಮಾಯಿ ಸೇವಾ ಸಮಿತಿ ಸದಸ್ಯರು, ಭಕ್ತರು ಇದ್ದರು.

ಹೋರಾಟಕ್ಕಿಳಿಯದಿದ್ದರೆ ಇನ್ನಷ್ಟು ಬೆಲೆಯೇರಿಕೆ: ಪರಶುರಾಮ ಚಿಲ್ತಡ್ಕ

ಸುಳ್ಯ: ಹಿಂದುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ದಿನದಿಂದ ದಿನಕ್ಕೆ ಬೆಲೆ ಏರಿಕೆ ಮಾಡಿದ್ದು ಬಿಟ್ಟರೆ ಬೇರೇನೂ ಮಾಡಿಲ್ಲ, ಇದರ ವಿರುದ್ಧ ಜನರು ಬೀದಿಗಿಳಿದು ಹೋರಾಟ ನಡೆಸದೇ ಇದ್ದರೆ ಇನ್ನಷ್ಟು ಬೆಲೆ ಏರಿಕೆಯಾಗಲಿದೆ ಎಂದು ಸುಳ್ಯ ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಪರಶುರಾಮ ಚಿಲ್ತಡ್ಕ ಹೇಳಿದ್ದಾರೆ.

ಅವರು ಸುಳ್ಯ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಲೆ ಏರಿಕೆಯಿಂದ ಬಡವರ ಜೀವನ ಕಷ್ಟವಾಗಿದೆ. ದಿನ ಬಳಕೆ ವಸ್ತುಗಳು, ಗ್ಯಾಸ್, ಪೆಟ್ರೋಲ್ ಹೀಗೆ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದೀಗ ಗ್ಯಾಸ್ ಬೆಲೆ ಏರಿಕೆ ಮಾಡಲಾಗಿದ್ದು ಜನಸಾಮಾನ್ಯರಿಗೆ ಸಿಗದಂತಾಗಿದೆ ಆದರೆ ಕಾಳಸಂತೆಯಲ್ಲಿ ನಾಲ್ಕು ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದು, ಈ ಕುರಿತು ರಾಜ್ಯ ಹಾಗೂ ಕೇಂದ್ರ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಗುತ್ತಿಗಾರು ಗ್ರಾ.ಪಂ. ಮಾಜಿ ಸದಸ್ಯ ದಿನೇಶ್ ಸರಸ್ವತಿ ಮಹಲ್ ಮಾತನಾಡಿ, ಬಡವರ ಪರ, ಹಿಂದುತ್ವ ಎಂದು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದವರು ಇಂದು ಬಡವರಿಗೆ ಕಷ್ಟ ಕೊಡುತಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕೆ.ಡಿ.ಪಿ. ಸಮಿತಿ ಸದಸ್ಯ ಪರಮೇಶ್ವರ ಕೆಂಬಾರೆ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ರವಿ ಗುಂಡಡ್ಕ ಉಪಸ್ಥಿತರಿದ್ದರು.

ಅಂತರ್ ಕಾಲೇಜುಗಳ ಪುರುಷರ ಕಬಡ್ಡಿ ಪಂದ್ಯಾಟ ಉದ್ಘಾಟನೆ | ವಿವಿಧ ಜಿಲ್ಲೆಗಳ 16 ತಂಡಗಳು ಭಾಗಿ

ಕಬಡ್ಡಿ ಕ್ರೀಡಾಕೂಟಕ್ಕೆ ಜಗತ್ತಿನಾದ್ಯಂತ ಮನ್ನಣೆ: ರವೀಂದ್ರ ಶೆಟ್ಟಿ

ಉಜಿರೆ: ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಆಶ್ರಯದಲ್ಲಿ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ಇಂದ್ರಪ್ರಸ್ಥ ಒಳಾಂಗಣದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಂಗಳೂರು ವಲಯ ಅಂತರ್ ಕಾಲೇಜುಗಳ ಪುರುಷರ ಕಬಡ್ಡಿ ಪಂದ್ಯಾಟದ ಬಳಿಕ ಆಯೋಜಿಸಲಾದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಅಂತರ್ ವಲಯಗಳ ಕಾಲೇಜುಗಳ ರಾಜ್ಯ ಮಟ್ಟದ ಪುರುಷರ ಕಬಡ್ಡಿ ಪಂದ್ಯಾಟಕ್ಕೆ ಚಾಲನೆ ನೀಡಲಾಯಿತು.



ಅಂತಾರಾಷ್ಟ್ರೀಯ ಕಬಡ್ಡಿ ತರಬೇತುದಾರ ರವೀಂದ್ರ ಶೆಟ್ಟಿ ಸಭಾ ಕಾರ್ಯಕ್ರಮ ಉದ್ಘಾಟಿಸಿ, ಕಬಡ್ಡಿ ದೇಶಿಯ ಕ್ರೀಡೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಕ್ರೀಡೆಯನ್ನು ಹವ್ಯಾಸವಾಗಿ ರೂಪಿಸಿ ಕೊಂಡು ನಿರಂತರ ಆಸಕ್ತಿ ಮತ್ತು ಪರಿಶ್ರಮದಿಂದ ಸಾಗಿದರೆ ಕಬಡ್ಡಿಯಂತಹ ಕ್ರೀಡೆಗಳಲ್ಲಿ ಭವಿಷ್ಯ ಕಂಡುಕೊಳ್ಳಬಹುದು. ಕಬಡ್ಡಿಗೆ ಇಂದು ಪ್ರೊ ಕಬಡ್ಡಿ ಬಳಿಕ ಜಗತ್ತಿನಾದ್ಯಂತ ಮನ್ನಣೆ ದೊರೆಯುತ್ತಿರುವ ಜೊತೆಗೆ ವಿಪುಲವಾದ ಅವಕಾಶಗಳು ತೆರೆದುಕೊಂಡಿದೆ. ಕಬಡ್ಡಿ ಕ್ರೀಡೆ ಮತ್ತಷ್ಟು ಜಾಗತಿಕ ಮಟ್ಟದಲ್ಲಿ ಬೆಳಗಲು ಪ್ರತಿಯೊಬ್ಬ ಕಬಡ್ಡಿ ಕ್ರೀಡಾಪಟುವಿನ ಕೊಡುಗೆ ಅಗತ್ಯವಿದೆ ಎಂದರು.

ಶಿಸ್ತಿನ ಚೌಕಟ್ಟನ್ನು ಮೀರಬಾರದು

ಪ್ರತಿಭೆ ಹಾಗೂ ಸ್ವಸಾಮಾರ್ಥ್ಯದಿಂದ ಸಾಧನೆಯತ್ತ ಹೆಜ್ಜೆ ಹಾಕಿದರೆ ವಿದ್ಯಾಸಂಸ್ಥೆ ಮತ್ತು ಸಮಾಜ ನಮ್ಮ ಕಲೆಯನ್ನು ಗುರುತಿಸಿ ಗೌರವಿಸುತ್ತದೆ. ಕ್ರೀಡಾಪಟುಗಳು ತಮ್ಮ ಬದುಕಿನುದ್ದಕ್ಕೂ ಶಿಸ್ತಿನ ಚೌಕಟ್ಟನ್ನು ಮೀರಬಾರದು ಎಂದು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಬೆಳ್ತಂಗಡಿ ವಿಭಾಗದ ಅರಣ್ಯ ಅಧಿಕಾರಿ ರಂಜಿತ್ ಕುಮಾರ್ ಎಸ್. ಮಾತನಾಡಿ, ಕ್ರೀಡಾ ಪಟುಗಳು ಎದುರಾಗುವ ಸೋಲುಗಳಿಗೆ ಚಿಂತಿತರಾಗಬಾರದು. ಕ್ಷಣಿಕ ಸೋಲನ್ನು ಮರೆತು ಯಶಸ್ಸಿನ ಹಾದಿಯೆಡೆಗೆ ಹವಹಪಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಸ್ವಶಕ್ತಿ ಮತ್ತು ಪ್ರತಿಭೆಯ ಜೊತೆಗೆ ನಿರಂತರ ಪ್ರಯತ್ನದಿಂದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಾ. ಅಶೋಕ್ ಕುಮಾರ್ ಟಿ. ಮಾತನಾಡಿ, ಕಬಡ್ಡಿ ಕ್ರೀಡೆ ವಿಶೇಷ ಸಾಮರ್ಥ್ಯ ಮತ್ತು ಕೌಶಲ್ಯದಿಂದ ಸಾಗಿಬರುವ ಆಟ. ಕ್ರೀಡೆಯ ಮೇಲಿನ ಆಸಕ್ತಿಯೇ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕ ಎಂದು ಶುಭ ಹಾರೈಸಿದರು.

> **ವಿಶೇಷ ಪ್ರೋತ್ಸಾಹ**
>
> ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ಮೌಲ್ಯಯುತ ಶಿಕ್ಷಣ ನೀಡುವುದರ ಜೊತೆಗೆ ಕ್ರೀಡಾ ಕ್ಷೇತ್ರಕ್ಕೂ ವಿಶೇಷ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಿದೆ. ಹಲವು ಕ್ರೀಡಾಪಟುಗಳನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಸಂಸ್ಥೆ ಬೆಳೆಸಿದೆ. ವಿಶೇಷವಾಗಿ ಕಬಡ್ಡಿ ಕ್ಷೇತ್ರದ ಪ್ರೊ. ಕಬ್ಬಡಿ ಪಂದ್ಯಾಟಕ್ಕೆ ಎಸ್‌ಡಿಎಂ ಸಂಸ್ಥೆಯಿಂದ 6 ಕ್ರೀಡಾಪಟುಗಳನ್ನು ನೀಡಿರುವುದು ಹೆಮ್ಮೆಯ ಸಂಗತಿ.
>
> ● ರವೀಂದ್ರ ಶೆಟ್ಟಿ, ಅಂತಾರಾಷ್ಟ್ರೀಯ ತರಬೇತುದಾರ

ಅಂತರ್ ವಲಯಗಳ ಅಂತರ್ ಕಾಲೇಜು ರಾಜ್ಯ ಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯದ ಬೆಂಗಳೂರು, ಬೆಳಗಾವಿ, ಕಲಬುರ್ಗಿ, ಬಳ್ಳಾರಿ ಸೇರಿದಂತೆ ವಿವಿಧ ಜಿಲ್ಲೆಗಳ ಸುಮಾರು 16 ತಂಡಗಳು ಭಾಗವಹಿಸಿದ್ದವು. ಎಸ್‌ಡಿಎಂ ಕ್ರೀಡಾ ಸಂಘದ ಕಾರ್ಯದರ್ಶಿ ರಮೇಶ್, ರಾಷ್ಟ್ರೀಯ ಮಟ್ಟದ ಕಬಡ್ಡಿ ತೀರ್ಪುಗಾರ ಕೃಷ್ಣಾನಂದ್ ರಾವ್ ಹಾಗು ಉಜಿರೆಯ ಎಸ್.ಡಿ.ಎಂ ತಾಂತ್ರಿಕ ಮಹಾವಿದ್ಯಾಲಯ ದೈಹಿಕ ಶಿಕ್ಷಣ ನಿರ್ದೇಶಕ ಪ್ರಭಾಕರ್ ಇದ್ದರು. ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲೆಯ ವಿವಿಧ ಕಾಲೇಜಿನ ತಂಡಗಳು ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಕಾರ್ಯಕ್ರಮವನ್ನು ಉಜಿರೆಯ ಎಸ್ .ಡಿ.ಎಂ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿ ಕಲ್ಪಿತ ಹಾಗೂ ಅನಿಶ್ ಕಲ್ಮಾಡಿ ನಿರೂಪಿಸಿ, ವಂದಿಸಿದರು. ಪುರುಷರ ಕಬಡ್ಡಿ ಪಂದ್ಯಾಟವನ್ನು ದೈಹಿಕ ಶಿಕ್ಷಣ ಉಪನ್ಯಾಸಕ ಪ್ರಭಾಕರ್ ಸಂಯೋಜಿಸಿ, ತಾಂತ್ರಿಕ ಮಹಾವಿದ್ಯಾಲಯ ಉಪನ್ಯಾಸಕರು ಸಹಕರಿಸಿದರು.

ಬಂಟ್ವಾಳ ನೇತ್ರಾವತಿ ಸಂಗಮ ಪದಗ್ರಹಣ | ಉದ್ಯಮಿ ಐತ್ತಪ್ಪ ಆಳ್ವ ಅಭಿಮತ

ಉತ್ತಮ ಸಮಾಜಕ್ಕೆ ಭ್ರಷ್ಟಾಚಾರ ಪಿಡುಗು ಮಾರಕ

ಬಂಟ್ವಾಳ: ವಿದ್ಯಾವಂತ ಜನರೇ ಭ್ರಷ್ಟಾಚಾರ ವ್ಯವಸ್ಥೆಯಲ್ಲಿ ಪಾಲುದಾರರಾದರೆ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯವಿಲ್ಲ, ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳು ನಿಸ್ವಾರ್ಥವಾಗಿ ನಿರಂತರ ಸೇವಾ ಕಾರ್ಯ ನಡೆಸುತ್ತಿದ್ದು, ಸಾರ್ವಜನಿಕರು ಪ್ರೋತ್ಸಾಹ ನೀಡಬೇಕು ಎಂದು ಉದ್ಯಮಿ ಸುಜೀರುಗುತ್ತು ಐತ್ತಪ್ಪ ಆಳ್ವ ಹೇಳಿದರು.



ಅವರು ಬಿ.ಸಿ.ರೋಡಿನ ಅಕ್ಷಯ ಸೌಧ ಸಭಾಂಗಣದಲ್ಲಿ ಜರಗಿದ ಸೀನಿಯರ್ ಛೇಂಬರ್ ಇಂಟರ್ ನ್ಯಾಶನಲ್ ಬಂಟ್ವಾಳ ನೇತ್ರಾವತಿ ಸಂಗಮದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ನೂತನ ಅಧ್ಯಕ್ಷ ತೇವು ತಾರಾನಾಥ ಕೊಟ್ಟಾರಿಯವರಿಗೆ ಪ್ರಮಾಣ ವಚನ ನೀಡಿ ರಾಷ್ಟ್ರೀಯ ಉಪಾಧ್ಯಕ್ಷೆ ಅಕ್ಷತಾ ಆರ್. ಮಾತನಾಡಿ, ತಮ್ಮ ಅನುಭವ ಹಾಗೂ ನಾಯಕತ್ವ ಗುಣಗಳನ್ನು ಸಮಾಜದ ಒಳಿತಿಗೆ ಉಪಯೋಗಿಸಬೇಕೆಂದರು.

ಅಧಿಕಾರ ಸ್ವೀಕರಿಸಿ ತಾರಾನಾಥ ಕೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ನೇತ್ರಾವತಿ ಸಂಗಮದ ಸ್ಥಾಪಕ ಅಧ್ಯಕ್ಷ ಜಯಾನಂದ ಪೆರಾಜೆ ಹಾಗೂ ನಿಕಟ ಪೂರ್ವ ಕಾರ್ಯದರ್ಶಿ ನ್ಯಾಯವಾದಿ ಶೈಲಜಾ ರಾಜೇಶ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಾಧಕ ವಿದ್ಯಾರ್ಥಿ ಇಶಾ ಆನ್ವಿ, ಪೂರ್ವಿ ಜೆ.ಬಂಗೇರ, ಅನರ್ಘ್ಯ ಇವರನ್ನುಗೌರವಿಸಿ ಅಭಿನಂದಿಸಲಾಯಿತು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ ಅನನ್ಯ ಭಟ್, ಶ್ರೀರಕ್ಷಾ ರಾವ್, ಜಿಶಾ ಪಿ., ತುಷಾರ್ ಎಚ್‌ಪಿ, ಶಾನೆಲ್ ಸಿಕ್ವೇರಾ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ವೇದಿಕೆಯಲ್ಲಿ ನೂತನ ಕಾರ್ಯದರ್ಶಿ ರೇಖಾ ರಾವ್, ಕೋಶಾಧಿಕಾರಿ ಪಿ. ಮುಹಮ್ಮದ್, ನಿಕಟ ಪೂರ್ವ ಕೋಶಾಧಿಕಾರಿ ಹರಿಶ್ಚಂದ್ರ ಆಳ್ವ ಪಿ. ಇದ್ದರು. ರಾಜಾರಾಮ ಐತಾಳ್, ಗಿರಿಧರ್ ಗೌಡ, ರಾಮಕೃಷ್ಣ ರಾವ್, ಪ್ರಮೀಳಾ ಮಾಣೂರು, ಗ್ರೇಸಿ ಮೇಬಲ್ ಲಾಸ್ರದೋ, ಅಶೋಕ್ ಕುಮಾರ್ ಬರಿಮಾರು ನೂತನ ಸದಸ್ಯರಾದರು. ಪ್ರಮುಖರಾದ ಮಾಜಿ ಅಧ್ಯಕ್ಷ ಡಾ. ಆನಂದ ಬಂಜನ್, ಉಪಾಧ್ಯಕ್ಷ ಪುರುಷೋತ್ತಮ ಕೊಟ್ಟಾರಿ, ಪ್ರಗತಿಪರ ಕೃಷಿಕ ಕರುಣೇಂದ್ರ ಪೂಜಾರಿ,ಜಯ ಗಣೇಶ್, ಸಚ್ಚಿದಾನಂದ ರೈ, ಸುಭಾಶ್ಚಂದ್ರ ಜೈನ್, ಯೋಗೀಶ್ ಬಂಗೇರ, ಪ್ರದೀಪ್ ರಾಜ್ ಕಾರ್ಕಳ, ಹರೀಶ್ ರೈ, ನವೀನ್,ವಿಜಯ ಕುಮಾರ್ ಅಡ್ಯಾರ್ ಮತ್ತಿತರರಿದ್ದರು. ಆದಿರಾಜ ಜೈನ್ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಸನ್ಮತಿ ಜೈನ್ ಇಂದ್ರ ಸನ್ಮಾನ ಪತ್ರ ವಾಚಿಸಿದರು. ರಕ್ಷಾ ಪ್ರಾರ್ಥಿಸಿ ಅಕ್ಬರ್ ಅಲಿ ವಂದಿಸಿದರು. ರೇಖಾ ರಾವ್ ನಿರೂಪಿಸಿದರು.

> **ಪದಾಧಿಕಾರಿಗಳು ಸಕಾರಾತ್ಮಕ ಚಿಂತನೆಯಿಂದ ಸಂಘಟನೆಯೊಂದಿಗೆ ಕೈ ಜೋಡಿಸಿ ಇತರರಿಗೆ ಮಾದರಿಯಾಗಬೇಕಾಗಿದೆ.**
>
> ● ತಾರಾನಾಥ ಕೊಟ್ಟಾರಿ

ಸೊಸೈಟಿಯ ಸಂಭ್ರಮಾಚರಣೆ ಸಮಾರೋಪದಲ್ಲಿ ಖಾದರ್ ಬಣ್ಣನೆ

ಅಭಿವೃದ್ಧಿಯತ್ತ ಪ್ರಿಯದರ್ಶಿನಿ ಸೊಸೈಟಿ ದಾಪುಗಾಲು

ಮುಲ್ಕಿ: ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ 5ನೇ ವರ್ಷದ ಸಂಭ್ರಮಾಚರಣೆ ಸಮಾರೋಪ ಹಾಗೂ ಸಾಧಕರಿಗೆ ಗೌರವ ಕಾರ್ಯಕ್ರಮ ಬುಧವಾರ ಹಳೆಯಂಗಡಿಯ ಹರಿಓಂ ಕಟ್ಟಡದ ಆವರಣದಲ್ಲಿ ನಡೆಯಿತು.



ವಿಧಾನಸಭೆಯ ಸಭಾಧ್ಯಕ್ಷ ಯು.ಟಿ ಖಾದರ್ ಕಾರ್ಯಕ್ರಮ ಉದ್ಘಾಟಿಸಿ, ಕಳೆದ 5 ವರ್ಷಗಳಿಂದ ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದ್ದು, ಸೊಸೈಟಿ ಅಧ್ಯಕ್ಷ ಎಚ್. ವಸಂತ್ ಬೆರ್ನಾಡ್ ಅವರ ಉತ್ತಮ ಆಡಳಿತದಿಂದ ಗ್ರಾಹಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಗ್ರಾಹಕರ ಸಹಭಾಗಿತ್ವ ಮುಖ್ಯವಾಗಿದ್ದು, ಅವರ ಪ್ರೇರಣೆಯಿಂದ ಸೊಸೈಟಿ ಇಂದು ಸಾಧನೆಯ ಶಿಖರವೇರಿದೆ. ಇದು ಯಶಸ್ವಿಯಾಗಿ ಮುನ್ನಡೆದು ಸೊಸೈಟಿ ಇನ್ನಷ್ಟು ಸಾಧನೆ ಮಾಡಲಿ, ವಸಂತ್ ಬರ್ನಾಡ್ ಅವರ ಎಲ್ಲಾ ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಿಗೆ ನನ್ನ ಸಹಕಾರ ಬೆಂಬಲ ಸದಾ ಇದೆ ಎಂದರು.

ಮುಲ್ಕಿ ಸೀಮೆಯ ಅರಸ ಎಂ. ದುಗ್ಗಣ್ಣ ಸಾವಂತರು ಅರಸರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಕೆ. ಅಭಯಚಂದ್ರ ಜೈನ್, ಮಾತನಾಡಿದರು ಇದೇ ಸಂದರ್ಭದಲ್ಲಿ ಸೊಸೈಟಿಯಲ್ಲಿ ಅಳವಡಿಸಲಾದ ನೂತನ ಗೋಲ್ಡ್‌ಪ್ಯೂರಿಟಿ ಟೆಸ್ಟಿಂಗ್ ಮೆಷಿನ್ ಅನ್ನು ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರ ಬಿ. ಸೂರ್ಯಕುಮಾರ್ ಉದ್ಘಾಟಿಸಿದರು.

ಸೊಸೈಟಿ ಸ್ಥಾಪನಾ ವರ್ಷದ ಸಿಬ್ಬಂದಿಗಳಿಗೆ ರಾಜ್ಯ ಸರಕಾರದ ಗೇರು ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಅವರು ಗೌರವಿಸಿದರು. ಮುಖ್ಯ ಅತಿಥಿಗಳಾಗಿ, ಕಾರ್ನಾಡ್ ಇಮ್ಯಾಕ್ಯುಲೇಟ್ ಕನ್ಸೆಪ್ಷನ್ ನ ಚರ್ಚ್ ಕಾರ್ನಾಡು ಮೂಲ್ಕಿ ಚರ್ಚ್ ಪಾಲನಾ ಸಮಿತಿಯ 22 ಆಯೋಗಗಳ ಸಂಯೋಜಕ ಪೌಲ್ ರೋಲ್ಸಿ ಡಿಕೋಸ್ತ, ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್. ವಸಂತ್ ಬೆರ್ನಾರ್ಡ್, ಉಪಾಧ್ಯಕ್ಷ ವಿಜಯ ಕುಮಾರ್ ಸನಿಲ್, ನಿರ್ದೇಶಕ ಉಮಾನಾಥ ಜೆ. ಶೆಟ್ಟಿಗಾರ್, ಧನಂಜಯ ಮಟ್ಟು, ಗೌತಮ್ ಜೈನ್, ಗಣೇಶ್ ಪ್ರಸಾದ್ ದೇವಾಡಿಗ, ಜೈ ಕೃಷ್ಣ ಕೋಟ್ಯಾನ್, ಡಾ. ಶೆರಿಲ್ ಅಯೋನ, ರೇಖಾ ಶೆಟ್ಟಿ,ಹರೀಶ್ ಎನ್ ಪುತ್ರನ್, ನವೀನ್ ಸಾಲ್ಯಾನ್ ಪಂಜ, ಮೋಹನ್ ದಾಸ್, ಅನಿಲ್ ಪೂಜಾರಿ ಸಸಿಹಿತ್ಲು, ರಜಿಯಾ ಭಾನು, ಕರಿಯ ಕಾಡಿಗ ಹಾಗೂ ಹರಿ ಓಂ ಕಟ್ಟಡದ ಮಾಲಿಕ ಹರಿಶ್ಚಂದ್ರ ಕೆ. ಅಮೀನ್ ಮತ್ತಿತರರು ಉಪಸ್ಥಿತರಿದ್ದರು ಕಾರ್ಯಕ್ರಮದಲ್ಲಿ ಸಾಧಕರಾದ ಅಧಿತ್ ಶೆಟ್ಟಿ ಗಾನ ಭಟ್ ಮತ್ತು ಶಿಲ್ಪಾ ಶೆಟ್ಟಿ ರವರನ್ನು ಗೌರವಿಸಲಾಯಿತು. ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬೆರ್ನಾಡ್ ಸ್ವಾಗತಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುದರ್ಶನ್ ವಂದಿಸಿದರು. ಸೊಸೈಟಿಯ ಕಿನ್ನಿಗೋಳಿ ಶಾಖಾ ಪ್ರಬಂಧಕಿ ಅಕ್ಷತಾ ಶೆಟ್ಟಿ ಎಂ. ಹಾಗೂ ಖ್ಯಾತ ನಿರೂಪಕಿ ಸೌಜನ್ಯಾ ಹೆಗ್ಡೆ ಲೆಕ್ಕಿಗ ಲೋಲಾಕ್ಷಿ , ಪ್ರಬಂಧಕರಾದ ಮೋಹನ್‌ದಾಸ್ ಪೂಜಾರಿ ಮತ್ತು ಅಂಜಲಿ ಉಳ್ಳಾಲ್ ನಿರೂಪಿಸಿದರು.

ಕೊಡಗಿನಾದ್ಯಂತ ಜೂ.28ರಿಂದ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ: ಡಿಸಿ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಜೂ.28ರಿಂದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದ್ದು ಇದರ ಯಶಸ್ಸಿಗೆ ಎಲ್ಲಾ ಇಲಾಖೆಗಳು, ಸಂಘ ಸಂಸ್ಥೆಗಳು ಕೈ ಜೋಡಿಸುವಂತೆ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಕೋರಿದ್ದಾರೆ.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಲ್ಸ್ ಪೋಲಿಯೋ ಲಸಿಕೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಜೂ.28ರಿಂದ ಜು.1 ವರೆಗೆ ಲಸಿಕಾ ಕಾರ್ಯಕ್ರಮ ನಡೆಯಲಿದ್ದು, ಅಗತ್ಯ ಸಿಬ್ಬಂದಿಗಳು, ವಾಹನ ನಿಯೋಜನೆ, ವಿದ್ಯುತ್ ಸಂಪರ್ಕ ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಪೋಲಿಯೋ ಹನಿ ನೀಡುವ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಅವರು ಮಾಹಿತಿ ನೀಡಿ, ಜಿಲ್ಲೆಯಲ್ಲಿ 5 ವರ್ಷದವರೆಗಿನ ಒಟ್ಟು 32,702 ಮಕ್ಕಳಿದ್ದು ನಗರ ವ್ಯಾಪ್ತಿಯಲ್ಲಿ 3,275, ಗ್ರಾಮೀಣ ಭಾಗದಲ್ಲಿ 29,427 ಮಕ್ಕಳಿದ್ದಾರೆ. ಇವರಲ್ಲಿ ವಲಸಿಗ ಮಕ್ಕಳ ಸಂಖ್ಯೆ 4,112 ಎಂದು ವಿವರಿಸಿದರು. ಎಲ್ಲಾ ಶಾಲೆಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಜೂ.26 ರಂದು ಜಾಥಾ ಮಾಡಿ ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ಜೂ.28 ರಂದು ಬೆಳಗ್ಗೆ 8ರಿಂದ ಬೂತ್ ಮಟ್ಟದಲ್ಲಿ ಪೋಲಿಯೊ ಹನಿ ನೀಡಲಾಗುತ್ತದೆ ಎಂದರು.

ಜಿಲ್ಲೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಗೂ ಸ್ಥಿರವಾಸಿತ ವಲಸೆ ಮಕ್ಕಳ ಸಂಖ್ಯೆಯೂ ಹೆಚ್ಚಿರುವುದರಿಂದ ಮೂರು ದಿನಗಳ ಕಾಲ ನಗರ, ಪಟ್ಟಣ ಪ್ರದೇಶ ಭೇಟಿ ನೀಡಿ ಪೋಲಿಯೊ ಹನಿ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 1,36,214 ಮನೆಗಳಿದ್ದು, ಈ ಎಲ್ಲಾ ಮಕ್ಕಳಿಗೆ ಲಸಿಕೆ ನೀಡಲು ಜಿಲ್ಲೆಯಲ್ಲಿ ಒಟ್ಟು 470 ಬೂತ್‌ಗಳನ್ನು ಗುರುತಿಸಲಾಗಿದೆ. 32 ಸಂಚಾರಿ ತಂಡ, 1 ಮೊಬೈಲ್ ಸಂಚಾರಿ ತಂಡ ರಚಿಸಲಾಗಿದೆ. ಒಟ್ಟು 1946 ಲಸಿಕೆದಾರರನ್ನು ಗುರುತಿಸಲಾಗಿದ್ದು, ಮನೆ ಮನೆ ಭೇಟಿ ನೀಡಲು ಒಟ್ಟು 973 ತಂಡಗಳನ್ನು ರಚಿಸಲಾಗಿದೆ. ಒಟ್ಟು 85 ಮೇಲ್ವಿಚಾರಕರನ್ನು ಗುರುತಿಸಲಾಗಿದೆ. ಇವರುಗಳಿಗೆ ಈಗಾಗಲೇ ಜಿಲ್ಲಾ ಹಾಗೂ ತಾಲೂಕು ಮಟ್ಟದಿಂದ ತರಬೇತಿ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ವಿವರಿಸಿದರು.

ಬಿ. ಹರಿಶ್ಚಂದ್ರ ಆಚಾರ್ಯ ಸಂಸ್ಮರಣೆ: ಯೋಗೀಶ್ ಆಚಾರ್ ಅವರಿಗೆ ಸನ್ಮಾನ



ಮಂಗಳೂರು: ಎನ್.ಎಂ.ಪಿ.ಟಿ ಯ ನಿವೃತ್ತ ಅಸಿಸ್ಟೆಂಟ್ ಸೆಕ್ರೆಟರಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಕಾರ್ಯಕರ್ತ, ಸಹಚಿಂತನ ಮಾಸ ಪತ್ರಿಕೆಯ ಸಹ ಸಂಪಾದಕ ಮಣ್ಣಗುಡ್ಡೆ ಯೋಗೀಶ್ ಆಚಾರ್ ಅವರನ್ನು ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಪಟ್ಟೆ ಲಿಂಪ್ಪಾಚಾರ್ಯ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ದಿ. ಬಿ. ಹರಿಶ್ಚಂದ್ರ ಆಚಾರ್ಯ ಸಂಸ್ಮರಣಾ ಸಮಾರಂಭದಲ್ಲಿ ಗೌರವಿಸಿ ಅಭಿನಂದಿಸಲಾಯಿತು.

ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠಾಧೀಶ ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ಉಪಸ್ಥಿತಿ ವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಬಿ.ಹರಿಶ್ಚಂದ್ರ ಆಚಾರ್ಯ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಎಸ್.ವಿ ಆಚಾರ್ ವಹಿಸಿದ್ದರು.

ಪ್ರಮುಖರಾದ ಡಾ. ಜಿ. ರಾಮಕೃಷ್ಣ ಆಚಾರ್, ಮುಂಬೈಯ ಸ್ವರ್ಣೋದ್ಯಮಿ ಶ್ರೀಧರ ಆಚಾರ್ಯ, ಕೆ.ಉಮೇಶ್ ಆಚಾರ್ಯ, ಶ್ರೀಧರ ಆಚಾರ್ಯ, ಕೆ.ಎಸ್. ಪ್ರಭಾಕರ್, ರವೀಶ್ ಗಣಪಯ್ಯ ಆಚಾರ್ಯ, ಗೋಕುಲ್ ದಾಸ್ ನಾಯಕ್, ಶಾಂತಾರಾಮ ಆಚಾರ್ಯ ಕಿನ್ನಿಗೋಳಿ, ಅಲೆವೂರು ಯೋಗೀಶ್ ಆಚಾರ್ಯ, ಡಾ.ಎಸ್.ಆರ್. ಹರೀಶ್ ಆಚಾರ್ಯ, ಎ. ಉಪೇಂದ್ರ ಆಚಾರ್ಯ ಮೊದಲಾದವರು ಇದ್ದರು. ಡಾ. ಎಸ್. ಪಿ.ಗುರುದಾಸ್ ಸ್ವಾಗತಿಸಿ, ಕೋಟೆಕಾರ್ ಪ್ರಭಾಕರ ಆಚಾರ್ಯ ಸನ್ಮಾನ ಪತ್ರ ವಾಚಿಸಿದರು. ಸುಂದರ ಆಚಾರ್ಯ ಬೆಳುವಾಯಿ ವಂದಿಸಿ, ವಿದ್ವಾನ್ ಎನ್.ಆರ್ ದಾಮೋದರ ಶರ್ಮ ಬಾರ್ಕೂರು ನಿರೂಪಿಸಿದರು.

ಕಟೀಲು ಕೆಎಂಸಿ ಆಸ್ಪತ್ರೆಯಲ್ಲಿ 6ನೇ ವರ್ಷಾಚರಣೆ, ಆರೋಗ್ಯ ಶಿಬಿರ



ಕಟೀಲು: ದುರ್ಗಾ ಸಂಜೀವನಿ ಮಣಿಪಾಲ್ ಆಸ್ಪತ್ರೆ ಕಟೀಲು (ಕೆ.ಎಂ.ಸಿ.) ಆಸ್ಪತ್ರೆ ಕಟೀಲು 6ನೆ ವರ್ಷದ ಸಂಭ್ರಮವನ್ನು ಆಚರಿಸಲಾಯಿತು.

ಕಟೀಲು ಪರಿಸರದ ವೈದ್ಯರಿಗೆ ಆರೋಗ್ಯ ಶಿಬಿರ ಆಯೋಜಕರಿಗೆ ಮತ್ತು ಆಶಾ ಕಾರ್ಯಕರ್ತರಿಗೆ ಗೌರವ ನೀಡಲಾಯಿತು.

ಕಟೀಲು ಆಸ್ಪತ್ರೆ ನಡೆದು ಬಂದ ಹಾದಿ, ಗ್ರಾಮೀಣ ಭಾಗದ ಆಸ್ಪತ್ರೆ ಅಲ್ಪ ಅವಧಿಯಲ್ಲಿ ಸಾಧಿಸಿದ ಸಾಧನೆ ಮತ್ತು ಸೇವಾ ಚಟುವಟಿಕೆಯ ಮಾಹಿತಿಯನ್ನು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ ಶಿವಾನಂದ ಪ್ರಭು ನೀಡಿದರು. ಕಟೀಲು ದೇವಳದ ಪ್ರಧಾನ ಅನುವಂಶಿಕ ಅರ್ಚಕ ವೇದಮೂರ್ತಿ ಹರಿನಾರಾಯಣದಾಸ ಆಸ್ರಣ್ಣ, ಸಂಜೀವನಿ ಟ್ರಸ್ಟ್ ಸಂಸ್ಥಾಪಕ ಡಾ ಸುರೇಶ್ ರಾವ್, ಮಣಿಪಾಲ ಭೋದನಾ ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಅಧಿಕಾರಿ ಡಾ ಸುಧಾಕರ್ ಕಂಠಿಪುಡಿ, ಕೆಎಂಸಿ ಆಸ್ಪತ್ರೆ ಅತ್ತಾವರದ ವೈದ್ಯಕೀಯ ಅಧೀಕ್ಷಕ ಡಾ. ಚಕ್ರಪಾಣಿ ಎಂ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಿತೇಶ್ ಶೆಟ್ಟಿ ಎಕ್ಕಾರು ನಿರೂಪಿಸಿದರು ಕಟೀಲು ಕೆಎಂಸಿ ಆಸ್ಪತ್ರೆಯ ಸಿಬ್ಬಂದಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

ಕಡಬ ತಾಲೂಕು ಪ್ರಾಕೃತಿಕ ವಿಕೋಪ ಮುಂಜಾಗ್ರತಾ ಸಭೆ | ಶಿಥಿಲಗೊಂಡಿರುವ ಶಾಲಾ ಕೊಠಡಿಯಲ್ಲಿ ತರಗತಿ ನಡೆಸದಂತೆ ಸೂಚನೆ

ಮಳೆಗಾಲ ಎದುರಿಸಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಬೇಕು: ಮುರುಳ್ಯ

ಕಡಬ: ಮಳೆಗಾಲದ ಸಂದರ್ಭದಲ್ಲಿ ಈ ಹಿಂದೆ ಅವಘಡಗಳು ಸಂಭವಿಸಿರುವ ಪ್ರದೇಶಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವ ಮೂಲಕ ಮಳೆಗಾಲದ ತುರ್ತು ಸಂದರ್ಭ ಎದುರಿಸಲು ಸನ್ನದ್ಧರಾಗಿರಬೇಕು ಎಂದು ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಅವರು ಕಡಬ ತಾ.ಪಂ. ಸಭಾಂಗಣದಲ್ಲಿ ಜರಗಿದ ಕಡಬ ತಾಲೂಕು ಪ್ರಾಕೃತಿಕ ವಿಕೋಪ ಮುಂಜಾಗ್ರತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತುರ್ತು ಸಂದರ್ಭಗಳಲ್ಲಿ ಜನರು ನೆರವಿಗಾಗಿ ಸಂಪರ್ಕಿಸುವ ವೇಳೆ ಸಂಬಂಧಪಟ್ಟ ಅಧಿಕಾರಿಗಳು ಮೊಬೈಲ್ ಸಂಪರ್ಕಕ್ಕೆ ಲಭ್ಯರಿರಬೇಕು. ಸಂಪರ್ಕಕ್ಕೆ ಸಿಗದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಇಲಾಖೆಗಳಿಗೆ ಸೂಚಿಸಲಾಗುವುದು ಎಂದು ಎಚ್ಚರಿಸಿದ ಅವರು, ಪ್ರಾಕೃತಿಕ ವಿಕೋಪಗಳನ್ನು ಸಮರ್ಥವಾಗಿ ನಿರ್ವಹಿಸುವ ಸಲುವಾಗಿ ಇಲಾಖೆಗಳು ಅಗತ್ಯ ಸಲಕರಣೆ ಸಿದ್ಧಪಡಿಸಿ ಇರಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಡಬ ಪ.ಪಂ. ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ರಸ್ತೆ, ಚರಂಡಿ ಇತ್ಯಾದಿಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ಅವರು ಸೂಚಿಸಿದರು. ಸುಬ್ರಹ್ಮಣ್ಯ ಪ್ರದೇಶದಲ್ಲಿ ಹೆಲ್ತ್ ಇನ್‌ಸ್ಪೆಕ್ಟರ್ ಇಲ್ಲದೇ ಇರುವುದರಿಂದ ಕೆಲಸ ನಿರ್ವಹಿಸಲು ಸಮಸ್ಯೆ ಉಂಟಾಗುವ ಬಗ್ಗೆ ಮಾಹಿತಿ ನೀಡಿದ ವೈದ್ಯಾಧಿಕಾರಿ ಕಡಬ ಸರಕಾರಿ ಆಸ್ಪತ್ರೆಯ ಮುಂಭಾಗದಲ್ಲಿ ರಸ್ತೆ ಅಭಿವೃದ್ಧಿ ಕೆಲಸ ನಡೆದಿದ್ದರೂ ಚರಂಡಿ ವ್ಯವಸ್ಥೆ ಆಗದಿರುವ ಬಗ್ಗೆ ದೂರಿದರು. ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಲೋಕೋಪಯೋಗಿ ಇಂಜಿನಿಯರ್ ಭರವಸೆ ನೀಡಿದರು.

ಕಾಣಿಯೂರು ಗ್ರಾ.ಪಂ. ವ್ಯಾಪ್ತಿಯ ಬೈತ್ತಡ್ಕದಲ್ಲಿ ರಸ್ತೆ ಬದಿಯಲ್ಲಿ ಖಾಸಗಿಯವರು ಆವರಣ ಗೋಡೆ ರಚಿಸಿದ್ದರಿಂದ ಮಳೆನೀರು ಸರಾಗವಾಗಿ ಹರಿಯುತ್ತಿಲ್ಲ ಎನ್ನುವ ದೂರಿನ ಹಿನ್ನೆಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಇಚ್ಲಂಪಾಡಿ ಸೇತುವೆ ಬಳಿ ಎಚ್ಚರಿಕೆ ನಾಮಫಲಕ ಅಳವಡಿಸುವಂತೆ ಲೋಕೋಪಯೋಗಿ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು. ಎಡಮಂಗಲ ಹೊಸ್ಮಠ ರಸ್ತೆಯ ಹೊಸ್ಮಠ ಎಂಬಲ್ಲಿ ಕುಸಿಯುವ ಹಂತದಲ್ಲಿರುವ ಮೋರಿಯನ್ನು ಸರಿಪಡಿಸಲು ಶಾಸಕಿ ಸೂಚಿಸಿದರು.

ಮಳೆಗಾಲದಲ್ಲಿ ಶಿಥಿಲ ತರಗತಿ ಕೊಠಡಿಗಳಲ್ಲಿ ತರಗತಿ ನಡೆಸದೆ ಬದಲಿ ವ್ಯವಸ್ಥೆ ಮಾಡಿಕೊಳ್ಳುವಂತೆ ಶಿಕ್ಷಣ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು. ಅಗ್ನಿಶಾಮಕ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಬಗ್ಗೆ ಮಾಹಿತಿ ಪಡೆದುಕೊಂಡ ಶಾಸಕಿ ತುರ್ತು ಸಂದರ್ಭಗಳಲ್ಲಿ ಸ್ಥಳೀಯ ಸಂಸ್ಥೆಗಳ ಸಹಕಾರ ದೊಂದಿಗೆ ಕಾರ್ಯ ನಿರ್ವಹಿಸಲು ಸೂಚಿಸಿದರು. ಶಿರಾಡಿ ಗ್ರಾ.ಪಂ. ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಪರವರ ಕೊಟ್ಯ ಪ್ರದೇಶದ ರಸ್ತೆಯಲ್ಲಿ ಮಳೆನೀರು ಹರಿದು ಹೋಗದೆ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದನ್ನು ಸರಿಪಡಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಗ್ರಾ.ಪಂ. ಮತ್ತು ಪ.ಪಂ.ನಲ್ಲಿ ಟಾಸ್ಕ್ ಪೋರ್ಸ್ ಸಭೆಯನ್ನು ನಡೆಸಿ ಅಗತ್ಯ ವಿಷಯಗಳ ಬಗ್ಗೆ ಚರ್ಚಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

ತುರ್ತು ಸಂದರ್ಭ ಕಾಳಜಿ ಕೇಂದ್ರಗಳ ಅಗತ್ಯವಿದ್ದಲ್ಲಿ ಕಾಳಜಿ ಕೇಂದ್ರಕ್ಕಾಗಿ ಕಟ್ಟಡಗಳನ್ನು ಗುರುತಿಸಿಟ್ಟುಕೊಳ್ಳುವುದು, ಶಾಲಾ ಮಕ್ಕಳು ನದಿ ದಾಡುವ ಪ್ರದೇಶಗಳಲ್ಲಿ ಕಾಲುಸಂಕಗಳ ಬಳಿ ಎಚ್ಚರಿಕೆ ನಾಮಫಲಕ ಅಳವಡಿಸುವುದು ಸಹಿತ ಇತ್ಯಾದಿ ಸೂಚನೆಗಳನ್ನು ಶಾಸಕರು ಅಧಿಕಾರಿಗಳಿಗೆ ನೀಡಿದರು. ಕಡಬ ತಾ.ಪಂ. ಇಒ ನವೀನ್ ಭಂಡಾರಿ ಎಚ್. ಇದ್ದರು.

> **ಅಪಾಯಕಾರಿ ಮರ ತೆರವುಗೊಳಿಸಿ**
>
> ಅರಣ್ಯ ಇಲಾಖೆ ಮತ್ತು ಮೆಸ್ಕಾ ಅಧಿಕಾರಿಗಳು ರಸ್ತೆ ಬದಿಯ ಅಪಾಯಕಾರಿ ಮರಗಳನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಹೊಂದಾಣಿಕೆಯಿಂದ ಕೆಲಸ ಮಾಡುವಂತೆ ಶಾಸಕಿ ಸೂಚಿಸಿದರು. ಪ್ರಾಕೃತಿಕ ವಿಕೋಪದಿಂದ ಹಾನಿಗೊಂಡಿರುವ ಮನೆಗಳಿಗೆ ಕಂದಾಯ ಇಲಾಖೆಯ ಮುಖಾಂತರ ಅಂದಾಜು ಪಟ್ಟಿ ತಯಾರಿಸಲು ಪ್ರಸ್ತಾವನೆಗಳು ಬಂದಲ್ಲಿ ಕ್ರಮ ಕೈಗೊಳ್ಳುವುದಾಗಿ ಪಂಚಾಯತ್ ರಾಜ್ ಇಂಜಿನಿಯರ್ ಸಭೆಗೆ ತಿಳಿಸಿದರು.

ಸುತ್ತಮುತ್ತ

ಮೇ 24: ಶ್ರವಣ ತಪಾಸಣೆ, ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ

ಉಪ್ಪಳ: ವಿಶ್ವ ಹಿಂದೂ ಪರಿಷತ್ ಉಪಖಂಡ ಸಮಿತಿ ಕೋಡಿಬೈಲ್ ಹಾಗೂ ಓಂ ಶಕ್ತಿ ಫ್ರೆಂಡ್ಸ್ ಕೋಡಿಬೈಲ್ ಇದರ ಆಶ್ರಯದಲ್ಲಿ ಟೀಮ್ ಈಶ್ವರ ಮಲ್ಪೆ ಸಹಯೋಗದೊಂದಿಗೆ ಶ್ರವಣದ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಮೇ 24ರಂದು ಬೆಳಗ್ಗೆ 9.30ಕ್ಕೆ ಕೋಡಿಬೈಲ್ ನವೋದಯ ಎಎಲ್‌ಪಿ ಶಾಲೆಯಲ್ಲಿ ನಡೆಯಲಿದೆ. ಟೀಮ್ ಈಶ್ವರ್ ಮಲ್ಪೆ ಶ್ರವಣ ಯಂತ್ರದ ಶೇಕಡಾ 40ರಷ್ಟು ಮೊತ್ತ ಪಾವತಿಸಲಿದೆ. ನೋಂದಾವಣೆ ಕಡ್ಡಾಯವಾಗಿದ್ದು ಮೊದಲು ನೋಂದಾಯಿಸುವ 30 ಮಂದಿ ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ನೋಂದಾವಣೆ , ಮಾಹಿತಿಗೆ ಮೊ.ಸಂ.8951804399 ಗೆ ಸಂಪರ್ಕಿಸಬಹುದು. ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಅನುಭವ ಹೊಂದಿದ ವೈದ್ಯರು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಿರಿಯರಿಗೆ ಮೊದಲ ಆದ್ಯತೆ ನೀಡಲಾಗುವುದು. ಶ್ರವಣ ಪರೀಕ್ಷೆಯ ಯಾವುದಾದರೂ ಹಳೆಯ ಚೀಟಿ ಇದ್ದರೆ ತರಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸೌಲಭ್ಯದ ಪ್ರಯೋಜನ ಪಡೆದುಕೊಳ್ಳಬೇಕಾಗಿದೆ.

ಕಾಸರಗೋಡಿನ 42ನೇ ವಾರ್ಷಿಕೋತ್ಸವ: ಜಿಲ್ಲಾಡಳಿತದಿಂದ ಆಚರಣೆ

ಕಾಸರಗೋಡು: ಕಾಸರಗೋಡು ಜಿಲ್ಲೆಯ 42ನೇ ವಾರ್ಷಿಕೋತ್ಸವದ ಅಂಗವಾಗಿ ಜಿಲ್ಲಾಡಳಿತ, ಕಲೆಕ್ಟರೇಟ್ ಅಕ್ಷರ ಗ್ರಂಥಾಲಯ ಮತ್ತು ಜಿಲ್ಲಾ ಮಾಹಿತಿ ಕಚೇರಿ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಕಾಸರಗೋಡು ಜಿಲ್ಲೆಯು ಮೇ 24 ರಂದು ತನ್ನ ರಚನೆಯ 42 ವರ್ಷಗಳನ್ನು ಪೂರೈಸುತ್ತಿದೆ. ಈ ನಿಟ್ಟಿನಲ್ಲಿ ಡಿಟಿಪಿಸಿ ನೇತೃತ್ವದಲ್ಲಿ ಮೇ 24 ರಂದು ನೆಲ್ಲಿಕುನ್ನು ಬೀಚ್ ರನ್ ನಡೆಯಲಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮೇ 23ರಂದು ಬೆಳಗ್ಗೆ 11ಗಂಟೆಗೆ ಕಲೆಕ್ಟರೇಟ್ ಆವರಣದಲ್ಲಿ ಮಾವಿನ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಮಾಹಿತಿ ಕಚೇರಿಯ ಪಿಆರ್ ಚೇಂಬರ್‌ನಲ್ಲಿ ಎಡಿಎಂ ಕೆ.ವಿ.ಶ್ರುತಿ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧಿಕಾರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸಿವಿಲ್ ಸ್ಟೇಷನ್‌ನ ನೌಕರರು ಭಾಗವಹಿಸಲಿದ್ದಾರೆ.

ಶಾಲಾ ಬಸ್‌ಗಳ ಸುರಕ್ಷತಾ ತಪಾಸಣೆ ಆರಂಭ

ಕಾಸರಗೋಡು: ಶಾಲೆಗಳ ಆರಂಭಕ್ಕೆ ಸಂಬಂಸಿದಂತೆ ಕಾಞಂಗಾಡು ಉಪ ಆರ್‌ಟಿಒ ಕಚೇರಿ ವ್ಯಾಪ್ತಿಯ ಶಾಲೆಗಳಲ್ಲಿ ವಾಹನಗಳ ತಪಾಸಣೆ ಮತ್ತು ಸ್ಟಿಕ್ಕರ್ ಅಂಟಿಸುವ ಕಾರ್ಯ ಆರಂಭವಾಗಿದೆ. ಗುರುವಾರ ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆದ ಶಾಲಾ ವಾಹನಗಳ ತಪಾಸಣೆಯಲ್ಲಿ 80 ವಾಹನಗಳ ತಪಾಸಣೆ ಕೈಗೊಳ್ಳಲಾಯಿತು. ವಿವಿಧ ಕಾರಣಗಳಿಗಾಗಿ ಆರು ವಾಹನಗಳನ್ನು ಹಿಂತಿರುಗಿಸಲಾಗಿದೆ.

ತಾಲೂಕಿನಲ್ಲಿ ತಪಾಸಣೆಗೆ ಹಾಜರಾಗದ ಇತರ ಶಾಲಾ ವಾಹನಗಳನ್ನು ಮೇ 25 ರಂದು ಬೆಳಗ್ಗೆ 9 ಗಂಟೆಗೆ ದುರ್ಗಾ ಹೈಯರ್ ಸೆಕೆಂಡರಿ ಶಾಲಾ ಮೈದಾನದಲ್ಲಿ ತಪಾಸಣೆಗೆ ಹಾಜರುಪಡಿಸಬೇಕೆಂದು ಕಾಞಂಗಾಡು ಜಂಟಿ ಆರ್‌ಟಿಒ ತಿಳಿಸಿದ್ದಾರೆ. ಕಾಞಂಗಾಡು ಜಂಟಿ ಆರ್‌ಟಿಒ ಪ್ರಭಾರಿ ಪಿ.ವಿ.ರತೀಶ್, ಮೋಟಾರ್ ವಾಹನ ನಿರೀಕ್ಷಕ ವಿ.ಪ್ರಜಿತ್, ಸಹಾಯಕ ಮೋಟಾರ್ ವಾಹನ ನಿರೀಕ್ಷಕರಾದ ಎಂ.ವಿ.ಪ್ರಭಾರನ್, ಮ್ಯಾಥ್ಯೂ ವರ್ಗೀಸ್, ಕಚೇರಿ ಸಿಬ್ಬಂದಿ ಕೆ.ವಿ.ಮಿನಿ, ಸಿ.ವಿ.ಭವ್ಯಾ, ಕೆ.ವಿ.ಕೃಷ್ಣಕುಮಾರ್ ವಾಹನ ತಪಾಸಣೆಯಲ್ಲಿ ಭಾಗವಹಿಸಿದ್ದರು.

ಪ್ರಯೋಗಾಲಯ ತಂತ್ರಜ್ಞ- ಸ್ವಚ್ಛತಾ ಸಿಬ್ಬಂದಿ ಹುದ್ದೆಗಳು

ಕಾಸರಗೋಡು: ಪೆರಿಯ ಸಿಎಚ್‌ಸಿಯಲ್ಲಿ ತಾತ್ಕಾಲಿಕವಾಗಿ ಲ್ಯಾಬ್ ತಂತ್ರಜ್ಞರು ಮತ್ತು ಶುಚಿಗೊಳಿಸುವ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಮೇ 28 ರಂದು ಬೆಳಗ್ಗೆ 10.30ಕ್ಕೆ ಸಂದರ್ಶನ ನಡೆಯಲಿದೆ. ಪ್ರಯೋಗಾಲಯ ತಂತ್ರಜ್ಞ ಅರ್ಹತೆ – ಬಿಎಸ್‌ಸಿ, ಎಂಎಲ್‌ಟಿ/ ಡಿಎಂಎಲ್‌ಟಿ, ಪ್ಯಾರಾಮೆಡಿಕಲ್ ಕೌನ್ಸಿಲ್ ನೋಂದಣಿ ಆಗಿದೆ. ಸ್ವಚ್ಛತಾ ಸಿಬ್ಬಂದಿ ಅರ್ಹತೆ – 7ನೇ ತರಗತಿ ಉತ್ತೀರ್ಣ, ಹೆಚ್ಚಿನ ದೈಹಿಕ ಸಾಮರ್ಥ್ಯ ಆಗಿದೆ. ಸಂದರ್ಶನದಲ್ಲಿ ಭಾಗವಹಿಸುವವರು ತಮ್ಮ ವಿದ್ಯಾರ್ಹತೆ ಮತ್ತು ಕೆಲಸದ ಅನುಭವವನ್ನು ಸಾಬೀತುಪಡಿಸುವ ಮೂಲ ಪ್ರಮಾಣಪತ್ರಗಳನ್ನು ತರಬೇಕು. ಹೆಚ್ಚಿನ ಮಾಹಿತಿಗಾಗಿ ಪೆರಿಯ ಸಿಎಚ್ ಸಿ ಕಚೇರಿಯನ್ನು 8848079174 ಅಥವಾ 94400684230 ಸಂಪರ್ಕಿಸಬಹುದು.

ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ

ಕಾಸರಗೋಡು: ಮಂಜೇಶ್ವರ ಜಿಪಿಎಂ ಸರಕಾರಿ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ವಾಣಿಜ್ಯ ವಿಷಯದ ತಾತ್ಕಾಲಿಕ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 26 ರಂದು ಬೆಳಗ್ಗೆ 11 ಗಂಟೆಗೆ ಕಾಲೇಜಿನಲ್ಲಿ ನಡೆಯಲಿದೆ. ಕಾಲೇಜು ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಿಸಿದ ಫಲಕದಲ್ಲಿ ಸೇರಿಸಲಾದವರು ತಮ್ಮ ಜನ್ಮ ದಿನಾಂಕ, ಶೈಕ್ಷಣಿಕ ಅರ್ಹತೆ, ಕೆಲಸದ ಅನುಭವ, ಅವುಗಳ ಪ್ರತಿಗಳು ಮತ್ತು ಫಲಕದಲ್ಲಿ ಸೇರಿಸಲಾದ ನೋಂದಣಿ ಸಂಖ್ಯೆಯನ್ನು ಸಾಬೀತುಪಡಿಸುವ ಪ್ರಮಾಣಪತ್ರಗಳೊಂದಿಗೆ ಪ್ರಾಂಶುಪಾಲರ ಮುಂದೆ ಹಾಜರಾಗಬೇಕು. ನೇಮಕಾತಿಗೆ ಅರ್ಹತೆ ಯುಜಿಸಿ ನೆಟ್ ಮತ್ತು ಸಂಬಂಧಿತ ವಿಷಯಗಳಲ್ಲಿ ಪಿಎಚ್‌ಡಿ. ಯುಜಿಸಿ ನೆಟ್ ಅರ್ಹತೆ ಪಡೆದ ಅಭ್ಯರ್ಥಿಗಳ ಅಭಾವವಿದ್ದಲ್ಲಿ ಶೇಕಡಾ 55 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳನ್ನು ಸಹ ಪರಿಗಣಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ 9188900214 ಕರೆ ಮಾಡಬಹುದು.

ಕಾಸರಗೋಡಿನ ರೈಲ್ವೆ ಪ್ರಯಾಣಿಕರ ಪ್ರಯಾಣ ಸಮಸ್ಯೆ ಪರಿಹರಿಸಲು ಮುಂದಾದ ಜಿಲ್ಲಾಡಳಿತ

18 ರೈಲು ಸಂಚಾರ ವಿಸ್ತರಣೆ, ಸೂಪರ್‌ಫಾಸ್ಟ್ ನಿಲುಗಡೆಗೆ ಪತ್ರ

ಕಾಸರಗೋಡು: ಉತ್ತರ ಕೇರಳದ ಜನರು ದೀರ್ಘ ಕಾಲದಿಂದ ಎದುರಿಸುತ್ತಿರುವ ರೈಲ್ವೆ ಪ್ರಯಾಣದ ತೊಂದರೆ ಪರಿಹರಿಸಲು ಕಾಸರಗೋಡು ಜಿಲ್ಲಾಡಳಿತವು ಸೂಕ್ತ ಕ್ರಮ ಕೈಗೊಂಡಿದೆ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ರೈಲ್ವೆ ಅಧಿಕಾರಿಗಳಿಗೆ ಪತ್ರ ಕಳುಹಿಸಿದ್ದಾರೆ.

ಕಣ್ಣೂರು, ಮಂಗಳೂರು ಸೆಂಟ್ರಲ್ ಮತ್ತು ಮಂಗಳೂರು ಜಂಕ್ಷನ್‌ನಲ್ಲಿ ಸೇವೆಗಳನ್ನು ಸ್ಥಗಿತಗೊಳಿಸುತ್ತಿರುವ ಮುಖ್ಯ ರೈಲುಗಳನ್ನು ಕಾಸರಗೋಡಿಗೆ ವಿಸ್ತರಿಸಲು ಮತ್ತು ಸ್ಥಗಿತಗೊಳಿಸಲಾದ ಪ್ರಯಾಣಿಕರ ಸೇವೆಗಳ ಪುನರಾರಂಭಿಸುವಂತೆ ಜಿಲ್ಲಾಧಿಕಾರಿ ರೈಲ್ವೆಗೆ ಪತ್ರ ಬರೆದಿದ್ದಾರೆ. ಈ ಮಧ್ಯೆ ಪಾಲಕ್ಕಾಡು ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ) ಮಧುಕರ್ ರಾವತ್ತರ್‌ಗೆ ಕಳುಹಿಸಲಾದ ಪತ್ರದಲ್ಲಿ ಕಾಸರಗೋಡು ಜಿಲ್ಲೆಯು ಪ್ರಸ್ತುತ ಎದುರಿಸುತ್ತಿರುವ ತೀವ್ರ ಪ್ರಯಾಣದ ತೊಂದರೆಗಳನ್ನು ವಿವರಿಸಲಾಗಿದೆ.

ಕೇರಳದ ಉತ್ತರದ ಗಡಿ ಜಿಲ್ಲೆ ಮತ್ತು ಕರ್ನಾಟಕಕ್ಕೆ ಸಂಪರ್ಕಿಸುವ ಮುಖ್ಯ ದ್ವಾರವಾಗಿರುವ ಕಾಸರಗೋಡು ಜಿಲ್ಲೆ ರೈಲುಗಳ ಸೇವಾ ವ್ಯವಸ್ಥೆಯಲ್ಲಿನ



ನ್ಯೂನತೆಗಳಿಂದ ಸಂಕಷ್ಟ ಅನುಭವಿಸುತ್ತಿದೆ. ದಕ್ಷಿಣ ಕೇರಳದಿಂದ ಹೊರಡುವ ಅನೇಕ ರೈಲುಗಳು ಕಣ್ಣೂರಿನಲ್ಲಿ ತಮ್ಮ ಸೇವೆಗಳನ್ನು ಕೊನೆಗೊಳಿಸುತ್ತಿವೆ. ಅದೇ ರೀತಿ ಉತ್ತರ ಮತ್ತು ಪಶ್ಚಿಮ ಪ್ರದೇಶಗಳ ಸೇವೆಗಳನ್ನು ಸಹ ಮಂಗಳೂರಿನಲ್ಲಿ ನಿಲ್ಲಿಸಲಾಗುತ್ತಿದೆ. ಇದರಿಂದ ಕಾಸರಗೋಡಿಗೆ ಬರಬೇಕಾದ ವಲಸಿಗರು, ವಿದ್ಯಾರ್ಥಿಗಳು, ರೋಗಿಗಳು, ಯಾತ್ರಿಕರು ಸೇರಿದಂತೆ ಪ್ರಯಾಣಿಕರು ರೈಲುಗಳ ಕೊರತೆಯಿಂದ ಮಧ್ಯರಾತ್ರಿ, ಮುಂಜಾನೆ ಮಧ್ಯಂತರ ನಿಲ್ದಾಣಗಳಲ್ಲಿ ಗಂಟೆಗಟ್ಟಲೆ ಕಾಯಬೇಕಾಗಿದೆ.

ಮೇ 16 ರಂದು ರೈಲ್ವೆ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ಕಲೆಕ್ಟರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಆಧಾರದ ಮೇಲೆ ಪಾಲಕ್ಕಾಡು ವಿಭಾಗೀಯ ವ್ಯವಸ್ಥಾಪಕರಿಗೆ ಸಲಹೆಗಳನ್ನು ಸಲ್ಲಿಸಲಾಗಿದೆ.

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಉತ್ತರ ಕೇರಳದ ಜನರು ವರ್ಷಗಳಿಂದ ಎದುರಿಸುತ್ತಿರುವ ತೀವ್ರ ರೈಲ್ವೆ ಪ್ರಯಾಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಮಗ್ರ ಸಲಹೆಗಳೊಂದಿಗೆ ಸಮಗ್ರ ಮಾಸ್ಟರ್ ಪ್ಲಾನ್‌ನ್ನು ಸಿದ್ಧಪಡಿಸಿದ್ದಾರೆ.

ಪರಿಣಾಮ ಬೀರಿದೆ

ಕಾಸರಗೋಡು ರೈಲು ನಿಲ್ದಾಣದಲ್ಲಿ ಪ್ರಮುಖ ರೈಲುಗಳಿಗೆ ನಿಲ್ದಾಣಗಳ ಕೊರತೆ , ಹಿಂದಿನ ಕೆಲವು ಪ್ರಯಾಣಿಕ ಸೇವೆ ಸ್ಥಗಿತಗೊಳಿಸಿರುವುದು ಜನರ ದೈನಂದಿನ ಪ್ರಯಾಣ , ಸ್ಥಳೀಯ ಅಭಿವೃದ್ಧಿ ಮೇಲೆ ತೀವ್ರ ಪರಿಣಾಮ ಬೀರಿದೆ.

ಸೂಪರ್ ಫಾಸ್ಟ್ ರೈಲುಗಳಿಗೆ ನಿಲುಗಡೆ ನೀಡಬೇಕು

ಕಾಸರಗೋಡು ಮೂಲಕ ಹಾದು ಹೋದರೂ ಪ್ರಸ್ತುತ ನಿಲುಗಡೆಗೆ ಅವಕಾಶವಿಲ್ಲದ 3 ಪ್ರಮುಖ ಸೂಪರ್ ಫಾಸ್ಟ್ ರೈಲುಗಳಿಗೆ ತಕ್ಷಣ ನಿಲುಗಡೆಗೆ ಅವಕಾಶ ನೀಡಬೇಕೆಂದು ಜಿಲ್ಲಾಡಳಿತ ನಿರ್ದೇಶಿಸಿದೆ. ನಿಲುಗಡೆಗೆ ವಿನಂತಿಸಿದ ರೈಲುಗಳು 22653 ತಿರುವನಂತ ಪುರ ಸೆಂಟ್ರಲ್ ಸೂಪರ್ ಫಾಸ್ಟ್, 22655 ಎರ್ನಾಕುಳಂ ಜಂಕ್ಷನ್ ಸೂಪರ್ ಫಾಸ್ಟ್ ಮತ್ತು 22476 ಕೊಯಮತ್ತೂರು ಜಂಕ್ಷನ್ ಸೂಪರ್ ಫಾಸ್ಟ್ ಆಗಿದೆ. ಸಮೀಪದ ರೈಲು ನಿಲ್ದಾಣಗಳಲ್ಲಿ ನಿಲುಗಡೆಗೊಂಡರೂ ಕಾಸರಗೋಡು ನಿಲ್ದಾಣ ನಿರ್ಲಕ್ಷಿಸಬಾರದೆಂದು ಪತ್ರದಲ್ಲಿ ಸೂಚಿಸಲಾಗಿದೆ.


ಕಣ್ಣೂರು ಮತ್ತು ಮಂಗಳೂರಿನಲ್ಲಿ ತಮ್ಮ ಸೇವೆಗಳ ಕೊನೆಗೊಳಿಸುತ್ತಿರುವ 18 ಪ್ರಮುಖ ರೈಲುಗಳನ್ನು ಕಾಸರಗೋಡಿಗೆ ವಿಸ್ತರಿಸ ಬೇಕು ಮತ್ತು ಕಾಸರಗೋಡು ನಿಲ್ದಾಣದ ಮೂಲಕ ಹಾದು ಹೋಗುವ ಪ್ರಮುಖ

ಪ್ರಮುಖ ಸೂಚನೆ, ಸಲಹೆಗಳು

ಕಣ್ಣೂರು ಮತ್ತು ಮಂಗಳೂರಿನಲ್ಲಿ ಸೇವೆ ಕೊನೆಗೊಳಿಸುವ ಪ್ರಮುಖ ರೈಲುಗಳನ್ನು ಕಾಸರಗೋಡಿಗೆ ವಿಸ್ತರಿಸುವುದು ಮತ್ತು ಪ್ರಸ್ತುತ ಕಾಸರಗೋಡಿನಲ್ಲಿ ನಿಲುಗಡೆ ಇಲ್ಲದ ಪ್ರಮುಖ ರೈಲುಗಳ ನಿಲುಗಡೆಗೆ ಅವಕಾಶ ನೀಡಬೇಕು. ಈ ಹಿಂದೆ ಇದ್ದ ಬೈಂದೂರು - ಕಾಸರಗೋಡು ಪ್ಯಾಸೆಂಜರ್ ರೈಲು ಸೇವೆ ಪುನರಾರಂಭಿಸುವಂತೆ ಜಿಲ್ಲಾಧಿಕಾರಿಗಳು ಕೋರಿದ್ದಾರೆ. ಪೂರ್ಣ ಪ್ರಮಾಣದಲ್ಲಿ ಇದು ಸಾಧ್ಯವಾಗದಿದ್ದರೆ ಇದನ್ನು ಕಣ್ಣೂರು/ಕೋಝಿಕೋಡು - ಮಂಗಳೂರು ಪ್ಯಾಸೆಂಜರ್ ರೈಲು ಎಂದು ಮರುಸಂಘಟಿಸಬಹುದು. ಪರ್ಯಾಯವಾಗಿ ದಕ್ಷಿಣ ಭಾರತದ ಎರಡು ಪ್ರಮುಖ ಯಾತ್ರಾ ಕೇಂದ್ರ ಸಂಪರ್ಕಿಸುವ ಗುರುವಾಯೂರು - ಮೂಕಾಂಬಿಕಾ ಎಕ್ಸ್‌ಪ್ರೆಸ್ ಆಗಿ ಪರಿವರ್ತಿಸಿದರೆ ಯಾತ್ರಾರ್ಥಿಗಳು ಮತ್ತು ಪ್ರವಾಸಿಗರಿಗೆ ಇದು ದೊಡ್ಡ ವರದಾನವಾಗಲಿದೆ.

ಸೂಪರ್‌ಫಾಸ್ಟ್ ರೈಲುಗಳಿಗೆ ನಿಲುಗಡೆಗೆ ಅವಕಾಶ ನೀಡಬೇಕು ಎಂದು ಕೋರಿ ಜಿಲ್ಲಾಧಿಕಾರಿಗಳು ರೈಲ್ವೆ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎಸ್ಸೆಸ್ಸೆಲ್ಸಿ: ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ ಪ್ರೌಢಶಾಲೆಗೆ ಶೇಕಡಾ 100 ಫಲಿತಾಂಶ



ಬದಿಯಡ್ಕ: ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇಕಡಾ 100 ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ ಎಲ್ಲಾ 96 ಮಂದಿ ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. 12 ಮಂದಿ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಹಾಗೂ ಮೂರು ಮಂದಿ ವಿದ್ಯಾರ್ಥಿಗಳು 9 ವಿಷಯಗಳಲ್ಲಿ 'ಎ' ಪ್ಲಸ್ ಪಡೆದಿರುತ್ತಾರೆ. ವಿದ್ಯಾರ್ಥಿಗಳಾದ ಮನ್ವಿತ್ ಬಿ.ಎಸ್., ಸನತ್ ರಾಜ್ ವಿ.ಆರ್., ದಿಗಂತ್ ಕೆ., ಅಭಿಲಾಷ್ ಎನ್., ಶರಣ್ಯ ಆರ್.ಎಸ್., ಯಶಸ್ವಿ ಪಿ., ಶ್ರೀನಿಕಾ ವಿ., ಕೃತಿಕಾ, ದೃತಶ್ರೀ ಎಂ.ಆರ್., ಧನ್ಯಶ್ರೀ ಆರ್., ಧನ್ಯಶ್ರೀ ಕೆ., ಅಂಕಿತಾ ಅವರು 'ಎ' ಪ್ಲಸ್ ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳಾದ ವಿನ್ಸನ್ ವಿನೀಶ್ ಕ್ರಾಸ್ತಾ, ಅಕ್ಷಯ್ ಟಿ., ಸಿಂಚನಾ ಅವರು 9 ವಿಷಯಗಳಲ್ಲಿ ಎ ಪ್ಲಸ್ ಪಡೆದು ಕೀರ್ತಿಯನ್ನು ಗಳಿಸಿದ್ದಾರೆ.

ಹೊಸಂಗಡಿ ರೈಲ್ವೆ ಗೇಟ್ ಬಳಿ ರಸ್ತೆಯಲ್ಲೇ ಮಳೆನೀರು ಸಂಗ್ರಹ: ಸಾರ್ವಜನಿಕರಿಗೆ ಸಮಸ್ಯೆ

ಮಂಜೇಶ್ವರ: ಹೊಸಂಗಡಿ ರೈಲ್ವೆ ಗೇಟ್ ಹೊಂದಿಕೊಂಡಿರುವ ರಸ್ತೆಯನ್ನು ನವೀಕರಣಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಆದರೆ ಈ ರಸ್ತೆಯಲ್ಲಿ ಮಳೆ ನೀರು ಕಟ್ಟಿನಿಲ್ಲುವುದು ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿರುವುದಾಗಿದೂರಲಾಗಿದೆ. ಎರಡು ವರ್ಷದ ಹಿಂದೆ ಇಂಟರ್‌ಲಾಕ್ ಅಳವಡಿಸಿ ರಸ್ತೆ ದುರಸ್ತಿಗೊಳಿಸಲಾಗಿದೆ. ಆದರೆ ಸಮತಟ್ಟುಗೊಳ್ಳದ ಕಾರಣ ಮಳೆನೀರು ರಸ್ತೆಯಲ್ಲಿ ಸಂಗ್ರಹಗೊಂಡು ವಾಹನ ಸಂಚಾರ ವೇಳೆ



ಪಾದಚಾರಿಗಳ ಮೇಲೆ ಕೆಸರು ನೀರು ಎರಚುತ್ತಿರುವುದು ಸಮಸ್ಯೆಗೆ ಕಾರಣವಾಗಿದೆ. ಗೇಟ್ ಹಾಕಿದ ವೇಳೆ ವಾಹನಗಳು ನೀರಿನಲ್ಲಿ ನಿಲ್ಲಬೇಕಾಗಿದೆ. ಕಳಪೆ ಕಾಮಗಾರಿ ಕಾರಣವೆಂದು ನಾಗರಿಕರು ದೂರಿದ್ದಾರೆ.

ಕಾಞಂಗಾಡಿನಲ್ಲಿ ತ್ಯಾಜ್ಯ ಮುಕ್ತಗೊಳಿಸಲು ಹೊಸ ಯೋಜನೆ: 15 ಕಸದ ತೊಟ್ಟಿ ಸ್ಥಾಪನೆ

ಕಾಸರಗೋಡು: ಕಾಞಂಗಾಡು ನಗರಸಭಾ ವ್ಯಾಪ್ತಿಯಲ್ಲಿನ ತ್ಯಾಜ್ಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಮಹತ್ತರ ಉದ್ದೇಶದಿಂದ ಕಾಞಂಗಾಡು ನಗರದ ಪ್ರಮುಖ ಕೇಂದ್ರಗಳಲ್ಲಿ 15 ಹೊಸ ತ್ಯಾಜ್ಯ ತೊಟ್ಟಿಗಳ ಸ್ಥಾಪಿಸಲಾಗಿದೆ.

ಸಾರ್ವಜನಿಕರು ತ್ಯಾಜ್ಯವನ್ನು ವೈಜ್ಞಾನಿಕ ವಾಗಿ ವರ್ಗೀಕರಿಸಲು ಮತ್ತು ಸಂಗ್ರಹಿಸಲು ಸೂಕ್ತ ಸೌಲಭ್ಯ ಒದಗಿಸುವ ಗುರಿಯನ್ನು ನಗರಸಭೆ ಹೊಂದಿದೆ. ಪ್ರತಿಯೊಂದು ತೊಟ್ಟಿಯಲ್ಲಿ 2 ವಿಭಾಗಗಳಿದ್ದು, ಸಾವಯವ ತ್ಯಾಜ್ಯ, ಅಜೈವಿಕ ತ್ಯಾಜ್ಯ ಪ್ರತ್ಯೇಕ ಸಂಗ್ರಹಿಸಬಹುದು.

ಕಸದ ತೊಟ್ಟಿಗಳ ಸ್ಥಾಪನೆ ಉದ್ಘಾಟಿಸಿ ಮಾತನಾಡಿದ ನಗರಸಭಾ ಅಧ್ಯಕ್ಷ ವಿ.ವಿ. ರಮೇಶನ್ , ಪರಿಸರ ಸಂರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು ಮತ್ತು ಮುಂಬರುವ ಪೀಳಿಗೆಗೆ ಪ್ರಕೃತಿಯನ್ನು ಸಂರಕ್ಷಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸಾಮೂಹಿಕವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.



ಮೊದಲ ಹಂತದಲ್ಲಿ 15 ಪೆಟ್ಟಿಗೆ ಸ್ಥಾಪನೆ

ಕಾಞಂಗಾಡು ನಗರದಲ್ಲಿ ಲೋಹದಿಂದ ಮಾಡಿದ 35 ಪೆಟ್ಟಿಗೆಗಳ ಸ್ಥಾಪಿಸಲಾಗುವುದು. ಅವುಗಳಲ್ಲಿ 15 ಪೆಟ್ಟಿಗೆಗಳನ್ನು ಮೊದಲ ಹಂತವಾಗಿ ಸ್ಥಾಪಿಸಲಾಗಿದೆ. ಮುಂದಿನ ದಿನಗಳಲ್ಲಿ ನಗರದ ವಿವಿಧ ಭಾಗಗಳಲ್ಲಿ ಉಳಿದವುಗಳನ್ನು ಸ್ಥಾಪಿಸಲಾಗುವುದು .

● ವಿ.ವಿ.ರಮೇಶನ್

ರಾಷ್ಟ್ರೀಯ ಥ್ರೋಬಾಲ್: ಟ್ರಯಲ್ಸ್‌ಗೆ ಬೆಳ್ಳೂರಿನ ಬಾಲಪ್ರತಿಭೆ ಆಶಿಶ್ ಆಯ್ಕೆ

ಬದಿಯಡ್ಕ: ಮಧ್ಯಪ್ರದೇಶದ ಇಂದೋರ್‌ನಲ್ಲಿ ಮೇ 21ರಿಂದ 23ರವರೆಗೆ ನಡೆಯಲಿರುವ 31ನೇ ರಾಷ್ಟ್ರೀಯ ಸಬ್ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಶಿಪ್ ಮತ್ತು 35ನೇ ಫೆಡರೇಶನ್ ಕಪ್ ಸೀನಿಯರ್ ಥ್ರೋಬಾಲ್ ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗೆ ಕೇರಳ ರಾಜ್ಯ ತಂಡವನ್ನು ಪ್ರತಿನಿಧಿಸುವ ಮುಕ್ತ ಆಯ್ಕೆ ಟ್ರಯಲ್ಸ್‌ಗೆ ಕಾಸರಗೋಡು ಜಿಲ್ಲೆಯ ಆಶಿಶ್ ಕೆ.ಪಿ. ಅರ್ಹತೆ ಪಡೆದಿದ್ದಾರೆ.

ರಾಷ್ಟ್ರೀಯ ತ್ರೋಬಾಲ್ ಫೆಡರೇಶನ್‌ನ ಅಧಿಕೃತ ಪ್ರಕಟಣೆಯ ಬೆನ್ನಲ್ಲೇ ಅಲ್ಪಾವಧಿಯಲ್ಲಿ ರಾಜ್ಯ ಚಾಂಪಿಯನ್‌ಶಿಪ್‌ಗಳನ್ನು ನಡೆಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಕೇರಳ ಥ್ರೋಬಾಲ್ ಅಸೋಸಿಯೇಶನ್ ಮುಕ್ತ ಆಯ್ಕೆ ಪ್ರಕ್ರಿಯೆ ಹಮ್ಮಿಕೊಂಡಿತ್ತು. ಎರ್ನಾಕುಳಂನ ಫೋರ್ಟ್ ಕೊಚ್ಚಿಯಲ್ಲಿ ನಡೆದ ಈ ಮಹತ್ವದ ಆಯ್ಕೆ ಶಿಬಿರದಲ್ಲಿ ಪಾಲ್ಗೊಳ್ಳಲು ಕಾಸರಗೋಡು ಜಿಲ್ಲೆಯಿಂದ ಅತ್ಯುತ್ತಮ ಕ್ರೀಡಾ ಪ್ರದರ್ಶನ ತೋರಿದ ಆಶಿಶ್ ಕೆ.ಪಿ. ಕಣಕ್ಕಿಳಿದಿದ್ದಾರೆ.

ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ ಪ್ರೌಢ ಶಾಲೆ ವಿದ್ಯಾರ್ಥಿಯಾಗಿರುವ ಆಶಿಶ್ ಬೆಳ್ಳೂರು ನಿವಾಸಿ ಪ್ರಸಾದ್ ಕೆ. ಕಲ್ಲೇರಿಮೂಲೆಯವರ ಪುತ್ರ.

ರಾಷ್ಟ್ರೀಯ ಚಾಂಪಿಯನ್‌ಶಿಪ್‌ನ ಸಬ್ ಜೂನಿಯರ್, ಸೀನಿಯರ್ ಫೆಡರೇಶನ್ ಕಪ್ ಎರಡರಲ್ಲೂ ಕೇರಳದ ಪರವಾಗಿ ಕಣಕ್ಕಿಳಿಯುವ ಸದಾವಕಾಶ ಈ ಪ್ರತಿಭೆಗೆ ಒಲಿದು ಬಂದಿದ್ದು, ಗಡಿನಾಡಿನ ಕ್ರೀಡಾ ವಲಯದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತಹ ಸಾಧನೆ. ಪ್ರಸ್ತುತ ಆಯ್ಕೆ ಶಿಬಿರದ ಅಂತಿಮ ಪ್ರಕ್ರಿಯೆಗಳು ಮುಕ್ತಾಯದ ಹಂತದಲ್ಲಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಆಶಿಶ್ ಕೇರಳ ತಂಡಕ್ಕೆ, ಜಿಲ್ಲೆಗೆ ಕೀರ್ತಿ ತರಲಿದ್ದಾರೆಂಬ ಆಶಾಭಾವನೆ ವ್ಯಕ್ತವಾಗಿದೆ. ಬೆಳ್ಳೂರಿನ ಕಲ್ಲೇರಿಮೂಲೆಯ ಆಶಿಶ್‌ನ ಈ ಹೆಮ್ಮೆಯ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಕ್ರೀಡಾಭಿಮಾನಿಗಳು, ಗಡಿನಾಡಿನ ಜನರು ಅಭಿನಂದನೆ ಸಲ್ಲಿಸಿದ್ದಾರೆ.

ಉತ್ತಮ ಪ್ರದರ್ಶನ



ಕೇರಳ ಥ್ರೋಬಾಲ್ ಅಸೋಸಿಯೇಶನ್ ನಿಯಮಾವಳಿಗಳ ಪ್ರಕಾರ ಸಬ್ ಜೂನಿ ಯರ್, ಫೆಡರೇಶನ್ ಕಪ್ ವಿಭಾಗಗಳಡಿ ಜಿಲ್ಲಾ ಮಟ್ಟದಿಂದ ಗರಿಷ್ಠ ಐದು ಅತ್ಯುತ್ತಮ ಕ್ರೀಡಾ ಪಟುಗಳಿಗೆ ಮಾತ್ರ ಈ ಮುಕ್ತ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಕಠಿಣ ಸ್ಪರ್ಧೆ ನಡುವೆಯೂ ಆಶಿಶ್ ಕೆ.ಪಿ. ಅತ್ಯುತ್ತಮ ತಾಂತ್ರಿಕ ಆಟ ಪ್ರದರ್ಶನ ಮೂಲಕ ಮುಂದಿನ ಹಂತಕ್ಕೆ ಆಯ್ಕೆಯಾಗಿದ್ದಾರೆ.

ಕಡಂಬಾರು ಶ್ರೀ ದೇವಳದಲ್ಲಿ 'ಶ್ರೀ ವಿಷ್ಣು ಯಕ್ಷ ವೈಭವ-2026' ಕಾರ್ಯಕ್ರಮ



ಮಂಜೇಶ್ವರ: ಶ್ರೀ ವಿಷ್ಣು ಯಕ್ಷಬಳಗ ಮಜಿಬೈಲು ಮಂಜೇಶ್ವರ ಕಲಾ ತಂಡದ ಶ್ರೀ ವಿಷ್ಣು ಯಕ್ಷ ವೈಭವ-2026 ಕಾರ್ಯಕ್ರಮ ಕಡಂಬಾರು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ವಠಾರದಲ್ಲಿ ಜರಗಿತು.

ಬಯಲಾಟ, ಸಭಾ ಕಾರ್ಯಕ್ರಮ, ಸನ್ಮಾನ ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಜರಗಿ ಸಂಪನ್ನಗೊಂಡಿತು.

ಸಭಾಕಾರ್ಯಕ್ರಮದಲ್ಲಿ ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ಕಡಂಬಾರು ಕ್ಷೇತ್ರದ ಆಡಳಿತ ಮೊಕ್ತೇಸರ ಸೂರ್ಯನಾರಾಯಣ ಮಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೀ ವಿಷ್ಣು ಯಕ್ಷಬಳಗ ಮಜಿಬೈಲು ಸುಮಾರು 150ಕ್ಕಿಂತಲೂ ಹೆಚ್ಚಿನ ತಾಳಮದ್ದಳೆ ಪ್ರದರ್ಶನ ನೀಡಿ ಜನಮನ ಗೆದ್ದಿದೆ. ತಂಡದ ಸಾಧನೆ ಅಮೋಘವಾದದ್ದು ಎಂದರು.

ವೈದಿಕ ವಿದ್ವಾಂಸ ರಾಮದಾಸ ಆಚಾರ್ಯ ಕಡಂಬಾರು ಶುಭಾಶಂಸನಗೈದರು. ಅಭ್ಯಾಗತರಾಗಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು ಸದಸ್ಯರು ಸತೀಶ ಅಡಪ ಸಂಕಬೈಲು, ಕನಿಲ ಶ್ರೀ ಭಗವತಿ ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪದ್ಮನಾಭ ಕಡಪ್ಪರ ಭಾಗವಹಿಸಿದ್ದರು.

ಗೌರವ

ನಾಟ್ಯನಿಲಯಂ ಬಾಲಕೃಷ್ಣ ಮಂಜೇಶ್ವರ, ನಿವೃತ್ತ ಮುಖ್ಯೋಪಾಧ್ಯಾಯರಾದ ರಾಜಾರಾಮ ರಾವ್ ಮೀಯಪದವು, ಯಕ್ಷಗಾನ ಕಲಾವಿದರನ್ನು ಗೌರವಿಸಲಾಯಿತು. ವೇದ ಮೂರ್ತಿ ಹರಿನಾರಾಯಣ ಮಯ್ಯ ಬಜೆ ಸ್ವಾಗತಿಸಿ, ಶಿಕ್ಷಕ ಕಿರಣ ಮಾಸ್ತರ್ ಕುದ್ರೆಕೋಡ್ಲು ವಂದಿಸಿದರು. ಗುರುರಾಜ ಹೊಳ್ಳ ಬಾಯಾರು ನಿರೂಪಿಸಿದರು. ಪಲ್ಲವಿ ಕುದ್ರೆಕೋಡ್ಲು ಹಾಗೂ ರಘುಪ್ರಸಾದ್ ನಾವಡ ಬಂದ್ಯೋಡು ಸನ್ಮಾನ ಪತ್ರ ವಾಚಿಸಿದರು. ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ಕಡಂಬಾರು, ಶ್ರೀ ಗುರುನರಸಿಂಹ ಯಕ್ಷಬಳಗ ಮೀಯಪದವು, ಶ್ರೀ ಬೆನಕ ಯಕ್ಷ ಕಲಾ ವೇದಿಕೆ ಪೈವಳಿಕೆ ಸಹಕಾರ ನೀಡಿದರು.

ಪಾಂಗೋಡು ಶ್ರೀ ದೇವಸ್ಥಾನದ ವಾರ್ಷಿಕ ಪ್ರತಿಷ್ಠಾ ಮಹೋತ್ಸವ



ಕಾಸರಗೋಡು: ಪಾಂಗೋಡು ಶ್ರೀ ದುರ್ಗಾಪರಮೇಶ್ವರಿ ಶ್ರೀ ಸುಬ್ರಮಣ್ಯ ದೇವಸ್ಥಾನ ವಾರ್ಷಿಕ ಪ್ರತಿಷ್ಠಾ ಮಹೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರಗಿತು.

ಚಂಡಿಕಾ ಹೋಮ, ಶುದ್ದಿ ಕಲಶಾಭಿಷೇಕ, ಕ್ಷೇತ್ರ ತಂತ್ರಿಗಳಾದ ಹಾರ್ನಾಡ್ ಕೆ.ಯು.ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ವೈದಿಕ ಕಾರ್ಯಕ್ರಮ ಜರಗಿದ್ದು, ಲಲಿತಾ ಸಹಸ್ರನಾಮ ಪಾರಾಯಣ, ಭಜನೆ, ಶ್ರೀ ಮಹಾತಾಯಿಯ ದರುಶನ ಸೇವೆ ನಡೆಯಿತು.

ಕಾಸರಗೋಡು ಕೋಟೆ ನಾಯಕರ ಕುಟುಂಬಸ್ಥರು, ಕ್ಷೇತ್ರದ ಅಧ್ಯಕ್ಷ ನಾಗೇಶ್ ನಾಯಕರು ಶುಭಹಾರೈಸಿದರು. ಗೌರವಾಧ್ಯಕ್ಷ ಡಾ.ವಾಮನ್ ರಾವ್ ಬೇಕಲ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾಸರಗೋಡು ಜಿಲ್ಲೆಯ ಮೂವರು ಪೊಲೀಸ್ ಅಧಿಕಾರಿಗಳಿಗೆ ಪುರಸ್ಕಾರ

ಕಾಸರಗೋಡು: ಜಿಲ್ಲೆಯ ಅತ್ಯುತ್ತಮ ಶಿಶುಸೌಹಾರ್ದ ಪೊಲೀಸ್ ಅಧಿಕಾರಿ ಪುರಸ್ಕಾರಕ್ಕೆ ವಿದ್ಯಾನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ವಿಜಯನ್ ಮೇಲೋತ್ ಅವರನ್ನು ಆರಿಸಲಾಗಿದೆ. ಅತ್ಯುತ್ತಮ ಜನಮೈತ್ರಿ ಪೊಲೀಸ್ ಪುರಸ್ಕಾರಕ್ಕೆ ಹೊಸದುರ್ಗ ಪ್ರಧಾನ ಪೊಲೀಸ್ ಠಾಣೆಯ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ಪ್ರದೀಪ್ ಕೊತ್ತಾಳ ಮತ್ತು ಅಂಬಲತ್ತರ ಪೊಲೀಸ್ ಠಾಣೆಯ ಸೀನಿಯರ್ ಸಿವಿಲ್ ಪೊಲೀಸ್ ಆಫೀಸರ್ ಪ್ರದೀಪ್ ಕುರುವಿಳರನ್ನು ಆರಿಸಲಾಗಿದೆ. ಕಾಸರಗೋಡು ಸೋಷ್ಯಲ್ ಪೊಲೀಸ್ ವಿಭಾಗ ಮೂವರನ್ನು ಈ ಪುರಸ್ಕಾರಗಳಿಗಾಗಿ ಆರಿಸಿದೆ.

ಶಿಶು ಸೌಹಾರ್ದ ಪೊಲೀಸ್ ಸೇವೆಗೆ ಸಂಬಂಧಿಸಿ ಅತ್ಯುತ್ತಮ ನಿರ್ವಹಣೆ ತೋರಿರುವ ಹಾಗೂ ಹಲವು ಮಾನವೀಯ ನೆರವು ಸೇವೆಗಳ ನಡೆಸಿರುವುದನ್ನು ಪರಿಗಣಿಸಿ ಎಸ್‌ಐ ವಿಜಯನ್ ಮೇಲೋತ್ತ ಅವರನ್ನು ಜಿಲ್ಲೆಯ ಅತ್ಯುತ್ತಮ ಶಿಶು ಸೌಹಾರ್ದ ಪೊಲೀಸ್ ಅಧಿಕಾರಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಸಮಾಜದಿಂದ ದೂರೀಕರಿಸಲ್ಪಟ್ಟ ಹಾಗೂ ದೈಹಿಕವಾಗಿ ನಿಶ್ಯಕ್ತರಾದವರನ್ನು ಸುರಕ್ಷಿತ ಕೇಂದ್ರಗಳಿಗೆ ತಲುಪಿಸಿ ಹಾಗೂ ಶಾಲಾ ಕಾಲೇಜುಗಳಲ್ಲಿ ವಿವಿಧ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ಅರಿವು ಮೂಡಿಸುವಿಕೆ, ಜನಮೈತ್ರಿ ವಲಂಟಿಯರ್ ಗ್ರೂಪ್‌ಗೆ ರೂಪು ನೀಡುವಿಕೆ ಇತ್ಯಾದಿ ಸೇವೆಗಳನ್ನು ಪರಿಗಣಿಸಿ ಪ್ರದೀಪ್ ಕೊತ್ತಾಳ ಅವರನ್ನು ಈ ಪುರಸ್ಕಾರಕ್ಕೆ ಆರಿಸಲಾಗಿದೆ. ಇನ್ನು ಶಾಲೆ ಮತ್ತು ಕಾಲೇಜುಗಳಲ್ಲಿ ಹಲವು ರೀತಿಯ ಅರಿವು ಮೂಡಿಸುವಿಕೆ ತರಗತಿಗಳ ನಡೆಸಿರುವುದನ್ನು ಪರಿಗಣಿಸಿ ಪ್ರಮೋದ್ ಕುರುವಿಳರನ್ನು ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.



ಕೇರಳ ವಿಧಾನಸಭೆಗೆ ಆಯ್ಕೆಯಾದ ಕಾಸರಗೋಡು ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳ ಸದಸ್ಯರು ತಿರುವನಂತಪುರದಲ್ಲಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಮಂಜೇಶ್ವರದ ಎ.ಕೆ.ಎಂ.ಅಶ್ರಫ್, ಕಾಸರಗೋಡಿನ ಕಲ್ಲಟ್ರ ಮಾಹಿನ್ ಹಾಜಿ, ಉದುಮದ ಕೆ.ನೀಲಕಂಠನ್, ಕಾಞಂಗಾಡಿನ ಗೋವಿಂದನ್ ಪಳ್ಳಿಕಾಪ್ಪಿಲ್, ತೃಕ್ಕರೀಪ್ಪುರದ ಸಂದೀಪ್ ವಾರಿಯರ್ ಅವರು ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಜಿಲ್ಲೆಯಲ್ಲಿ ಕುಟುಂಬಶ್ರೀಯ 'ಶ್ರೀ ಭವನಂ' ಯೋಜನೆ | ಅಂತಿಮ ಹಂತದಲ್ಲಿದೆ ನಿಧಿ ಸಂಗ್ರಹ ಕಾರ್ಯ

ಬಡ ಕುಟುಂಬಗಳಿಗೆ ಆಶ್ರಯ ನೀಡಲು ಸುರಕ್ಷಿತ ಮನೆಗಳ ನಿರ್ಮಾಣ

ಕಾಸರಗೋಡು: ಕುಟುಂಬಶ್ರೀ ಜಿಲ್ಲಾ ಮಿಶನ್ ಆರಂಭಿಸಿರುವ ಹೊಸ ವಿಶಿಷ್ಟ ಕಾರ್ಯಕ್ರಮವಾದ ಶ್ರೀ ಭವನಂ – ಒರುಮಿಲುಯರುಂ ಕೂಡ್ (ಒಗ್ಗಟ್ಟಿನಿಂದ ನಿರ್ಮಾಣವಾಗಲಿದೆ ಗೂಡು) ಯೋಜನೆ ನಿರ್ಮಾಣ ಕಾರ್ಯ ಜಿಲ್ಲೆಯಲ್ಲಿ ಪ್ರಾರಂಭವಾಗುತ್ತಿದ್ದು, ಆದಕ್ಕಾಗಿ ನಿಧಿಸಂಗ್ರಹಣೆ ಚಟುವಟಿಕೆಗಳು ಅಂತಿಮ ಹಂತದಲ್ಲಿವೆ. ಮಾ ಕೇರ್‌ನಂತಹ ಹಲವು ನೂತನ ಯೋಜನೆಗಳನ್ನು ರಾಜ್ಯಕ್ಕೆ ಪ್ರಸ್ತುತಪಡಿಸಿದ ಕಾಸರಗೋಡು ಜಿಲ್ಲಾ ಮಿಶನ್‌ನ ಕಲ್ಪನೆಯಿಂದ ಈ ಮಾದರಿ ಯೋಜನೆ ರಚಿಸಲಾಗುತ್ತಿದೆ.

ಯೋಜನೆ ಮುಖ್ಯ ಉದ್ದೇಶ ಒಂದು ಸಮುದಾಯದ ಅಭಿವೃದ್ಧಿ ಸೊಸೈಟಿ (ಸಿಡಿಎಸ್)ಗೆ ಒಂದು ಮನೆ ಎಂಬುದಾಗಿದೆ. ಜಿಲ್ಲೆಯ 42 ಸಿಡಿಎಸ್‌ಗಳ ಮೇಲೆ ಕೇಂದ್ರೀಕರಿಸಿ ಮೊದಲ ಹಂತದ ಚಟುವಟಿಕೆಗಳು ಪ್ರಗತಿಯಲ್ಲಿವೆ. ಕಯ್ಯೂರು ಚೀಮೇನಿ, ವೆಸ್ಟ್ ಎಳೇರಿ, ಬದಿಯಡ್ಕ ಪಂ.ಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡುವುದು ಸೇರಿದಂತೆ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಯೋಜನೆಗೆ ಹಣ ಸಂಪೂರ್ಣ ಸಾರ್ವಜನಿಕ ಪಾಲ್ಗೊಳ್ಳುವಿಕೆ ಮೂಲಕ ಸಂಗ್ರಹಿಸಲಾಗುತ್ತಿದೆ. ಕುಟುಂಬಶ್ರೀ ಸದಸ್ಯರು ತಮ್ಮ ಮನೆಗಳಲ್ಲಿ ಇರಿಸಿ ಕೊಳ್ಳುವ ಬುಟ್ಟಿಗಳು ಮತ್ತು ಬುಟ್ಟಿಗಳಿಂದ 100 ದಿನಗಳವರೆಗೆ ದಿನಕ್ಕೆ ಕನಿಷ್ಟ 1 ರೂ. ಉಳಿಸುತ್ತಾರೆ. ಸಿಡಿಎಸ್‌ನಲ್ಲಿ ಸರಾಸರಿ 4,500 ಸದಸ್ಯರು ಸುಮಾರು ನಾಲ್ಕೂವರೆ ಲಕ್ಷ ರೂ. ಸಂಗ್ರಹಿಸಬಹುದು. ಇದರ ಜೊತೆಗೆ ದತ್ತಿ ಪ್ರಾಯೋಜಕರಿಂದ ನಿರ್ಮಾಣ ಸಾಮಗ್ರಿಗಳನ್ನು, ವಿವಿಧ ಕಾರ್ಮಿಕ ಸಂಸ್ಥೆಗಳ ಸಹಯೋಗದೊಂದಿಗೆ ಉಚಿತ ಕಾರ್ಮಿಕರ ಒದಗಿಸುವುದು. ಸ್ಥಳೀಯಾಡಳಿತ ಸಂಸ್ಥೆಗಳು ಮಂಜೂರುಗೊಳಿಸಿದ ಲೈಫ್ ಮಿಶನ್ ಫಲಾನುಭ ವಿಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡ ಆದರೆ ವಿವಿಧ ತಾಂತ್ರಿಕ ನಿಬಂಧನೆಗಳಿಂದ ಮನೆ ಪಡೆಯಲು ಸಾಧ್ಯವಾಗದವರನ್ನು ಈ ಯೋಜನೆಗೆ ಪರಿಗಣಿಸಲಾಗುವುದು.

ಸಾರ್ವಜನಿಕ ಪ್ರತಿನಿಧಿಗಳು, ಸ್ವಯಂಸೇವಕರು , ಅಧಿಕಾರಿಗಳನ್ನು ಒಳಗೊಂಡ ವ್ಯಾಪಕ ಸಂಘಟನಾ ಸಮಿತಿ ಮೇಲ್ವಿಚಾರಣೆಯಲ್ಲಿ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತದೆ. ಸಿವಿಲ್ ಇಂಜಿನಿಯರ್‌ಗಳ ಸ್ವಯಂಪ್ರೇರಿತ ಸೇವೆಗಳ ಖಚಿತಪಡಿಸಿಕೊಳ್ಳುವ ಮೂಲಕ ಆಕರ್ಷಕ ಯೋಜನೆ ಮತ್ತು ವಿನ್ಯಾಸ ಉಚಿತವಾಗಿ ಸಿದ್ಧಪಡಿಸಲಾಗುತ್ತದೆ.

Kudumbashree
State Poverty Eradication Mission
Kerala

5 ತಿಂಗಳೊಳಗೆ ಅರ್ಹ ಕುಟುಂಬಕ್ಕೆ ಮನೆ ಹಸ್ತಾಂತರ

ಇಲ್ಲಿವರೆಗೆ ಬಂದಿರುವ ಅರ್ಜಿಗಳಿಂದ ಆದ್ಯತಾ ಪಟ್ಟಿಯನ್ನು ಜಿಲ್ಲಾ ಮಿಶನ್‌ಗೆ ಸಲ್ಲಿಸಲಾಗಿದೆ. 5 ತಿಂಗಳೊಳಗೆ ಮನೆ ನಿರ್ಮಾಣ ಕಾರ್ಯ ಸಕಾಲದಲ್ಲಿ ಪೂರ್ಣಗೊಳಿಸಿ ಅರ್ಹ ಕುಟುಂಬಗಳಿಗೆ ಮನೆಗಳ ಹಸ್ತಾಂತರಿಸಲಾಗುವುದು.

● ರತೀಶ್ ಪಿಲಿಕ್ಕೋಡ್, ಕುಟುಂಬಶ್ರೀ ಜಿಲ್ಲಾ ಮಿಶನ್ ಸಂಯೋಜಕ

ಬಡವರಿಗೆ ಮೊದಲ ಆದ್ಯತೆ

ವಿಧವೆಯರು, ಪತಿ ಇಲ್ಲದ ಪರಿತ್ಯಕ್ತರು, ಬೆಂಬಲವಿಲ್ಲದ ಹಿರಿಯ ನಾಗರಿಕರು, ಮಾನಸಿಕ , ದೈಹಿಕ ಸವಾಲುಗಳ ಎದುರಿಸುತ್ತಿರುವವರು, 1 ಲಕ್ಷ ರೂ.ಗಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ನಿರಾಶ್ರಿತರಿಗೆ ಯೋಜನೆಯಲ್ಲಿ ಆದ್ಯತೆ ನೀಡಲಾಗುವುದು ವಾರ್ಡ್ ಸಮಿತಿಗಳು, ಸಿಡಿಎಸ್ ವಿಶೇಷ ತಪಾಸಣೆ ನಂತರ ಅರ್ಹ ಫಲಾನುಭವಿಗಳನ್ನು ನಿರ್ಧರಿಸಲಾಗುತ್ತದೆ.

ಘನತ್ಯಾಜ್ಯ ನಿರ್ವಹಣೆ-ನಿಯಮಗಳು 2026ರ ಅನುಷ್ಠಾನಕ್ಕೆ ಸಂಬಂಧಿಸಿ ಸಭೆ | ಡಿಸಿ ಸ್ವರೂಪ ಸೂಚನೆ

ಘನತ್ಯಾಜ್ಯ ವಸ್ತು ವಿಲೇವಾರಿ ವೈಜ್ಞಾನಿಕ ರೀತಿಯಲ್ಲಿ ಕೈಗೊಳ್ಳಿ

ಉಡುಪಿ: ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಘನ ತ್ಯಾಜ್ಯ ವಸ್ತುಗಳನ್ನು ಮೂಲದಲ್ಲಿಯೇ ವಿವಿಧ ತ್ಯಾಜ್ಯಗಳನ್ನು ವಿಂಗಡಣೆ ಮಾಡಿ, ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಹಾಗೂ ಅವುಗಳ ವಿಲೇವಾರಿಯನ್ನು ವೈಜ್ಞಾನಿಕ ರೀತಿಯಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಘನತ್ಯಾಜ್ಯ ನಿರ್ವಹಣೆ - ನಿಯಮಗಳು 2026ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ವಿಶೇಷ ಸೆಲ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೂಲದಲ್ಲಿ ವಿಂಗಡಿಸಿ

ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯಗಳನ್ನು ಮೂಲದಲ್ಲಿಯೇ 4 ವಿಧದ ತ್ಯಾಜ್ಯಗಳಾದ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ಸ್ಪೆಷಲ್ ಕೇರ್ ತ್ಯಾಜ್ಯಗಳ (ಬಲ್ಬುಗಳು, ಬ್ಯಾಟರಿಗಳು, ಅವಧಿ ಮೀರಿದ ಔಷಧಗಳು, ಪೇಂಟ್ ಡಬ್ಬಿಗಳು ಇತ್ಯಾದಿ)



ವಿಂಗಡಣೆ ಸಾರ್ವಜನಿಕರಿಂದ ಮಾಡಿಸಿ, ಸಂಗ್ರಹಿಸಿ, ಅವುಗಳನ್ನು ಸಾಗಾಣಿಕೆ ಮಾಡಿ ಸಂಸ್ಕರಣೆ ಹಾಗೂ ವಿಲೇವಾರಿ ವೈಜ್ಞಾನಿಕವಾಗಿ ಮಾಡಬೇಕೆಂದರು.

ಸ್ಥಳದಲ್ಲೇ ಸಂಸ್ಕರಿಸಿ

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮದ ಅನ್ವಯ ಬೃಹತ್ ತ್ಯಾಜ್ಯ ಉತ್ಪಾದಕರನ್ನು ಗುರುತಿಸಿ, ನೋಂದಾಯಿಸಿಕೊಳ್ಳಬೇಕು. ಅಲ್ಲಿ ಉತ್ಪಾದನೆಯಾದ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸಂಸ್ಕರಿಸಬೇಕು. ತ್ಯಾಜ್ಯ ಸಂಸ್ಕರಣಾ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ ಸ್ಥಳೀಯ ಸಂಸ್ಥೆಗಳು ಉತ್ಪಾದಕರಿಂದ ವಿಂಗಡಿತ ತ್ಯಾಜ್ಯ ಸ್ವೀಕರಿಸಬೇಕು. ಅವರಿಂದ ಬೈಲಾ ಪ್ರಕಾರ ನಿಗದಿ ಪಡಿಸಿದ ಶುಲ್ಕ ವಸೂಲಿ ಮಾಡಿ ಪ್ರಮಾಣ ಪತ್ರ ನೀಡಬೇಕು ಎಂದರು.

ವಿಶೇಷ ಸೆಲ್ ರಚಿಸಿ

ಘನತ್ಯಾಜ್ಯ ನಿರ್ವಹಣೆ ನಿಯಮಗಳ ಅನುಷ್ಠಾನ ಮೇಲ್ವಿಚಾರಣೆಗೆ ವಿಶೇಷ ಸೆಲ್‌ಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ರಚಿಸಬೇಕು. ಸಮಿತಿಯು ಎಸ್‌ಡಬ್ಲ್ಯುಎಂ ನಿಯಮಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬೇಕು. ಒಂದೊಮ್ಮೆ ತ್ಯಾಜ್ಯ ವಿಲೇವಾರಿ ನಿರ್ವಹಣೆ ಸರಿಯಾಗಿ ಅನುಸರಣೆ ಮಾಡದಿದ್ದಲ್ಲಿ ಅಂತಹವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದರು.

ಪ್ರವಾಸಿ ತಾಣಗಳಲ್ಲಿ ನಿಗಾ ಇರಲಿ

ಪ್ರವಾಸಿ ತಾಣಗಳು, ಧಾರ್ಮಿಕ ಸ್ಥಳಗಳು ಹಾಗೂ ಕಡಲ ತೀರಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ವಿಶೇಷ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಹೇಳಿದರು. ಪ್ಲಾಸ್ಟಿಕ್ ಬಾಟಲಿಗಳ ಸಂಗ್ರಹಕ್ಕೆ ವಿಶೇಷ ಪರಿಕರಗಳ ವ್ಯವಸ್ಥೆ ಮಾಡಬೇಕು ಎಂದರು. ಘನತ್ಯಾಜ್ಯಗಳ ನಿರ್ವಹಣೆ ಸಮರ್ಪಕ ಅನುಷ್ಠಾನ ಕುರಿತು ಪ್ರತಿ ವಾರ್ಡ್‌ಗೆ ಒಬ್ಬರನ್ನು ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದ ಅವರು, ದ್ವಿತೀಯ ಹಂತದಲ್ಲಿ ತ್ಯಾಜ್ಯ ಸಾಗಾಣಿಕೆಗೆ ಸಂಪೂರ್ಣ ಮುಚ್ಚಿದ ವಾಹನಗಳನ್ನು ಬಳಸುವಂತೆ ವ್ಯವಸ್ಥೆ ಮಾಡಬೇಕೆಂದರು.

5 ಕಿ.ಮೀ.ಗೆ ಸಂಗ್ರಹಣಾ ಕೇಂದ್ರವಿರಲಿ

ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಸ್ಪೆಷಲ್ ಕೇರ್ ವೇಸ್ಟೇಜ್ ಅನ್ನು ಸಮರ್ಪಕವಾಗಿ ಸಂಗ್ರಹಿಸಲು ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಈ ಉದ್ದೇಶಕ್ಕೆ ಪ್ರತಿ ಐದು ಚದರ ಕಿ.ಮೀ. ಪ್ರದೇಶಕ್ಕೆ ಕನಿಷ್ಠ ಒಂದು ಸಂಗ್ರಹಣಾ ಕೇಂದ್ರ ಸ್ಥಾಪಿಸಬೇಕು ಹಾಗೂ ಇಲ್ಲಿ ಸ್ವೀಕರಿಸುವ ಸಮಯವನ್ನು ಅಧಿಕೃತವಾಗಿ ಪ್ರಕಟಿಸಬೇಕು ಎಂದರು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ರಸ್ತೆಗಳ ಸ್ವಚ್ಛತೆ ನಿಯಮಿತವಾಗಿ ಕೈಗೊಳ್ಳಬೇಕು ಹಾಗೂ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ, ಅವುಗಳನ್ನು ತೆರವುಗೊಳಿಸಿ, ಅವು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ಕಸಗಳನ್ನು ಎಲ್ಲೆಂದರಲ್ಲಿ ಎಸೆದರೆ ಅವರಿಂದ ದಂಡ ವಸೂಲಿ ಮಾಡಬೇಕು ಎಂದರು. ಎಡಿಸಿ ಅಬೀದ್ ಗದ್ಯಾಳ, ಜಿ.ಪಂ. ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಕುಮಾರ್ ಶೆಟ್ಟಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪೌರಾಯುಕ್ತ ಮಹಾಂತೇಶ ಹಂಗರಗಿ ಇದ್ದರು.

ಸುತ್ತಮುತ್ತ

ಇಂದು ಕಾರ್ಕಳದಲ್ಲಿ ಸಮ್ಮಿಲನ ಸಮಾರಂಭ

ಕಾರ್ಕಳ: ಕಾರ್ಕಳ ಆಶಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಕಳೆದ ಹಲವು ವರುಷಗಳಿಂದ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ಇದೀಗ ಸಂಸ್ಥೆಯ ಸುಸಜ್ಜಿತ, ಸುರಕ್ಷಿತ, ನೂತನ ಸ್ವಂತ ಕಟ್ಟಡವು ಕಾರ್ಕಳದ ಪ್ರೈಮ್ ಸಿಟಿ ಸೆಂಟರ್‌ನಲ್ಲಿ ಕಾರ್ಯರಂಭ ಗೊಂಡಿರುವುದರ ಪ್ರಯುಕ್ತ ಹಿತೈಷಿ, ಸದಸ್ಯರ, ಸಹಕಾರಿಗಳ ಹಾಗೂ ಗ್ರಾಹಕರ ಸಮ್ಮಿಲನ ಸಮಾರಂಭ ಇಂದು (ಮೇ. 22) ರಂದು ಸಂಜೆ 5.30ರಿಂದ ನಡೆಯಲಿದೆ. ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಅವರು ಉಪಸ್ಥಿತರಿರುವರು ಎಂದು ಆಶಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಎಂ.ಕೆ. ಸುವ್ರತ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೆಟ್ರೋಲ್ ಬಂಕ್‌ನಲ್ಲಿ ಕ್ಯಾನ್ ಬಳಕೆ ನಿಷೇಧಿಸದಂತೆ ಮನವಿ

ಕುಂದಾಪುರ: ಉಡುಪಿ ಜಿಲ್ಲೆಯ ರೈತಾಪಿ ವರ್ಗದವರಿಗೆ ಕೃಷಿ ಉಪಯೋಗಕ್ಕಾಗಿ ಪೆಟ್ರೋಲ್ ಹಾಗೂ ಡೀಸೆಲ್‌ನ್ನು ಕ್ಯಾನ್‌ಗಳಲ್ಲಿ ನೀಡುವ ಕುರಿತು ಪೆಟ್ರೋಲ್ ಬಂಕ್ ಮಾಲಕರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಉಡುಪಿ ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿದ್ದಾರೆ. ಉಡುಪಿ ಜಿಲ್ಲೆಯ ರೈತಾಪಿ ವರ್ಗದ ಜನರು ಕೃಷಿ ಚಟುವಟಿಕೆಗಳಗಾಗಿ ಬಳಸುವ ಟ್ರ್ಯಾಕ್ಟರ್‌ಗಳು, ನೀರಾವರಿ ಪಂಪ್ ಸೆಟ್ಟುಗಳು, ಜನರೇಟರ್‌ಗಳು ಹಾಗೂ ಇತರೆ ಕೃಷಿ ಯಂತ್ರೋಪಕರಣಗಳಿಗೆ ಅಗತ್ಯವಿರುವ ಡೀಸೆಲ್ ಮತ್ತು ಪೆಟ್ರೋಲ್‌ನ್ನು ಈ ಹಿಂದಿನಿಂದಲೂ ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯಾನ್‌ಗಳ ಮೂಲಕ ಪಡೆದುಕೊಂಡು ಬರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇಂಧನ ಕೊರತೆಯನ್ನು ನೆಪವನ್ನಾಗಿ ಮಾಡಿಕೊಂಡು ಹಲವಾರು ಪೆಟ್ರೋಲ್ ಬಂಕ್‌ಗಳು ರೈತರಿಗೆ ಕ್ಯಾನ್‌ಗಳಲ್ಲಿ ಡಿಸೆಲ್ ಮತ್ತು ಪೆಟ್ರೋಲ್ ನೀಡುವುದನ್ನು ನಿಲ್ಲಿಸಿದುರ ಬಗ್ಗೆ ರೈತರಿಂದ ದೂರುಗಳು ಬರುತ್ತಿದೆ. ಆದುದರಿಂದ, ಉಡುಪಿ ಜಿಲ್ಲೆಯ ರೈತಾಪಿ ವರ್ಗದ ಜನರ ಕೃಷಿ ಅವಶ್ಯಕತೆಗಳನ್ನು ಪರಿಗಣಿಸಿ, ಪೆಟ್ರೋಲ್ ಮತ್ತು ಡಿಸೇಲ್‌ಗಳನ್ನು ಕ್ಯಾನ್‌ನಲ್ಲಿ ನೀಡಲು ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್ ಮಾಲಕರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅವಕಾಶ

ಕುಂದಾಪುರ: ಕುಂದಾಪುರ ತಾಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕುಂದಾಪುರ ಮೂಲ ಮತ್ತು ವಿಭಜಿತ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ಮೂಲ ಮತ್ತು ವಿಭಜಿತ, ಕೋಟೇಶ್ವರ, ಶಂಕರನಾರಾಯಣ, ಬೈಂದೂರು ಹಾಗೂ ಹಂಗಳೂರು ಇಲ್ಲಿ ಖಾಲಿ ಇರುವ ಸ್ಥಾನಗಳಿಗೆ ಹೊಸತಾಗಿ 2026– 27ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಸೇರ್ಪಡೆ ಮಾಡಲು ಅರ್ಜಿಗಳನ್ನು ಮೇ 25 ರಿಂದ ಜೂ.15 ರವರೆಗೆ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸುವಾಗ ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಹಿಂದಿನ ತರಗತಿ ಅಂಕಪಟ್ಟಿ ಮತ್ತು ಆಧಾರ ಕಾರ್ಡ್, ರೇಷನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ವಿದ್ಯಾರ್ಥಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಮತ್ತು ವಿದ್ಯಾರ್ಥಿಗಳ ವಾಸ ಸ್ಥಾನದಿಂದ ವಿದ್ಯಾರ್ಥಿ ನಿಲಯಕ್ಕೆ ಇರುವ ದೂರ ಪ್ರಮಾಣ ಪತ್ರವನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಪಡೆದು ಅಪ್ ಲೋಡ್ ಮಾಡಬೇಕು. ಅಪ್ ಲೋಡ್ ಮಾಡಿದ ಅರ್ಜಿಯ ಪ್ರತಿಯನ್ನು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕುಂದಾಪುರ ಇಲ್ಲಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 9972294198 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೊದಲನೇ ಪುಟದಿಂದ

ಪಾಪನಾಶಿನಿ

ಜನಪ್ರತಿನಿಧಿಗಳೂ ಈ ನಿಟ್ಟಿನಲ್ಲಿ ತಕ್ಷಣ ಸ್ಪಂದಿಸಿ ಸಂಬಂಧಿತ ಇಲಾಖಾಧಿಕಾರಿಗಳ ಮೇಲೆ ಒತ್ತಡ ತರಬೇಕಾಗಿದೆ. ಸ್ಥಳ ಪರಿಶೀಲಿಸಿ ಸಣ್ಣ ನಿರಾವರಿ ಇಲಾಖೆ ಮತ್ತು ಭೂ ವಿಜ್ಞಾನ ಇಲಾಖೆಗೆ ಮಾಹಿತಿ ನೀಡಲಾಗಿದೆ ಎಂದು ಬೆಳ್ಳೆ ಗ್ರಾಮ ಪಂಚಾಯತ್‌ನ ಪಂ. ಅಭಿವೃದ್ಧಿ ಅಧಿಕಾರಿ ಆಶಾಲತಾ ಹೇಳಿದರು. ಗ್ರಾಮಸ್ಥರ ದೂರುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗಿದೆ ಎಂದು ಗ್ರಾಮ ಆಡಳಿತ ಅಧಿಕಾರಿ ಪ್ರದೀಪ್ ಕುಮಾರ್ ಹೇಳಿದರು.

ಜಲಮಾಲಿನ್ಯ ಉಂಟುಮಾಡುವ ವಸತಿ ಸಮುಚ್ಚಯ ಮಾಲೀಕರ ವಿರುದ್ಧ ಕಾನೂನು ಕ್ರಮ: ಡಿಸಿ ಸೂಚನೆ

ಉಡುಪಿ: ವಸತಿ ಹಾಗೂ ಬಹುಮಹಡಿ ವಸತಿ ಸಮುಚ್ಚಯಗಳು ಕೊಳಚೆ ಹಾಗೂ ತ್ಯಾಜ್ಯ ನೀರುಗಳನ್ನು ಶುದ್ದೀಕರಣ ನಿರ್ವಹಣೆ ಮಾಡದೇ ತೋಡುಗಳ ಮೂಲಕ ನದಿಗೆ ಬಿಟ್ಟು ಜಲಮಾಲಿನ್ಯ ಉಂಟುಮಾಡಿದರೆ ಅಂತಹ ವಸತಿ ಸಮುಚ್ಚಯಗಳ ಮಾಲೀಕರ ಮೇಲೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಲತ್ಯಾಜ್ಯ ನಿರ್ವಹಣೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ ವಸತಿ ಸಮುಚ್ಚಯಗಳು, ತ್ಯಾಜ್ಯ ನಿರ್ವಹಣಾ ಘಟಕಗಳ ಇರುವಿಕೆ, ಅವುಗಳ ನಿರ್ವಹಣೆ, ತ್ಯಾಜ್ಯ ನಿರ್ವಹಣಾ ಘಟಕ ಇಲ್ಲದೇ ಇರುವುದು, ಕಲುಷಿತ ನೀರುಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡದೇ ತೋಡುಗಳಿಗೆ ಬಿಟ್ಟು ಇಂದ್ರಾಳಿ ನದಿ ಮೂಲಗಳಿಗೆ ಬಿಡುವುದರ ಬಗ್ಗೆ ಸವಿಸ್ತಾರವಾದ ಸರ್ವೇ ಕಾರ್ಯಗಳನ್ನು ಎಂ.ಐ.ಟಿ ಸಂಸ್ಥೆಯ ವತಿಯಿಂದ ಕೈಗೊಂಡಿದ್ದು, ಕೆಲವು ವಸತಿ ಹಾಗೂ ಸಮುಚ್ಚಯಗಳು ನೇರವಾಗಿ ನದಿಗೆ ಬಿಡುತ್ತಿರುವ ಬಗ್ಗೆ ಡ್ರೋನ್ ಸರ್ವೇಗಳಲ್ಲಿ ಕಂಡುಬಂದಿದೆ. ಇವುಗಳ ಬಗ್ಗೆ ಮಾಲೀಕರು ಎಚ್ಚರ ವಹಿಸಬೇಕು. ತಪ್ಪಿದ್ದಲ್ಲಿ ಅಂತಹವರ ವಿರುದ್ಧ ದಂಡ ವಿಧಿಸಲಾಗುವುದು ಎಂದರು.

> **ಜಾಗೃತಿ ಮೂಡಿಸಬೇಕಿದೆ**
>
> **ಇಂದ್ರಾಳಿ ನದಿಯು ಉಗಮ ಸ್ಥಾನದಿಂದ ಸಮುದ್ರ ಸೇರುವವರೆಗೆ ವಿವಿಧ ಹಂತಗಳ ಸ್ಟೆಚ್ ಮಾಡುವುದರೊಂದಿಗೆ ಅವುಗಳ ನಿರ್ವಹಣೆ, ಜನಸಾಮಾನ್ಯರಿಗೆ ಅರಿವು ಮೂಡಿಸುವುದು ಸೇರಿದಂತೆ ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳಲು ಕಟ್ಟಡ ನಿರ್ಮಾಣ ಸಂಸ್ಥೆಗಳು, ಎನ್.ಜಿ.ಓ ಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ನಗರ ಸಭೆಗೆ ವಹಿಸಿ, ನದಿ ದಂಡೆಗಳ ಸ್ವಚ್ಛತೆಗೆ, ಕಲುಷಿತ ಹಾಗೂ ತ್ಯಾಜ್ಯ ನೀರು ಸೇರಿ ಮಾಲಿನ್ಯವಾಗದಂತೆ ಕ್ರಮವಹಿಸುವುದರಿಂದ ನದಿ ನೀರು ಶುದ್ಧವಾಗಿರುತ್ತದೆ. ಇವುಗಳನ್ನು ಮುಂದಿನ ದಿನಗಳಲ್ಲಿ ಫಿಲ್ಟರ್ ಮಾಡಿ ಬಳಸಿಕೊಳ್ಳಬಹುದಾಗಿದೆ.**
>
> ● ಸ್ವರೂಪ ಟಿ.ಕೆ., ಜಿಲ್ಲಾಧಿಕಾರಿ

ನಗರಸಭಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳಲ್ಲಿ ಕೊಳಚೆ ನೀರಿನ ಸಂಸ್ಕರಣ ಘಟಕಗಳು ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಇವೆ. ಆದರೂ ಅವುಗಳನ್ನು ಸಮರ್ಪಕವಾಗಿ ಬಳಕೆ ಆಗುತ್ತಿಲ್ಲ, ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ನಿರ್ವಹಣೆ ಘಟಕ ಇಲ್ಲದಿರುವುದು ಕಂಡು ಬಂದಿದೆ. ತ್ಯಾಜ್ಯ ನೀರು ನೇರವಾಗಿ ಜಲ ಮೂಲಗಳಲ್ಲಿ ಸೇರಿ ಸಂಪೂರ್ಣ ಕಲ್ಮಶವಾಗುತ್ತದೆ ಎಂದ ಅವರು, ನಮ್ಮ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ತ್ಯಾಜ್ಯ ನೀರನ್ನು ಶುದ್ಧಿಕರಿಸಿ ಅವುಗಳನ್ನು ಗಾರ್ಡನ್ ಸೇರಿದಂತೆ ಮತ್ತಿತರಗಳಿಗೆ ಮರುಬಳಕೆ ಮುಂದಾಗಬೇಕು ಎಂದರು.

ಪ್ರಸ್ತುತ ತ್ಯಾಜ್ಯಗಳನ್ನು ಕಡ್ಡಾಯವಾಗಿ ಸೇಫ್ಟಿ ಟ್ಯಾಂಕ್ ಗಳ ಬಳಕೆ ಯೊಂದಿಗೆ ತ್ಯಾಜ್ಯ ನಿರ್ವಹಣೆಗೆ ಮುಂದಾಗಬೇಕು. ಸಕ್ಕಿಂಗ್ ಯಂತ್ರಗಳ ಬಳಕೆಯೊಂದಿಗೆ ಘನತ್ಯಾಜ್ಯಗಳನ್ನು ವೈಜ್ಞಾನಿಕ ವಿಲೇವಾರಿಗೆ ಮುಂದಾಗಬೇಕು ಎಂದ ಅವರು, ತ್ಯಾಜ್ಯ ನೀರನ್ನು ನದಿ ತೋಡುಗಳಿಗೆ ಬಿಡುತ್ತಿದ್ದಾರೆಂಬ ದೂರುಗಳು ಕೇಳಿ ಬರುತ್ತಿವೆ ಎಂದು ಹೇಳಿದರು.

ಎಡಿಸಿ ಅಬೀದ್ ಗದ್ಯಾಳ, ಜಿ.ಪಂ. ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಕುಮಾರ್ ಶೆಟ್ಟಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪೌರಾಯುಕ್ತ ಮಹಾಂತೇಶ ಹಂಗರಗಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ಎಂ.ಐ.ಟಿ ಅಸೋಸಿಯೇಟ್ ಡೈರೆಕ್ಟರ್ ಡಾ. ರಾಘವೇಂದ್ರ ಹೊಳ್ಳ, ಶಿಲ್ಪಾ ಭಟ್ ಇದ್ದರು.

ಶಿರ್ವ ಮೂಲಿ ಸುಂದರ ರಾಮ್ ಶೆಟ್ಟಿ ಕಾಲೇಜಿನ ವಾರ್ಷಿಕೋತ್ಸವ



ಶಿರ್ವ: ಇಲ್ಲಿನ ಮೂಲ್ಕಿ ಸುಂದರ ರಾಮ್ ಶೆಟ್ಟಿ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮವು ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಜರುಗಿತು.

ಉಡುಪಿ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಶನ್ ಅಧ್ಯಕ್ಷ ಹರಿಪ್ರಸಾದ್ ರೈ ಮಾತನಾಡಿದರು. ವಿದ್ಯಾವರ್ಧಕ ಸಂಘ ಶಿರ್ವ ಇದರ ಆಡಳಿತಾಧಿಕಾರಿ ಪ್ರೊ. ವೈ. ಭಾಸ್ಕರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.ಈ ಸಂದರ್ಭದಲ್ಲಿ ಕಾಲೇಜಿನಲ್ಲಿ 40 ವರ್ಷ 8 ತಿಂಗಳು ಸುದೀರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಬೋಧಕೇತರ ಸಿಬ್ಬಂದಿ ಗೀತಾ ಕುಮಾರಿ ಹಾಗೂ ಥೈಲ್ಯಾಂಡ್‌ನ ರಾಚ್ ಭೂರಿ ಪ್ರಾವಿನ್ಸ್ ಕ್ರೀಡಾಂಗಣದಲ್ಲಿ ನಡೆದ ಥೈಲಾಂಡ್ ಅತ್ಲೆಟಿಕ್ಸ್ ಚಾಂಪಿಯನ್ ಶಿಪ್ 2026ರಲ್ಲಿ ಭಾಗವಹಿಸಿ 4X100 ಮೀಟರ್ ರಿಲೇ ಸ್ಪರ್ಧೆಯಲ್ಲಿ ಬೆಳ್ಳಿ ಹಾಗೂ ಗುಂಡೆಸೆತದಲ್ಲಿ ಕಂಚಿನ ಪದಕವನ್ನು ಪಡೆದ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಸೌಮ್ಯ ಕುಮಾರಿ ಅವರನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ಪ್ರಾಂಶುಪಾಲ ಡಾ. ಮಿಥುನ್ ಚಕ್ರವರ್ತಿ ಶೈಕ್ಷಣಿಕ ವರ್ಷದ ವರದಿ ವಾಚಿಸಿದರು. ವಿದ್ಯಾರ್ಥಿ ಕ್ಷೇಮಾಧಿಕಾರಿ ಹೇಮಲತಾ ಶೆಟ್ಟಿ ಸ್ವಾಗತಿಸಿದರು. ವಿದ್ಯಾರ್ಥಿ ಸಂಘದ ಜೊತೆ ಕಾರ್ಯದರ್ಶಿ ಪ್ರಣತಿ ನಿರೂಪಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಪೃಥ್ವಿಕ್ ಆಚಾರ್ಯ, ವಂದಿಸಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪವನ್, ಕಾಲೇಜಿನ ಬೋಧಕ, ಬೋಧಕೇತರರು ಇದ್ದರು.

ವಿದ್ಯಾರ್ಥಿ ನಿಲಯ ಸೇರ್ಪಡೆಗೆ ಅರ್ಜಿ ಆಹ್ವಾನ

ಕುಂದಾಪುರ: ತಾಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ ಅಮಾಸೆಬೈಲು, ಕೆದೂರು ಹಾಗೂ ಕುಂದಾಪುರ ಟೌನ್, ಬಾಲಕ ಕುಂದಾಪುರ, ಬಸ್ರೂರು, ಬೈಂದೂರು, ನಾವುಂದ ಇಲ್ಲಿ ಖಾಲಿ ಇರುವ ಸ್ಥಾನಗಳಿಗೆ ಹೊಸತಾಗಿ ವಿದ್ಯಾರ್ಥಿ ನಿಲಯಗಳಿಗೆ ಸೇರ್ಪಡೆ ಮಾಡಲು ಅರ್ಜಿಗಳನ್ನು ಮೇ 20ರಿಂದ ಜೂ.8 ರವರೆಗೆ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಾಗ ಅಂಕಪಟ್ಟಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಆಧಾರ ಕಾರ್ಡ್, ರೇಷನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಭಾವಚಿತ್ರ ಮತ್ತು ದೂರ ಪ್ರಮಾಣ ಪತ್ರವನ್ನು ಗ್ರಾ.ಪಂ. ಪಿಡಿಒ ಅವರಿಂದ ಪಡೆದು ಅಪ್ ಲೋಡ್ ಮಾಡಬೇಕು. ಅಪ್ ಲೋಡ್ ಮಾಡಿದ ಅರ್ಜಿಯ ಪ್ರತಿಯನ್ನು ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ. 9972294198 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉಡುಪಿಯ ಡಾ. ಟಿಎಂಎ ಪೈ ಆಸ್ಪತ್ರೆ ನೂತನ ಹೈಟೆಕ್ ಕಟ್ಟಡಕ್ಕೆ ಸ್ಥಳಾಂತರ: ಜೂ.1 ರಿಂದ ಅಧಿಕೃತ ಕಾರ್ಯಾಚರಣೆ

ಉಡುಪಿ: ಉಡುಪಿಯ ಹೆಮ್ಮೆಯ ಸಂಸ್ಥೆಯಾಗಿರುವ ಡಾ. ಟಿಎಂಎ ಪೈ ಆಸ್ಪತ್ರೆಯುಆತ್ಯಾಧುನಿಕಮೂಲಸೌಕರ್ಯ ಹಾಗೂ ಸುಧಾರಿತ ತಂತ್ರಜ್ಞಾನಗಳೊಂದಿಗೆ ಹೊಸ ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತಿದ್ದು ಮುಂಬರುವ ಜೂ. 1ರಿಂದ ಸಾರ್ವಜನಿಕ ಸೇವೆಗೆ ಮುಕ್ತವಾಗಿ ಕಾರ್ಯಾಚರಣೆ ಪ್ರಾರಂಭಿಸಲಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಶಶಿಕಿರಣ್ ಉಮಾಕಾಂತ್ ಅವರು ಪ್ರಕಟಿಸಿದರು.

ಕಡೆಕಾರ್ ಸ್ವಾಗತ ಗೋಪುರ ಬಳಿಯ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಿರ್ಮಾಣಗೊಂಡಿರುವ ಡಾ. ಟಿಎಂಎ ಪೈ ನೂತನ ಕಟ್ಟಡದ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

1984 ರಲ್ಲಿ ಸ್ಥಾಪನೆಯಾದ ಈ ಆಸ್ಪತ್ರೆಯು ಉಡುಪಿಮತ್ತುಸುತ್ತಮುತ್ತಲಿನಪ್ರದೇಶಗಳ ಜನರಿಗೆ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸಮರ್ಪಿತ ಸೇವೆ ಸಲ್ಲಿಸಿದ ನಂತರ ಇದೀಗ ವಿಶಾಲವಾದ ಮತ್ತು ಆತ್ಯಾಧುನಿಕ ಕ್ಯಾಂಪಸ್‌ಗೆ ಸ್ಥಳಾಂತರಗೊಳ್ಳುತ್ತಿದೆ. ಹೊಸ ಆಸ್ಪತ್ರೆಯ ಉದ್ಘಾಟನೆಯು ಸಂಸ್ಥೆಯ ಆರೋಗ್ಯ ಸೇವೆಯ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲು ಎಂದ ಅವರು, ಸ್ಥಳ ಬದಲಾಗಿದ್ದರೂ ಉಡುಪಿ ಸಮುದಾಯದ ಆರೋಗ್ಯ ಮತ್ತು ಯೋಗಕ್ಷೇಮದ ಬಗೆಗಿನ ನಮ್ಮ ಬದ್ಧತೆ ಬದಲಾಗದೆ ಇರಲಿದೆ. ರಾಷ್ಟ್ರೀಯ ಹೆದ್ದಾರಿ 66ರ ಉದ್ದಕ್ಕೂ ಸಂಭವಿಸುವ ತುರ್ತು ಸಂದರ್ಭಗಳಲ್ಲಿ ತ್ವರಿತ ಚಿಕಿತ್ಸೆ ಮತ್ತು ನಿರ್ಣಾಯಕ ಆರೈಕೆ ಸೇವೆಗಳನ್ನು ಒದಗಿಸಲು ಈ ನೂತನ ಸೌಲಭ್ಯವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

80 ಶೇ. ಹವಾನಿಯಂತ್ರಿತ ವ್ಯವಸ್ಥೆ

ಆಸ್ಪತ್ರೆಯ ಆಡಳಿತ ಮುಖ್ಯಸ್ಥ ಹಾಗೂ ಗ್ರೂಪ್ ಮ್ಯಾನೇಜರ್ ಆದ ದಿನೇಶ್ ಪ್ರಭು ಮಾತನಾಡಿ, 'ರೋಗಿಗಳ ಸುರಕ್ಷತೆ, ಗುಣಮಟ್ಟದ ಆರೈಕೆ, ಅವಶ್ಯ ಸೌಕರ್ಯ ಹಾಗೂ ವೈದ್ಯರಿಗೆ ದಕ್ಷ ನಿರ್ವಹಣಾ ವ್ಯವಸ್ಥೆಗಳಿಗೆ ಒತ್ತು ನೀಡುವ ಮೂಲಕ ಹೊಸ ಆಸ್ಪತ್ರೆಯನ್ನು ಅತ್ಯಂತ ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾಗಿದೆ. ಸುಮಾರು 1.42 ಎಕರೆ ವಿಸ್ತೀರ್ಣದ ವಿಶಾಲ ಕ್ಯಾಂಪಸ್‌ನಲ್ಲಿ ತಲೆಎತ್ತಿರುವ ಈ ನೂತನ ಆಸ್ಪತ್ರೆಯು ಒಟ್ಟು 152 ಬೆಡ್‌ಗಳ (ಹಾಸಿಗೆ) ಸಾಮರ್ಥ್ಯವನ್ನು ಹೊಂದಿದ್ದು, ಆಸ್ಪತ್ರೆಯ ಶೇಕಡಾ 80 ರಷ್ಟು ಭಾಗ ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆಯಿಂದ ಕೂಡಿದೆ ಎಂದು ಪ್ರಮುಖ ಅಂಶಗಳನ್ನು ಹಂಚಿಕೊಂಡರು.

'ಹೀಲಿಂಗ್ ಹಾರ್ಟ್ಸ್, ಓಪನ್ ಡೋರ್ಸ್' ಎಂಬ ಥೀಮ್ ಅಡಿಯಲ್ಲಿ ಸಾರ್ವಜನಿಕರು ಹಾಗೂ ಕಾರ್ಪೊರೇಟ್ ಪ್ರತಿನಿಧಿಗಳು ಆಸ್ಪತ್ರೆಗೆ ಭೇಟಿ ನೀಡಿ ಇಲ್ಲಿನ ಅತ್ಯಾಧುನಿಕ ಸೌಲಭ್ಯಗಳನ್ನು ನೇರವಾಗಿ ವೀಕ್ಷಿಸಲು ಮುಂದಿನ 4 ದಿನಗಳ ಕಾಲ (ಮೇ 22ರಿಂದ ಮೇ 25 ರವರೆಗೆ) ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ದಿನೇಶ್ ಪ್ರಭು ಅವರು ತಿಳಿಸಿದರು.

ಒಂದೇ ಸೂರಿನಡಿ ಸಮಗ್ರ ವೈದ್ಯಕೀಯ ಸೇವೆಗಳು

ಈ ಹೈಟೆಕ್ ಆಸ್ಪತ್ರೆಯಲ್ಲಿ ಜನರಲ್ ಮೆಡಿಸಿನ್, ಮಕ್ಕಳ ವಿಭಾಗ, ಮೂಳೆ ಮತ್ತು ಕೀಲು ವಿಭಾಗ, ಕಿವಿ-ಗಂಟಲು-ಮೂಗು (ಇಎನ್‌ಟಿ), ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ, ನೇತ್ರಶಾಸ್ತ್ರ, ಮನೋವೈದ್ಯಶಾಸ್ತ್ರ, ಗ್ಯಾಸ್ಟ್ರೋಎಂಟರಾಲಜಿ, ಸಾಮಾನ್ಯ ಶಸ್ತ್ರಚಿಕಿತ್ಸೆ, ಚರ್ಮಶಾಸ್ತ್ರ, ದಂತವೈದ್ಯಶಾಸ್ತ್ರ, ಫಿಸಿಯೋಥೆರಪಿ ಹಾಗೂ ವಾಕ್ ಮತ್ತು ಶ್ರವಣ ಸೇರಿದಂತೆ ವಿವಿಧ ವಿಭಾಗಗಳು ಕಾರ್ಯನಿರ್ವಹಿಸಲಿವೆ. ಇದರೊಂದಿಗೆ ಹೃದ್ರೋಗ, ನರವಿಜ್ಞಾನ, ಮೂತ್ರಪಿಂಡಶಾಸ್ತ್ರ, ಆಂಕೊಲಾಜಿ (ಕ್ಯಾನ್ಸರ್ ಚಿಕಿತ್ಸೆ), ಪ್ಲಾಸ್ಟಿಕ್ ಸರ್ಜರಿ ಹಾಗೂ ಮಕ್ಕಳ ಶಸ್ತ್ರಚಿಕಿತ್ಸೆ ಸೇರಿದಂತೆ ಹಲವು ಸೂಪರ್-ಸ್ಪೆಷಾಲಿಟಿ ತಜ್ಞರ ಸಮಾಲೋಚನೆಗಳೂ ಲಭ್ಯವಿರಲಿವೆ ಎಂದರು.

ಆಸ್ಪತ್ರೆ ಉಪ ವೈದ್ಯಕೀಯ ಅಧೀಕ್ಷಕ ಡಾ. ರಾಜಾರಾಮ್ ಪೈ ಮಾತನಾಡಿ, ಹೊಸ ಸೌಲಭ್ಯವು ಆಧುನಿಕ ತಂತ್ರಜ್ಞಾನ ಮತ್ತು ಸುಧಾರಿತ ಸೌಲಭ್ಯಗಳನ್ನು ನೀಡುತ್ತಿದ್ದರೂ, ಆಸ್ಪತ್ರೆ ಮೊದಲಿನಂತೆಯೇ ಅತ್ಯಂತ ಸಮಂಜಸ, ಪಾರದರ್ಶಕ, ಕೈಗೆಟುಕುವ ಚಿಕಿತ್ಸಾ ವೆಚ್ಚಗಳನ್ನು ಕಾಯ್ದುಕೊಳ್ಳಲು ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು.





- 24X7 ನಿರಂತರವಾಗಿ ಕಾರ್ಯ ನಿರ್ವಹಿಸುವ ತುರ್ತು ಚಿಕಿತ್ಸೆ ಮತ್ತು ಅಪಘಾತ ಆರೈಕೆ ಕೇಂದ್ರ.
- ಸುಧಾರಿತ ಲ್ಯಾಪರೊಸ್ಕೋಪಿಕ್ ವ್ಯವಸ್ಥೆ ಒಳಗೊಂಡ 4 ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳು
- ವಿಸ್ತೃತ 25 ಹಾಸಿಗೆಗಳ ಹೈಟೆಕ್ ಐಸಿಯು ಸೌಲಭ್ಯಗಳು.
- ಸುಧಾರಿತ ಡಯಾಲಿಸಿಸ್ ಕೇಂದ್ರ, ಸಿಟಿ ಸ್ಕ್ಯಾನ್, ಅಲ್ಟ್ರಾಸೌಂಡ್, ಡಿಜಿಟಲ್ ಎಕ್ಸ್-ರೇ ಮತ್ತು ಸುಸಜ್ಜಿತ ಪ್ರಯೋಗಾಲಯ
- 24 ಗಂಟೆ ಕಾರ್ಯನಿರ್ವಹಿಸುವ ಔಷಧಾಲಯ
- ವಿಶೇಷವಾಗಿ ವಿನ್ಯಾಸಗೊಳಿಸಿದ ಹೆಲ್ತ್ ಚೆಕಪ್ ಸೌಲಭ್ಯಗಳು, ಡೇ ಕೇರ್ ಸೇವೆಗಳು ಮತ್ತು ವಿಶಾಲ ವಾಹನ ಪಾರ್ಕಿಂಗ್ ವ್ಯವಸ್ಥೆ

ಗ್ರಾಮ, ತಾಲೂಕು ಮಟ್ಟದಲ್ಲಿ ಸಹಾಯವಾಣಿ ತೆರೆಯಲು ಸೂಚನೆ

ಕಾಪು: ಕಾಪು ತಾಲೂಕು ಮಟ್ಟದ ಮುಂಗಾರು ಪೂರ್ವಭಾವಿ ಸಭೆ ಯು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರರ ಕಚೇರಿಯಲ್ಲಿ, ಗುರುವಾರ ನಡೆಯಿತು.

ಮುಂಗಾರು ಸಮೀಪಿಸುತ್ತಿರುವುದರಿಂದ ಗ್ರಾಮ ಹಾಗೂ ತಾಲೂಕು ಮಟ್ಟದಲ್ಲಿ ಸಹಾಯ ವಾಣಿ ತೆರೆಯುವುದರ ಜೊತೆಗೆ ಗಂಜಿ ಕೇಂದ್ರ ಸ್ಥಾಪಿಸುವಂತೆ ಸಂಬಂದಿಸಿದ ಇಲಾಖಾಧಿಕಾರಿಗಳಿಗೆ ತಿಳಿಸಿದರು.

ರಸ್ತೆ ಬದಿಯಲ್ಲಿರುವ ಅಪಾಯಕಾರಿ ಮರ ಗಿಡಗಳನ್ನು ತೆರವು ಗೊಳಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಅಪಾಯಕಾರಿ ವಿದ್ಯುತ್ ಕಂಬ ಮತ್ತು ತಂತಿಗಳನ್ನು ಸರಿಪಡಿಸುವಂತೆ ಮೆಸ್ಕಾಂ ಅಧಿಕಾರಿಗಳಿಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳ ಚರಂಡಿ ಹಾಗೂ ರಸ್ತೆ ಇಕ್ಕೆಲಗಳಲ್ಲಿನ ಹುಲ್ಲು ಕಟಾವು ಹಾಗೂ ನೀರು ನಿಲ್ಲದಂತೆ ಕ್ರಮ ವಹಿಸುವಂತೆ ಹಾಗೂ ನುರಿತ ಈಜುಗಾರರ ಪಟ್ಟಿತಯಾರಿಸಿ ಸಿದ್ದರಿರುವಂತೆ ಅಗ್ನಿಶಾಮಕ ದಳದವರಿಗೆ ಶಾಸಕರು ಸೂಚಿಸಿದರು.



ಈ ಸಂದರ್ಭದಲ್ಲಿ ಕಾಪು ತಹಶೀಲಾರ್ ಅನಂತಶಂಕರ್, ಕಾಪು ತಾಲೂಕು ಕಾರ್ಯ ನಿರ್ವಹಣಾಧಿಕಾರಿ ವಿಜಯ ಕುಮಾರ್, ಕಾಪು ಪುರಸಭೆಯ ಮುಖ್ಯಾಧಿಕಾರಿಗಳಾದ ನೀಲಕಂಠ ಮೇಸ್ತಾ, ಗ್ರಾಮ ಆಡಳಿತಾಧಿಕಾರಿ, ಪಿಡಿಓಗಳು ಉಪಸ್ಥಿತರಿದ್ದರು

ಕುಂದಾಪುರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಆರೋಪ | ಕೆಲವು ಪಡಿತರ ಕೇಂದ್ರಗಳಲ್ಲಿ ಒಬ್ಬರಿಗೆ 50 ಕೆಜಿ ಅಕ್ಕಿ ಚೀಲ ವಿತರಣೆ

ಪಡಿತರ ವಿತರಣೆ ಕೇಂದ್ರದ ಹೊರಗೆ ನಿಂತು ದಲ್ಲಾಳಿಗಳಿಂದ ಬಹಿರಂಗವಾಗಿ ಅಕ್ಕಿ ಖರೀದಿ

ಕುಂದಾಪುರ: ವಿದ್ಯುತ್ ತಂತಿಗಳ ಮೇಲಿರುವ ಮರಗಳ ರೆಂಬೆಗಳನ್ನು ಕಡಿಯಲು ಅರಣ್ಯ ಇಲಾಖೆ ಅಸಹಕಾರ, ಹೊಸದಾಗಿ ನಿರ್ಮಾಣಗೊಂಡ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣ ಪತ್ರ ನೀಡುವ ವಿಚಾರ, ಒಂದೇ ಉದ್ದೇಶಕ್ಕೆ ಒಬ್ಬರಿಗೆ ಸರಕಾರದ ಎರಡು ಯೋಜನೆಯ ಅನುದಾನದ ವಿಚಾರ, ಪಡಿತರ ಕಾಳಸಂತೆಯಲ್ಲಿ ಮಾರಾಟ, ದಲ್ಲಾಳಿಗಳ ಕಾಟ, ಪಡಿತರ ವಿತರಣೆಯಲ್ಲಿ ಸರ್ವರ್ ಸಮಸ್ಯೆ ಮೊದಲಾದ ವಿಚಾರಗಳು ಕುಂದಾಪುರದ ತಾಲೂಕು ಪಂಚಾಯತ್‌ನಲ್ಲಿ ತಾಲೂಕು ಗ್ಯಾರಂಟಿ ಅನು?ನ ಸಮಿತಿ ಅಧ್ಯಕ್ಷ ಎಚ್. ಹರಿಪ್ರಸಾದ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಗುರುವಾರ ಜರಗಿದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಕೇಳಿ ಬಂದಿತು.



ಗಂಗೊಳ್ಳಿ-ಕುಂದಾಪುರ ನಡುವೆ ಬೆಳಿಗ್ಗೆ ಬಸ್ ಸಂಚಾರ ಪುನರಾರಂಭಿಸುವಂತೆ ಮತ್ತು ಗಂಗೊಳ್ಳಿ-ಬೈಂದೂರು ನಡುವೆ ಸರಕಾರಿ ಬಸ್ ಸಂಚಾರ ಆರಂಭಿಸುವಂತೆ ಸದಸ್ಯ ಜಹೀರ್ ಅಹಮ್ಮದ್ ಆಗ್ರಹಿಸಿದರೆ, ಕೆಲವು ಸರಕಾರಿ ಬಸ್ಸುಗಳಲ್ಲಿ ಬ್ರೇಕ್ ಲೈಟ್ ಇಲ್ಲ, ಹೀಗಾಗಿ ಎಲ್ಲಾ ಬಸ್ಸುಗಳಲ್ಲಿ ಬ್ರೇಕ್ ಲೈಟ್ ಪರೀಕ್ಷೆ ಮಾಡಿ ಸರಿಪಡಿಸಬೇಕೆಂದು ಮಂಜು ಕೊಠಾರಿ ಒತ್ತಾಯಿಸಿದರು.

ಬಸ್ಸುಗಳ ಬ್ರೇಕ್ ಲೈಟ್ ಪರಿಶೀಲನೆ ಮಾಡಿ ಸರಿಪಡಿಸಲಾಗುವುದು. ಉಡುಪಿಯಿಂದ ಅಮಾಸೆಬೈಲು ಕೆಳಸಂಕದವರೆಗೆ ಇನ್ನೊಂದು ಬಸ್ ಸಂಚಾರ ಪ್ರಾರಂಭಿಸಲು ಉಡುಪಿ ಡಿಪೋದವರಿಗೆ ಸೂಚನೆ ನೀಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಕುಂದಾಪುರ ಡಿಪೊ ಅಧಿಕಾರಿ ತಿಳಿಸಿದರು.

ಸಬ್ಸಿಡಿ ಹಣ ಬಂದಿಲ್ಲ

2 ತಿಂಗಳ ವಿದ್ಯುತ್ ಶುಲ್ಕವನ್ನು ಒಂದೇ ಸಲ ನೀಡಿದ ಪರಿಣಾಮ ಹಲವರಿಗೆ ಸಬ್ಸಿಡಿ ಬಂದಿಲ್ಲ, ವಿದ್ಯುತ್ ಶುಲ್ಕ ಹೆಚ್ಚು ಬಂದಿದೆ ಎಂದು ಸದಸ್ಯ ಅಭಿಜಿತ್ ಪೂಜಾರಿ ಆಗ್ರಹಿಸಿದರು. ತಾಂತ್ರಿಕ ಸಮಸ್ಯೆ, ಸಾಫ್ಟವೇರ್ ಸಮಸ್ಯೆಯಿಂದ ತೊಂದರೆಯಾಗಿದ್ದು, ಬಿಲ್ಲಿನಲ್ಲಿ ದೋಷ ಕಂಡು ಬಂದರೆ ಸರಿಪಡಿಸಲಾಗುವುದು ಎಂದು ಮೆಸ್ಕಾಂ ಅಧಿಕಾರಿಗಳು ಹೇಳಿದರು.

ಕೆಲವು ಸೈಬರ್ ಕೇಂದ್ರದಲ್ಲಿ ಗೃಹಲಕ್ಷ್ಮೀ ಆ್ಯಪ್ ಇಲ್ಲ ಎಂದು ಸದಸ್ಯ ಮಂಜು ಕೊಠಾರಿ ಹೇಳಿದರೆ, ಮರಣ ಹೊಂದಿದ ಸದಸ್ಯರ ವಿವರಗಳನ್ನು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಪಡೆದು ಹೆಸರು ತೆಗೆದು ಹಾಕಲು ಕ್ರಮಕೈಗೊಳ್ಳಬೇಕು ಎಂದು ಸದಸ್ಯ ಅಭಿಜಿತ್ ಪೂಜಾರಿ ಹೇಳಿದರು.

ಕೆಲವು ಪಡಿತರ ಕೇಂದ್ರಗಳಲ್ಲಿ ಒಬ್ಬರಿಗೇ 50 ಕೆಜಿ ಅಕ್ಕಿ ಚೀಲವನ್ನು ನೀಡುತ್ತಿದ್ದು, ಪಡಿತರ ಅಕ್ಕಿ ವ್ಯಾಪಕವಾಗಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಪಡಿತರ ವಿತರಣ ಕೇಂದ್ರದ ಹೊರಗೆ ದಲ್ಲಾಳಿಗಳು ನಿಂತು ಬಹಿರಂಗವಾಗಿ ಅಕ್ಕಿಯನ್ನು ಖರೀದಿಸುತ್ತಿದ್ದಾರೆ, ದಲ್ಲಾಳಿಗಳು ಜಾಸ್ತಿಯಾಗಿದ್ದಾರೆ ಎಂದು ಸದಸ್ಯ ಜಹೀರ್ ಅಹಮ್ಮದ್ ಹೇಳಿದರು. ರಾಜ್ಯದ ಎಲ್ಲಾ ಕಡೆಗಳಲ್ಲಿ ಬೆಳಿಗ್ಗೆಯಿಂದ ಬಹುತೇಕ ವೇಳೆ ಸರ್ವರ್ ಸ್ಲೋ ಇರುವುದರಿಂದ ಪಡಿತರ ವಿತರಣೆಯಲ್ಲಿ ವಿಳಂಬವಾಗುತ್ತಿದೆ ಎಂದು ಆಹಾರ ನಿರೀಕ್ಷಕ ಸುರೇಶ ಹೇಳಿದರು. ಇಂತಹ ಸಂದರ್ಭ ಸಂಜೆ ವೇಳೆಯಲ್ಲೂ ಪಡಿತರ ವಿತರಣೆಗೆ ಕ್ರಮಕೈಗೊಳ್ಳಿ ಎಂದು ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಸೂಚಿಸಿದರು.

ಒಂದೇ ಉದ್ದೇಶಕ್ಕೆ ಎರಡು ಸಲ ಭತ್ತೆ

ಕೊರಗ ನಿರುದ್ಯೋಗ ಯುವಕರಿಗೆ ನಿರುದ್ಯೋಗ ಭತ್ಯೆ ನೀಡಲಾಗುತ್ತಿದ್ದು, ಯುವನಿಧಿಯಿಂದಲೂ ಭತ್ಯೆ ಪಡೆಯುತ್ತಿದ್ದಾರೆ. ಒಂದೇ ಉದ್ದೇಶಕ್ಕೆ ಒಬ್ಬರಿಗೆ 2 ಕಡೆಯಿಂದ ಭತ್ತೆ ಹೋದರೆ ಹೇಗೆ ಸದಸಗಣೇಶ ಪ್ರಶ್ನಿಸಿದರು. ಸದಸ್ಯರಾದ ಆಶಾ ಕರ್ವಾಲೋ, ಮಂಜು ಕೊಠಾರಿ ನಾರಾಯಣ ಆಚಾರ್, ಅರುಣ, ವಾಣಿ ಆರ್. ಶೆಟ್ಟಿ, ಸವಿತಾ ಪೂಜಾರಿ, ತಾಲೂಕು ಪಂಚಾಯತ್ ಇಒ ಮಹೇಶ ಕೆ.ಜಿ. ಉಪಸ್ಥಿತರಿದ್ದರು.